₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 13.04.2026 ಸಂಪುಟ: 11 ಸಂಚಿಕೆ:87 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜನನ 1933
ಮರಣ 2026

ಗಾನಗಂಗೆ ಆಶಾ ಭೋಸ್ಲೆ ಮಹಾಯಾನ

ವಿಶೇಷ ಪುಟ 10

ಸೊಂಪಾದ ಪುಟಗಳು

ಶಾಮನೂರು ಕೋಟೆಯಲ್ಲಿ ಸಂಪತ್ತಿಗೆ ಸವಾಲ್
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಎಣ್ಣೆ ನಮ್ದು... ಸುಂಕ ನಿಮ್ದು...!
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಜಗತ್ತು ಬದಲಾಗಬೇಕೆಂದು ಕಾಯುವ ಬದಲು, ಆ ಬದಲಾವಣೆ ಮೊದಲು ನಮ್ಮಿಂದಲೇ ಆರಂಭವಾಗಬೇಕು. ನಮ್ಮನ್ನು ಬದಲಿಸಿಕೊಳ್ಳುವುದು ಸುಲಭ. ಬೇರೆಯವರನ್ನು ಬದಲಿಸುವುದು ಕಷ್ಟ.

ವಕ್ರತುಂಡೋಕ್ತಿ



ಈ ಕಾಲದ ದೊಡ್ಡ 'ರೋಮ್ಯಾನ್ಸ್' ಯಾವುದು ಅಂದ್ರೆ, ಗಂಡ-ಹೆಂಡತಿ ಒಂದೇ ಸೋಫಾದಲ್ಲಿ ಕುಳಿತಿದ್ದರೂ, ಒಬ್ಬರ ಪೋಸ್ಟ್‌ಗೆ ಇನ್ನೊಬ್ಬರು 'ಲವ್ ಯು' ಎಂದು ಕಮೆಂಟ್ ಮಾಡುವುದು

ಶೃಂಗೇರಿ ಕ್ಷೇತ್ರದ ಅಭಿವೃದ್ಧಿಯೇ ನನ್ನ ಧ್ಯೇಯ
ವಿಶೇಷ ಸಂದರ್ಶನ
ಪುಟ-5
ಶೃಂಗೇರಿ ಶಾಸಕ, ಕಾಂಗ್ರೆಸ್ ನಾಯಕ ಟಿ.ಡಿ.ರಾಜೇಗೌಡ

ಅಮೆರಿಕದಲ್ಲಿ ವಿವೇಕಾನಂದರ ಪ್ರತಿಮೆ ಸ್ಥಾಪನೆ



ವಾಷಿಂಗ್ಟನ್: ಅಮೆರಿಕದ ಸಿಯಾಟಲ್‌ನಲ್ಲಿ ಸ್ವಾಮಿ ವಿವೇಕಾನಂದರ ಪೂರ್ಣ ಪ್ರಮಾಣದ ಕಂಚಿನ ಪ್ರತಿಮೆ ಅನಾವರಣ ಮಾಡಲಾಗಿದೆ. ಭಾರತೀಯ ಕಲಾವಿದ ನರೇಶ್ ಕುಮಾರ್ ಕುಮಾವತ್ ರಚಿಸಿದ ಈ ಪ್ರತಿಮೆಯನ್ನು ಸಿಯಾಟಲ್‌ನ ಡೌನ್ ಟೌನ್‌ನಲ್ಲಿರುವ ವೆಸ್ಟ್‌ಲೇಕ್ ಚೌಕದಲ್ಲಿ ನೆಲೆಗೊಳಿಸಲಾಗಿದೆ. 1893ರಲ್ಲಿ ಶಿಕಾಗೋ ನಗರದಲ್ಲಿ ಐತಿಹಾಸಿಕ ಭಾಷಣ ಮಾಡಿದ ನೆನಪಿಗಾಗಿ ಪ್ರತಿಮೆ ಸ್ಥಾಪಿಸಲಾಗಿದೆ.

ಬ್ಯಾಡ್ಮಿಂಟನ್: ಆಯುಷ್‌ಗೆ ಬೆಳ್ಳಿ

ಬೀಜಿಂಗ್: ಭಾನುವಾರ ನಡೆದ ಏಷ್ಯನ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಭಾರತದ ಭರವಸೆಯ ಆಟಗಾರ, ಕನ್ನಡಿಗ ಆಯುಷ್ ಶೆಟ್ಟಿ ಚಿನ್ನದ ಪದಕದಿಂದ ವಂಚಿತರಾಗಿ ಬೆಳ್ಳಿ ಪದಕ ಗೆಲ್ಲುವಲ್ಲಿ ಯಶಸ್ವಿಯಾದರು. ಚೀನಾದ ಆಟಗಾರ ಶಿಯು ಕ್ವಿ ಅವರು ಆಯುಷ್ ಶೆಟ್ಟಿ ಅವರನ್ನು 8-21, 10-21 ನೇರ ಸೆಟ್‌ಗಳಿಂದ ಸೋಲಿಸಿ ಬಂಗಾರ ಗೆದ್ದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಹಾರ್ಮುಜ್ ಜಲಸಂಧಿ ಬಿಕ್ಕಟ್ಟು, ಕದನ ವಿರಾಮ - ಶಾಂತಿ ಮಾತುಕತೆ ವಿಫಲ

8 ದಶಕಗಳ ಕಾಲ ಗಾನವನ್ನೇ ಗಂಗೆಯಂತೆ ಹರಿಸಿದ ಗಾಯಕಿ ಮುಂಬೈನಲ್ಲಿ ವಿಧಿವಶ

ಮುಂಬೈ: ಭಾರತೀಯ ಸಿನಿಮಾ ಸಂಗೀತ ಲೋಕದಲ್ಲಿ 'ನೈಟಿಂಗೇಲ್ ಆಫ್ ಇಂಡಿಯಾ' ಎಂದರೆ ಮೊದಲು ನೆನಪಾಗುವ ಹೆಸರು ಲತಾ ಮಂಗೇಶ್ಕರ್. ಆ ಮಹಾನ್ ಪ್ರತಿಭೆಯ ನೆರಳಾಗಿ, ಸಾಧನೆಯಲ್ಲಿ ಅದೇ ಎತ್ತರಕ್ಕೆ ಬೆಳೆದವರು ಅವರ ತಂಗಿ ಆಶಾ ಭೋಸ್ಲೆ. ಅಮೋಘ 83 ವರ್ಷಗಳವರೆಗೆ ಗಾಯಕಿಯಾಗಿ ಮೆರೆದು, ಗಾನಗಂಗೆಯನ್ನೇ ಹರಿಸಿದ ಭೋಸ್ಲೆ ಭಾನುವಾರ ತಮ್ಮ ಜೀವನ ಪಯಣವನ್ನು ಮುಗಿಸಿದ್ದಾರೆ. ಆದರೆ ತಮ್ಮ ಪ್ರತಿಭೆ ಮತ್ತು ಸಾಧನೆಯಿಂದಲೇ ಅವರು ಚಿರಸ್ಥಾಯಿಯಾಗಿರುತ್ತಾರೆ.

ಆಶಾ ಭೋಸ್ಲೆ ಅವರು 1933ರಲ್ಲಿ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನಿಸಿದರು. ಅವರ ತಂದೆ ದೀನನಾಥ್ ಮಂಗೇಶ್ಕರ್ ಅವರು ಖ್ಯಾತ ಸಂಗೀತಗಾರ. ಮರಾಠಿ, ಕೊಂಕಣಿಯಲ್ಲಿ ಹಾಡುತ್ತಿದ್ದರು. ಪಂಡಿತ್ ದೀನನಾಥ್ ಮಂಗೇಶ್ಕರ್‌ರಿಗೆ ಐವರು ಮಕ್ಕಳು. ನಾಲ್ವರು ಪುತ್ರಿಯರು ಹಾಗೂ ಒಬ್ಬ ಮಗ (ಹೃದಯನಾಥ್ ಮಂಗೇಶ್ಕರ್). ನಾಲ್ವರು ಪುತ್ರಿಯರಲ್ಲಿ ಲತಾ ಮಂಗೇಶ್ಕರ್ ಹಿರಿಯರು. ಕಡೆಯವರೇ ಆಶಾ ಭೋಸ್ಲೆ. ಮನೆಯಲ್ಲಿ ಸಂಗೀತದ

ವಾತಾವರಣ. ಅದರ ಪರಿಣಾಮ, ಭೋಸ್ಲೆಯವರಿಗೂ ಬಾಲ್ಯದಿಂದಲೇ ಸಂಗೀತ ಅಪ್ರಯತ್ನಪೂರ್ವಕವಾಗಿ ಮೈಗೂಡಿತ್ತು. ಆದರೆ, 9ನೇ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡಾಗ ತಮ್ಮ ಸಹೋದರಿಯರು, ಸಹೋದರನ ಜೊತೆಗೆ ತಾವೂ ಸಂಸಾರದ ಹೊಣೆ ಹೊತ್ತರು. ಅಷ್ಟು ಹೊತ್ತಿಗಾಗಲೇ ಅವರ ಅಕ್ಕ ಲತಾ ಮಂಗೇಶ್ಕರ್, ಗಾನಲೋಕದಲ್ಲಿ ಉದಯೋನ್ಮುಖ ಗಾಯಕಿಯೆನಿಸಿದ್ದರು. ಅದರ ಸಹಾಯದಿಂದ ಆಶಾರಿಗೂ ಆರಂಭದಲ್ಲಿ ಸಣ್ಣ-ಪುಟ್ಟ ಅವಕಾಶಗಳು ಸಿಕ್ಕವು. 10ನೇ ವಯಸ್ಸಿನಲ್ಲೇ ಮರಾಠಿಯ 'ಮಝಾ ಬಾಲ್' ಎಂಬ ಚಿತ್ರದಲ್ಲಿ 'ಚಲಾ ಚಲಾ ನವ್ ಬಾಲಾ' ಎಂಬುದು ಅವರು ಹಾಡಿದ ಮೊದಲ ಸಿನಿಮಾ ಹಾಡು.

ವಿಭಿನ್ನ ಶೈಲಿ: ಆಶಾ ಭೋಸ್ಲೆಯ ಗಾನ ಶೈಲಿ ಲತಾ ಮಂಗೇಶ್ಕರ್ ಅವರಿಗಿಂತ ಭಿನ್ನ. ಹಾಗಾಗಿಯೇ, ಕಬಾರೆ, ಗಜಲ್, ಪಾಪ್ ಮುಂತಾದ ಪಾಶ್ಚಿಮಾತ್ಯ ಶೈಲಿಗಳಲ್ಲಿಯೂ ಅದ್ಭುತವಾಗಿ ಹಾಡಿದರು. ಅವರ ಈ ವಿಭಿನ್ನತೆಯೇ ಅವರನ್ನು ಭಾರತದ ಮತ್ತೊಂದು ನೈಟಿಂಗೇಲ್ ಎಂದು ಕರೆಯುವ ಮಟ್ಟಕ್ಕೆ ಕೊಂಡೊಯ್ದಿತು. ಎಂದೆಂದಿಗೂ ಮರೆಯಲಾಗದ ಅವರ ಹಾಡುಗಳಲ್ಲಿ, 'ಪಿಯಾ ತು ಅಬ್ ತೋ ಆಜಾ', 'ಧಮ್ ಮಾರೋ ಧಮ್', 'ಇನ್ ಆಂಖೋಂ ಕೀ ಮಸ್ತಿ'ಯೂ ಇದೆ. ಈ ಹಾಡುಗಳ ಮೂಲಕ ಅವರು ತಮ್ಮದೇ ಆದ ಗುರುತು ಮೂಡಿಸಿದರು. ಸಂಗೀತ ನಿರ್ದೇಶಕರಾದ ಆರ್.ಡಿ.ಬರ್ಮನ್ ಅವರೊಂದಿಗೆ ಅವರ ಸಹಕಾರ ಗಾನ ಲೋಕದಲ್ಲಿ ಕ್ರಾಂತಿ ತಂದಿತು. ಅಂದಿನ ಸಂಗೀತ ನಿರ್ದೇಶಕರಿಂದ ಹಿಡಿದು ಇತ್ತೀಚಿನ ಸಂಗೀತ ನಿರ್ದೇಶಕರಾದ ಎ.ಆರ್.ರೆಹಮಾನ್ ಜೊತೆಗಿನ (ರಂಗೀಲಾ ಚಿತ್ರದಲ್ಲಿ) ಹಲವಾರು ತಲೆಮಾರುಗಳ ಸಂಗೀತ ನಿರ್ದೇಶಕರೊಂದಿಗೆ ಕೆಲಸ ಮಾಡಿದ್ದು ಇವರ ಹೆಗ್ಗಳಿಕೆ.

ಭಾರತ ಕಂಡ ಅತ್ಯಂತ ಅಪ್ರತಿಮ ಮತ್ತು ಬಹುಮುಖ ಪ್ರತಿಭೆಯ ಗಾಯಕಿ ಆಶಾ ಭೋಸ್ಲೆ ಅವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸುತ್ತೇನೆ. ದಶಕಗಳ ಕಾಲ ಸಾಗಿದ ಅವರ ಅಸಾಧಾರಣ ಸಂಗೀತದ ಪಯಣವು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದೆ. ಪ್ರಪಂಚದಾದ್ಯಂತ ಅಸಂಖ್ಯಾತ ಹೃದಯಗಳನ್ನು ಸ್ಪರ್ಶಿಸಿದೆ.
- ನರೇಂದ್ರ ಮೋದಿ, ಪ್ರಧಾನಿ

ಆಶಾ ನಿಧನರಾಗಿರುವುದರಿಂದ ದುಃಖಿತನಾಗಿದ್ದೇನೆ. 12,000ಕ್ಕೂ ಅಧಿಕ ಹಾಡುಗಳ ಮೂಲಕ ಸಂಗೀತಪ್ರಿಯರನ್ನು ರಂಜಿಸಿದ ಸ್ವರಸಾಮ್ರಾಜ್ಞಿಯನ್ನು ಕಳೆದುಕೊಂಡು ಚಿತ್ರರಂಗ ಬಡವಾಗಿದೆ. ಸುಮಧುರ ಧ್ವನಿ, ಸರಳ ನಡೆ, ವಾತ್ಸಲ್ಯ ತುಂಬಿದ ಮಾತುಗಳಿಂದ ಅವರು ಜನಮಾನಸದಲ್ಲಿ ಶಾಶ್ವತ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೈಕೊಟ್ಟ ಶಾಂತಿ ಸಂಧಾನ

21 ಗಂಟೆಗಳ ಮಾತುಕತೆ ವಿಫಲ: ಅಮೆರಿಕ, ಇರಾನ್ | ಮತ್ತೆ ಯುದ್ಧದ ಭೀತಿ

ಪರಮಾಣು ಅಭಿವೃದ್ಧಿ ಮಾಡಬೇಡಿ ಎಂದಿದ್ದಕ್ಕೆ ಇರಾನ್ ಒಪ್ಪಿಲ್ಲ: ಅಮೆರಿಕ

ಅಮೆರಿಕ ನಿರೀಕ್ಷೆ ಅತಿಯಾಯಿತು, ಮಾತುಕತೆಗಿನ್ನೂ ಅವಕಾಶವಿದೆ: ಇರಾನ್

ಇಸ್ಲಾಮಾಬಾದ್: ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಅಮೆರಿಕ ಮತ್ತು ಇರಾನ್ ನಿಯೋಗಗಳ ನಡುವೆ ನಡೆದ 21 ಗಂಟೆಗಳ ಮಾತುಕತೆ ವಿಫಲವಾಗಿದೆ. ಹೀಗೆಂದು ಅಮೆರಿಕ ಮತ್ತು ಇರಾನ್ ಎರಡೂ ಘೋಷಿಸಿವೆ. ಮುಖ್ಯ ವಿಷಯಗಳಿಗೆ ಸಂಬಂಧಿಸಿದಂತೆ ಎರಡೂ ದೇಶಗಳ ನಡುವೆ ಹತ್ತಿರಹತ್ತಿರ 24 ಗಂಟೆ ಮಾತುಕತೆ ನಡೆದರೂ ಒಮ್ಮತ ಮೂಡಿಲ್ಲ. ನಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಇರಾನ್ ಸ್ಪಂದಿಸಿಲ್ಲ ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ. ಅಮೆರಿಕ ಅತಿಯಾಗಿ ಹಾಗೂ ಅಳತೆ ಮೀರಿ ಬೇಡಿಕೆಗಳನ್ನಿಟ್ಟಿದೆ, ಅವನ್ನೆಲ್ಲ ಪೂರೈಸಲು ಸಾಧ್ಯವಿಲ್ಲ ಎಂದು ಇರಾನ್ ಸಂಸತ್ ಸಭಾಧ್ಯಕ್ಷ ಬಘೇರ್ ಗಲಿಬಾಫ್ ಹೇಳಿದ್ದಾರೆ. ಮಾತುಕತೆ ವಿಫಲವಾದ ಬೆನ್ನಲ್ಲೇ ಇರಾನ್ ಮೇಲೆ ಸರಿಯಾದ ಸಂದರ್ಭದಲ್ಲಿ ದಾಳಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುಡುಗಿದ್ದಾರೆ.





ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿ ಮಾಡಬಾರದು, ಹೊರ್ಮುಜ್ ಜಲಸಂಧಿಯನ್ನು ಎಲ್ಲರಿಗೂ ಮುಕ್ತಗೊಳಿಸಬೇಕು ಎಂದು ಅಮೆರಿಕ ಬಯಸಿದೆ. ಇದು ಅತಿಯಾಯಿತು, ಅಷ್ಟನ್ನೆಲ್ಲ ಪೂರೈಸಲು ಸಾಧ್ಯವಿಲ್ಲ ಎಂದು ಇರಾನ್ ಹೇಳಿಕೊಂಡಿದೆ. → 4

ಹೆಜ್ಬೊಲ್ಲಾ ಕೋಟೆ ಮೇಲೆ ಇಸ್ರೇಲ್ ದಾಳಿ, 11 ಸಾವು

ಅಮೆರಿಕ-ಇರಾನ್ ಮಾತುಕತೆ ವಿಫಲವಾದ ಕೆಲವೇ ಗಂಟೆಗಳ ನಂತರ ಹೆಜ್ಬೊಲ್ಲಾ ಭದ್ರಕೋಟೆಯನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿದ ದಾಳಿಯಲ್ಲಿ 11 ಮಂದಿ ಸಾವನ್ನಪ್ಪಿದ್ದಾರೆ. ದಕ್ಷಿಣ ಲೆಬನಾನ್‌ನ ಟೈರ್ ಬಳಿಯ ಮಾರೂಬ್ ಎಂಬ ಜಾಗದ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ದಕ್ಷಿಣ ಪಟ್ಟಣವಾದ ಬಿಂಟ್ ಜೆಬೈಲ್‌ನಲ್ಲಿ ಇಸ್ರೇಲಿ ಸೇನೆ ಮತ್ತು ಹೆಜ್ಬೊಲ್ಲಾ ನಡುವೆ ತೀವ್ರ ಘರ್ಷಣೆಗಳು ನಡೆದಿವೆ ಎಂದು ವರದಿ ಮಾಡಿದೆ.

ಏನೇನಾಯ್ತು?

- ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ನಿಯೋಗಗಳ ನಡುವೆ ಸತತ 21 ಗಂಟೆಗಳ ಮಾತುಕತೆ ವಿಫಲ
- 3 ಬಾರಿ ದೀರ್ಘವಾಗಿ ಚರ್ಚಿಸಿದರೂ ಒಮ್ಮತವಿಲ್ಲ. ಪರಮಾಣು ಅಭಿವೃದ್ಧಿಪಡಿಸಬಾರದು ಎಂಬ ಅಮೆರಿಕ ಷರತ್ತಿಗೆ ಇರಾನ್ ತಿರಸ್ಕಾರ, ನಾವು ಪ್ರಾಮಾಣಿಕ ಯತ್ನ ಮಾಡಿದ್ದೇವೆ: ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್
- ಒಂದೇ ಏಟಿಗೆ ಒಪ್ಪಂದವಾಗುತ್ತದೆ ಎಂದು ಬಯಸಬಾರದು, ನಮ್ಮ ನಂಬಿಕೆ ಗೆಲ್ಲಲು ಅಮೆರಿಕ ವಿಫಲವಾಗಿದೆ. ಮಾತುಕತೆಗೆ ಇನ್ನೂ ಅವಕಾಶವಿದೆ ಎಂದ ಇರಾನ್. ಭರವಸೆ ಜೀವಂತ

ಲೆಬನಾನ್‌ನ ಹಲವು ಹಳ್ಳಿಗಳೇ ಧ್ವಂಸ

ಇಸ್ರೇಲ್ ದಕ್ಷಿಣ ಲೆಬನಾನ್‌ನಲ್ಲಿ ಹೆಜ್ಬುಲ್ಲಾ ಉಗ್ರರನ್ನು ಗುರಿಯಾಗಿಸಿಕೊಂಡು ಮಾಡಿದ ದಾಳಿಯಲ್ಲಿ ಹಲವು ಹಳ್ಳಿಗಳೇ ಧ್ವಂಸಗೊಂಡಿವೆ. ತಯ್ಬೆಹ್, ನಖೋರಾ, ದೇರ್ ಸೆರ್ಯಾನ್ ಸೇರಿದಂತೆ ಹಲವು ಹಳ್ಳಿಗಳನ್ನು ಬಾಂಬ್ ಇಸ್ರೇಲ್ ನಾಶ ಮಾಡಿದೆ.

ಹಡಗು ಹೊರ್ಮುಜ್ ಪ್ರವೇಶಿಸಲು ಬಿಡಲ್ಲ: ಟ್ರಂಪ್ ಹೊಸ ಬೆದರಿಕೆ

ಶಾಂತಿ ಮಾತುಕತೆಗಳು ವಿಫಲವಾದ ಬೆನ್ನಲ್ಲೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಅನ್ನು ಶಿಲಾಯುಗಕ್ಕೆ ಕಳುಹಿಸುತ್ತೇವೆಂದು ಮತ್ತೊಮ್ಮೆ ಪರೋಕ್ಷವಾಗಿ ಸಂದೇಶ ರವಾನಿಸಿದ್ದಾರೆ. ಇರಾನ್ ಷರತ್ತುಗಳಿಗೆ ಒಪ್ಪದಿದ್ದರೆ ಅದರ ಮೇಲೆ ಭೀಕರ ದಾಳಿ ಮಾಡಲಾಗುವುದು ಎಂದು ಟ್ರಂಪ್ ಶನಿವಾರ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಬಗ್ಗೆ ಪ್ರತಿಕ್ರಿಯಿಸಿದ ಟ್ರಂಪ್, ಸರಿಯಾದ ಸಮಯದಲ್ಲಿ ಇರಾನ್ ಅನ್ನು ಮುಗಿಸುತ್ತೇವೆ. ಅಮೆರಿಕ ನೌಕಾಪಡೆ ಉದ್ದೇಶಪೂರ್ವಕವಾಗಿ ಹೊರ್ಮುಜ್ ಅನ್ನು ಪ್ರವೇಶಿಸುವ ಎಲ್ಲ ಅಂತಾರಾಷ್ಟ್ರೀಯ ನೌಕೆಗಳನ್ನು ತಡೆಯುತ್ತದೆ, ಅಂತಾರಾಷ್ಟ್ರೀಯ ಜಲಮಾರ್ಗದಲ್ಲಿ ಯಾವುದೇ ಹಡಗುಗಳು ಇರಾನ್‌ಗೆ ಶುಲ್ಕವನ್ನು ಪಾವತಿಸಿದರೆ ಅವಕ್ಕೆ ನಿಷೇಧ ವಿಧಿಸಲಾಗುತ್ತದೆ ಎಂದು ಕಟುವಾಗಿ ಹೇಳಿದ್ದಾರೆ. ಒಂದು ವೇಳೆ ಟ್ರಂಪ್ ಇದನ್ನು ಜಾರಿ ಮಾಡಿದ್ದೇ ಆದರೆ ಬಹಳ ಕಠಿಣ ಪರಿಸ್ಥಿತಿ ಎದುರಾಗಲಿದೆ.

ಆಕಾಂಕ್ಷಿಗಳು ಇಲ್ಲಿಂದಿಲ್ಲಿಗೆ ರಾಗಾ ಸಿಗಲ್ಲ?

ದೆಹಲಿಗೆ ತೆರಳಿದ 30 ಕಾಂಗ್ರೆಸ್ ಶಾಸಕರು ಖರ್ಗೆ, ರಣದೀಪ್ ಜತೆ ಭೇಟಿ ಸಾಧ್ಯತೆ ಸಚಿವ ಸ್ಥಾನ ಕೊಡಿ: ಹೆಚ್ಚುತ್ತಿದೆ ಬೇಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉಪಸಮರದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್‌ನಲ್ಲಿ ಸಂಪುಟ ಪುನಾರಚನೆಯ ಕೂಗು ಜೋರಾಗಿದ್ದು, 30ಕ್ಕೂ ಹೆಚ್ಚು ಶಾಸಕರ ನಿಯೋಗ ಹೈಕಮಾಂಡ್ ಭೇಟಿಯ 'ಆಸೆ'ಯೊಂದಿಗೆ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ. ಕರ್ನಾಟಕದಲ್ಲಿ ಸರಕಾರ ಅಧಿಕಾರಕ್ಕೆ ಬಂದು ಮೂರು ವರ್ಷಕ್ಕೆ ಸನಿಹವಾಗಿದೆ, ಸಂಪುಟ ಪುನಾರಚನೆ ಮಾಡಬೇಕು ಎನ್ನುವ ಕೂಗು ಜೋರಾಗಿದೆ. ಈ ನಡುವೆ 30ಕ್ಕೂ ಹೆಚ್ಚು ಶಾಸಕರು ಭಾನುವಾರ ದೆಹಲಿಗೆ ಪ್ರಯಾಣ ಬೆಳೆಸಿದ್ದು, ಪಕ್ಷದ ಹೈಕಮಾಂಡ್ ಮೇಲೆ ಸಂಪುಟ ಪುನಾರಚನೆಯ ಮೇಲೆ ಒತ್ತಡ ಹೇರಲು ತೀರ್ಮಾನಿಸಿದ್ದಾರೆ. ರಾಹುಲ್ ಗಾಂಧಿ ಅವರನ್ನು ಭೇಟಿಯಾಗುವ ನಿರೀಕ್ಷೆಯಲ್ಲಿ ಪಕ್ಷದ ಶಾಸಕರಿದ್ದಾರೆ. ಆದರೆ ಸಿಗುವುದು ಕಷ್ಟ ಎನ್ನಲಾಗಿದೆ. → 4

ಅಧಿವೇಶನದ ಸಮಯದಲ್ಲಿಯೇ ದೆಹಲಿಗೆ ಹೋಗುತ್ತೇವೆಂದು ಸಿಎಂ, ಡಿಸಿಎಂಗೆ ತಿಳಿಸಿದ್ದೇವೆ. ಸೋಮವಾರ ಖರ್ಗೆಯವರನ್ನು ಭೇಟಿಯಾಗುತ್ತೇವೆ. ರಾಹುಲ್ ಗಾಂಧಿ ಭೇಟಿ ಯತ್ನಿಸುತ್ತೇವೆ. ಆದವರೇ ಮತ್ತೆ ಮತ್ತೆ ಸಚಿವರಾಗುವುದಕ್ಕಿಂತ ಹೊಸಬರಿಗೂ ಅವಕಾಶ ಸಿಗಲಿ ಎನ್ನುವುದು ನಮ್ಮೆಲ್ಲರ ಆಶಯ.
-ಅಶೋಕ್ ಪಟ್ಟಣ್, ವಿಧಾನಸಭೆ ಸಚೇತಕ,

2028ರ ವಿಧಾನಸಭಾ ಚುನಾವಣೆಗೆ ಇನ್ನು ಎರಡು ವರ್ಷಗಳಿದ್ದು, ಆ ಹೊತ್ತಿಗೆ ಪಕ್ಷದಲ್ಲಿ ಭಿನ್ನಾಭಿಪ್ರಾಯ ಮೂಡದಂತೆ ತಡೆಯಲು ಇತರರಿಗೂ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆ. ಈ ವಿಚಾರವನ್ನು ಖರ್ಗೆ ಗಮನಕ್ಕೆ ತರಲಿದ್ದೇವೆ.
- ಟಿ.ಬಿ. ಜಯಚಂದ್ರ, ಶಾಸಕ

ಲುಫ್ತಾನ್ಸ ಸಿಬ್ಬಂದಿ ಮುಷ್ಕರ: 90000 ಪ್ರಯಾಣಿಕರು ಅತಂತ್ರ

ಸಂಬಳ ಹೆಚ್ಚಳಕ್ಕೆ ಸಿಬ್ಬಂದಿ ಆಗ್ರಹ: 520 ವಿಮಾನ ರದ್ದು

ಬರ್ಲಿನ್: ಕೆಲವು ತಿಂಗಳ ಹಿಂದೆ ಭಾರತದಲ್ಲಿ ಸಿಬ್ಬಂದಿ ಅಸಹಕಾರದ ಕಾರಣಕ್ಕೆ ಇಂಡಿಗೋ ವಿಮಾನಗಳು ಸಾಲುಸಾಲಾಗಿ ರದ್ದಾಗಿದ್ದವು. ಇದೀಗ ಜರ್ಮನಿಯ ಪ್ರಮುಖ ವಿಮಾನಯಾನ ಸಂಸ್ಥೆ ಲುಫ್ತಾನ್ಸ ಸಿಬ್ಬಂದಿ 24 ಗಂಟೆ ಮುಷ್ಕರ ನಡೆಸಿದ್ದಾರೆ. ಪರಿಣಾಮ 520 ವಿಮಾನಗಳು ರದ್ದಾಗಿವೆ, 90000 ಪ್ರಯಾಣಿಕರು ಅತಂತ್ರರಾಗಿದ್ದಾರೆ. ಹೆಚ್ಚಿನ ವೇತನ, ಉತ್ತಮ ಕೆಲಸದ ವಾತಾವರಣಬೇಕೆಂದು ಸಿಬ್ಬಂದಿ ಆಗ್ರಹಿಸಿದ್ದಾರೆ.

ನರಸಿಂಹರಾಜಪುರದ ದಶಕದ ಕನಸಿಗಿಂದು ಉದ್ಘಾಟನೆ ಭಾಗ್ಯ

ಹೊನ್ನೇಕೂಡಿಗೆ ಸೇತುವೆ ಉದ್ಘಾಟಿಸಲಿದ್ದಾರೆ ಸಿಎಂ ಸಿದ್ದು

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನ ಬಹುನಿರೀಕ್ಷಿತ ಹೊನ್ನೇಕೂಡಿಗೆ ಸೇತುವೆಯನ್ನು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸುವ ಮೂಲಕ ದಶಕದ ನಿರೀಕ್ಷೆಯನ್ನು ನನಸಾಗಿಸಲಿದ್ದಾರೆ. ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದ ಸೇತುವೆಯನ್ನು ಅವರೇ ಉದ್ಘಾಟಿಸಲಿದ್ದಾರೆ. ಸಚಿವ ಸತೀಶ್ ಜಾರಕಿಹೊಳಿ, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್, ಶಾಸಕ ರಾಜೇಗೌಡ ಭಾಗವಹಿಸಲಿದ್ದಾರೆ. → 4

ಕಾಂಗ್ರೆಸ್‌ನಲ್ಲಿ ಮುಸ್ಲಿಮ್ ನಾಯಕರ ಬಿಕ್ಕಟ್ಟು ಉಲ್ಬಣ

ಜಮೀರ್ ಅಹ್ಮದ್ ವಿರುದ್ಧ ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್ ಆಕ್ರೋಶ | ಸಚಿವ ಪಟ್ಟಕ್ಕೆ ಪಟ್ಟು

ಉಪಚುನಾವಣೆ ವೇಳೆ ಜಮೀರ್ ಅಸಹಕಾರದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್‌ಗೆ ದೂರು ಸಲ್ಲಿಕೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಾವಣಗೆರೆ ದಕ್ಷಿಣ ಉಪ ಚುನಾವಣೆ ಮುಗಿದರೂ, ಕಾಂಗ್ರೆಸ್ ಮುಸ್ಲಿಂ ನಾಯಕರಲ್ಲಿನ 'ಅಸಮಾಧಾನ'ದ ಕಿಡಿಗೆ ಕೊನೆಯಿಲ್ಲವಾಗಿದೆ. ಚುನಾವಣಾ ಸಮಯದಲ್ಲಿ ಸಚಿವ ಜಮೀರ್ ಅಹ್ಮದ್ ಸೇರಿದಂತೆ ಸಮುದಾಯದ ಹಿರಿಯ ನಾಯಕರು ನಡೆದುಕೊಂಡಿರುವುದನ್ನು ಮುಂದಿಟ್ಟುಕೊಂಡು ಸಂಪುಟ ಪುನಾರಚನೆಯ ಸಮಯದಲ್ಲಿ 'ಮುಸ್ಲಿಂ' ಕೋಟಾದಲ್ಲಿ ಕ್ಯಾಬಿನೆಟ್ ಸೇರುವ ಆಲೋಚನೆಯಲ್ಲಿದ್ದಾರೆ ಎನ್ನಲಾಗುತ್ತಿದೆ.

ಉಪಚುನಾವಣೆಯಲ್ಲಿ ಜಮೀರ್ ಅಹ್ಮದ್, ಅಬ್ದುಲ್ ಜಬ್ಬರ್, ನಾಸೀರ್ ಅಹ್ಮದ್ ನಡೆದುಕೊಂಡ ರೀತಿ ಹಾಗೂ ಅಧಿಕೃತ ಅಭ್ಯರ್ಥಿ ವಿರುದ್ಧ ಮಾಡಿರುವ ಕೆಲ ಒಳಸಂಚುಗಳನ್ನು ಕಳೆದ 3 ದಿನಗಳಿಂದ ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್ ಬಹಿರಂಗಪಡಿಸುತ್ತಿದ್ದಾರೆ. ಜಮೀರ್, ಜಬ್ಬಾರ್ ಹೆಸರನ್ನು ಬಹಿರಂಗಪಡಿಸದಿದ್ದರೂ, ಈಗಾಗಲೇ ಅಬ್ದುಲ್ ಜಬ್ಬಾರ್ ತಲೆದಂಡವಾಗಿದೆ. ಇದೀಗ, ಮುಂದಿನ ಸಂಪುಟ ಪುನಾರಚನೆಯ ಸಮಯದಲ್ಲಿ ಜಮೀರ್ ವಿರುದ್ಧ ಹೈಕಮಾಂಡ್‌ಗೆ ವರದಿ ಮಾಡಿ, ಅದರ ಲಾಭವನ್ನು ಪಡೆಯುವ ಆಲೋಚನೆ ರಿಜ್ವಾನ್ ಹಾಗೂ ಸಲೀಂ ಅವರದ್ದಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಮುಸ್ಲಿಂ ಸಮುದಾಯದ ಕೋಟಾದಲ್ಲಿ ಪ್ರತಿಬಾರಿಯೂ ಜಮೀರ್ ಸಚಿವ ಸ್ಥಾನದ ಅವಕಾಶ ಪಡೆಯುತ್ತಿದ್ದಾರೆ. ಆದರೆ ಈ ಉಪಚುನಾವಣೆಯಲ್ಲಿ ಪಕ್ಷದ ಪರವಾಗಿ ಕೆಲಸ ಮಾಡಿಲ್ಲ ಎನ್ನುವ ಕಾರಣಕ್ಕೆ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಹೈಕಮಾಂಡ್ ಮಟ್ಟದಲ್ಲಿ ಜಮೀರ್ ವಿರುದ್ಧ ಅಸಮಾಧಾನವಿದೆ. ಇದನ್ನೇ ಮುಂದಿಟ್ಟುಕೊಂಡು ಸಂಪುಟ ಪುನಾರಚನೆಯ ಸಮಯದಲ್ಲಿ ಜಮೀರ್ ಬದಲು ಅದೃಷ್ಟ ಪರೀಕ್ಷೆಯ ಲೆಕ್ಕಾಚಾರದಲ್ಲಿ ಈ ನಾಯಕರಿದ್ದಾರೆ.

ಮುಸ್ಲಿಂ ನಾಯಕತ್ವದ ವಿಷಯದಲ್ಲಿ ಎರಡನೇ ಹಂತದಲ್ಲಿರುವ ರಿಜ್ವಾನ್ ಅರ್ಷದ್ ಹಾಗೂ ಸಲೀಂ ಅಹ್ಮದ್ ಮುಂದಿನ ಸಾಲಿಗೆ ಬರಲು ದಾವಣಗೆರೆ ಉಪ ಚುನಾವಣೆ ಭಿನ್ನಮತವನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎನ್ನಲಾಗಿದೆ.

ಅಲ್ಪಸಂಖ್ಯಾತರ ಚಾಂಪಿಯನ್ ಎನ್ನಿಸಿಕೊಳ್ಳುವ ಹಿರಿಯ ನಾಯಕರೊಬ್ಬರು ಸಿಎಂ ಮುಂದೆಯೇ, 'ಟಿಕೆಟ್ ಕೊಟ್ಟರೆ ಜಬ್ಬಾರ್‌ಗೆ ಕೊಡಿ, ಇಲ್ಲವಾದರೆ ಬೇರೆ ಸಮುದಾಯಕ್ಕೆ ಕೊಟ್ಟುಬಿಡಿ' ಎಂದು ಹಠ ಹಿಡಿದರು. ಇದು ಎಷ್ಟು ಸರಿ? ವರಿಷ್ಠರು ಪರ್ಯಾಯ ಮುಸ್ಲಿಂ ನಾಯಕರ ಹೆಸರನ್ನು ಕೇಳಿದಾಗ ಈ ನಾಯಕರು ಒಂದೇ ಒಂದು ಹೆಸರನ್ನೂ ಸೂಚಿಸಲಿಲ್ಲ.
-ರಿಜ್ವಾನ್ ಅರ್ಷದ್, ಶಾಸಕ

ಒಳ ಲೆಕ್ಕಾಚಾರಗಳೇನು?

- ಉಪಸಮರದ ವೇಳೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಪರ ಜಮೀರ್ ಕೆಲಸ ಮಾಡಿಲ್ಲ: ರಿಜ್ವಾನ್ ಪರೋಕ್ಷ ಆರೋಪ
- ಜಮೀರ್ ಅಹ್ಮದ್, ಅಬ್ದುಲ್ ಜಬ್ಬಾರ್, ನಾಸೀರ್ ಅಹ್ಮದ್‌ರಿಂದ ಪಕ್ಷದ ಅಧಿಕೃತ ಅಭ್ಯರ್ಥಿ ವಿರುದ್ಧ ಒಳಸಂಚು: ದೂರು
- ಜಮೀರ್‌ರನ್ನು ಹೊರಗಿಟ್ಟು ಮುಸ್ಲಿಮ್ ಸಮುದಾಯದ ನಾಯಕರಾಗುವ ಲೆಕ್ಕಾಚಾರದಲ್ಲಿ ರಿಜ್ವಾನ್, ಸಲೀಂ?

ಅಲ್ಪಸಂಖ್ಯಾತ ಸಮಿತಿಯನ್ನೇ ವಿಸರ್ಜಿಸಿದ ಡಿಸಿಎಂ ಡಿಕೆಶಿ

ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ಸಲ್ಲಿಸಿದ್ದ ರಾಜೀನಾಮೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಂಗೀಕರಿಸಿದ್ದಾರೆ. ಅಧ್ಯಕ್ಷ ಸ್ಥಾನದ ರಾಜೀನಾಮೆ ಅಂಗೀಕರಿಸುವ ಜತೆಜತೆಗೆ ಅಬ್ದುಲ್ ಜಬ್ಬಾರ್ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಅಲ್ಪಸಂಖ್ಯಾತ ವಿಭಾಗದ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಗುರುಕುಲ ಕಾಲೇಜಿಗೆ ಶೇ.92 ಫಲಿತಾಂಶ

ಹೊನ್ನಾಳಿ: ಎಚ್.ಕಡದಕಟ್ಟೆಯ ಹೊರವಲಯದಲ್ಲಿರುವ ಶ್ರೀ ಸಾಯಿ ಗುರುಕುಲ ವಸತಿಯುತ ಪಿಯು ಕಾಲೇಜಿಗೆ 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ 92%ರಷ್ಟು ಫಲಿತಾಂಶ ಬಂದಿದೆ. ಜಿ.ಕೆ.ರಮ್ಯ 551 ಅಂಕಗಳಿಸಿ 91.83% ಫಲಿತಾಂಶದೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಜಿ.ಕೆ.ರಕ್ಷಿತಾ 543 ಅಂಕಗಳಿಸಿ 90.50% ದ್ವಿತೀಯ ಸ್ಥಾನ, ಪ್ರಿಯಾ 539 ಅಂಕ ಗಳಿಸಿ 89.83% ತೃತೀಯ ಸ್ಥಾನ ಗಳಿಸಿ ಕಾಲೇಜಿಗೆ ಮತ್ತು ಪೋಷಕರಿಗೆ ಕೀರ್ತಿ ತಂದಿದ್ದು, ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಂಶುಪಾಲರು, ಆಡಳಿತ ಮಂಡಳಿಯವರು, ಉಪನ್ಯಾಸಕ ವೃಂದದವರು ಅಭಿನಂದಿಸಿದ್ದಾರೆ.

‘ಲೆಕ್ಕ ಕೊಡಿ ಚಳವಳಿ’ ಹೋರಾಟ ಇಂದು

ಹರಿಹರ: ಪಂಚಮಸಾಲಿ ಪೀಠದ ಧರ್ಮದರ್ಶಿಗಳೆ ‘ಲೆಕ್ಕಕೊಡಿ ಚಳುವಳಿ’ ಹೋರಾಟ ಮುಂದುವರಿಸಲು ಏ. 13 ರಂದು ಬೆಳಗ್ಗೆ 10 ಗಂಟೆಗೆ, ಪೀಠದ ಆವರಣದಲ್ಲಿ ಸಭೆ ಕರೆಯಲಾಗಿದ್ದು, ಸಭೆಯಲ್ಲಿ ಸೋಮಣ್ಣ ಬೇವಿನಮರದ, ಮಾಜಿ ಶಾಸಕ ಅರುಣಕುಮಾರ ಪೂಜಾರ, ನಂದಿಹಳ್ಳಿ ಹಾಲಪ್ಪ, ಮಾಜಿ ಮೇಯರ್ ಅಜಯ್ ಕುಮಾರ, ಆಡಳಿತಾಧಿಕಾರಿ ಡಾ. ಎಚ್.ಪಿ ರಾಜಕುಮಾರ್‌ಭಾಗವಹಿಸುವರೆಂದು, ಹೊಳೆಸಿ ರಿಗೆರೆ ಗ್ರಾಮದ ಸಮಾಜದ ಮುಖಂಡರುಗಳಾದ ಎಂ.ಜಿ ಪರಮೇಶ್ವರಗೌಡ್ರ, ಹಾವೇರಿಯ ಡಾ. ವೀರಾಪುರ, ಅಥಣಿಯ ಶಿವಕುಮಾರ ಗುಡ್ಡಾಪುರ, ಬ್ಯಾಡಗಿ ಶಂಕರಗೌಡ ಪಾಟೀಲ ನೀಡಿರುವ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮಕ್ಕಳ ಬೇಸಿಗೆ ಶಿಬಿರಕ್ಕೆ ಅರ್ಜಿ ಆಹ್ವಾನ

ಚಿತ್ರದುರ್ಗ: ರಾಜ್ಯ ಬಾಲಭವನ ಸೊಸೈಟಿ, ಜಿಲ್ಲಾ ಪಂಚಾಯತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ ಸಮಿತಿ ವತಿಯಿಂದ 5 ರಿಂದ 16 ವರ್ಷದ ಮಕ್ಕಳಿಗಾಗಿ ಏ. 21 ರಿಂದ ಮೇ 07 ರವರಗೆ ಜಿಲ್ಲಾ ಮಟ್ಟದಲ್ಲಿ ಮಕ್ಕಳ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಏ. 18 ಅರ್ಜಿ ಸಲ್ಲಿಸಲು ಕೊನೆಯ ದಿನ. ಶಿಬಿರದಲ್ಲಿ ಮಕ್ಕಳಿಗೆ ಯೋಗ, ಧ್ಯಾನ, ಚಿತ್ರಕಲೆ, ಕರಾಟೆ, ಕರಕುಶಲತೆ, ನಾಟಕ, ಅಭಾಕಸ್, ಸಮೂಹ ನೃತ್ಯ, ಸಂಗೀತ, ಮಾತನಾಡುವ ಗೊಂಬೆ, ಮೇಹಂದಿ ಮುಂತಾದ ವಿಷಯಗಳಿಗೆ ಸೇರಿದಂತೆ, ಆಹ್ವಾನಿತ ಅಥಿತಿಗಳಿಂದ ಉಪನ್ಯಾಸವನ್ನು ಶಿಬಿರದ ತರಬೇತಿ ನೀಡಲಾಗುವುದು. ಆಸಕ್ತ ಪೋಷಕರು ಮತ್ತು ಮಕ್ಕಳು ಏ.18 ರ ಸಂಜೆ 5.30 ರೊಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಾರ್ಯದರ್ಶಿಗಳು, ಜಿಲ್ಲಾ ಬಾಲ ಭವನ ಸಮಿತಿ, ರಾಜೇಂದ್ರ ನಗರ, ವೀರವನಿತೆ ಒನಕೆ ಓಬವ್ವ ಕ್ರೀಡಾಂಗಣದ ಮುಂಭಾಗ, ಚಿತ್ರದುರ್ಗ ಹಾಗೂ ಡಿ.ಶ್ರೀಕುಮಾರ್, ಕಾರ್ಯಕ್ರಮ ಸಂಯೋಜಕ ಅವರ ಮೊಬೈಲ್ ಸಂಖ್ಯೆ 7259551325 ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಏ.14ಕ್ಕೆ ಅಂಬೇಡ್ಕರ್ ಜನ್ಮ ದಿನಾಚರಣೆ

ಚಿತ್ರದುರ್ಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜನ್ಮ ದಿನಾಚರಣೆ ಸಮಾರಂಭ ಏ. 14ರಂದು ಬೆಳಗ್ಗೆ 11ಕ್ಕೆ ಚಿತ್ರದುರ್ಗ ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್‌ಉದ್ಘಾಟನೆ ನೆರವೇರಿಸುವರು. ಚಳ್ಳಕೆರೆ ಶಾಸಕರು, ಟಿ.ರಘುಮೂರ್ತಿ, ಹೊಸದುರ್ಗ ಶಾಸಕರು ಬಿ.ಜಿ.ಗೋವಿಂದಪ್ಪ, ಸಂಸದ ಗೋವಿಂದ ಎಂ. ಕಾರಜೋಳ ಘನ ಉಪಸ್ಥಿತಿ ವಹಿಸುವರು. ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅಧ್ಯಕ್ಷತೆ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಕರ್ನಾಟಕ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಡಾ.ಬಿ.ಯೋಗೇಶ್ ಬಾಬು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧ್ಯಕ್ಷ ಪಿ.ರಘು, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಮೊಳಕಾಲ್ಮುರು ಶಾಸಕ ಎನ್.ವೈ. ಗೋಪಾಲಕೃಷ್ಣ, ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ.ಗೌಡ, ಕೆ.ಎಸ್.ನವೀನ್, ಡಿ.ಟಿ.ಶ್ರೀನಿವಾಸ್, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್ಪೀರ್,ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಆರ್.ಶಿವಣ್ಣ ಗಂಜಿಗಟ್ಟೆ, ಅಮ್ಲಾನ್ ಆದಿತ್ಯ ಬಿಸ್ವಾಸ್ ಭಾಗವಹಿಸುವರು.

{ಕುಮಾರಸ್ವಾಮಿ} ಕೇಂದ್ರ ಸಚಿವ

ಯಾವುದೇ ರಾಜಕೀಯ ಪಕ್ಷಕ್ಕೆ 25 ವರ್ಷದ ಸುಧೀರ್ಘ ಪಯಣ ಸಣ್ಣದಲ್ಲ. ಅನೇಕ ಸವಾಲು, ಏಳುಬೀಳುಗಳ ನಡುವೆ ಬೆಳ್ಳಿಹಬ್ಬದ ಸಂಭ್ರಮದಲ್ಲಿರುವ ಪಕ್ಷವು ಯಾವುದೇ ರಾಷ್ಟ್ರೀಯ ಪಕ್ಷಕ್ಕೆ ಕಡಿಮೆ ಇಲ್ಲದಂತೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ತನ್ನ ಛಾಪನ್ನು ಮೂಡಿಸಿದೆ.



ಸೇವೆಯೊಂದಿಗೆ ಬದುಕಿದವರು ಸಾವಿನ ನಂತರವೂ ಅಮರ: ಬಸವಲಿಂಗ ಶ್ರೀ

ಬದ್ಧತೆ ಇಲ್ಲದ ಬದುಕು ವ್ಯರ್ಥ

ಚಿತ್ರದುರ್ಗ: ಅನಾದಿ ಕಾಲದಿಂದಲೂ ಬೇರೂರಿದ್ದ ಮೌಢ್ಯ, ಕಂದಾಚಾರ, ಅಸ್ಪೃಶ್ಯತೆ ವಿರುದ್ಧ ಜನಾಂದೋಲನ ರೂಪಿಸಿ ಕ್ರಾಂತಿಕಾರಿ ಚಳವಳಿ ನಡೆಸಿದ 12ನೇ ಶತಮಾನದ ಬಸವಾದಿ ಶರಣ ಸಿದ್ಧಾಂತವನ್ನು ಪಾಲಿಸುವಲ್ಲಿ ಜನ ನಿರಾಸಕ್ತಿ ಪ್ರದರ್ಶಿಸುತ್ತಿದ್ದಾರೆ ಎಂದು ಸಿದ್ದಯ್ಯನಕೋಟೆ ಮಠದ ಶ್ರೀ ಬಸವಲಿಂಗ ಸ್ವಾಮೀಜಿ ಬೇಸರಿಸಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಮಾದಿಗ ಸಮುದಾಯದ ಮುಖಂಡ ಭಾನುಮೂರ್ತಿ ನುಡಿನಮನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಬಸವಣ್ಣನ ಯುಗದಲ್ಲಿ ಬೇಡುವವರು ಇರಲಿಲ್ಲ, ನೀಡುವವರು ಇದ್ದರು. ಆದರೆ, ಈಗ ಅಂತಹ ಪರಿಸ್ಥಿತಿ ಬದಲಾಗಿದೆ ಎಂದರು.

ಜಗತ್ತಿನಲ್ಲಿ ಅನೇಕರು ಹುಟ್ಟಿ ಕಣ್ಮರೆ ಆಗಿದ್ದಾರೆ. ಆದರೆ, ನಿಸ್ವಾರ್ಥ ಸೇವೆ ಮೂಲಕ ಬದುಕಿದವರು ನಿಧನದ ಬಳಿಕವೂ ಜೀವಂತವಾಗಿದ್ದಾರೆ. ಆದರೆ, ಈಗಿನ ಜನರಲ್ಲಿ ಬಹುತೇಕ ಬದ್ಧತೆ, ಸೇವಾ ಮನೋಭಾವ, ಪರೋಪಕಾರಿ ಗುಣ ಕಣ್ಮರೆ ಆಗುತ್ತಿದೆ ಎಂದರು.

ಯಾರೂ ತಮಗಾಗಿ ಜೀವನ ಕಟ್ಟಿಕೊಳ್ಳುತ್ತಾರೆ ಅವರು ನೆಮ್ಮದಿ ಆಗಿರುತ್ತಾರೆ. ಅವರ ಕುರಿತು ಆಕ್ಷೇಪಣೆ ಇಲ್ಲ. ಆದರೆ, ಮತ್ತೊಬ್ಬರ ಬದುಕಿನಲ್ಲಿ ವಿಷ ಬೀಜ ಬಿತ್ತುವ ಕಾರ್ಯ ನಡೆಸುವವರು ಅತ್ಯಂತ ಅಪಾಯಕಾರಿಗಳು. ಇವರ ಕುರಿತು ಸದಾ ಎಚ್ಚರಿಕೆಯಿಂದರಬೇಕೆಂದು ಬಸವಾದಿ ಶರಣರು ಸೇರಿ ಎಲ್ಲ ಮಹಾತ್ಮರು ಎಚ್ಚರಿಸಿದ್ದಾರೆ ಎಂದು ಹೇಳಿದರು.

ಮತ್ತೊಬ್ಬರ ಸಂಕಷ್ಟಕ್ಕೆ ಸ್ಪಂದಿಸುವವರು ಸದಾ ಜನ ನಾಯಕರಾಗಿ ಹೊರಹೊಮ್ಮಲಿದ್ದಾರೆ. ಭಾನುಮೂರ್ತಿ ತೆರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಜತೆಗೆ ಮಾದಿಗ ಹಾಗೂ ಇತರ ಎಲ್ಲ ಸಮುದಾಯಗಳ ಪ್ರಗತಿಗೆ ಶ್ರಮಿಸಿದ್ದಾರೆ.

ಅವರ ಸೇವಾ ಮನೋಭಾವವನ್ನು ಈಗಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕೆಂದು ತಿಳಿಸಿದರು.



ಚಿತ್ರದುರ್ಗದಲ್ಲಿ ಮಾದಿಗ ಸಮುದಾಯದ ಮುಖಂಡ ಭಾನುಮೂರ್ತಿ ನುಡಿನಮನ ಕಾರ್ಯಕ್ರಮದಲ್ಲಿ ಸಿದ್ಧಯ್ಯನಕೋಟೆ ಮಠದ ಶ್ರೀ ಬಸವಲಿಂಗ ಸ್ವಾಮೀಜಿ ಮಾತನಾಡಿದರು.

ನಾವು ಯಾವುದೇ ಕ್ಷೇತ್ರದಲ್ಲಿ ಇರಲಿ, ಜನಪರ ಚಿಂತನೆ ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ಜೀವನ ನಶ್ವರ ಎಂದು ಹೇಳಿದರು. ಭಾನುಮೂರ್ತಿ ತೆರಿಗೆ ಇಲಾಖೆಯಲ್ಲಿ ಅಧಿಕಾರಿ ಆಗಿದ್ದರೂ ಒಳಮೀಸಲಾತಿ ಹೋರಾಟದಲ್ಲಿ ಸಕ್ರಿಯರಾಗಿದ್ದರು. ಜತೆಗೆ ಅನೇಕ ಜನಪರ ಚಳವಳಿಗೆ ಬೆನ್ನೆಲುಬು ಆಗಿದ್ದರು. ಜನಪರ ಕಾರ್ಯಕ್ರಮಗಳಿಗೆ ಆರ್ಥಿಕ ಸಹಾಯದ ಜತೆಗೆ ನೈತಿಕವಾಗಿ ಬೆಂಬಲವಾಗಿ ನಿಲ್ಲುವ ಗುಣ ಮಾದರಿ ಆಗಿತ್ತು.

-ಎಚ್.ಆಂಜನೇಯ, ಮಾಜಿ ಸಚಿವ

ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ತೇಗನೂರು ಮಾತನಾಡಿ, ನಮ್ಮ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ಭಾನುಮೂರ್ತಿ ಅವರ ಸೇವಾಮನೋಭಾವ ಮಾದರಿ. ಅವರು ಸದಾ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದರು ಎಂದರು.

ಅನೇಕ ಸಂಘಟನೆಗಳ ಚಳವಳಿಗೆ ಆರ್ಥಿಕ ಸಹಾಯದ ಜತೆಗೆ ಹೋರಾಟವನ್ನು ಹೇಗೆ ಮುನ್ನಡಿಸಿಕೊಂಡು ಹೋಗಿ ಬೇಡಿಕೆ ಈಡೇರಿಸಿಕೊಳ್ಳಬೇಕೆಂಬ ವಿಷಯದಲ್ಲಿ ಮಾರ್ಗದರ್ಶನ ನೀಡುತ್ತಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಶೋಕ್ ಕುಮಾರ್‌ಸೇರಿ ವಿವಿಧ ಕ್ಷೇತ್ರದ ಮುಖಂಡರು, ಹೋರಾಟಗಾರರು ಪಾಲ್ಗೊಂಡಿದ್ದರು.

ರಂಗನಾಥ ಪಿಯು ಕಾಲೇಜಿಗೆ 21 ಅತ್ಯುನ್ನತ ಶ್ರೇಣಿ ತೇರ್ಗಡೆ

ಹೊಸದುರ್ಗ: ನಗರದ ಶ್ರೀ ಕನಕ ವಿದ್ಯಾಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ರಂಗನಾಥ ಪದವಿ ಪೂರ್ವ ಕಾಲೇಜಿನ ಪ್ರಥಮ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಕಾಲೇಜಿನ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ನೂತನ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ವಿಜ್ಞಾನ ವಿಭಾಗದಲ್ಲಿ ಗುಲಾಮ್ ಅಹಮದ್ 600 ಅಂಕಗಳಿಗೆ 579 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ, ಪ್ರಾರ್ಥನಾ.ಬಿ ಮತ್ತು ಭವ್ಯ ಎನ್.ಡಿ 569 ಅಂಕ ಪಡೆದು ದ್ವಿತೀಯ ಸ್ಥಾನ, ಕೆ.ಎ.ಮುಕ್ತಿಯಾರ್565 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಮತ್ತು ವಾಣಿಜ್ಯ ವಿಭಾಗದಲ್ಲಿ ಪ್ರಕೃತಿ ಆರ್. 600 ಅಂಕಗಳಿಗೆ 564 ಅಂಕ ಪಡೆದು ಪ್ರಥಮ ಸ್ಥಾನ, ವರುಣ್ ನಾಯಕ್ 554 ದ್ವಿತೀಯ ಸ್ಥಾನ, ಅನುಷಾ 553 ಪಡೆದು ತೃತೀಯ ಸ್ಥಾನ ಪಡೆದಿರುತ್ತಾರೆ. ಕಾಲೇಜಿನಲ್ಲಿ 21 ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, 64 ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಕನಕ ವಿದ್ಯಾಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಎಚ್.ಕೃಷ್ಣಮೂರ್ತಿ ಮತ್ತು ಆಡಳಿತ ಮಂಡಳಿಯ ಎನ್.ಆರ್. ನಂದೀಶ್ ಕಾಲೇಜಿನ ಪ್ರಾಂಶುಪಾಲ ಪ್ರೊ.ವಿ.ಎಸ್ ದಯಾನಂದಕುಮಾರ್ ಹಾಗೂ ಆಡಳಿತ ಮಂಡಳಿಯವರು, ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಶಾಂತರಸರ 101ನೇ ಜನ್ಮ ದಿನಾಚರಣೆ

ಕನ್ನಡ ಗಜಲ್‌ಗೆ ಜೀವ ತುಂಬಿದ ಕವಿ ಶಾಂತರಸ

ಹಿರಿಯೂರು: ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕವಿ, ಕತೆಗಾರ, ಕಾದಂಬರಿಕಾರ, ಸಂಶೋಧಕ, ಪತ್ರಕರ್ತ, ಶಿಕ್ಷಕ, ಸಂಘಟಕ, ಸ್ವಾತಂತ್ರ್ಯ ಹೋರಾಟಗಾರ, ಹೀಗೆ ಹಲವಾರು ಕ್ಷೇತ್ರಗಳಲ್ಲಿ ದುಡಿದು ಕನ್ನಡದ ಗಜಲ್ ಪ್ರಕಾರಕ್ಕೆ ಜೀವಂತಿಕೆ ಕೊಟ್ಟವರು ಕವಿ ಶಾಂತರಸ ಆಗಿದ್ದಾರೆ ಎಂದು ಸಾಹಿತಿ ಹಾಗೂ ಅನುವಾದಕರಾದ ಪ್ರೊ.ಎಂ.ಜಿ.ರಂಗಸ್ವಾಮಿ ಹೇಳಿದರು.

ಪಟ್ಟಣದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಬಹುಮುಖಿ ಕಲಾಕೇಂದ್ರ ಚಿತ್ರದುರ್ಗ,ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹಿರಿಯೂರು, ಸಂಸ ಥಿಯೇಟರ್ ಬೆಂಗಳೂರು, ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಕವಿ ಶಾಂತರಸ ರವರ 101ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕವಿ ಶಾಂತ ರಸ ಅವರು 1939ರಲ್ಲಿ ವಂದೇ ಮಾತರಂ ಚಳುವಳಿಯಲ್ಲಿ ಪಾಲ್ಗೊಂಡು ಅಲ್ಲಿಂದ ಹೋರಾಟ ಆರಂಭಿಸಿದ ಇವರು ಅಸಮಾನತೆ ರೂಢಿ ಸಂಪ್ರದಾಯ ಕಂದಾಚಾರ ಬಂಡವಾಳ ಶಾಹಿ ಪದ್ಧತಿ ಗಳ ವಿರುದ್ಧ ಹೋರಾಡಿದ ಧೀಮಂತ ಹೋರಾಟಗಾರ, ಹೈದರಾಬಾದ್ ನಿಜಾಮನನ್ನು ನಿಂದಿಸಿದ ಕಾರಣ 9ನೇ ತರಗತಿಯಲ್ಲಿ ಫೇಲಾಗಿ ನಂತರ ಓದುವ ಸಲುವಾಗಿ ಊರು ಊರು ಸುತ್ತಿ ಕಲಬುರ್ಗಿ ರಾಯಚೂರು ನಾತೂರು ಗಳಲ್ಲಿ ಶಿಕ್ಷಣ ಪಡೆದು ಶಿಕ್ಷಕರಾದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಹರ್ತಿಕೋಟೆ ಮಹಾಸ್ವಾಮಿ, ಬಹುಮುಖಿ ಕಲಾಕೇಂದ್ರದ ಸಂಚಾಲಕರಾದ ಟಿ. ಮಧು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ನನ್ನಿವಾಳ ಹನುಮಂತಪ್ಪ, ಮದಕರಿಪುರದ ರಂಗಭೂಮಿ ಕಲಾವಿದ ಟಿ , ಶ್ರೀನಿವಾಸಮೂರ್ತಿ, ಕಾಲೇಜಿನ ಆಡಳಿತ ಅಧಿಕಾರಿ ಈರಗೋಪಯ್ಯ, ಮಣಿಯಮ್ಮ ಕೆ .ನವೀನ್., ಅಬ್ದುಲ್ ಸಮದ್. ಫರ್ಹತಂಕಿನ್. ವೇಣುಗೋಪಾಲ್, ಪರಮೇಶ್ವರಪ್ಪ, ಯಮುನಾ, ಟಿ. ಸುಮಲತಾ, ಬಸವರಾಜ್, ಸಚಿನ್, ಉಪಸ್ಥಿತರಿದ್ದರು.

ಪಟ್ಟಣದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಕವಿ ಶಾಂತರಸ ರವರ 101ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಪ್ರೊ.ಎಂ.ಜಿ.ರಂಗಸ್ವಾಮಿ ಉದ್ಘಾಟಿಸಿದರು.

ಫಲಿತಾಂಶಕ್ಕೂ ಮುನ್ನವೇ ಸೋಲೊಪ್ಪಿದ ಕಾಂಗ್ರೆಸ್

ದಾವಣಗೆರೆ: ದಕ್ಷಿಣ ಉಪಚುನಾವಣೆ ಫಲಿತಾಂಶಕ್ಕೂ ಮುನ್ನವೇ ಕಾಂಗ್ರೆಸ್ ನಾಯಕರು ಸೋಲೊಪ್ಪಿಕೊಂಡಿದ್ದಾರೆ ಎಂದು ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಕುಟುಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಪ ಚುನಾವಣೆ ಹಿನ್ನೆಲೆ ಮುಖ್ಯಮಂತ್ರಿಯಾದಿಯಾಗಿ ಇಡೀ ಸರಕಾರವೇ ಇಲ್ಲಿ ಠಿಕಾಣಿ ಹೂಡಿತ್ತು. ಆದರೆ, ಕಾಂಗ್ರೆಸ್ ನಾಯಕರು ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, ಕಾಂಗ್ರೆಸ್ ಮುಖಂಡರೇ ಪಕ್ಷದ ಅಭ್ಯರ್ಥಿಯನ್ನು ಸೋಲಿಸಲು ಷಡ್ಯಂತರ ನಡೆಸಿದ್ದರು ಎಂಬುದರ ಬಗ್ಗೆ ಹೈಕಮಾಂಡ್‌ಗೆ ದೂರು ನೀಡಿದಲ್ಲದೇ, ಕೆಲವರು ರಾಜೀನಾಮೆ ನೀಡುವ ಮೂಲಕವೂ ಸೋಲು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ದಕ್ಷಿಣ ಕ್ಷೇತ್ರದ ಚುನಾವಣೆಯು ಶೋಷಿತ ವರ್ಗಗಳ ಸ್ವಾಭಿಮಾನದ ಚುನಾವಣೆಯಾಗಿ ಮಾರ್ಪಟ್ಟಿತ್ತು. ಕ್ಷೇತ್ರದ ಸ್ವಾಭಿಮಾನಿ ಮತದಾರರು ಕುಟುಂಬ ರಾಜಕಾರಣ ಮತ್ತು ಕಾಂಗ್ರೆಸ್ ದುರಾಡಳಿತದ ವಿರುದ್ಧದ ಅಸಮಾಧಾನವನ್ನು, ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪನವರಿಗೆ ಮತ ನೀಡುವ ಮೂಲಕ ಹೊರ ಹಾಕಿದ್ದಾರೆ. ದಕ್ಷಿಣದಲ್ಲಿ ದೊಡ್ಡ ಮಟ್ಟದ ಬದಲಾವಣೆಯ ಗಾಳಿ ಬೀಸಿದೆ. ಮುಂದೆ ಉತ್ತರ ಕ್ಷೇತ್ರ ಮತ್ತು ಲೋಕಸಭಾ ಕ್ಷೇತ್ರದಲ್ಲೂ ಬದಲಾವಣೆ ಗಾಳಿ ಬೀಸಲಿದೆ. ಈ ಫಲಿತಾಂಶವೂ ರಾಜ್ಯದ ರಾಜಕೀಯ ಚಿತ್ರದ ಬದಲಾವಣೆಗೆ ನಾಂದಿ ಹಾಡಲಿದೆ ಎಂದು ಹೇಳಿದರು.

ಬಿಜೆಪಿ ಹಾಗೂ ಸ್ವಾಭಿಮಾನಿ ಬಳಗವು ಬೂತ್ ಮಟ್ಟದಲ್ಲಿ ಮತದಾನದ ನಂತರ ಸಂಗ್ರಹಿಸುವ ಮಾಹಿತಿಯ ಅಂಕಿ, ಅಂಶಗಳ ಪ್ರಕಾರ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಮತದಾನವಾಗಿದೆ. ಅದರಲ್ಲಿ ಬಿಜೆಪಿಗೆ ಹೆಚ್ಚಿನ ಮತ ಚಲಾವಣೆ ಆಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.

-ಜಿ.ಬಿ. ವಿನಯ್ ಕುಮಾರ್, ರಾಜ್ಯಾಧ್ಯಕ್ಷ

ಇದಕ್ಕೆ ತಾವು ನಡೆಸಿದ ಪಾದಯಾತ್ರೆ ಮತ್ತು ಬಿಜೆಪಿಯ ರಾಜ್ಯ ಮತ್ತು ಸ್ಥಳೀಯ ನಾಯಕರು ನಡೆಸಿದ ಪ್ರಚಾರ ಕಾರಣವಾಗಿದೆ. ಬಿಜೆಪಿಯ ಸಾಂಪ್ರದಾಯಕ ಮತಗಳು ಚದುರದೇ ಶ್ರೀನಿವಾಸ್ ಪರವಾಗಿಯೇ ಚಲಾವಣೆಯಾಗಿವೆ. ಪರಿಶಿಷ್ಟ ಪಂಗಡದ ಶೇ.90 ರಷ್ಟು ಮತ, ಕುರುಬರ 6 ಸಾವಿರ ಮತಗಳು ಬಿಜೆಪಿಗೆ ದಕ್ಕಿವೆ. ಎಸ್ಡಿಪಿಐ ಅಭ್ಯರ್ಥಿ ಕನಿಷ್ಠ 30 ಸಾವಿರ ಮತ ಪಡೆಯಲಿದ್ದು, ಈ ಬಾರಿ ದಕ್ಷಿಣದಲ್ಲಿ ಕುಕ್ಕರ್ ಸ್ಫೋಟಗೊಳ್ಳುತ್ತದೆ ಎಂದು ವಿಶ್ಲೇಷಿಸಿದರು.

ಸುದ್ದಿಗೋಷ್ಠಿಯಲ್ಲಿ ಬಳಗದ ವಿರೂಪಾಕ್ಷಪ್ಪ ಪಂಡಿತ್, ಶಿವಕುಮಾರ್‌ಶೆಟ್ಟರ್, ಪರಶುರಾಮ ಬಟ್ಲಕಟ್ಟೆ, ರೇವಂತ್ ಕೋಳೇನಹಳ್ಳಿ ಮತ್ತಿತರರಿದ್ದರು.

ಬಾಲಕರ ಸರಕಾರಿ ಪ.ಪೂ ಕಾಲೇಜಿಗೆ ಉತ್ತಮ ಫಲಿತಾಂಶ

ಚಿತ್ರದುರ್ಗ: 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಚಿತ್ರದುರ್ಗ ನಗರದ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ದಾಖಲಿಸಿದ್ದಾರೆ. ಈ ಬಾರಿಯ ಪರೀಕ್ಷೆಯಲ್ಲಿ ಕಾಲೇಜಿನ 21 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ. ಉಳಿದಂತೆ 116 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 66 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಹಾಗೂ 39 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಎಸ್. ಅಜಯ್ (572 ಅಂಕ), ವಿಜ್ಞಾನ ವಿಭಾಗದಲ್ಲಿ ಆರ್.ಸಂದೀಪ (558 ಅಂಕ) ಹಾಗೂ ಕಲಾ ವಿಭಾಗದಲ್ಲಿ ವಿ. ರಾಮಾಂಜಿನೇಯ (551 ಅಂಕ) ಅವರು ಅತಿ ಹೆಚ್ಚು ಅಂಕಗಳನ್ನು ಪಡೆದು ಕಾಲೇಜಿನ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಚಿತ್ರದುರ್ಗ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಹಾಗೂ ಸಮಿತಿಯ ಸದಸ್ಯರು, ಪ್ರಾಂಶುಪಾಲರು ಹಾಗೂ ಉಪನ್ಯಾಸಕ ವರ್ಗದವರು ಅಭಿನಂದಿಸಿದ್ದಾರೆ.

ಶಿಸ್ತು ಬದ್ಧ ಜೀವನ ಶೈಲಿ ಆರೋಗ್ಯಕ್ಕೆ ಪೂರಕ

ಎಸ್‌ಜೆವಿಪಿ ಪದವಿ ಕಾಲೇಜಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಯುಕ್ತ ಆಶ್ರಯದಲ್ಲಿ ಎಕ್ಕೆಗೊಂದಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಉಚಿತ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರದ ಉದ್ಘಾಟನಾ ಸಮಾರಂಭ ನಡೆಯಿತು.

ಹರಿಹರ: ಉತ್ತಮ ಆಹಾರ- ವಿಹಾರ, ಆಚಾರ-ವಿಚಾರದೊಂದಿಗೆ ಶಿಸ್ತುಬದ್ಧ ಜೀವನಶೈಲಿಯನ್ನು ಅಳವಡಿಸಿಕೊಂಡು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ಹರಪನಹಳ್ಳಿ ಜನನಿ ಯೋಗ, ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸಾರ್ವಜನಿಕ ಸಂಪರ್ಕ ಮುಖ್ಯಸ್ಥ ಉದಯಶಂಕರ ಭಟ್ ಅಭಿಪ್ರಾಯಪಟ್ಟರು.

ಜನನಿ ಪ್ರಕೃತಿ ಚಿಕಿತ್ಸಾ ಕೇಂದ್ರ, ಕರ್ನಾಟಕ ನವನಿರ್ಮಾಣ ಸೇನೆ, ಮಾರಿಕಾಂಬಾ ದೇವಸ್ಥಾನ ಸೇವಾ ಸಮಿತಿ ಮತ್ತು ಎಸ್‌ಜೆವಿಪಿ ಪದವಿ ಕಾಲೇಜಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಯುಕ್ತ ಆಶ್ರಯದಲ್ಲಿ ಎಕ್ಕೆಗೊಂದಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಉಚಿತ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಪಾಶ್ಚಾತ್ಯ ಜೀವನಶೈಲಿನ ಅಂಧಾನುಕರಣೆಯಿಂದ ಭಾರತದಲ್ಲಿ ಜೀವನಶೈಲಿ ರೋಗಗಳು ಅಪಾಯಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿವೆ. ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಪ್ರಕೃತಿ ನಮಗೆ ನೀಡಿದ ಅನೇಕ ಅಂಶಗಳನ್ನು ನಾವಿಂದು ಮರೆತಿದ್ದೇವೆ. ಔಷಧ ರಹಿತವಾಗಿ ನಮ್ಮ ಜೀವನಶೈಲಿ ಮಾರ್ಪಡಿಸಿಕೊಳ್ಳುವ ಮೂಲಕ ಮರೆತ ಅಂಶಗಳನ್ನು ನಮಗೆ ಪ್ರಕೃತಿ ಚಿಕಿತ್ಸಾ ಪದ್ಧತಿ ನೆನಪಿಸುತ್ತಿದೆ. ಈ ಬಗ್ಗೆ ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿದಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದು ಪ್ರತಿಪಾದಿಸಿದರು.

ಉತ್ತಮ ಆಹಾರ ಪದ್ಧತಿ ಅನುಸರಿಸುವ ಜತೆಗೆ ಯೋಗ, ಪ್ರಾಣಾಯಾಮ, ಧ್ಯಾನದಂಥ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಮೂಲಕ ಜೀವನಶೈಲಿ ರೋಗಗಳು ಬಾರದಂತೆ ತಡೆಯಬಹುದು. ತುರ್ತು ಹಾಗೂ ಶಸ್ತ್ರಚಿಕಿತ್ಸೆ ಹೊರತುಪಡಿಸಿ ಎಲ್ಲ ರೋಗಗಳಿಗೆ ಈ ಔಷಧಿ ರಹಿರ ವೈದ್ಯಪದ್ಧತಿಯಲ್ಲಿ ಚಿಕಿತ್ಸೆ ಇದ್ದು, ಇದರ ಪ್ರಯೋಜನ ಪಡೆದು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಹೇಳಿದರು. ಪಂಚಗ್ಯಾರೆಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವೈ.ಎನ್.ನಾಗರಾಜ್ ಶಿಬಿರ ಉದ್ಘಾಟಿಸಿದರು. ನವನಿರ್ಮಾಣ ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಬಿ.ರುದ್ರೇಗೌಡರು ಅಧ್ಯಕ್ಷತೆ ವಹಿಸಿದ್ದರು. ಯೋಗ ಪ್ರಾಧ್ಯಾಪಕ ಬಿ.ಜಯರಾಂ, ಯೋಗ ಶಿಕ್ಷಕರಾದ ನಿರಂಜನ್, ಎಂ.ಮೀನಾಕ್ಷಿ, ಎಸ್‌ಡಿಎಂಸಿ ಅಧ್ಯಕ್ಷ ಬರ್ಕತ್ ಅಲಿ, ದುರ್ಗಾಂಬಿಕಾ ದೇವಸ್ಥಾನ ಸಮಿತಿ ಅಧ್ಯಕ್ಷ ಹುಲಿಗೇಶ್ ಬಿ.ಸಿ, ಬೀರಲಿಂಗೇಶ್ವರ ಪ್ರೌಢಶಾಲೆ ಮುಖ್ಯಶಿಕ್ಷಕ ನಾಗೇಂದ್ರಪ್ಪ, ಮಂಜುನಾಥ ಬಾನುವಳ್ಳಿ, ಪ್ರಗತಿಪರ ಕೃಷಿಕ ಸಂಜೀವರೆಡ್ಡಿ, ಪತ್ರಕರ್ತ ಮಲ್ಲಿಕಾರ್ಜುನ ಕಲಾಲ್, ಎಸ್ಡಿಎಂಸಿ ಉಪಾಧ್ಯಕ್ಷೆ ಶಕುಂತಲಾ, ಎನ್‌ಎಸ್‌ಎಸ್ ಯೋಜನಾಧಿಕಾರಿಗಳಾದ ವಿಶಾಲ್ ಬೆಂಚಳ್ಳಿ, ಪ್ರೊ. ಸಂಕೀರ್ಣ ಪಿ.ಬಿ ಮತ್ತಿತತರು ಉಪಸ್ಥಿತರಿದ್ದರು.

ಮಟ್ಕಾ ಜೂಜಾಟದ ಮೇಲೆ ಪೊಲೀಸ್ ತಂಡ ದಾಳಿ

ದಾವಣಗೆರೆ: ನಗರದ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ, ಜೈದೇವ ಸರ್ಕಲ್ ಹತ್ತಿರ, ನಿಟುವಳ್ಳಿಯ ಸಾರ್ವಜನಿಕ ರಸ್ತೆ ಯಲ್ಲಿ ಕಾನೂನು ಬಾಹಿರವಾಗಿ ಮಟ್ಕಾ ಜೂಜಾಟ ನಡೆಯುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ಪೊಲೀಸ್ ದಾಳಿ ನಡೆಸಿ ಇಬ್ಬರನ್ನು ವಶಕ್ಕೆ ಪಡೆದು, 44 ಸಾವಿರ ರು. ಹಣ ವಶಪಡಿಸಿಕೊಳ್ಳಲಾಗಿದೆ.

ಪೊಲೀಸ್ ಅಧೀಕ್ಷಕರ ನಿರ್ದೇಶನದಲ್ಲಿ ಉಸ್ತುವಾರಿ ಅಧಿಕಾರಿ ಪೊಲೀಸ್ ಇನ್ಸ್ಪೆಕ್ಟರ್‌ಅಣ್ಣಯ್ಯ ಮಾರ್ಗದರ್ಶನದಲ್ಲಿ

ಸಾಗರ್‌ಅತ್ತರವಲಾ, ಸಿಬ್ಬಂದಿಯವರಾದ ಶಿವರಾಜ್, ಪ್ರಕಾಶ್, ಮಂಜಪ್ಪ ಒಳಗೊಂಡ ತಂಡ ದಾಳಿ ಮಾಡಿದ್ದು, ಕಾನೂನು ಬಾಹಿರವಾಗಿ ಮಟ್ಕಾ ಜೂಜಾಟದಲ್ಲಿ ತೊಡಗಿದ್ದ ಇಬ್ಬರು ಆರೋಪಿಗಳಾದ ಅನಿಲ್ ಕುಮಾರ್ ,ದಾವಣಗರೆ, ಹನುಮಂತ ಅವರನ್ನು ವಶಕ್ಕೆ ಪಡೆದು, ಜೂಜಾಟದಲ್ಲಿ ತೊಡಗಿಸಿದ್ದ ಒಟ್ಟು 44,000 ನಗದು ಹಣ ಮತ್ತು ಮಟ್ಕಾ ಚೀಟಿ ವಶಪಡಿಸಿಕೊಂಡಿರುತ್ತಾರೆ. ಈ ಸಂಬಂಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏ.14ಕ್ಕೆ ಅಂಬೇಡ್ಕರ್, ಬಾಬೂಜಿ ಜಯಂತಿ

ಹೊನ್ನಾಳಿ: ಏ. 14ರ ಮಂಗಳವಾರ ಬೆಳಗ್ಗೆ 10 ಗಂಟೆಗೆ ಪಟ್ಟಣದ ತಹಸೀಲ್ದಾರ್‌ಕಚೇರಿ ಸಭಾಂಗಣದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಹಸಿರು

ಕ್ರಾಂತಿಯ ಹರಿಕಾರ, ಭಾರತದ ಮಾಜಿ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ(ಗ್ರೇಡ್-2) ಎಚ್.ಎಲ್.ಉಮಾ ತಿಳಿಸಿದ್ದಾರೆ. ತಾಲೂಕು ಆಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ಹೊನ್ನಾಳಿ ಇವರುಗಳ ಸಂಯುಕ್ತಾಶ್ರಯದಲ್ಲಿ ಮಹನೀಯರ ಜಯಂತ್ಯುತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಬೆಳಗ್ಗೆ 10 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್‌ಮತ್ತು ಡಾ.ಬಾಬು ಜಗಜೀವನ್ ರಾಂ ಅವರ ಭಾವಚಿತ್ರದ ಮೆರವಣಿಗೆಯನ್ನು ವಿವಿಧ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ನಂತರ ತಾಲೂಕು ಕಚೇರಿ ಸಭಾಂಗಣದಲ್ಲಿ ಶಾಸಕ ಡಿ.ಜಿ.ಶಾಂತನಗೌಡ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಮಾಜದ ಗಣ್ಯರ ಸಮ್ಮುಖದಲ್ಲಿ ಆಚರಿಸಲಾಗುವುದು ಎಂದು ಮಾಹಿತಿ ನೀಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಎಲ್ಲರೂ ಪಾಲ್ಗೊಂಡು ಸಮಾಜ ಸುಧಾರಕರ ಜಯಂತ್ಯುತ್ಸವವನ್ನು ಯಶಸ್ವಿಗೊಳಿಸಬೇಕೆಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಕಾನೂನು ಮಾಹಿತಿ ಕೊರತೆ ವ್ಯಾಜ್ಯ ಹೆಚ್ಚಳ

ಪಟ್ಟಣದ ಶ್ರೀ ಜಗದ್ಗುರು ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ನಡೆದ ಸುಜ್ಞಾನ ಸಂಗಮ ಹಾಗೂ ಕಾನೂನು ಅರಿವು ಜಾಗೃತಿ ಸಮಾರಂಭ ನಡೆಯಿತು.

ಹೊಸದುರ್ಗ: ಸಮಾಜದ ನಾಲ್ಕು ಅಂಗಗಳಲ್ಲಿ ಮುಖ್ಯ ಅಂಗವಾದ ನ್ಯಾಯಾಂಗದ ಬಗ್ಗೆ ಇರುವ ಗೌರವವನ್ನು ಹೆಚ್ಚಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಆ ನಿಟ್ಟಿನಲ್ಲಿ ಸಂವಿಧಾನದ ಆಶಯದಂತೆ ಬದುಕನ್ನು ಕಟ್ಟಿಕೊಳ್ಳುವ ಮತ್ತು ಬದುಕಲು ಅವಕಾಶ ಮಾಡಿಕೊಡುವ ಕರ್ತವ್ಯ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಬೇಕು ಎಂದು ಕಾಯಕಯೋಗಿ ಶ್ರೀ ಶಾಂತವೀರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶ್ರೀ ಜಗದ್ಗುರು ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ನಡೆದ ಸುಜ್ಞಾನ ಸಂಗಮ ಹಾಗೂ ಕಾನೂನು ಅರಿವು ಜಾಗೃತಿ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿ, ಕಾನೂನನ್ನು ಸರ್ವರೂ ಪಾಲಿಸುವುದು ಮತ್ತು ಪಾಲಿಸುವಂತೆ ಪ್ರೇರೇಪಿಸುವುದು ಅವಶ್ಯವಾಗಿದೆ. ಗ್ರಾಮೀಣ ಜನರಲ್ಲಿ ಅರಿವಿನ ಕೊರತೆಯಿಂದ ಜಮೀನಿನ ವ್ಯಾಜ್ಯ, ವಿವಾಹಗಳ ಸಮಸ್ಯೆ ಹೆಚ್ಚಾಗುತ್ತಿದ್ದು ಸಂಘಟನೆಗಳು ಮತ್ತು ಸರಕಾರಗಳು ಕಾನೂನಿನ ಅರಿವನ್ನು ಮೂಡಿಸುವ ಕೆಲಸವಾಗಬೇಕಿದೆ. ಕಾನೂನಿನಲ್ಲಿ ಕರುಣೆಗೆ ಅವಕಾಶವಿಲ್ಲ. ಹಾಗಾಗಿ ಗೊತ್ತಿಲ್ಲದೇ ಇರುವ ವಿಷಯಗಳನ್ನು ಅಧ್ಯಯನದ ಮೂಲಕ ಚರ್ಚೆಗಳ ಮೂಲಕ ತಿಳಿದುಕೊಳ್ಳುವುದು ನಾಗರಿಕನ ಜವಾಬ್ದಾರಿ ಮತ್ತು ಕರ್ತವ್ಯ. ಇತ್ತೀಚಿಗೆ ವಾಹನಗಳಿಗೆ(ವಿಮೆ) ಇನ್ಸೂರೆನ್ಸ್ ಮಾಡಿಸದೆ ಇರುವುದು ಅಥವಾ ಚಾಲನಾ ಪರವಾನಿಗೆ ಇಲ್ಲದೆ ಬೇರೆಯವರಿಗೆ ವಾಹನ ಕೊಟ್ಟು ಸಮಸ್ಯೆ ಮಾಡಿಕೊಳ್ಳುವುದು ಸರ್ವೇ ಸಾಮಾನ್ಯವಾಗಿದೆ ಎಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆ ವಕೀಲ ಎಸ್.ಲೋಕೇಶ್, ಉದ್ಘಾಟನೆ ಮಾಡಿದ ವಕೀಲ ಹನುಮಂತಪ್ಪ ಮಾತನಾಡಿದರು. ವಕೀಲ ರಂಗಪ್ಪ ಉಪನ್ಯಾಸ ನೀಡಿದರು. ವಕೀಲರಾದ ಲೋಕೇಶ್, ಎನ್.ಜಿ.ಹಳ್ಳಿ ಮಾರುತಿ, ಬೊಚೆನಹಳ್ಳಿ ಶಂಕ್ರಪ್ಪ, ಹುಣಸೇಕಟ್ಟೆ ಗಂಗಾಧರ್‌ಹೊನ್ನೇನಹಳ್ಳಿ ಬೈರೇಶ್, ಗುಡ್ಡದ ನೇರಲಕೆರೆ ಓಂಶ್ರೀ. ಬೆನಕನಹಳ್ಳಿ ಹೇಮಾ, ಇದ್ದರು.

ಪಂಚಮಸಾಲಿ ಪೀಠ ವಿವಾದ: ಬಹಿರಂಗ ಹೋರಾಟ ಬೇಡ

ಹರಿಹರ: ಪಂಚಮಸಾಲಿ ಪೀಠದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆಗಳು ಸಮಾಜದಲ್ಲಿ ತೀವ್ರ ನಿರಾಸೆ ಮೂಡಿಸಿರುವ ಹಿನ್ನೆಲೆಯಲ್ಲಿ, ಸಮಾಜದ ಹಿರಿಯ ಮುಖಂಡ ಹೊಳೆಸಿರಿಗೆರೆ ಗ್ರಾಮದ ನಾಗನಗೌಡ್ರು, ಹೋರಾಟಗಾರರಿಗೆ ಕಿವಿಮಾತು ಹೇಳಿದ್ದಾರೆ. ಮಠದ ಆಡಳಿತ ನಡೆಸುವವರು ಅನೇಕ ಸವಾಲುಗಳನ್ನು ಎದುರಿಸಿ ಇಡೀ ಸಮುದಾಯ ತಲೆ ಎತ್ತಿ ನಿಲ್ಲುವಂತಹ ಮಠ ನಿರ್ಮಿಸಿರುವುದನ್ನು ಮೆಚ್ಚುವಂಥಹ ಕಾರ್ಯವಾಗಿದೆ.

ಇಂತಹ ಸಂದರ್ಭದಲ್ಲಿ ಕೆಲವರು ತಪ್ಪು ತಿಳುವಳಿಕೆಯಿಂದ ಬೀದಿಯಲ್ಲಿ ಲೆಕ್ಕ ಕೊಡಿ ಚಳುವಳಿ ನಡೆಸುತ್ತಿರುವುದು ಸರಿಯಲ್ಲ. ಎಂದು ಅಭಿಪ್ರಾಯ ಪಟ್ಟಿರುವ ಅವರು, ಯಾವುದೇ ಸಾರ್ವಜನಿಕ ಸಂಸ್ಥೆಗಳಲ್ಲಿ ಪರ-ವಿರೋಧ ಚರ್ಚೆಗಳು ಸಾಮಾನ್ಯವಾದರೂ, ಎಲ್ಲ ವಿಚಾರಗಳನ್ನು ಬಹಿರಂಗವಾಗಿ ಚರ್ಚಿಸಲು ಸಾಧ್ಯವಿಲ್ಲ. ಎಂಬ ಸತ್ಯವನ್ನು ಚಳುವಳಿ ನಾಯಕರು ಅರ್ಥಮಾಡಿಕೊಳ್ಳಬೇಕು.

ಲೆಕ್ಕ ಕೇಳುತ್ತಿರುವ ನಾಯಕರಿಗೆ ಪ್ರತಿಕ್ರಿಯಿಸಿರುವ ಅವರು, ನೀವು ನಮ್ಮೊಂದಿಗೆ ಬಂದರೆ, ಟ್ರಸ್ಟಿಗಳಿಂದ ನಿಮ್ಮ ಎಲ್ಲ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಹಾಗೂ ಲೆಕ್ಕ ನೀಡುವ ವ್ಯವಸ್ಥೆ ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಟ್ರಸ್ಟಿನವರು ಈಗಾಗಲೇ ಹಲವಾರು ಬಾರಿ ಲೆಕ್ಕ ಒಪ್ಪಿಸಿರುವುದನ್ನೂ ತಾವು ಗಮನಿಸಬೇಕು ಎಂದಿರುವ ಅವರು, ಮಠದಂತಹ ಧಾರ್ಮಿಕ ಸಂಸ್ಥೆಗಳ ವಿಚಾರಗಳನ್ನು ಬೀದಿಯಲ್ಲಿ ನಿಂತು ಚರ್ಚಿಸುವುದು ಸಮಾಜದ ಘನತೆಗೆ ಧಕ್ಕೆ ತರುತ್ತದೆ ಎಂದು ಸಮಾಜಬಾಂದವರಿಗೆ ಎಚ್ಚರಿಸಿದ್ದಾರೆ.

ಬಹಿರಂಗ ಹೋರಾಟವನ್ನು ಕೈಬಿಟ್ಟು ನನ್ನೊಟ್ಟಿಗೆ ಬಂದು ಪ್ರಧಾನ ಧರ್ಮದರ್ಶಿಗಳಾದ ಬಿ ಸಿ ಉಮಾಪತಿ ಅವರಿಂದ ನಿಮ್ಮ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡಿಸುತ್ತೇನೆ ಎಂದು ಪತ್ರಿಕಾ ಹೇಳಿಕೆ ನೀಡಿರುವ ಎನ್.ಜಿ ನಾಗನಗೌಡ್ರ, ವಿವಾದಾತ್ಮಕ ಪರಿಸ್ಥಿತಿಗೆ ಸಮಾಧಾನಕರ ಪರಿಹಾರ ಕಂಡುಕೊಳ್ಳಲು ಸಹಕಾರ ನೀಡುವಂತೆ, ಸಮಾಜದ ಎಲ್ಲಾ ವರ್ಗದ ಜನರಿಗೆ ನಾಗನಗೌಡ್ರು ಕರೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಸುಗುಣೇಂದ್ರತೀರ್ಥರು 14ರಂದು ಹೊಸನಗರಕ್ಕೆ

ಹೊಸನಗರ: ಉಡುಪಿಯ ಮೂಲಮಹಾಸಂಸ್ಥಾನ ಮಠದ ಸ್ವಾಮೀಜಿಯಾದ ಸುಗುಣೇಂದ್ರತೀರ್ಥ ಶ್ರೀಪಾದ ಸ್ವಾಮೀಜಿಗಳು ಹಾಗೂ ಅವರ ಶಿಷ್ಯರಾದ ಸುಶೀಂದ್ರ ತೀರ್ಥ ಸ್ವಾಮೀಜಿ ಏ.14ನೇ ಮಂಗಳವಾರ ಬೆಳಿಗ್ಗೆ 10ಗಂಟೆಗೆ ಹೊಸನಗರದ ರಾಘವೇಂದ್ರ ಸ್ವಾಮಿ ಬೃಂದಾವನಕ್ಕೆ ಆಗಮಿಸಲಿದ್ದಾರೆ ಎಂದು ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ವಿಜೇಂದ್ರ ಶೇಟ್ ತಿಳಿಸಿದರು. ಹೊಸನಗರದ ಕೋರ್ಟ್ ಸರ್ಕಲ್‌ನಿಂದ ರಾಯರ ಬೃಂದಾವನದವರೆಗೆ ಮೆರವಣಿಗೆಯ ಮೂಲಕ ಸ್ವಾಮೀಜಿಯವರನ್ನು ಕರೆ ತರಲಿದ್ದು ನಂತರ ಸಂಜೆ 5ಗಂಟೆಯವರೆವಿಗೆ ದೇವಸ್ಥಾನದ ಭಕ್ತರಿಗೆ ಹಾಗೂ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಮಾಡುವರು. ಹೊಸನಗರ ರಾಘವೇಂದ್ರ ಸಾಮೀಜಿಯವರ ಭಕ್ತರು ಹಾಗೂ ಊರಿನ ಸಾರ್ವಜನಿಕರು ಆಗಮಿಸಿ ಸ್ವಾಮೀಜಿಯವರಿಂದ ಪ್ರಸಾದ ಪಡೆಯಬೇಕೆಂದು ವಿಜೇಂದ್ರ ಶೇಟ್ ವಿನಂತಿಸಿದ್ದಾರೆ.

ಸೇನೆ ತರಬೇತಿಗೆ ಅರ್ಜಿ ಆಹ್ವಾನ

ಶಿವಮೊಗ್ಗ: ಭಾರತೀಯ ಸೇನೆ/ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಮತ್ತು 3(ಬಿ) ಅಭ್ಯರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಆಯ್ಕೆ ಪೂರ್ವ ಸಿದ್ಧತೆ ಬಗ್ಗೆ ಉಚಿತ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅರ್ಜಿಯನ್ನು ಆಯಾ ಜಿಲ್ಲೆಯ ಜಿಲ್ಲಾ/ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಡೆದು ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮೂಲಕ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ ಸಂ.:304, ಬಿ-ಬ್ಲಾಕ್, 2ನೇ ಮಹಡಿ, ರಜತಾದ್ರಿ, ಮಣಿಪಾಲ-576104, ಉಡುಪಿ ಜಿಲ್ಲೆ ದೂ. ಸಂ.:0820-2574881 ಇಲ್ಲಿಗೆ ಏ.27 ರೊಳಗಾಗಿ ಸಲ್ಲಿಸುವುದು. ತರಬೇತಿ ಒಟ್ಟು 4 ತಿಂಗಳು ಇದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ವಸತಿ, ಊಟ, ತರಬೇತಿ ವೆಚ್ಚ, ಒಂದು ಜೊತೆ ಟ್ರಾಕ್ ಸೂಟ್, ಶೂ ಹಾಗೂ ದೈಹಿಕ ತರಬೇತಿಯ ಸಮವಸ್ತ್ರ ಉಚಿತವಾಗಿ ನೀಡಲಾಗುವುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ 08182-222129 ಹಾಗೂ 0820-2574881 ಗಳನ್ನು ಸಂಪರ್ಕಿಸುವುದು.

ಡಾ.ಅಂಬೇಡ್ಕರ್ ಜಯಂತಿ 14 ರಂದು

ಶಿವಮೊಗ್ಗ: ಜಿಲ್ಲಾಡಳಿತ, ಮಹಾನಗರಪಾಲಿಕೆ, ಸಮಾಜ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಏ.14 ರ ಬೆಳಗ್ಗೆ 11ಕ್ಕೆ ನಗರದ ಕುವೆಂಪು ರಂಗಮಂದಿರದಲ್ಲಿ ಡಾ.ಬಿ.ಆರ್ ಅಂಬೇಡ್ಕರ್‌ಅವರ 135ನೇ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಉಸ್ತುವಾರಿ ಸಚಿವ ಎಸ್. ಮಧು ಬಂಗಾರಪ್ಪ ಉದ್ಘಾಟಿಸುವರು. ಸಮಾಜ ಕಲ್ಯಾಣ ಸಚಿವ ಡಾ ಹೆಚ್.ಸಿ.ಮಹಾದೇವಪ್ಪ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ. ಶಿವಮೊಗ್ಗ ನಗರ ಕ್ಷೇತ್ರದ ಶಾಸಕ ಎಸ್.ಎನ್. ಚನ್ನಬಸಪ್ಪ ಅಧ್ಯಕ್ಷತೆ ವಹಿಸುವರು. ಸಂಸದರು, ಶಾಸಕರು, ಪಾಲಿಕೆ ಮಹಾಪೌರರು, ಜನಪ್ರತಿನಿಧಿಗಳು, ವಿವಿಧ ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರು, ಜಿಲ್ಲೆಯ ಎಲ್ಲಾ ಗೌರವಾನ್ವಿತ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿ , ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿ.ಪಂ ಸಿಇಒ ಅತಿಥಿಗಳಾಗಿ ಪಾಲ್ಗೊಳ್ಳುವರು.

ಅಗಲಿದ ಜೀವ

ರಾಮಚಂದ್ರರಾವ್



ಹೊಸನಗರ: ತೀರ್ಥಹಳ್ಳಿ ತಾಲೂಕಿನ ಅರಳಸುರಳಿ ಸಮೀಪದ ತುಂಬೆಹಿಡ್ಲುಗ್ರಾಮದ ನಿವಾಸಿ ರಾಮಚಂದ್ರರಾವ್ಟಿ.ಎಸ್ (74) ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಅಂಚೆ ಇಲಾಖೆಯಲ್ಲಿ ಪೋಸ್ಟ್ ಮಾಸ್ಟರ್ ಆಗಿ ಜೋಗ, ಸಾಗರ, ಲಿಂಗನಮಕ್ಕಿ, ಹೊಸನಗರ, ಚನ್ನಗಿರಿ, ಭದ್ರಾವತಿ ಮೊದಲಾದ ಕಡೆಗಳಲ್ಲಿ ಸೇವೆ ಸಲ್ಲಿಸಿದ್ದರು. ಸ್ವಯಂ ನಿವೃತ್ತಿ ಪಡೆದು ಅರಳಸುರಳಿಯಲ್ಲಿ ಕೃಷಿ ಚಟುವಟಿಕೆ ಕೈಗೊಂಡು ನಿವೃತ್ತ ಜೀವನ ಸಾಗಿಸುತ್ತಿದ್ದರು. ಮೃತರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಮೃತರ ಜಮೀನಿನಲ್ಲಿಅಂತ್ಯ ಸಂಸ್ಕಾರ ನಡೆಯಿತು.

ಸರಕಾರಿ ದಾಖಲೆಗಳಲ್ಲಿದ್ದ ಕೆರೆಯ ಕುರುಹು ಮಂಗಮಾಯ | ಕೆರೆಯ ಅವಸಾನ ಆರಂಭ

ರಿಯಲ್ ಎಸ್ಟೇಟ್ ಕಣ್ಣಿಗೆ ಬಿದ್ದ ಬಾಳೇಬೈಲು ಕೆರೆ

ವಿಶ್ವವಾಣಿ ಸುದ್ದಿಮನೆ, ತೀರ್ಥಹಳ್ಳಿ:

ಬೇಸಿಗೆಯ ಬೇಗೆ ಆರಂಭವಾಗುತ್ತಿದ್ದಂತೆ ನಿಧಾನವಾಗಿ ಕೆರೆಗಳು ಒಣಗುತ್ತಿವೆ. ಇದರ ನಡುವೆಯೇ ಇದ್ದ ಕೆರೆಗಳನ್ನು ನುಂಗುವ ಹುನ್ನಾರ ಸದ್ದಿಲ್ಲದೇ ನಡೆಯುತ್ತಿದೆ. ಇದಕ್ಕೆ ಪೂರಕವೆಂಬಂತೆ ಬಾಳೆಬೈಲು ಕೆರೆ ಲೇಔಟ್ ಉದ್ಯಮಿಗಳಿಂದಾಗಿ ಅವಸಾನದ ದಿನಗಳನ್ನು ಎಣಿಸುತ್ತಿದೆ.

ಈಗಾಗಲೇ ಸದರಿ ಕೆರೆಯನ್ನು ನಿಧಾನವಾಗಿ ಸರಕಾರಿ ದಾಖಲೆಗಳಿಂದ ಕೈ ಬಿಡುವ ಪ್ರಕ್ರಿಯೆ ಸದ್ದಿಲ್ಲದೆ ನಡೆಯುತ್ತಿದೆ. ನೂರಾರು ಎಕರೆಗೆ ನೀರುಣಿಸುತ್ತಿದ್ದ ಕೆರೆಯ ಜಾಗವನ್ನು ಒತ್ತುವರಿ ಮಾಡಿ ಅಲ್ಲಿ ಕೆರೆಯೇ ಇರಲಿಲ್ಲ, ಕೊಳವೆ ಬಾವಿಗಳು ಹಾಗೂ ಬಾವಿ ಇತ್ತು ಎಂಬ ದಾಖಲೆಗಳು ಸೃಷ್ಟಿಯಾಗಿವೆ. ಇದ್ದ ಕೆರೆಯನ್ನು ನುಂಗಿ ಅದನ್ನು ಕೊಳವೆ ಬಾವಿ ಮಾಡುವ ಸರಕಾರಿ ದಾಖಲೆಗಳು ಯಾರಿಗೆ ಸಹಾಯ ಮಾಡಲು ಪ್ರಯತ್ನ ಮಾಡುತ್ತಿವೆ ಎಂಬುದು ಗೊತ್ತಿಲ್ಲ.

ಜನಜಾನುವಾರುಗಳಿಗೆ ಆಸರೆಯಾಗಿ ನೂರಾರು ವರ್ಷಗಳಿಂದ ಇದ್ದ ಬಾಳಬೈಲು ಕೆರೆಯನ್ನೇ ಮಂಗಮಾಯ ಮಾಡುವ ಜಾದೂ ಸರಕಾರಿ ಇಲಾಖೆಗಳಲ್ಲಿ ಮಾತ್ರ ನಡೆಯುತ್ತಿದೆ. ಇತ್ತ ಕಾಣೆಯಾಗುತ್ತಿರುವ ಕೆರೆ ಉಳಿಸಿಕೊಳ್ಳುವ ಹೋರಾಟಗಳು ಆರಂಭವಾಗಿ ಬಯಲು ಸೀಮೆಯಲ್ಲಿ ಕೆರೆಗಳಿಗೆ ತುಂಬ ಮಹತ್ವ ಕೊಡುವ ನೂರಾರು ನಿದರ್ಶನಗಳಿವೆ.

ಪ್ರತಿ ವರ್ಷವೂ ಕೆರೆಗೆ ನೀರು ತುಂಬಿಸುವ ಯೋಜನೆಗಳಿಗೆ ಜನಪ್ರತಿನಿಧಿಗಳೂ ಕೈಜೋಡಿಸಿ, ಕೆರೆಗೆ ನೀರು ತುಂಬಿಸುವ ಕೆಲಸ ಮಡುತ್ತಾರೆ. ರೈತರಿಗೂ ಖುಷಿಯಾಗುತ್ತದೆ.

ಆಣೆಕಟ್ಟು ಕಟ್ಟಿದ ಮೇಲೆ ನಾಲೆಗಳ ಮೂಲಕ ತಮ್ಮ ಕೃಷಿ ಭೂಮಿಗೆ ನೀರುಣಿಸಿ ನೀರಾವರಿ ಕೃಷಿ ಮಾಡುವ ರೈತರು ನಾಲೆಗಳಲ್ಲಿ ನೀರು ಬಿಡುವಂತೆ ಆಗ್ರಹಿಸಿ ಹೋರಾಟ ಮಾಡುವ ನಿದರ್ಶನಗಳೂ ಇವೆ. ಆದರೆ ನಮ್ಮ ತೀರ್ಥಹಳ್ಳಿ ತಾಲೂಕಿನಲ್ಲಿ ಮಾತ್ರ ಇದಕ್ಕೆ ತದ್ವಿರುದ್ಧ. ಇದ್ದ ಕೆರೆಯನ್ನು ಮುಚ್ಚುವ ಹುನ್ನಾರ ಲಾಗಾಯ್ತಿನಿಂದಲೂ ನೆಡೆದುಬಂದಿದ್ದು, ಈಗ ಲೇಔಟ್ ಡೆವಲಪ್ಪರ್ ಕುಳಗಳಿಂದ ರಾಜಾರೋಷವಾಗಿಯೇ ನೆಡೆಯುತ್ತಿದೆ. ಬಾಳೇಬೈಲು ಕೆರೆಯೂ ತನ್ನ ಅವಸಾನದ ದಿನಗಳನ್ನು

ಎಣಿಸುತ್ತಿದೆ.

ಕೆರೆ ಹೋಗಿ ಕೊಳವೆ ಬಾವಿ:

ಕೆರೆ ಹೋಯ್ತು, ಕೊಳವೆ ಬಾವಿ ಬಂತು ಡುಂ ಡುಂ. ಕೆರೆ ಉಂಟು, ಕೊಳವೆ ಬಾವಿ ಇಲ್ಲ ಡುಂಡುಂ! ಹೀಗೂ ಊಂಟು. ಆರ್ಟಿಸಿ ದಾಖಲೆ ಎಲ್ಲ ಬುಡಮೇಲು ಮಾಡಿ ಬಿಡುತ್ತವೆ. ತೀರ್ಥಹಳ್ಳಿ ತಾಲೂಕು ಕಚೇರಿಯ ಆರ್ಟಿಸಿ ನೀಡುವ ಸಂಬಂಧಪಟ್ಟ ಇಲಾಖೆಯಲ್ಲಿ ಎಲ್ಲವೂ ಸಾಧ್ಯ ಎಂದು ಇಲಾಖೆ

ಕೆರೆ ದಾಖಲೆಗಳ ಸಮೇತ ಕಣ್ಮರೆ !

ಕೆರೆಯ ಪಕ್ಕದಲ್ಲೇ ಇರುವ ಎಕರೆಗಟ್ಟಲೆ ಖಾಸಗಿ ಜಮೀನು ಲೇಔಟ್ ಆಗಲು ಪೂರ್ಣ ತಯಾರಿಯಲ್ಲಿದೆ. ಬಫರ್‌ಜೋನ್ ಬಿಡುವುದು ಕೇವಲ ಕಾಟಾಚಾರದ ದಾಖಲೆಯಲ್ಲಿ ಮಾತ್ರ ಎನ್ನುವಂತಾಗಿದೆ. ಇನ್ನು ಕೆಲವೆ ವರ್ಷಗಳಲ್ಲಿ ಅಲ್ಲೊಂದು ಕೆರೆ ಇತ್ತು ಎಂಬುದು ದಾಖಲೆಗಳ ಸಮೇತ ಕಣ್ಮರೆಯಾದರೆ ಅಚ್ಚರಿ ಪಡಬೇಕಿಲ್ಲ..!

ನೀಡಿದ ದಾಖಲೆಯೇ ಸಾಬೀತುಪಡಿಸುತ್ತಿದೆ. 2014-15ರ ಆರ್ಟಿಸಿ ದಾಖಲೆಯ ಪ್ರಕಾರ 2005 ರಿಂದ 2014-15 ಸಾಲಿನವರೆಗೂ ಇಲ್ಲಿನ ಸುತ್ತಮುತ್ತ ಜಮೀನುಗಳಿಗೆ ನೀರಾವರಿ ಮೂಲ ಕೆರೆ ಎಂದೇ ದಾಖಲಾಗಿದ್ದು, ಬಾಳೆ ಬೈಲು ಕೆರೆ ಜೀವಂತವಾಗಿ ಇದೆ ಎನ್ನುವುದನ್ನು ಸಾಬೀತುಪಡಿಸುತ್ತದೆ. ಈ ಬಗ್ಗೆ ಗ್ರಾಮ ನಕಾಶೆಯಲ್ಲೂ ಅಧಿಕೃತವಾಗಿದೆ. 2006ರ ನಕಾಶೆಯಲ್ಲೂ ಕೆರೆ ಜೀವಂತದ ಬಗ್ಗೆ ದಾಖಲೆ ಇದೆ. ಹಾಗಾದರೆ 2005ರಲ್ಲಿ ಇದ್ದ ಕೆರೆ ಈಗ ಮಾಯವಾಗಿದ್ದು ಹೇಗೆ ಎನ್ನುವುದೇ ಯಕ್ಷಪ್ರಶ್ನೆ.

ಕೆರೆ ನುಂಗುವ ಹುನ್ನಾರ:

2025-26ರ ಆರ್ಟಿಸಿ ದಾಖಲೆಯ ಪ್ರಕಾರ ಸ.ನಂ.50:3ರ ಜಮೀನಿಗೆ ನೀರಾವರಿ ಮೂಲ ಬಾವಿ/ ಕೊಳವೆ ಬಾವಿ ಎಂದು ಅಧಿಕೃತವಾಗಿ ದಾಖಲಾಗಿದೆ. ಅಂದರೆ ಕಳೆದ 3 ವರ್ಷಗಳ ಹಿಂದೆ ಇದ್ದಕ್ಕಿದಂತೆ ಈ ಕೊಳವೆ ಬಾವಿ ಪ್ರತ್ಯಕ್ಷವಾಗಿದೆ. ಅಲ್ಲಿದ್ದ ನೀರಿನ ಮೂಲ ಕೆರೆ ಎಂಬುದನ್ನು ಮರೆಮಾಚಲಾಗಿದೆ ಎಂದರೆ ಕೆರೆ ನುಂಗುವ ಹುನ್ನಾರಕ್ಕೆ ದಾಖಲೆಗಳ ಮೂಲಕವೇ ಮುನ್ನುಡಿ ಹಾಡಿದ್ದಾರೆ ಎಂದರೆ ನೀವು ನಂಬಲೇ ಬೇಕು. ಆದರೆ ಪ್ರತ್ಯಕ್ಷವಾಗಿ ಅಲ್ಲಿಗೆ ಹೋಗಿ ನೋಡಿದರೆ ಅಲ್ಲಿ ಈ ಕೊಳವೆ ಬಾವಿ ಇಲ್ಲಿ ಇಲ್ಲವೇ ಇಲ್ಲ ಎನ್ನುವುದು ಅಪ್ಪಟ ಸತ್ಯ.

ಇದು ರಿಜಿಸ್ಟರ್‌ಕೆರೆ:

ಇದು ನೋಂದಾಯತ ಕೆರೆ. ಈ ಪ್ರದೇಶದಲ್ಲಿ ಅಧಿಕೃತವಾಗಿ ಬಾಳೇಬೈಲು ಕೆರೆ ಎಂದು ಹಣೆಪಟ್ಟಿ ಹೊತ್ತುಕೊಂಡು ಸುಮಾರು 10ವರೆ ಎಕರೆ ಜಮೀನಿಗೆ ನೀರುಣಿಸುವ ಕೆರೆ. ಕೆರೆಯ ಸಂಖ್ಯೆ 563 ಎಂದಿದೆ. ಈ ಕೆರೆ 1958-59ರಲ್ಲಿ ಹೆಚ್ಚಿನ ಅಭಿವೃದ್ಧಿ ಪಡಿಸಲಾಗಿದೆ. ಈ ಬಗ್ಗೆ ಕೆರೆ ದಂಡೆಯ ಒಂದು ಮೂಲೆಯಲ್ಲಿ ಮಾಹಿತಿ ಇರುವ ಕಲ್ಲು ಫಲಕ ಇದೆ.

ಇದೀಗ ತಾಲ್ಲೂಕು ಕಚೇರಿಗೆ ಅಲೆದಾಡುವ ಕೆಟ್ಟ ಪರಿಸ್ಥಿತಿ 90 ವರ್ಷದ ವಯೋವೃದ್ಧ ಕೃಷಿಕರಿಗೆ ಬೇತಾಳವಾಗಿ ಬೆನ್ನು ಹತ್ತಿದೆ. ದಾಖಲೆ ಸರಿಯಾಗಿರದಿದ್ದರೆ ತಮ್ಮ ಕೃಷಿಗೆ ಅಗತ್ಯವಾದ ವ್ಯವಹಾರದ ಮೂಲಗಳಿಗೆ ಎಡತಾಕುವುದಕ್ಕೆ ಕಷ್ಟವಾಗಲಿದೆ ಎಂಬ ಅಳಲು, ಚಿಂತೆ ಕಾಡುತ್ತಿದೆ. ದಾಖಲೆಯಲ್ಲಿ ಬಾವಿ-ಕೊಳವೆಬಾವಿ ಎನ್ನುವುದನ್ನು ತೆಗೆದುಹಾಕುವುದು ಹೇಗೆ? ಸರಿ ಮಾಡುತ್ತೇವೆ ಎಂದು ಸದ್ಯಕ್ಕೆ ಕಚೇರಿಯಲ್ಲಿ ಕೃಷಿಕರ ಕಿವಿಗೆ ಹೂವು ಮುಡಿಸಿದ್ದಾರೆ.

ಮಾನಸಿಕ ಅಸ್ವಸ್ಥರಿಗೆ ವಿಶಿಷ್ಟ ಹಕ್ಕುಗಳಿವೆ

ಜಿಲ್ಲಾ ಸತ್ರ ನ್ಯಾಯಾಧೀಶರಾದ ಮಂಜುನಾಥ್ ಜೆ.ಎ. ಅವರು ಜಿಲ್ಲಾ ಮೆಗ್ಗಾನ್ ಆಸ್ಪತ್ರೆಯ ಮಾನಸಿಕ ಆರೋಗ್ಯ ಮಂಡಳಿಯಲ್ಲಿ ಉಚಿತ ಕಾನೂನು ಸೇವಾ ಕೇಂದ್ರ ಉದ್ಘಾಟಿಸಿದರು.

ಶಿವಮೊಗ್ಗ: ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವರಿಗೆ ವಿಶಿಷ್ಟ ಹಕ್ಕುಗಳಿವೆ. ಅವರು ಆರೋಗ್ಯ, ಆಸ್ತಿ ರಕ್ಷಣೆ ಮಾಡಿಕೊಳ್ಳಲು ಕಾನೂನಿನ ಸೇವೆಗಳಿದ್ದು ಅವುಗಳ ಸದ್ಬಳಕೆ ಮಾಡಿಕೊಳ್ಳಬೇಕೆಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಮಂಜುನಾಥ್ ಜೆ.ಎ. ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಾನಸಿಕ ಆರೋಗ್ಯ ಪರಿಶೀಲನಾ ಮಂಡಳಿ ಹಾಗೂ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ, ಸಿಮ್ಸ್ ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಮೆಗ್ಗಾನ್ ಆಸ್ಪತ್ರೆಯ ಮಾನಸಿಕ ಆರೋಗ್ಯ ಮಂಡಳಿಯಲ್ಲಿ ತೆರೆಯಲಾಗಿರುವ ಉಚಿತ ಕಾನೂನು ಸೇವಾ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

ಮಾನಸಿಕ ಅಸ್ವಸ್ಥತೆಗೆ ಒಳಗಾದ ವ್ಯಕ್ತಿಗಳ ವೈದ್ಯಕೀಯ, ಆರೋಗ್ಯ, ಆಸ್ತಿ ರಕ್ಷಣೆಯ ನಿಟ್ಟಿನಲ್ಲಿ ಕಾನೂನು ಸೇವಾ ಪ್ರಾಧಿಕಾರದಡಿ ಸಹಾಯ ಲಭ್ಯವಿದ್ದು, ಅದರ ಸದ್ಬಳಕೆ ಪಡೆದುಕೊಳ್ಳಬೇಕು ಎಂದರು. .

ಸಿಮ್ಸ್ ನಿರ್ದೇಶಕರಾದ ಡಾ. ವಿರೂಪಾಕ್ಷಪ್ಪ ಮಾತನಾಡಿ, ಮೆಗ್ಗಾನ್ ಜಿಲ್ಲಾ ಆಸ್ಪತ್ರೆಯ ಮಾನಸಿಕ ಆರೋಗ್ಯ ವಿಭಾಗದಲ್ಲಿ ಕಾನೂನು ಸಲಹಾ ಕೇಂದ್ರವನ್ನು ಸ್ಥಾಪಿಸಿರುವುದು ಬಹಳ ಉಪಯುಕ್ತವಾಗಿದೆ ಎಂದು ತಿಳಿಸಿದರು. ಹಿರಿಯ ಸಿವಿಲ್ ನ್ಯಾಯಧೀಶರಾದ ಸಂತೋಷ್ ಎಂ.ಎಸ್. ಮಾತನಾಡಿ, ಶಿವಮೊಗ್ಗ ನಗರದಲ್ಲಿ ಸಾರ್ವಜನಿಕರಿಗೆ ಕಾನೂನು ಸೇವೆ ಒದಗಿಸುವ ಉದ್ದೇಶದಿಂದ ಸಿಡಿಪಿಒ ಕಚೇರಿ, ಮೆಗ್ಗಾನ್ ಆಸ್ಪತ್ರೆಯ ಎಆರ್ಟಿ ಕ್ಲಿನಿಕ್, ಬಾಲ ನ್ಯಾಯ ಮಂಡಳಿ, ಜಿಲ್ಲಾ ಸೈನಿಕ್ ಬೋರ್ಡ್, ಹಿರಿಯ ನಾಗರಿಕರ ಸಹಾಯವಾಣಿ, ಕೇಂದ್ರ ಕಾರಾಗೃಹ ಆವರಣದಲ್ಲಿ ನುರಿತ ವಕೀಲರನ್ನು ಕಾನೂನು ಸಲಹಾ ಕೇಂದ್ರಗಳಿಗೆ ನಿಯೋಜಿಸಲಾಗಿದ್ದು, ಇವರ ಸೇವೆಯನ್ನು ಪಡೆಯಬಹುದು ಎಂದರು.

ಮಾನಸಿಕ ಅಸ್ವಸ್ಥರಿಗೆ ಉಚಿತ ಕಾನೂನಿನ ನೆರವು ನೀಡಲು ಹಾಗೂ ಘನತೆಯಿಂದ ಬದುಕಲು ನಮ್ಮ ಪ್ರಾಧಿಕಾರ ಉಚಿತವಾಗಿ ವಕೀಲರನ್ನು ನೇಮಿಸಿದ್ದು, ಪ್ರಾಧಿಕಾರದ ಸಹಾಯವಾಣಿ ಸಂಖ್ಯೆ 15100 ಗೆ ಕರೆ ಮಾಡಿ ಉಚಿತ ಕಾನೂನಿನ ಸಲಹೆ ಪಡೆಯಬಹುದು ಎಂದರು.ಕಾರ್ಯಕ್ರಮದಲ್ಲಿ ಜಿಲ್ಲಾಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ತಿಮ್ಮಪ್ಪ ಟಿ.ಡಿ, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ಗೀತಾ, ಡಾ. ರಾಮ್ ಪ್ರಸಾದ್, ಶುಶ್ರೂಷಕಾಧೀಕ್ಷಕಿ ಶೇಷಮ್ಮ, ಮಾನಸಿಕ ಆರೋಗ್ಯ ಮಂಡಳಿಯ ಸದಸ್ಯರಾದ ಡಾ.ರಜನಿ ಪೈ, ಶುಭ್ರತ ಉಪಸ್ಥಿತರಿದ್ದರು.

ಸಮಾಜ ವಿಶೇಷಚೇತನರ ಸಾಧನೆ ಉತ್ತೇಜಿಸಲಿ

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಾಗಾರವನ್ನು ಶಾಸಕರಾದ ಎಸ್. ಎನ್. ಚನ್ನಬಸಪ್ಪ ಉದ್ಘಾಟಿಸಿದರು.

ಶಿವಮೊಗ್ಗ: ವಿಶೇಷಚೇತನರ ಸಾಧನೆಗಳು ಕೂಡ ವಿಶೇಷವಾಗಿದ್ದು, ಅವರ ಸಾಧನೆಗಳನ್ನು ಉತ್ತೇಜಿಸಿ, ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕು ಎಂದು ಶಾಸಕರಾದ ಎಸ್ ಎನ್ ಚನ್ನಬಸಪ್ಪ ತಿಳಿಸಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಐಕ್ಯೂಎಸಿ ಮಾರ್ಗದರ್ಶನದಲ್ಲಿ ಸಬಲ ವಿಶೇಷಚೇತನರ ಸಬಲೀಕರಣ ಕೋಶ, ಸಿಬಿಆರ್‌ಕಾನೂನು ಕಾಲೇಜು ಮತ್ತು ಸಕ್ಷಮ್ ಸಂಸ್ಥೆ ಹಾಗೂ ಸಿಸಿಪಿಡಿ ಸಂಯುಕ್ತಾಶ್ರಯದಲ್ಲಿ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ-2016'ರ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ 9 ಲಕ್ಷ ವಿಶೇಷಚೇತನರಿದ್ದಾರೆ. ಅವರ ಶ್ರೇಯೋಭಿವೃದ್ದಿಗಾಗಿ ಸರಕಾರ ಯೋಜನೆಗಳನ್ನು ನೀಡುತ್ತಾ ಬಂದಿದೆ. ನಮ್ಮ ಜಿಲ್ಲೆಯಲ್ಲಿ 23,200 ವಿಶೇಷಚೇತನರು ಇದ್ದು, ಇವರ ಅಭಿವೃದ್ಧಿ ಮೊದಲು ನಮ್ಮ ಜಿಲ್ಲೆಯಿಂದಲೇ ಶುರುವಾಗಬೇಕು. ತಮ್ಮ ಅನುದಾನದಲ್ಲಿ ಪ್ರತಿ ವರ್ಷ ವಿಶೇಷ ಚೇತನರಿಗಾಗಿ 10 ಲಕ್ಷ ರು.ನೀಡಲಾಗುವುದು ಎಂದು ಭರವಸೆ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಂತೋಷ್ ಎಂ.ಎಸ್ ಮಾತನಾಡಿ, ವಿಕಲಚೇತನ ವ್ಯಕ್ತಿಗಳ ಕಾನೂನು ಮತ್ತು ಹಕ್ಕುಗಳ ಬಗ್ಗೆ ಅಧ್ಯಯನ ಕೈಗೊಳ್ಳಬೇಕು. ಅವರ ಹಕ್ಕುಗಳ ಬಗ್ಗೆ ತಿಳಿಸಿಕೊಡಬೇಕು. ವಿದ್ಯಾರ್ಥಿಗಳು ನಿರಂತರ ಕಲಿಕೆಯಲ್ಲಿ ತೊಡಗಿಕೊಳ್ಳಬೇಕು. ಇತಿಹಾಸದಿಂದ ಶುರುವಾಗಿ ಭವಿಷ್ಯದ ಕಡೆಗೆ ನಮ್ಮನ್ನು ಕೊಂಡೊಯ್ಯುವ ಕಾರ್ಯಾಗಾರಗಳು ಇನ್ನೂ ಹೆಚ್ಚೆಚ್ಚು ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶಶಿಧರ್‌ಎಸ್, ನವದೆಹಲಿಯ ಸಿಸಿಪಿಡಿ ಆಯುಕ್ತರಾದ ಗೋವಿಂದರಾಜ್, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳಾದ ಸುವರ್ಣ ನಾಯಕ್, ಐಕ್ಯೂಎಸಿ ಸಂಚಾಲಕರರಾದ ವಿದ್ಯಾ ಮರಿಯಾ ಜೋಸೆಫ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಸುರೇಶ್ ಹನಗವಾಡಿ , ಉಮೇಶ್ ಅಂದಾರೆ ಉಪಸ್ಥಿತರಿದ್ದರು.

ಮಣ್ಣು ಕುಸಿದ ಜಾಗಕ್ಕೆ ಶಾಸಕರು, ಡಿಸಿ ಭೇಟಿ

ಶಿವಮೊಗ್ಗ: ಜಿಲ್ಲೆಯ ಹೊಸನಗರ ತಾಲೂಕಿನ ಹುಲಿಕಲ್ ಬಾಳೆಬರೆ ಘಾಟಿ ಬಳಿ ಕಾಮಗಾರಿ ನಡೆಯುತ್ತಿದ್ದ ವೇಳೆ ಸಂಭವಿಸಿದ ಮಣ್ಣು ಕುಸಿತದ ಘಟನೆಯಲ್ಲಿ ಮೂರು ಜನ ಕಾರ್ಮಿಕರು ಮೃತಪಟ್ಟಿದ್ದು, ಘಟನಾ ಸ್ಥಳಕ್ಕೆ ಶಾಸಕರಾದ ಆರಗ ಜ್ಞಾನೇಂದ್ರ ಮತ್ತು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಮಣ್ಣು ಕುಸಿತದ ದುರ್ಘಟನೆಯಲ್ಲಿ ಹೊಸನಗರ ತಾಲ್ಲೂಕಿನ ಕೋಟೆ ಶಿರೂರಿನ ಕಾರ್ಮಿಕ ಮತ್ತು ಹಾವೇರಿಯ ನೆಲೋಗಲ್ಲು ಗ್ರಾಮದ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದು, ನಾಲ್ಕು ಜನ ಕಾರ್ಮಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಮಣಿಪಾಲದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಜಿಲ್ಲಾಧಿಕಾರಿ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಸೂಚನೆಗಳನ್ನು ನೀಡಿದರು. ಮೃತ ಕಾರ್ಮಿಕರ ಕುಟುಂಬಕ್ಕೆ

ಸೂಕ್ತ ಪರಿಹಾರವನ್ನು ನೀಡಲಾಗುವುದು ಎಂದು ತಿಳಿಸಿದರು. ಈ ವೇಳೆ ಸಾಗರ ಉಪವಿಭಾಗದ ಎಸಿ ವೀರೇಶ್, ತಹಸೀಲ್ದಾರ್ ಭರತ್ ಕುಮಾರ್, ಇತರೆ ಅಧಿಕಾರಿಗಳು ಹಾಜರಿದ್ದರು.

ಸಚಿವ ಎಂ.ಬಿ.ಪಾಟೀಲರಿಗೆ ಸಂಸದ ಬಿ.ವೈ.ರಾಘವೇಂದ್ರ ಒತ್ತಾಯ

ಜನಪ್ರಿಯ ಏರ್‌ಲೈನ್ ಮಾರ್ಗ ಉಳಿಸಿ

ಶಿವಮೊಗ್ಗ,: ಇದೇ ಮೇ 1 ರಿಂದ ಇಂಡಿಗೋ ಏರ್‌ಲೈನ್ಸ್‌ನ ಬೆಂಗಳೂರು-ಶಿವಮೊಗ್ಗ-ಬೆಂಗಳೂರು ವಿಮಾನ ಸೇವೆ ಸ್ಥಗಿತಗೊಳ್ಳದಂತೆ ರಾಜ್ಯ ಸರಕಾರ ತಕ್ಷಣವೇ ಸೂಕ್ತ ಕ್ರಮ ವಹಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಅವರು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಈ ಕುರಿತಂತೆ ಸಚಿವರಿಗೆ ಪತ್ರ ಬರೆದಿರುವ ಸಂಸದರು, ಯಶಸ್ವಿಯಾಗಿ ನಡೆಯುತ್ತಿರುವ ಬೆಂಗಳೂರು ಮತ್ತು ಶಿವಮೊಗ್ಗ ಮಾರ್ಗದ ವಿಮಾನಯಾನ ಸೇವೆ ಸ್ಥಗಿತಗೊಂಡಲ್ಲಿ ಶಿವಮೊಗ್ಗ, ಹಾವೇರಿ, ದಾವಣಗೆರೆ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಲಕ್ಷಾಂತರ ಜನರಿಗೆ ವಾಯು ಸಂಪರ್ಕದ ಅನುಕೂಲ ತಪ್ಪಲಿದ್ದು, ಇದು ಮಲೆನಾಡು ಹಾಗು ಸುತ್ತಮುತ್ತಲಿನ ಜಿಲ್ಲೆಗಳ ಆರ್ಥಿಕತೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದಿದ್ದಾರೆ.

ಸುಮಾರು 450 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಶಿವಮೊಗ್ಗ ವಿಮಾನ ನಿಲ್ದಾಣ ಪ್ರಧಾನಮಂತ್ರಿಗಳಿಂದ ಲೋಕಾರ್ಪಣೆಗೊಂಡ ನಂತರ, ಈ ಎರಡು ವರ್ಷದಲ್ಲಿ, 2,400ಕ್ಕೂ ಹೆಚ್ಚು ವಿಮಾನ ಯಾನ ನಡೆದಿದ್ದು, 1 ಲಕ್ಷ ಪ್ರಯಾಣಿಕರಿಗೆ ಸೇವೆ ಸಲ್ಲಿಸಿದೆ. ನಿಲ್ದಾಣದ ಕಾರ್ಯಸಾಧ್ಯತೆ ಮತ್ತು ಹೂಡಿಕೆಯ ಯಶಸ್ಸು ಸ್ಪಷ್ಟವಾಗಿ ಪ್ರದರ್ಶಿಸಿದೆ ಎಂದು ರಾಘವೇಂದ್ರ ತಿಳಿಸಿದ್ದಾರೆ.

ಪೈಲಟ್ ಕೊರತೆ ಹಾಗೂ ನವೀಕರಿಸದ ಏರ್‌ಲೈನ್ ಒಪ್ಪಂದದ ಕಾರಣಗಳನ್ನು ಮುಂದಿಟ್ಟು ಇಂಡಿಗೋ ಸಂಸ್ಥೆ ಈ ಮಾರ್ಗವನ್ನು ಸ್ಥಗಿತಗೊಳಿಸಲು ಮುಂದಾಗಿದೆ. ಕರ್ನಾಟಕ ಮೂಲಸೌಕರ್ಯ ಅಭಿವೃದ್ಧಿ ನಿಗಮ ಮತ್ತು ಇಂಡಿಗೋ ನಡುವಿನ ಮೂಲ ಒಪ್ಪಂದ ಆಗಸ್ಟ್ 2025ರಲ್ಲಿ ಮುಕ್ತಾಯವಾಗಿದ್ದು, ನಂತರವೂ ಕೂಡ ಇಂಡಿಗೋ ಸಮಸ್ಥೆ ಆರು ತಿಂಗಳ ಕಾಲ ಈ ಮಾರ್ಗದಲ್ಲಿ ವಿಮಾನಯಾನ ಮುಂದುವರಿಸಿತ್ತು. ಸರಕಾರ ತುರ್ತಾಗಿ ಇಂಡಿಗೋ ಸಂಸ್ಥೆ ಜತೆ ಮಾತನಾಡಿ, ಒಪ್ಪಂದ ನವೀಕರಿಸುವಲ್ಲಿ ಅಗತ್ಯ, ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಸಂಸದ ರಾಘವೇಂದ್ರ ಮನವಿ ಮಾಡಿಕೊಂಡಿದ್ದಾರೆ.

ಇಂಡಿಗೋ ಜತೆ ತಕ್ಷಣ ಸಂಧಾನ ನಡೆಸಬೇಕು

ಮೇ 1ರ ನಂತರವೂ ವಿಮಾನ ಸೇವೆ ಮುಂದುವರಿಸುವಂತೆ ಇಂಡಿಗೋ ಜೊತೆ ತಕ್ಷಣ ಸಂಧಾನ ನಡೆಸಬೇಕು.ಇಂಧನ ವೆಚ್ಚ ಮತ್ತು ಮಾರ್ಗ ದಟ್ಟಣೆ ಆಧಾರದ ಮೇಲೆ ಹಣಕಾಸು ಬೆಂಬಲ ಒಳಗೊಂಡ ಹೊಸ ಒಪ್ಪಂದ ರೂಪಿಸುವುದು; ಕನಿಷ್ಠ ಮುಂದಿನ ಎರಡು ವರ್ಷಗಳ ಅವಧಿಗೆ ಹಾಲಿ ಒಪ್ಪಂದ ನವೀಕರಿಸುವುದು; ಒಂದು ವೇಳೆ ಇಂಡಿಗೋ ಸಂಸ್ಥೆ ಹಿಂದೆ ಸರಿದರೆ ಬದಲಿ ಏರ್‌ಲೈನ್ ಸಂಸ್ಥೆಗಳ ಸೇವೆ ನಿಯೋಜಿಸುವುದು, ಉಡಾನ್ ಯೋಜನೆಯಡಿ ಹಣಕಾಸು ಹೊರೆ ಕಡಿಮೆ ಮಾಡಿಕೊಳ್ಳುವ ಸಾಧ್ಯತೆಗಳನ್ನು ರಾಜ್ಯ ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ. ರಾತ್ರಿ ಇಳಿಯುವಿಕೆ ಸೌಲಭ್ಯದಿಂದ ಶಿವಮೊಗ್ಗ ವಿಮಾನ ನಿಲ್ದಾಣವನ್ನು ಉನ್ನತೀಕರಿಸಲಾಗುತ್ತಿರುವ ಹೊತ್ತಿನಲ್ಲೇ ವಿಮಾನ ಸೇವೆ ನಿಲ್ಲಬಾರದು ಎಂದು ಸಂಸದ ರಾಘವೇಂದ್ರ ಹೇಳಿದ್ದಾರೆ.

ನಿಖರ ಜನಗಣತಿಗೆ ಡಿಸಿ ಸೂಚನೆ

ಶಿವಮೊಗ್ಗ: ಜನ ಗಣತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮತ್ತು ನಿಖರವಾಗಿ ನಡೆಸುವಂತೆ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿಯವರು ನಿರ್ದೇಶನ ನೀಡಿದರು. ನಗರದ ಬಿ ಹೆಚ್ ರಸ್ತೆಯ ಸರ್ಕಾರಿ ಪದವಿಪೂರ್ವ ಬಾಲಕಿಯರ ಕಾಲೇಜಿನಲ್ಲಿ ಶಿವಮೊಗ್ಗ ಗ್ರಾಮಾಂತರ ವಿಭಾಗದ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ನಡೆದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಗಣತಿ ಸಂದರ್ಭದಲ್ಲಿ ಪ್ರತಿಯೊಂದು ಕುಟುಂಬದ ಸದಸ್ಯರು ನೀಡುವ ಮಾಹಿತಿ ಅತ್ಯಂತ ನಿಖರವಾಗಿರಬೇಕು. ಉಪಜಾತಿ ಮತ್ತು ಪರ್ಯಾಯ ಹೆಸರುಗಳ ಬಗ್ಗೆ ಗೊಂದಲ ಉಂಟಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದ ಅವರು ಸ್ವಯಂ ಗಣತಿ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದರು. ಜಿಲ್ಲೆಯ ಪ್ರತಿಯೊಂದು ಮನೆ ಮತ್ತು ಪ್ರದೇಶದ ನಿವಾಸಿಗಳನ್ನು ಈ ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಒಳಪಡಿಸಬೇಕು. ಯಾವುದೇ ಒಂದು ಕುಟುಂಬವೂ ಗಣತಿಯಿಂದ ವಂಚಿತವಾಗಬಾರದು. ಗಣತಿಗಾಗಿ ಬಳಸಲಾಗುವ ಡಿಜಿಟಲ್ ದತ್ತಾಂಶವನ್ನು ದಾಖಲಿಸುವಾಗ ತಾಂತ್ರಿಕ ದೋಷಗಳಾಗದಂತೆ ನೋಡಿಕೊಳ್ಳಲು ಸೂಚನೆ ನೀಡಿದರು.

ಅಕ್ರಮ ಮರಳು ದಂಧೆ ನಿಲ್ಲದಿದ್ದರೇ ಮುಂದೊಂದು ದಿನ ಹೊಸನಗರಕ್ಕೆ ಕಾಡಲಿದೆ ಕುಡಿಯುವ ನೀರಿಗೂ ತತ್ವಾರ !

ಶರಾವತಿಯ ಹಿನ್ನೀರಿನಲ್ಲಿ ಎಗ್ಗಿಲ್ಲದೇ ನಡೆದಿದೆ ಮರಳು ಸಾಗಣೆ

ವಿಶ್ವವಾಣಿ ಸುದ್ದಿಮನೆ, ಹೊಸನಗರ:

ಶರಾವತಿ ನದಿಯ ಸುತ್ತಮುತ್ತ ಅಕ್ರಮ ಮರಳುಗಾರಿಕೆ ಅವ್ಯಾಹತವಾಗಿ ನಡೆಯುತ್ತಿವೂ ಇಲ್ಲದೇ ಹಗಲು ರಾತ್ರಿ ಎನ್ನದೇ ಸಂಜೆ ಏಳು ಗಂಟೆಯಿಂದ ಬೆಳಗಿನ ಜಾವದವರೆಗೆ ಮುಖ್ಯ ರಸ್ತೆಗಳಲ್ಲಿ ಮರಳುತುಂಬಿದ ಟಿಪ್ಪರ್‌ಗಳು ಸದ್ದು ಮಾಡುತ್ತಲೇ ಓಡಾಟ ನಡೆಸುತ್ತಿವೆ.

ಹೊಸನಗರದ ಸುತ್ತಮುತ್ತ ಶರಾವತಿ ಹಿನ್ನೀರು ಪ್ರದೇಶವಾದ ಮೇಲಿನ ಬೆಸಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಣಸಟ್ಟೆ, ಜೇನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಡಚಿಟ್ಟೆ, ಮುಳುಗುಡ್ಡೆಯಲ್ಲಿ ಸಾಕಷ್ಟು ಮರಳು ಶೇಖರಣೆ ಮಾಡಿದ್ದಾರೆ. ರಾತ್ರಿ ವೇಳೆಯಲ್ಲಿ ಈ ಅಕ್ರಮ ಮರಳು ಸಾಗಣೆ ಎಗ್ಗಿಲ್ಲದೇ ನಡೆಯುತ್ತಿದೆ.

ನಲ್ಲಿ ನೀರಿಗೆ ಬಂತು ಕುತ್ತು:

ಹೊಸನಗರದ ಸಮೀಪ ಶರಾವತಿಯಿಂದ ವರ್ಷಪೂರ್ತಿರಾಮಕೃಷ್ಣ ಶಾಲೆಯ ಹಿಂಭಾಗವಿರುವ ಪಂಪ್ ಹೌಸ್ನಿಂದ ಪಟ್ಟಣ ಪಂಚಾಯಿತಿಯ ಸುಮಾರು

ಹೊಸನಗರದ ಸಮೀಪ ಎಡಚಿಟ್ಟೆಯಲ್ಲಿ ಬಿಹಾರಿಗಳು ಬೋಟ್ ಮೂಲಕ ಅಕ್ರಮ ಮರಳು ಶೇಖರಣೆ ಮಾಡುತ್ತಿರುವುದು.

ಎರಡು ಸಾವಿರ ಮನೆಗಳಿಗೆ ನಲ್ಲಿ ನೀರು ಕೊಡುತ್ತಿದ್ದಾರೆ. ಆದರೆ ನಲ್ಲಿ ನೀರು ಶೇಖರಣೆ ಮಾಡುವ ಪಂಪ್ ಹೌಸ್ ಬಳಿ ಅಕ್ರಮ ಮರಳುಗಾರಿಕೆ ನಡೆಸುತ್ತಿದ್ದು ನೀರು ಕೊಳಕು ಆಗುವ ಜೊತೆಗೆ ಮರಳು ನೀರಿನಿಂದ ಹೊರ ತೆಗೆಯುತ್ತಿದ್ದು ಅಲ್ಲಿ ಶೇಖರಣೆಗೊಂಡ ನೀರು ಬತ್ತಿ ಹೋಗುತ್ತದೆ. ಹೊಸನಗರದ ಸಾರ್ವಜನಿಕರ ಮನೆಗಳಿಗೆ ನಲ್ಲಿ ನೀರು ಕೊರತೆಯಾಗಲಿದೆ .ಹೊಸನಗರ ಪಟ್ಟಣದ ನಿವಾಸಿಗಳು ತಕ್ಷಣ ಎಚ್ಚರಗೊಳ್ಳದಿದ್ದರೇ ಎಪ್ರಿಲ್, ಮೇ ಹಾಗೂ ಜೂನ್ ತಿಂಗಳಲ್ಲಿ ಹೊಸನಗರದ ಜನರಿಗೆ ಕುಡಿವ ನೀರಿಗೆ ಬರ ಬರುವುದು ಗ್ಯಾರಂಟಿ ಎಂದು ಹೇಳಲಾಗಿದೆ.

ಬಿಹಾರಿ ಕಾರ್ಮಿಕರು:

ಅಕ್ರಮ ಮರಳುಗಾರಿಕೆ ನಡೆಯುವ ಸ್ಥಳಗಳಲ್ಲಿ ಸುಮಾರು 300ಕಿಂತಲ್ಲೂ ಹೆಚ್ಚು ಹೊರರಾಜ್ಯದವರು ಕೆಲಸ ಮಾಡುತ್ತಿದ್ದಾರೆ. ಹಗಲು ರಾತ್ರಿ ಎನ್ನದೇ ಹೊಳೆಯ ಆಳಕ್ಕೆ ಇಳಿದು ಮರಳು ತೆಗೆಯುವ ಕೆಲಸ ಮಾಡುತ್ತಿದ್ದಾರೆ. ಆಕಸ್ಮಿಕವಾಗಿ ಕೆಲಸ ಮಾಡುವವರಿಗೆ ಅನಾಹುತವಾದರೇ ಹೊಣೆ ಯಾರು? ಎಂಬ ಪ್ರಶ್ನೆ ಮೂಡುವ ಜೊತೆಗೆ ಹೊಸನಗರದ ಸುತ್ತಮುತ್ತ ಕಾಡಿನೊಳಗೆ ಅವರು ವಾಸ ಮಾಡುತ್ತಿದ್ದಾರೆ. ಅವರಿಂದ ಅಪರಾಧ ಪ್ರಕರಣ ನಡೆದರೇ ಹೊಣೆ ಯಾರು ಎಂಬ ಪ್ರಶ್ನೆ ಸ್ಥಳೀಯರದು.

ಈ ಹಿಂದಿನ ತಹಸೀಲ್ದಾರ್‌ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಅಕ್ರಮ ಹೊರ ರಾಜ್ಯದವರನ್ನು ಗುರುತಿಸಿ ಗಡಿ ಪಾರು ಮಾಡಿದ ಉದಾಹರಣೆಗಳಿವೆ. ಆ ಕೆಲಸವನ್ನು ದಕ್ಷ ಅಧಿಕಾರಿಯಾಗಿರುವ ತಹಸೀಲ್ದಾರ್ ಭರತ್ರಾಜ್ ಮುಂದುವರಿಸಬೇಕು.

ಶಾಸಕರು ಕ್ರಮಕ್ಕೆ ಸೂಚಿಸಲಿ:

ಶರಾವತಿ ನದಿಯ ಹಿನ್ನೀರಿನ ಪ್ರದೇಶಗಳಲ್ಲಿ ಅಕ್ರಮವಾಗಿ ಮರಳುಗಾರಿಕೆ ನಡೆಯುತ್ತಿದೆ. ಇದು ಹೀಗೆ ಮುಂದುವರಿದರೆ ಮುಂದಿನ ದಿನದಲ್ಲಿ ನೀರಿಗೂ ಬರ ಬಂದು ಬಿಡಬಹುದು. ಹಾಗಾಗಿ ಹೊಸನಗರ-ಸಾಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಬೇಳೂರು ಗೋಪಾಲಕೃಷ್ಣ ಅವರು ಈ ಅಕ್ರಮ ಮರಳುಗಾರಿಕೆ ನಿಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಖಡಕ್ ವಾರ್ನಿಂಗ್ ಕೊಡುವುದು ಸೂಕ್ತ. ಇಲ್ಲವಾದರೇ ಮುಂದೆ ನೀರಿಗೆ ಬರ ಬರುವುದು ಗ್ಯಾರಂಟಿ ಎನ್ನುತ್ತಾರೆ.

{ಡಾ.ಸಂತೋಷ ಹೆಗ್ಡೆ } ನಿವೃತ್ತ ನ್ಯಾಯಮೂರ್ತಿ

ಮನುಷ್ಯನ ಜೀವನದಲ್ಲಿ ತೃಪ್ತಿ ಮತ್ತು ಮಾನವೀಯತೆಗೆ ಅತ್ಯಂತ ಮುಖ್ಯ ಸ್ಥಾನ ವಿರಬೇಕು. ತೃಪ್ತಿ ಸ್ವತಃ ಬರುವುದಿಲ್ಲ,ಅದನ್ನು ಮನುಷ್ಯ ತನ್ನೊಳಗೆ ಬೆಳೆಸಿಕೊಳ್ಳಬೇಕು. ತೃಪ್ತಿ ಇದ್ದರೆ ದುರಾಸೆಗೆ ಅವಕಾಶ ಇರುವುದಿಲ್ಲ.ಆಗ ಸೇವಾ ಮನೋಭಾವ ಬೆಳೆಯುತ್ತದೆ. ಪೋಷಕರು ತಮ್ಮ ಮಕ್ಕಳಲ್ಲಿ ಮಾನವೀಯತೆಯ, ತೃಪ್ತಿಯ ಮೌಲ್ಯ ತುಂಬಿ ಬೆಳೆಸುವ ಕೆಲಸ ಮಾಡಬೇಕು.

ಸಮಾಚಾರ ಸಣ್ಣದಲ್ಲ

ವೈದ್ಯೆಯ ಕೊಂದಿದ್ದ ನೀರಾನೆಗೆ ಅನಾರೋಗ್ಯ

ಶಿವಮೊಗ್ಗ: ಜಿಲ್ಲೆಯ ತ್ಯಾವರೆಕೊಪ್ಪದ ಮೃಗಾಲಯದಲ್ಲಿ ಪಶುವೈದ್ಯೆ ಸಮೀಕ್ಷಾ ಅವರ ಮೇಲೆ ದಾಳಿ ಮಾಡಿ ಕೊಂದಿದ್ದ ನೀರಾನೆ ಹಂಸಿನಿಯ ಮರಿ ಗರ್ಭದಲ್ಲೇ ಸಾವನ್ನಪ್ಪಿದೆ. ಇದರಿಂದ ಗರ್ಭಕೋಶದ ಸೋಂಕು ಅದರ ದೇಹಕ್ಕೆ ವ್ಯಾಪಿಸಿ ಬಹು ಅಂಗಾಂಗ ವೈಫಲ್ಯವಾಗಿರುವ ಶಂಕೆ ವ್ಯಕ್ತವಾಗಿದೆ. ನೀರಾನೆಯ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಿದ್ದು, ಬನ್ನೇರುಘಟ್ಟ ಮತ್ತು ಮೈಸೂರಿ ನಿಂದ ಆಗಮಿಸಿದ್ದ ತಜ್ಞ ವೈದ್ಯರು 2 ದಿನ ತಪಾಸಣೆ ನಡೆಸಿದ್ದಾರೆ. ಸ್ಯಾಂಪಲ್ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಿದ್ದಾರೆ. ನೀರಾನೆ ಬಹು ಅಂಗಾಂಗ ಸೋಂಕಿಗೆ ತಜ್ಞ ವೈದ್ಯರಿಂದ ಚಿಕಿತ್ಸೆ ಕೂಡ ಆರಂಭಿಸಲಾಗಿದೆ. ಕಳೆದ ತಿಂಗಳು ಡಾ.ಸಮೀಕ್ಷಾ ಅವರ ಮೇಲೆ ಹಂಸಿನಿ ದಾಳಿ ಮಾಡಿತ್ತು. ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವೈದ್ಯೆ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದರು.

2028ಕ್ಕೆ ಸಚಿವ ಸ್ಥಾನದ ಆಕಾಂಕ್ಷಿ: ರಾಯರಡ್ಡಿ

ಗಂಗಾವತಿ: ಪಕ್ಷದ ವರಿಷ್ಠರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವನಾಗು ಎಂದರೆ ಆಗುತ್ತೇನೆ, ಬೇಡವೆಂದರೆ ಬಿಡುತ್ತೇನೆ. 2028ರಲ್ಲಿಯೂ ನಮ್ಮದೇ ಪಕ್ಷ ಅಧಿಕಾರಕ್ಕೆ ಬರಲಿದ್ದು, ಆಗ ಸಚಿವ ಸ್ಥಾನದ ಬಗ್ಗೆ ನೋಡೋಣ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು. ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಚಿವ ಸ್ಥಾನಕ್ಕಾಗಿ ಶಾಸಕರು ದೆಹಲಿಗೆ ಹೋಗಿರುವ ವಿಚಾರ ಮಾಧ್ಯಮಗಳ ಮೂಲಕ ಗೊತ್ತಾಗಿದ್ದು, ಅವರಿಗೆ ಶುಭವಾಗಲಿ. ಉಳಿದ ಅವಧಿಯಲ್ಲಿಯೂ ಸಿದ್ದರಾಮಯ್ಯ ನೇತೃತ್ವದಲ್ಲೇ ಕಾಂಗ್ರೆಸ್ ಸರಕಾರ ಉತ್ತಮ ಆಡಳಿತ ನೀಡಲಿದೆ. ಸಂಪುಟ ಪುನಾರಚನೆ ವರಿಷ್ಠರು ಹಾಗೂ ಮುಖ್ಯಮಂತ್ರಿಗೆ ಬಿಟ್ಟ ವಿಚಾರ. ಲೋಕಸಭಾ ಕ್ಷೇತ್ರಗಳನ್ನು ಪುನರ್ ವಿಂಗಡನೆ ಮಾಡಲೇಬೇಕಾಗಿದೆ. ಆದರೆ ಈ ಬಗ್ಗೆ ತ್ವರಿತವಾಗಿ ಸಭೆ ಕರೆದಿರುವುದು ಸರಿಯಲ್ಲ. ಪ್ರಧಾನಿ ನರೇಂದ್ರ ಮೋದಿ ಎಲ್ಲ ರಾಜಕೀಯ ಪಕ್ಷಗಳ ನಾಯಕರ ಸಭೆ ನಡೆಸಬೇಕು, ಈ ವಿಚಾರದಲ್ಲಿ ಅವಸರ ಮಾಡಬಾರದು ಎಂದು ಹೇಳಿದರು.

ಶಿಕ್ಷಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲು

ಚಿತ್ರದುರ್ಗ: ಪ್ರೌಢಶಾಲೆಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಗರ್ಭಪಾತ ಮಾಡಿಸಿದ್ದಾರೆ ಎಂದು ಆರೋಪಿಸಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನೀಡಿದ ದೂರು ಆಧರಿಸಿ ಚಳ್ಳಕೆರೆ ತಾಲೂಕು ತಳಕು ಠಾಣೆ ಪೊಲೀಸರು ಗಣಿತ ಶಿಕ್ಷಕ ಎಚ್.ಒ.ರಾಜಣ್ಣ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಾಗುತ್ತಿದ್ದಂತೆ ಚಳ್ಳಕೆರೆ ತಾಲೂಕಿನ ಬಂಗಾರದೇವರಹಟ್ಟಿ ಸರಕಾರಿ ಶಾಲೆಯ ಗಣಿತ ಶಿಕ್ಷಕ ಎಚ್.ಒ. ರಾಜಣ್ಣ ಪರಾರಿಯಾಗಿದ್ದಾನೆ. ಆತ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ಕಾರಣ ಚಳ್ಳಕೆರೆಯ ಸರಕಾರಿ ಆಸ್ಪತ್ರೆಗೆ ದಾಖಲಾಗಿದ್ದ, ಅಲ್ಲಿಂದಲೇ ಪರಾರಿಯಾಗಿದ್ದಾನೆ. ವಿದ್ಯಾರ್ಥಿನಿಯೊಂದಿಗೆ ಸಲುಗೆ ಹೊಂದಿದ್ದ ರಾಜಣ್ಣ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ ಆರೋಪವಿದೆ.

ಐವರಿಗೆ ಅಂಬೇಡ್ಕರ್ ಪ್ರಶಸ್ತಿ ಪ್ರದಾನ ನಾಳೆ

ಬೆಂಗಳೂರು: ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯ ಅಂಗವಾಗಿ ಕರ್ನಾಟಕ ಸರಕಾರವು 2026ನೇ ಸಾಲಿನ ಪ್ರತಿಷ್ಠಿತ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು ಘೋಷಿಸಿದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಶೋಷಿತರ ಪರ ಹೋರಾಟ, ಸಾಹಿತ್ಯ, ಪತ್ರಿಕೋದ್ಯಮ, ಸಂಘಟನೆ ಹಾಗೂ ದೇವದಾಸಿ ವಿಮುಕ್ತಿ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಐವರು ಗಣ್ಯರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಸಾಲಿನ ಪ್ರಶಸ್ತಿಯನ್ನು ಮಂಗಳೂರು ವಿಜಯ (ಹೋರಾಟ/ಸಾಹಿತ್ಯ), ಸಿ.ಎಂ. ಮುನಿಯಪ್ಪ (ಹೋರಾಟ/ ಪತ್ರಿಕೋದ್ಯಮ), ಎಚ್.ಎನ್. ಅಣ್ಣಯ್ಯ (ಹೋರಾಟ), ಡಾ. ಹನುಮಂತರಾವ್ ಬಿ. ದೊಡ್ಡಮನಿ (ಸಾಹಿತ್ಯ/ ಸಂಘಟನೆ) ಜತೆಗೆ ಶೋಭಾ ಗಸ್ತಿ (ದೇವದಾಸಿ ವಿಮುಕ್ತಿ) ಸೇರಿದ್ದಾರೆ. ಪ್ರಶಸ್ತಿ ಪುರಸ್ಕೃತರಿಗೆ ತಲಾ 5 ಲಕ್ಷ ರು. ನಗದು ಬಹುಮಾನ ಹಾಗೂ 20 ಗ್ರಾಂ ಚಿನ್ನದ ಪದಕ ನೀಡಿ ಗೌರವಿಸಲಾಗುತ್ತದೆ.

ದಶಕದ ಕನಸಿಗಿಂದು ಉದ್ಘಾಟನೆ ಭಾಗ್ಯ

← ಮೊದಲಪುಟದಿಂದ ಭದ್ರಾ ಅಣೆಕಟ್ಟೆ ನಿರ್ಮಾಣಕ್ಕೂ ಮೊದಲು ನರಸಿಂಹರಾಜಪುರದಿಂದ ಹೊನ್ನೇಕೂಡಿಗೆ, ಹಂದೂರು, ಚಿನ್ನಕೂಡಿಗೆ, ಚಿಕ್ಕಂದೂರು ಮಾರ್ಗವಾಗಿ ನಾಗೇಸಾಲೂರು, ಬಿಳಾಲ್ ಕೊಪ್ಪ, ಕಲ್ಮನೆಯ ಮೂಲಕ ಭದ್ರಾನದಿಗೆ ಮತ್ತು ಹೆಬ್ಬೆ ಗ್ರಾಮದಲ್ಲಿದ್ದ ರೈಲ್ವೆ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಇಲ್ಲಿತ್ತು. ಭದ್ರಾ ಅಣೆಕಟ್ಟು ನಿರ್ಮಾಣದ ಬಳಿಕ ಹಿನ್ನೀರು ಆವರಿಸಿ ಈ ಸಂಪರ್ಕ ಕಡಿದು ಹೋಯಿತು. ಇದರಿಂದ ಗ್ರಾಮಗಳಿಂದ ನರಸಿಂಹರಾಜಪುರಕ್ಕೆ ಬರಲು 30 ಕಿಮೀ ಸುತ್ತಿ ಬರಬೇಕಿತ್ತು. ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಎಂ.ಶ್ರೀನಿವಾಸ್ ಅವರ ಮನವಿ ಮೇರೆಗೆ, ಹೊನ್ನೇಕೂಡಿಗೆ ಗ್ರಾಮಕ್ಕೆ ಹತ್ತಿರದ ಸಂಪರ್ಕದ ಸೇತುವೆ ನಿರ್ಮಾಣಕ್ಕೆ ಒಪ್ಪಿಗೆ ನೀಡಿ, 2017ರ ನ.30ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಸೇತುವೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಪುನಃ ತಾಂತ್ರಿಕ ಸಮಿತಿಯ ಸಲಹೆ ಮೇರೆಗೆ 34.85 ಕೋಟಿ ರು. ಅನುದಾನ ಬಿಡುಗಡೆಯಾಯಿತು. 2018ರಲ್ಲಿ ಆರಂಭವಾಗಿದ್ದ ಕಾಮಗಾರಿ 2021ರಲ್ಲಿ ಪೂರ್ಣಗೊಳ್ಳಬೇಕಿತ್ತು. ಪ್ರಸ್ತುತ 38.50 ಕೋಟಿ ವೆಚ್ಚದಲ್ಲಿ 504 ಮೀಟರ್ ಉದ್ದದ ಸೇತುವೆ ಕಾಮಗಾರಿ ಪೂರ್ಣಗೊಂಡಿದೆ. ರಾತ್ರಿ ವೇಳೆ ಸೇತುವೆ ಮೇಲೆ ಸಂಚರಿಸಲು ಅನುಕೂಲವಾಗುವಂತೆ 36 ಸೋಲಾರ್ ದೀಪಗಳನ್ನು ಅಳವಡಿಸಲಾಗಿದೆ.

ಅಬ್ದುಲ್ ಜಬ್ಬಾರ್ ರಾಜೀನಾಮೆ ಬೆನ್ನಲ್ಲೇ ಅಲ್ಪಸಂಖ್ಯಾತ ಘಟಕದ ವಿವಿಧ ಹುದ್ದೆ ತೊರೆದ ನಾಲ್ವರು ಮುಸ್ಲಿಮರು

ದಾವಣಗೆರೆ ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

ದಾವಣಗೆರೆ: ದಾವಣಗೆರೆ ಕಾಂಗ್ರೆಸ್‌ನಲ್ಲಿ ಉಪಚುನಾವಣೆ ವೇಳೆ ಎದ್ದಿದ್ದ ಭಿನ್ನಮತ ಚುನಾವಣೆ ನಂತರವೂ ಮುಂದುವರಿದಿದೆ.

ಹೌದು.. ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ತಾವು ಹೊಂದಿದ್ದ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬೆನ್ನಲ್ಲೇ ರಾಜ್ಯ ಅಲ್ಪಸಂಖ್ಯಾತ ಘಟಕದ ನಾಲ್ವರು ಹಾಗೂ ಜಿಲ್ಲಾ ಘಟಕದ ಕೆಲ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ಘೋಷಿಸಿದ್ದಾರೆ.

ಈ ಬಗ್ಗೆ ದಾವಣಗೆರೆಯಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಉಪಾಧ್ಯಕ್ಷ ಮೊಹಮ್ಮದ್ ಸಿರಾಜ್ ಮಾತನಾಡಿದರು. ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಬ್ದುಲ್ ಜಬ್ಬಾರ್ ಪಕ್ಷ ವಿರೋಧಿ ಚಟುವಟಿಕೆ ನಡೆಸಿದಾರೆಂಬ ಆರೋಪದ ಹಿನ್ನೆಲೆ, ಜಬ್ಬಾರ್ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಹಿನ್ನೆಲೆ ಮನನೊಂದು ತಾವು, ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಕಾರ್ಯದರ್ಶಿಗಳಾದ ಅಬ್ದುಲ್ ಗನಿ ತಾಹೀರ್, ಹುಸೇನ್ ಉಕ್ಕಡಗಾತ್ರಿ, ಉಬೇದುಲ್ಲಾ ಅತ್ತಾರ್, ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ಅಬದುಲ್ ಜಬ್ಬಾರ್ ಎ, ಎಸ್.ಕೆ. ಏಜಾಜ್, ಪಿ. ಖಾಸಿಂ ಸಾಬ್ ಮತ್ತಿತರರು ತಮ್ಮ ರಾಜೀನಾಮೆ ಪತ್ರಗಳನ್ನು ಇ-ಮೇಲ್ ಮೂಲಕ ಪಕ್ಷದ ರಾಜ್ಯಾಧ್ಯಕ್ಷರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಳುಹಿಸಿದ್ದೇವೆ ಎಂದರು.

ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಕೆ.ಅಬ್ದುಲ್ ಜಬ್ಬಾರ್ ಸೂಚನೆ ಮೇರೆಗೆ, ಎಲ್ಲಾ ಜವಾಬ್ದಾರಿ ನಿಭಾಯಿಸಿದ್ದೇವೆ. ಆದರೆ, ಶಸಕರುಗಳಾದ ಸಲೀಂ ಅಹಮದ್ ಮತ್ತು ರಿಜ್ವಾನ್ ಅರ್ಷದ್ ಸುದ್ದಿಗೋಷ್ಠಿ ನಡೆಸಿ ಜಬ್ಬಾರ್ ಅವರ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿದ್ದಾರೆ. ಇದರಿಂದ ಇಷ್ಟುವರ್ಷ ನಿಷ್ಠೆಯಿಂದ ಕೆಲಸ ಮಾಡಿರುವುದಕ್ಕೆ ಮಸಿ ಬಳಿದಂತಾಗಿದೆ. ಉಪ ಚುನಾವಣೆಯಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ಕೇಳಿದರೆಂಬ ಕಾರಣಕ್ಕೆ ಅವ ರನ್ನು ಹಾಗೂ ಅವರ ಬೆಂಬಲಿಗರನ್ನು ಉಪ ಚುನಾವಣೆಯಿಂದ ಸಂಪೂರ್ಣವಾಗಿ ದೂರ ಇಟ್ಟದ್ದು ಮನಸ್ಸಿಗೆ ನೋವು ತಂದಿದೆ. ಹಾಗಾಗಿ, ರಾಜೀನಾಮೆ ನೀಡುತ್ತಿದ್ದೇವೆ. ಆದರೆ ಸಾಮಾನ್ಯ ಕಾರ್ಯಕರ್ತರಾಗಿ ಪಕ್ಷದಲ್ಲಿಯೇ ಇರುತ್ತೇವೆ ಎಂದರು.

ದಾವಣಗೆರೆಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಉಪಾಧ್ಯಕ್ಷ ಮೊಹಮ್ಮದ್ ಸಿರಾಜ್ ಮಾತನಾಡಿದರು.

ಎಸ್‌ಎಸ್‌ಎಮ್, ಜಬ್ಬಾರ್ ಮಧ್ಯೆ 2013ರಿಂದ ವೈಮನಸ್ಸು

ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ವಿಧಾನಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ನಡುವೆ 2013ರಿಂದ ವೈಮನಸ್ಸಿದೆ. ಯಾವ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ಕಂದಕ ನಿರ್ಮಾಣವಾಗಿದೆ ಎಂಬುದು ಗೊತ್ತಿಲ್ಲ. ಆದರೆ, ಶಾಮನೂರು ಶಿವಶಂಕರಪ್ಪ ಬದುಕಿರುವವರೆಗೆ ಇದು ಇಷ್ಟೊಂದು ದೊಡ್ಡದಾಗಿರಲಿಲ್ಲ ಎಂದು ಮೊಹಮ್ಮದ್ ಸಿರಾಜ್ ತಿಳಿಸಿದರು. 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮುಸ್ಲಿಂ ಸಮುದಾಯ ಹಮ್ಮಿಕೊಂಡಿದ್ದ ಸಭೆಗೆ ಶಾಮನೂರು ಕುಟುಂಬದ ಯಾರೊಬ್ಬರೂ ಬರಲಿಲ್ಲ. ಪಕ್ಷನಿಷ್ಠೆ ಕೈಬಿಡದೇ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಿದೆವು. ಸಚಿವರು ಹಾಗೂ ಜಬ್ಬಾರ್ ನಡುವಿನ ವೈಮನಸ್ಸಿನ ಲಾಭ ಪಡೆಯಲು ಅನೇಕರು ಪ್ರಯತ್ನಿಸಿದ್ದಾರೆ. ಜಬ್ಬಾರ್ ಅವರು ದೇಗುಲದ ಘಂಟೆಯಂತಾಗಿದ್ದು, ಸಿಕ್ಕವರೆಲ್ಲ ಅವರನ್ನು ಬಾರಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜೀನಾಮೆ ಸಲ್ಲಿಸಿದವರ್‍ಯಾರು?

ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಕಾರ್ಯದರ್ಶಿಗಳಾದ ಅಬ್ದುಲ್ ಗನಿ ತಾಹೀರ್, ಹುಸೇನ್ ಉಕ್ಕಡಗಾತ್ರಿ, ಉಬೇದುಲ್ಲಾ ಅತ್ತಾರ್, ದಾವಣಗೆರೆ ಅಲ್ಪಸಂಖ್ಯಾತ ಕಾಂಗ್ರೆಸ್ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ಎ, ಎಸ್.ಕೆ. ಏಜಾಜ್,ಪಿ. ಖಾಸಿಂ ಸಾಬ್ ರಾಜೀನಾಮೆ.

ಉಪ ಚುನಾವಣೆಯಲ್ಲಿ ಟಿಕೆಟ್ ಕೇಳಿದಕ್ಕೆ ಅಬ್ದುಲ್ ಜಬ್ಬಾರ್ ವಿರುದ್ಧ ಗೂಬೆ ಕೂರಿಸಲಾಗುತ್ತಿದೆ. ಇದರಿಂದ ಇಡೀ ಅಲ್ಪಸಂಖ್ಯಾತ ಸಮುದಾಯಕ್ಕೆ ನೋವಾಗಿದೆ. 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಇದರ ಪರಿಣಾಮ ಎದುರಿಸಲಿದೆ.

-ಅಬ್ದುಲ್ ಗನಿ ತಾಹೀರ್, ಕಾಂಗ್ರೆಸ್ ಮುಖಂಡ

ನಿಯತ್ತಿಲ್ಲದ ಜಬ್ಬಾರ್: ಎಸ್‌ಎಸ್‌ಎಮ್ ಕಿಡಿ

ದಾವಣಗೆರೆ: ಒಂದು ಚಹಾ ಕುಡಿದರೂ ಋಣ ಇಟ್ಟುಕೊಳ್ಳಬೇಕು. ಅಬ್ದುಲ್ ಜಬ್ಬಾರ್‌ನನ್ನು ಎಂಎಲ್‌ಸಿ ಮಾಡಿದ್ದು ನಾವು, ಕಾಂಗ್ರೆಸ್ ಪಕ್ಷದ ಅನ್ನ ತಿಂದ ಮೇಲೆ ಕೆಲಸ ಮಾಡಬೇಕಿತ್ತು. ನಿಯತ್ತು ಇಲ್ಲದ ಜಬ್ಬಾರ್ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹರಿಹಾಯ್ದರು.

ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ಎಂಎಲ್‌ಸಿ ಅಬ್ದುಲ್ ಜಬ್ಬಾರ್ ರಾಜೀನಾಮೆ ವಿಚಾರವಾಗಿ ದಾವಣಗೆರೆಯಲ್ಲಿ ಪ್ರತಿಕ್ರಿಯಿಸಿದ ಅವರು, ನಾನು ಚುನಾವಣೆ ನಂತರ ರಿಲ್ಯಾಕ್ಸ್ ಮೂಡ್‌ನಲ್ಲಿದ್ದೆ. ನನಗೆ ಯಾರೂ ಕಾಲ್ ಮಾಡಿಲ್ಲ. ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ನಾನು 1994ರಿಂದ ಚುನಾವಣೆ ಮಾಡಿದ್ದೇನೆ. ನನಗೆ ಇದು ಹದಿನಾರನೇ ಚುನಾವಣೆ. ಹಿಂದಿನ ಚುನಾವಣೆಗಳಷ್ಟು ಟೈಟ್ ಆಗಿಲ್ಲ. 2013ರ ಚುನಾ ವಣೆ ರಿಪೀಟ್ ಆಗುತ್ತದೆ ಎಂಬ ವಿಶ್ವಾಸ ಇದೆ. ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಇದ್ದಾರೆ. ನಾಯಕರ ನಡುವಿನ ಸಣ್ಣಪುಟ್ಟ ವ್ಯತ್ಯಾಸ ಆಗಿದೆ. ಗೆದ್ದರೆ ಹೆಚ್ಚು ಅಂತರದಲ್ಲಿ ಗೆಲ್ಲುತ್ತೇವೆ, ಇಲ್ಲ ಕಡಿಮೆ ಅಂತರದಲ್ಲಿ ಗೆಲ್ಲುತ್ತೇವೆ ಎನ್ನುವ ವಿಶ್ವಾಸವಿದೆ ಎಂದು ತಿಳಿಸಿದರು. ಶಾಮನೂರು ಕುಟುಂಬ ಬುದ್ದಿವಂತರನ್ನು ಹತ್ತಿರ ಸೇರಿಸಲ್ಲ. ದಡ್ಡರನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಾರೆ ಎಂಬ ಅಬ್ದುಲ್ ಜಬ್ಬಾರ್ ಹೇಳಿಕೆ ವಿಚಾರವಾಗಿ ಮಾತನಾಡಿ, ಅವನು ಬುದ್ಧಿವಂತನಂತಾ? ಎಂದು ಪ್ರಶ್ನಿಸಿದರು. ಚುನಾವಣೆಯಲ್ಲಿ ಜನರ ರೆಸ್ಪಾನ್ಸ್ ಚೆನ್ನಾಗಿದೆ. ಗೆಲುವು ಸಿಗುತ್ತೆ ಎಂಬ ವಿಶ್ವಾಸ ಇದೆ. ನಮ್ಮ ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ನಮ್ಮ ಮತದಾರ ಬಂಧುಗಳು ಉತ್ತಮವಾಗಿ ಮತದಾನ ಮಾಡಿದ್ದಾರೆ. ನಮ್ಮ ಕಾಂಗ್ರೆಸ್ ಪಕ್ಷದ ಮೇಲೆ ಮತದಾರರ ಒಲವು ಕಂಡುಬಂದಿದೆ. ಒಳ್ಳೆಯ ಅಂತರದಲ್ಲಿ ಪಕ್ಷ ಗೆಲ್ಲುತ್ತೆ, ಸಮರ್ಥ್ ಶಾಮನೂರು ಶಾಸಕರಾಗುತ್ತಾರೆ ಎಂಬ ವಿಶ್ವಾಸ ಇದೆ ಎಂದರು.

ಪಕ್ಷದ ಸಚಿವರು, ನಾಯಕರು, ಕಾರ್ಯಕರ್ತರು ಚುನಾವಣೆಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆ, ಅವರಿಗೆ ಧನ್ಯವಾದ. ಮುಖ್ಯಮಂತ್ರಿಯಿಂದ ಹಿಡಿದು ಕಟ್ಟಕಡೆಯ ಕಾರ್ಯಕರ್ತರಿಗೆ ಧನ್ಯವಾದ. ನಮ್ಮ ಮನೆತನ ಹಾಗೂ ನಮ್ಮ ಮೇಲೆ ಇಟ್ಟಿರುವ ವಿಶ್ವಾಸವನ್ನು ಸಮರ್ಥ್ ಉಳಿಸಿಕೊಂಡು ಹೋಗುತ್ತಾರೆ. ಸಮರ್ಥ್ ಗೆಲುವು ಖಚಿತ.

-ಎಸ್.ಎಸ್.ಮಲ್ಲಿಕಾರ್ಜುನ ಸಚಿವ

ಫಲಿತಾಂಶಕ್ಕೂ ಮುನ್ನವೇ ಸೋಲೊಪ್ಪಿಕೊಂಡ ಕಾಂಗ್ರೆಸ್

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಫಲಿತಾಂಶ ಹೊರಬೀಳುವ ಮುನ್ನವೇ ಕಾಂಗ್ರೆಸ್ ಸೋಲೊಪ್ಪಿಕೊಂಡಿದೆ. ಈ ಫಲಿತಾಂಶವು ರಾಜ್ಯ ರಾಜಕೀಯ ಚಿತ್ರಣ ಬದಲಾಯಿಸಲಿದೆ ಎಂದು ಸ್ವಾಭಿಮಾನಿ ಬಳಗದ ರಾಜ್ಯ ಘಟಕದ ಅಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ತಿಳಿಸಿದರು.

ಬಿಜೆಪಿ ಅಭ್ಯರ್ಥಿ ಟಿ.ಶ್ರೀನಿವಾಸ ದಾಸಕರಿಯಪ್ಪ ಅವರನ್ನು ಬೆಂಬಲಿಸಿದ ಸ್ವಾಭಿಮಾನಿ ಬಳಗವು ಗ್ರಾಮೀಣ ಪ್ರದೇಶದಲ್ಲಿ ಪಾದಯಾತ್ರೆ ನಡೆಸಿ ಮತಯಾಚಿಸಿತ್ತು. ಈ ಮತಗಟ್ಟೆಗಳಲ್ಲಿ ಹೆಚ್ಚು ಮತದಾನವಾಗಿದ್ದು, ಬಿಜೆಪಿ ಮುನ್ನಡೆ ಸಾಧಿಸುವ ವಿಶ್ವಾಸ ಮೂಡಿದೆ. ಬಿಜೆಪಿ ರಾಜ್ಯ ನಾಯಕರು ನಡೆಸಿದ ಪ್ರಚಾರದಿಂದ ಪಕ್ಷದ ಸಾಂಪ್ರದಾಯಿಕ ಮತಗಳು ಚದುರಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅಹಿಂದ ವರ್ಗವನ್ನು ಕಾಂಗ್ರೆಸ್ ಕೇವಲ ಮತ ಬ್ಯಾಂಕ್ ಆಗಿ ಮಾಡಿಕೊಂಡಿದೆ. ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳುವಂತಹ ಫಲಿತಾಂಶವನ್ನು ದಕ್ಷಿಣ ವಿಧಾನಸಭಾ ಕ್ಷೇತ್ರದ ಮತದಾರರು ನೀಡಿದ್ದಾರೆ. ಕಾಂಗ್ರೆಸ್ ಮುಖಂಡರ ಹೇಳಿಕೆ, ಬಹಿರಂಗ ಆರೋಪಪ್ರತ್ಯಾರೋಪಗಳು ಇದನ್ನು ದೃಢಪಡಿಸಿವೆ. ಶೋಷಿತ ವರ್ಗಗಳ ಸ್ವಾಭಿಮಾನದ ಚುನಾವಣೆ ಇದಾಗಿದ್ದು, ಕಾಂಗ್ರೆಸ್ ದುರಾಡಳಿತದ ವಿರುದ್ಧವಾಗಿ ಜನರು ಆಕ್ರೋಶ ಹೊರಹಾಕಿದ್ದಾರೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ನಗುತ್ತ ಚುನಾವಣೆ ಮಾಡುವಂತೆ ನೀಡಿದ್ದ ಸಂದೇಶ ಪಾಲಿಸಿದ್ದೇವೆ. ಬಿಜೆಪಿ ನಾಯಕರು, ಸ್ವಾಭಿಮಾನಿ ಬಳಗದ ಮುಖಂಡರು ನಗುತ್ತ ಚುನಾವಣೆ ಮಾಡಿದ್ದೇವೆ. ಮುಸ್ಲಿಂ ಸಮುದಾಯ ಕೂಡ ಹರ್ಷದಿಂದ ಹಕ್ಕು ಚಲಾವಣೆ ಮಾಡಿದೆ. ಫಲಿತಾಂಶವನ್ನು ಇದೇ ಮನೋಭಾವದಲ್ಲಿ ಸ್ವೀಕರಿಸಲು ಕಾತುರರಾಗಿದ್ದೇವೆ ಎಂದು ವ್ಯಂಗ್ಯವಾಡಿದರು.

ಒಬ್ಬ ವ್ಯಕ್ತಿ ಪರ ಹೈಕಮಾಂಡ್ ಮುಂದೆ ಬ್ಯಾಟಿಂಗ್ ತಪ್ಪು: ರಿಜ್ವಾನ್ ಅರ್ಷದ್

ನಾಯಕರ ದ್ವಂದ್ವ ನಿರ್ಧಾರದಿಂದ ಕೈತಪ್ಪಿದ ಟಿಕೆಟ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಒಬ್ಬ ವ್ಯಕ್ತಿಗೆ ಟಿಕೆಟ್ ಸಿಗಲಿಲ್ಲ ಎನ್ನುವ ಕಾರಣಕ್ಕೆ ಇಡೀ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದಲ್ಲ. ಅಬ್ದುಲ್ ಜಬ್ಬಾರ್ ಪರವಾಗಿ ಕೆಲವರು ಮಾತ್ರ ಮಾತಾಡಿದ್ದರು. ಆದರೆ ಪರ್ಯಾಯ ಅಭ್ಯರ್ಥಿಯನ್ನು ಯಾರೂ ಘೋಷಿಸಲಿಲ್ಲ. ಇದೇ ಸಮುದಾಯಕ್ಕೆ ಟಿಕೆಟ್ ತಪ್ಪಲು ಕಾರಣ ಎಂದು ಶಾಸಕ ರಿಜ್ವಾನ್ ಅರ್ಷದ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮುದಾಯದ ಹಿರಿಯ ನಾಯಕರೊಬ್ಬರು ಅಬ್ದುಲ್ ಜಬ್ಬಾರ್ ಪರವಾಗಿ ಮಾತ್ರ ಬ್ಯಾಟಿಂಗ್ ಮಾಡಿದ್ದು ಹಾಗೂ ಪರ್ಯಾಯ ಮುಸ್ಲಿಂ ವ್ಯಕ್ತಿಯ ಆಯ್ಕೆಯನ್ನು ಹೈಕಮಾಂಡ್‌ಗೆ ನೀಡಲಿಲ್ಲ. ಇದೇ ಟಿಕೆಟ್ ತಪ್ಪಲು ಕಾರಣ. ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಬಿಂಬಿಸುತ್ತಿದ್ದಾರೆ. ವಾಸ್ತವದಲ್ಲಿ ಕೇವಲ ಒಬ್ಬ ವ್ಯಕ್ತಿಯ ಪರವಾಗಿ ಕೆಲವರು ಬ್ಯಾಟಿಂಗ್ ಮಾಡಿದ್ದಾರೆ. ಇವರ ತಪ್ಪು ನಿರ್ಧಾರಗಳಿಂದಾಗಿ ಅಲ್ಪಸಂಖ್ಯಾತರಿಗೆ ಸಿಗಬೇಕಿದ್ದ ಸೀಟು ಕೈತಪ್ಪಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅನ್ನು ಅಲ್ಪಸಂಖ್ಯಾತರಿಗೆ ನೀಡಬೇಕೆಂದು ಕೇಳಿದ್ದು ನಿಜ. ಟಿಕೆಟ್ ಕೇಳುವಾಗ ಮೂರ್ನಾಲ್ಕು ಪರ್ಯಾಯ ಹೆಸರುಗಳನ್ನು ಸೂಚಿಸಬೇಕಿತ್ತು. ಆದರೆ, ಕೇವಲ ಜಬ್ಬಾರ್‌ಗೆ ಮಾತ್ರ ಟಿಕೆಟ್ ಕೊಡಿ ಎಂದು ಪಟ್ಟು ಹಿಡಿಯಲಾಯಿತು. ನಾನು ಪಕ್ಷದ ವರಿಷ್ಠರ ನಿರ್ಧಾರವನ್ನು ಪ್ರಶ್ನಿಸುವುದಿಲ್ಲ. ಯಾರ ಮೇಲೂ ವೈಯಕ್ತಿಕ ಆಪಾದನೆ ಮಾಡುವುದಿಲ್ಲ. ಆದರೆ, ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಜನರ ಮುಂದೆ ಬೊಬ್ಬೆ ಹೊಡೆದವರು, ನಿಜಕ್ಕೂ ಹೋರಾಟ ಮಾಡಿದ್ದು ಸಮುದಾಯದ ಅಭ್ಯರ್ಥಿಗಾಗಿಯಲ್ಲ, ಬದಲಾಗಿ ತಮ್ಮ ಬೆಂಬಲಿಗನಾದ ಒಬ್ಬನೇ ಒಂದು ವ್ಯಕ್ತಿಯ ಪರವಾಗಿ ಎಂದು ಕಿಡಿಕಾರಿದ್ದಾರೆ.

ಸಿಎಂ ಮುಂದೆಯೇ ಹಠ ಹಿಡಿದಿದ್ದ ಹಿರಿಯ ನಾಯಕ: ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಮ್ಮದೇ ಸಮುದಾಯದ, ಅಲ್ಪಸಂಖ್ಯಾತರ ಚಾಂಪಿಯನ್ ಎನ್ನಿಸಿಕೊಳ್ಳುವ ಹಿರಿಯ ನಾಯಕರೊಬ್ಬರು ಸಿಎಂ ಮುಂದೆಯೇ, 'ಟಿಕೆಟ್ ಕೊಟ್ಟರೆ ಜಬ್ಬಾರ್‌ಗೆ ಕೊಡಿ, ಇಲ್ಲವಾದರೆ ಬೇರೆ ಸಮುದಾಯಕ್ಕೆ ಕೊಟ್ಟುಬಿಡಿ' ಎಂದು ಹಠ ಹಿಡಿದರು. ಇದು ಎಷ್ಟು ಸರಿ? ವರಿಷ್ಠರು ಪರ್ಯಾಯ ಮುಸ್ಲಿಂ ನಾಯಕರ ಹೆಸರನ್ನು ಕೇಳಿದಾಗ ಈ ನಾಯಕರು ಒಂದೇ ಒಂದು ಹೆಸರನ್ನೂ ಸೂಚಿಸಲಿಲ್ಲ. ತಮ್ಮ ವ್ಯಕ್ತಿಗೆ ಟಿಕೆಟ್ ಸಿಗದಿದ್ದಾಗ ಬೇರೆ ಸಮುದಾಯಕ್ಕಾದರೂ ಕೊಟ್ಟುಬಿಡಿ ಎಂದು ಹೇಳಿದ್ದು ಇವರ ದ್ವಂದ್ವ ನಿಲುವನ್ನು ತೋರಿಸುತ್ತದೆ. ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಗೆಲ್ಲಿಸಿಕೊಳ್ಳಬಹುದಾಗಿದ್ದ ಕ್ಷೇತ್ರವನ್ನು ಇವರ ತಪ್ಪುಗಳಿಂದ ಕಳೆದುಕೊಂಡೆವು ಎಂಬ ವೈಯಕ್ತಿಕ ನೋವು ನನಗಿದೆ ಎಂದರು.

ಸಮುದಾಯ 'ದ್ರೋಹಿ' ಪಟ್ಟ ಕಟ್ಟಿದ್ದು ವಿಪರ್ಯಾಸ

ಪಕ್ಷದ ಒಳಗೆ ಟಿಕೆಟ್ ಹಂಚಿಕೆ ಸೂತ್ರಕ್ಕೆ ಒಪ್ಪಿಗೆ ಸೂಚಿಸಿ, ಆಚೆ ಬಂದು ಸಮುದಾಯದ ಪರ ಹೋರಾಟ ಮಾಡಿದ್ದೆವು ಎಂದು ಇವರು ಸುಳ್ಳು ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೆ, ಪಕ್ಷದ ಅಧಿಕೃತ ಅಭ್ಯರ್ಥಿಯ ಘೋಷಣೆಯಾದ ಬಳಿಕ, ಅಭ್ಯರ್ಥಿಯ ಪರ ನಿಂತವರನ್ನು 'ಸಮುದಾಯ ದ್ರೋಹಿಗಳು' ಎಂದು ಬಿಂಬಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಈ ಸಭೆಯಲ್ಲಿ ಯಾಸಿರ್ ಪಠಾಣ್ ವಿರೋಧಕ್ಕೂ ಮನ್ನಣೆ ಸಿಗಲಿಲ್ಲ. ಕೇವಲ ಒಂದು ಹೆಸರು ಏಕೆ ಹೇಳುತ್ತಿದ್ದೀರಿ? ಯುವಕರಿಗೆ ಅಥವಾ ಬೇರೆ ಸ್ಥಳೀಯ ನಾಯಕರಿಗೆ ಅವಕಾಶ ಕೊಡಿ ಎಂದು ಕೇಳಿದರು. ಆದರೆ, ಅವರ ಮಾತಿಗೆ ಯಾರೂ ಬೆಲೆ ಕೊಡಲಿಲ್ಲ. ಕೇವಲ ಒಬ್ಬ ವ್ಯಕ್ತಿಗಾಗಿ ಇಡೀ ಸಮುದಾಯದ ಟಿಕೆಟ್ ಅನ್ನು ನಾವೇ ಕಳೆದುಕೊಂಡೆವು. ಈಗ ಬೇರೆಯವರ ಮೇಲೆ, ಪಕ್ಷದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎಂದು ಶಾಸಕ ರಿಜ್ವಾನ್ ಅರ್ಷದ್ ಕಿಡಿಕಾರಿದರು.

ಆಕಾಂಕ್ಷಿಗಳು ಇಲ್ಲಿಂದಿಲ್ಲಿಗೆ ರಾಗಾ ಮಿಲನ

← ಮೊದಲಪುಟದಿಂದ ದೆಹಲಿಗೆ ತೆರಳಿರುವ ಶಾಸಕರು ಸೋಮವಾರ ಬೆಳಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಬಳಿಕ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಜತೆ ಪ್ರತ್ಯೇಕವಾಗಿ ಚರ್ಚಿಸುವುದು ಬಹುತೇಕ ಖಚಿತ. ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಚರ್ಚಿಸುವ ವಿಶ್ವಾಸವನ್ನು ಶಾಸಕರು ವ್ಯಕ್ತಪಡಿಸುತ್ತಿದ್ದಾರೆ.

ಆದರೆ ದೆಹಲಿ ಮೂಲಗಳ ಪ್ರಕಾರ ರಾಹುಲ್ ಗಾಂಧಿ ಅವರ ಭೇಟಿಯ ಸಾಧ್ಯತೆ ತೀರಾ ಕಡಿಮೆ ಎನ್ನಲಾಗಿದೆ. ಮಂಗಳವಾರ ಅಂಬೇಡ್ಕರ್ ಜಯಂತಿ ಇರುವುದರಿಂದ, ಸೋಮವಾರ ರಾತ್ರಿ ವೇಳೆಗೆ ಬಹುತೇಕ ಶಾಸಕರು ದೆಹಲಿಯಿಂದ ವಾಪಸಾಗುವ ಸಾಧ್ಯತೆಯಿದೆ. ಉಪಚುನಾವಣೆಯ ಬಳಿಕ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ತೆರಳಿ ಚರ್ಚಿಸುವ ಸಾಧ್ಯತೆಯಿದೆ ಎನ್ನಲಾಗಿತ್ತು. ಆದರೆ ಈ ಇಬ್ಬರು ನಾಯಕರು ತೆರಳುವ ಮೊದಲೇ, ಶಾಸಕರ ಗುಂಪು ದೆಹಲಿಗೆ ತೆರಳಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಡಿಕೆ ಬೆಂಬಲಿಗರು ಅಂತರ?: ಈ ಹಿಂದೆ ಸಚಿವ ಸ್ಥಾನದ ಆಕಾಂಕ್ಷಿಗಳಾಗಿ ದೆಹಲಿಗೆ ತೆರಳಲು ಒಟ್ಟು 40 ಶಾಸಕರ ಪಟ್ಟಿ ಸಿದ್ಧವಾಗಿತ್ತು. ಆದರೆ, ಅಂತಿಮ ಕ್ಷಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣದ ಸುಮಾರು 10ರಿಂದ 12 ಶಾಸಕರು ದೆಹಲಿ ಪ್ರಯಾಣವನ್ನು ರದ್ದುಪಡಿಸಿದ್ದಾರೆ. ಈ ಶಾಸಕರು ಈ ತೀರ್ಮಾನ ಕೈಗೊಂಡಿದ್ದು ಏಕೆ? ಈ ಶಾಸಕರು ಕಾದು ನೋಡುವ ತಂತ್ರಕ್ಕೆ ಮೊರೆ ಹೋದರೇ ಎನ್ನುವ ಪ್ರಶ್ನೆಗಳು ಪಕ್ಷದಲ್ಲಿ ಶುರುವಾಗಿದೆ.

ಸಚಿವ ಸ್ಥಾನದ ಆಕಾಂಕ್ಷಿ ಶಾಸಕರು ದೆಹಲಿಗೆ ಭೇಟಿ ನೀಡುವುದರಲ್ಲಿ ಯಾವುದೇ ತಪ್ಪಿಲ್ಲ. ಸಂಪುಟ ಪುನಾರಚನೆ ನಿರ್ಧಾರವನ್ನು ಹೈಕಮಾಂಡ್ ಕೈಗೊಳ್ಳಬೇಕಿದೆ. ಸಂಪುಟ ಪುನಾರಚನೆ ಕಾರ್ಯ ಬಾಕಿಯಿದೆ. ಐದು ರಾಜ್ಯಗಳ ಚುನಾವಣೆ, ಬಜೆಟ್ ಅಧಿವೇಶನ ಸಂಪುಟ ಪುನಾರಚನೆ ವಿಳಂಬಕ್ಕೆ ಕಾರಣವಿರಬಹುದು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ದೆಹಲಿಗೆ ತೆರಳಿದ ಪ್ರಮುಖರು

ಟಿ.ಬಿ.ಜಯಚಂದ್ರ, ಅಶೋಕ್ ಪಟ್ಟಣ್, ಎಸ್.ಎನ್.ಸುಬ್ಬಾರೆಡ್ಡಿ, ಸಿ. ಪುಟ್ಟರಂಗಶೆಟ್ಟಿ, ಹಂಪನಗೌಡ ಬಾದರ್ಲಿ, ಡಿ.ಜಿ.ಶಾಂತನಗೌಡ, ಬಸವರಾಜ್ ಶಿವಣ್ಣನವರ್, ಕೃಷ್ಣಮೂರ್ತಿ, ಪ್ರಸಾದ್ ಅಬ್ಬಯ್ಯ, ಯು.ಬಿ.ಬಣಕಾರ್, ಜಿ.ಎಸ್.ಪಾಟೀಲ್, ಯಶವಂತರಾಯಗೌಡ ಪಾಟೀಲ್, ಕೆ.ಷಡಕ್ಷರಿ, ನಾರಾಯಣಸ್ವಾಮಿ, ಲಕ್ಷ್ಮಣ ಸವದಿ, ಅಪ್ಪಾಜಿ ನಾಡಗೌಡ, ರಮೇಶ್ ಬಂಡಿಸಿದ್ದೇಗೌಡ, ಬಿ.ಶಿವಣ್ಣ, ರಾಘವೇಂದ್ರ ಹಿಟ್ನಾಳ್, ಬೇಲೂರು ಗೋಪಾಲಕೃಷ್ಣ

ಕೈಕೊಟ್ಟ ಶಾಂತಿ ಸಂಧಾನ

← ಮೊದಲಪುಟದಿಂದ **ಯಾರು ಏನು ಹೇಳಿದರು?:** ಪಾಕಿಸ್ತಾನದಲ್ಲಿ ಇರಾನ್ ಜೊತೆ ನಡೆದ 21 ಗಂಟೆಗಳ ಮಾತುಕತೆಯಲ್ಲಿ ಯಾವುದೇ ಪ್ರಗತಿ ಕಂಡುಬಂದಿಲ್ಲ ಎಂದು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಹೇಳಿದರು. ಭಾನುವಾರ ಬೆಳಗಿನ ಜಾವಕ್ಕೆ ಮುಂಚಿತವಾಗಿ ಮುಕ್ತಾಯಗೊಂಡ ಮೂರು ಸುತ್ತಿನ ಮಾತುಕತೆಗಳ ನಂತರ, ವ್ಯಾನ್ಸ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಅವರು ನಮ್ಮ ಷರತ್ತುಗಳನ್ನು ಒಪ್ಪಿಕೊಂಡಿಲ್ಲ. ಟ್ರಂಪ್ ಅವರು, ನಾವು ಉತ್ತಮ ನಂಬಿಕೆಯಿಂದ ಬಂದು ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಬೇಕು ಎಂದು ಹೇಳಿದ್ದರು. ದುರದೃಷ್ಟವಶಾತ್ ಯಾವುದೇ ಪ್ರಗತಿಯಾಗಲಿಲ್ಲ ಎಂದು ತಿಳಿಸಿದ್ದಾರೆ. ಮುಂದೆ ಇರಾನ್ ಪರಮಾಣು ಶಸ್ತ್ರಾಸ್ತ್ರವನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸುವುದಿಲ್ಲ ಎಂಬ ದೃಢವಾದ ಬದ್ಧತೆಯನ್ನು ಅಮೆರಿಕ ಬಯಸಿದೆ. ಅದು ಕಾಣುತ್ತಿಲ್ಲ. ಈಗಾಗಲೇ ಅಮೆರಿಕ ದಾಳಿಯಿಂದ ಅವರ ಪರಮಾಣು ಕಾರ್ಯಕ್ರಮ, ಅದರ ಸೌಲಭ್ಯಗಳು ನಾಶವಾಗಿವೆ ಎಂದಿದ್ದಾರೆ.

ಮಾತುಕತೆಯ ಫಲಿತಾಂಶ ಏನೇ ಇರಲಿ, ಅಮೆರಿಕ ಗೆದ್ದಿದೆ. ನಾವು ಆ ದೇಶವನ್ನು ಸಂಪೂರ್ಣವಾಗಿ ಸೋಲಿಸಿದ್ದೇವೆ. ಬಹುಶಃ ಅವರು ಒಪ್ಪಂದ ಮಾಡಿಕೊಳ್ಳಬಹುದು ಅಥವಾ ಮಾಡಿಕೊಳ್ಳದಿರಬಹುದು. ಅಮೆರಿಕದ ದೃಷ್ಟಿಕೋನದಿಂದ ನನಗೆ ಅದು ಮುಖ್ಯವಲ್ಲ. ಅಮೆರಿಕವು ಇರಾನ್ ಅನ್ನು ಸೇನಾ ಹೋರಾಟದಲ್ಲಿ ಸೋಲಿಸಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಶಾಂತಿ ಮಾತುಕತೆ ವೈಫಲ್ಯದ ಬಗ್ಗೆ ಪ್ರತಿಕ್ರಿಯಿಸಿದ ಇರಾನ್ ಸ್ಪೀಕರ್ ಗಲಿಬಾಫ್, ಅಮೆರಿಕ ನಮ್ಮ ನಂಬಿಕೆಯನ್ನು ಗೆಲ್ಲಲು ವಿಫಲವಾಗಿದೆ. ಅವರು ನಮ್ಮ ನಂಬಿಕೆಯನ್ನು ಪಡೆಯುತ್ತಾರೋ ಇಲ್ಲವೋ ಎಂದು ತಿಳಿದುಕೊಳ್ಳಲು ಇದು ಸಮಯ ಎಂದಿದ್ದಾರೆ. ಮಾತ್ರವಲ್ಲ ಇನ್ನೂ ಮಾತುಕತೆಗೆ ಅವಕಾಶವಿದೆ ಎಂದು ಹೇಳಿದ್ದಾರೆ. ಅಲ್ಲಿಗೆ ಇನ್ನೊಂದು ಸುತ್ತಿಗೆ ನಾವು ಸಿದ್ಧ ಎಂಬ ಸುಳಿವು ನೀಡಿದ್ದಾರೆ. ಇರಾನ್ ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿ, ಅವರ ನಿರೀಕ್ಷೆ ಅತಿಯಾಯಿತು, ನಿಯಮ ಮೀರಿ ನಿರೀಕ್ಷೆ ಮಾಡುತ್ತಿದ್ದಾರೆ ಎಂದು ಹೇಳಿದೆ.

ನಕಲಿ ಪತ್ರಕರ್ತರ ವಿರುದ್ಧ ಕಠಿಣ ಕ್ರಮಕ್ಕೆ ಸದಸ್ಯರ ಒತ್ತಾಯ | ಪತ್ರಕರ್ತರು ಸತ್ಯದ ಪರವಾಗಿರಲಿ ಎಂದು ಸ್ಪೀಕರ್ ಖಾದರ್ ಸಲಹೆ

ಕಾನಿಪ ಸಂಘದ 40ನೇ ರಾಜ್ಯ ಸಮ್ಮೇಳನಕ್ಕೆ ವಿಧ್ಯುಕ್ತ ತೆರೆ

ಬೀದರ್: ಪತ್ರಿಕೋದ್ಯಮವು ಸಾಮಾಜಿಕ ಜವಾಬ್ದಾರಿಯ ಪ್ರತೀಕವಾಗಿದೆ ಎಂದು ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಹೇಳಿದರು.

ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೀದರ ಜಿಲ್ಲಾ ಘಟಕದಿಂದ ನಗರದ ಝೀರಾ ಕನ್ವೆನ್ಷನ್ ಹಾಲ್‌ನಲ್ಲಿ 2 ದಿನ ನಡೆದ 40ನೇ ರಾಜ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಸಮಾಜ, ದೇಶ ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸುವ ಪತ್ರಕರ್ತರ ಪೆನ್ನು ಸದಾಕಾಲ ಸತ್ಯದ ಪರವಾಗಿರಬೇಕು. ನಮ್ಮ ದೇಶದ ಪ್ರಬಲ ಶಕ್ತಿಯಾದ ಪತ್ರಿಕೋದ್ಯಮ, ಪತ್ರಕರ್ತರು, ಈ ದೇಶದ ಎಲ್ಲ ಜನರು ಒಂದೇ ಎಂದು ಹೇಳುವ ಅವಶ್ಯಕತೆಯಿದೆ ಎಂದರು. ಪ್ರತಿಯೊಬ್ಬರಿಗೂ ಪ್ರೇರಣಾದಾಯಕವಾದ ಬರವಣಿಗೆಯ ಶಕ್ತಿಯನ್ನು ಪತ್ರಕರ್ತರು ಹೊಂದಬೇಕು ರಾಜಕೀಯ ಮತ್ತು ಪತ್ರಿಕೋದ್ಯಮ ಸಮಾಜದ ಎರಡು ಕಣ್ಣುಗಳಿದ್ದಂತೆ. ಪತ್ರಿಕೆಗಳು ಬರೀ ಟೀಕೆ, ಹೊಗಳಿಕೆಗೆ ಮಾತ್ರ ಸೀಮಿತವಾಗ ಬಾರದು. ಉತ್ತಮವಾಗಿ ಕೆಲಸ ಮಾಡುವರಿಗೆ ಪ್ರೇರಣೆಯಾಗುವ ಕಾರ್ಯ ಮಾಡಬೇಕು. ಮತ್ತು ಯಾವಾಗಲು ಪ್ರಾಮಾಣಿಕ ಸತ್ಯವನ್ನು ಪ್ರತಿಪಾದಿಸಬೇಕು ಎಂದು ಅವರು ತಿಳಿಸಿದರು. ಮಾಜಿ ಸಚಿವ ಬಂಡೆಪ್ಪ ಖಾಶೆಂಪೂರ. ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಡಾ.ಸಿದ್ದು ಪಾಟೀಲ, ಮಾರುತಿರಾವ್ ಮೂಳೆ, ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ ಸಿ. ಲೋಕೇಶ್. ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಸ್ವಾಗತಿಸಿದರು. ಸಮಾರಂಭದ ಬಳಿಕ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೀದರ್‌ನಲ್ಲಿ ನಡೆದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಸಮಾರೋಪ ಸಮಾರಂಭದಲ್ಲಿ ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಮಾತನಾಡಿದರು.

ಪತ್ರಿಕೋದ್ಯಮವು ಈಗ ಹೊಸ ತಿರುವು ಪಡೆದಿದೆ. ಮಾಧ್ಯಮವನ್ನು ಕಪಿಮುಷ್ಟಿಯಲ್ಲಿಡಬಾರದು. ವಿರೋಧ ಪಕ್ಷದ ಕಾರ್ಯವನ್ನು ಪತ್ರಿಕೋದ್ಯಮ ಮಾಡಬೇಕು. ಎದೆಗಾರಿಕೆಯಿಂದ, ಧೈರ್ಯದಿಂದ ವೃತ್ತಿ ಮಾಡಿದಾಗ ಪತ್ರಿಕಾವೃತ್ತಿಯ ಘನತೆ ಹೆಚ್ಚಲಿದೆ.

– ಆರ್.ಅಶೋಕ್, ವಿರೋಧ ಪಕ್ಷದ ನಾಯಕ

ಬೀದರ್ ಜಿಲ್ಲೆಯು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಇಲ್ಲಿ ಪತ್ರಕರ್ತರ ರಾಜ್ಯ ಸಮ್ಮೇಳನ ನಡೆದಿರುವುದು ಸಂತಷ ತಂದಿದೆ. ತನಿಖಾ ಮಾಧ್ಯಮವು ಈಗ ಮರೆಯಾಗುತ್ತಿದೆ. ಈ ಬಗ್ಗೆ ಪತ್ರಕರ್ತರು ಅವಲೋಕನ ಮಾಡಬೇಕು. ಪತ್ರಕರ್ತರಿಗೆ ಸಂರಕ್ಷಣೆ ಕೊಡುವ ವಿಷಯದಲ್ಲಿ ಸರಕಾರ ಬದ್ಧವಾಗಿದೆ. ಪತ್ರಕರ್ತರು ಮಾಧ್ಯಮದ ಪಾವಿತ್ರ್ಯತೆ ಕಾಪಾಡಬೇಕು. ಈ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡಬೇಕು.

-ಈಶ್ವರ ಖಂಡ್ರೆ, ಸಚಿವ

ರಾಯಚೂರಿನಲ್ಲಿ 41ನೇ ಸಮ್ಮೇಳನ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 41ನೇ ಪತ್ರಕರ್ತರ ರಾಜ್ಯ ಸಮ್ಮೇಳನವು ರಾಯಚೂರಿನಲ್ಲಿ ನಡೆಯಲಿದೆ ಎಂದು ನಿರ್ಧರಿಸಲಾಯಿತು. ಸಮ್ಮೇಳನದ ಎರಡನೇ ದಿನ ಭಾನುವಾರ ನಡೆದ ಪ್ರತಿನಿಧಿಗಳ ಸಮಾವೇಶ/ಸರ್ವ ಸದಸ್ಯರ ಸಭೆಯಲ್ಲಿ ಒಮ್ಮತದ ನಿರ್ಧಾರ ಮಾಡಲಾಯಿತು. ರಾಯಚೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲಾ ಘಟಕಗಳು ಮುಂದಿನ ರಾಜ್ಯ ಸಮ್ಮೇಳನ ಆಯೋಜನೆಗೆ ಮುಂದೆ ಬಂದಿದ್ದವು. ರಾಯಚೂರಿನಲ್ಲಿ ಸಮ್ಮೇಳನ ನಡೆಸಲು ನಿರ್ಣಯಿಸಲಾಗಿದೆ ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ಘೋಷಿಸಿದರು. ಸದಸ್ಯರ ಗುರುತಿನ ಚೀಟಿ ಅವಧಿ ಮೂರು ವರ್ಷಕ್ಕೆ ವಿಸ್ತರಣೆ ಮಾಡಬೇಕು. ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ವಿತರಣೆಯಲ್ಲಿನ ಸಮಸ್ಯೆ ಬಗೆಹರಿಸಬೇಕು. ನಕಲಿ ಪತ್ರಕರ್ತರ ಹಾವಳಿ ತಪ್ಪಿಸಬೇಕು ಎಂಬ ಒತ್ತಾಯವನ್ನು ಸರ್ವ ಸದಸ್ಯರು ಮಾಡಿದರು.

ಸಮಾಚಾರ ಸಣ್ಣದಲ್ಲ

ಹಾಸನ: ಕಾಡಾನೆ ದಾಳಿಗೆ ರೈತ ಬಲಿ

ಹಾಸನ: ಕಾಡಾನೆ ದಾಳಿಗೆ ಮತ್ತೊಬ್ಬ ರೈತ ಬಲಿಯಾಗಿರುವ ಘಟನೆ ಜಿಲ್ಲೆಯ ಬೇಲೂರು ತಾಲೂಕಿನ ಅರೆಹಳ್ಳಿ ಹೋಬಳಿ ವ್ಯಾಪ್ತಿಯ ಕಣಗುಪ್ಪೆ ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ನಡೆದಿದೆ. ರಾಜಶೇಖರ್ (65) ಎಂಬವರು ಕಾಡಾನೆ ದಾಳಿಯಿಂದ ಮೃತಪಟ್ಟವರು. ಎಂದಿನಂತೆ ಭಾನುವಾರ ಮುಂಜಾನೆ ಕಾಫಿ ತೋಟದ ಕೆಲಸಕ್ಕೆಂದು ರಾಜಶೇಖರ್ ಮನೆಯಿಂದ ತೆರಳಿದ್ದರು. ತೋಟದಲ್ಲಿ ಕೆಲಸ ಮಾಡಲು ಮುಂದಾದಾಗ, ಹಿಂದಿನಿಂದ ಬಂದ ಕಾಡಾನೆಯೊಂದು ಏಕಾಏಕಿ ದಾಳಿ ನಡೆಸಿದೆ. ಸೊಂಡಿಲಿನಿಂದ ರೈತನನ್ನು ಎತ್ತಿ ಬಿಸಾಡಿ, ನಂತರ ತುಳಿದು ಸಾಯಿಸಿರುವುದಾಗಿ ತಿಳಿದುಬಂದಿದೆ. ಸುದ್ದಿ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಬೇಲೂರು ವಲಯ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಸ್ತೆ ಅಪಘಾತದಲ್ಲಿ ಕಿರುತೆರೆ ನಟ ಸಾವು

ಮಡಿಕೇರಿ: ತಡರಾತ್ರಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಚಲನಚಿತ್ರ ಹಾಗೂ ಕಿರುತೆರೆ ಸಹ ಕಲಾವಿದ ಹರೀಶ್ (40) ದಾರುಣವಾಗಿ ಸಾವನ್ನಪ್ಪಿರುವ ಘಟನೆ ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಆನೆಕಾಡು ಅರಣ್ಯ ಪ್ರದೇಶದ ಬಳಿ ನಡೆದಿದೆ. ರಾಷ್ಟ್ರೀಯ ಹೆದ್ದಾರಿ 275 ರ ಆನೆಕಾಡು ಸಮೀಪದಲ್ಲಿ ಈ ಭೀಕರ ಅಪಘಾತ ಸಂಭವಿಸಿದೆ.

ನಿನ್ನೆ ಕೆಲಸ ಮುಗಿಸಿಕೊಂಡು ತಡರಾತ್ರಿ ಹರೀಶ್ ಅವರು ಕುಶಾಲನಗರದಿಂದ ತಮ್ಮ ಸ್ವಗ್ರಾಮವಾದ ಹೊಸಕೋಟೆಗೆ ಕಾರಿನಲ್ಲಿ ತೆರಳುತ್ತಿದ್ದರು. ಈ ವೇಳೆ ರಸ್ತೆ ಬದಿಯಲ್ಲಿ ನಿಂತಿದ್ದ ಟ್ಯಾಂಕರ್‌ಗೆ ಕಾರು ವೇಗವಾಗಿ ಡಿಕ್ಕಿ ಹೊಡೆದಿದೆ. ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಹರೀಶ್ ಅವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಮೃತ ಹರೀಶ್ ಅವರು ಬಹುಮುಖಿ ಪ್ರತಿಭೆಯಾಗಿದ್ದರು. ವೃತ್ತಿಜೀವನದ ಜತೆಗೆ ಹಲವು ಕನ್ನಡ ಸಿನಿಮಾಗಳಲ್ಲಿ ಸಹ ಕಲಾವಿದನಾಗಿ ಮತ್ತು ಕಿರುತೆರೆಯ ಜನಪ್ರಿಯ ಧಾರಾವಾಹಿಗಳಲ್ಲಿ ನಟಿಸುವ ಮೂಲಕ ತಮ್ಮನ್ನು ಗುರುತಿಸಿಕೊಂಡಿದ್ದರು.

ಸಾವಿನಲ್ಲೂ ಸಾರ್ಥಕತೆ ಮೆರೆದ ಮೋನಿಕಾ

ಹಾಸನ: ಅಪಘಾತದಿಂದ ಮೆದುಳು ನಿಷ್ಕ್ರಿಯವಾಗಿದ್ದ ಮಗಳ ಅಂಗಾಂಗ ದಾನ ಮಾಡಿ ಪೋಷಕರು ಸಾವಿನಲ್ಲೂ ಸಾರ್ಥಕತೆ ಮೆರೆದಿರುವ ಘಟನೆ ಹಾಸನ ಜಿಲ್ಲೆಯಲ್ಲಿ ನಡೆದಿದೆ. ಅರಸೀಕೆರೆ ತಾಲೂಕಿನ ಕಾರೇಹಳ್ಳಿ ಗ್ರಾಮದ ನಿವಾಸಿ ಮೋನಿಕಾ (18) ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದರು. ಏಪ್ರಿಲ್ 5 ರಂದು ಸಂಜೆ ಸುಮಾರು 6.30 ರ ಸಮಯದಲ್ಲಿ ಬಿ.ಎಚ್.ರಸ್ತೆಯ ಎಪಿಎಂಸಿ ಮಾರುಕಟ್ಟೆ ಸಮೀಪ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ತಲೆಗೆ ತೀವ್ರ ಪೆಟ್ಟಾಗಿತ್ತು. ಮೆದುಳು ನಿಷ್ಕ್ರಿಯಗೊಂಡು ಯುವತಿ ಸ್ಥಿತಿ ಗಂಭೀರವಾಗಿತ್ತು. ಮಗಳ ಅಂಗಾಂಗ ದಾನಕ್ಕೆ ಪೋಷಕರು ಒಪ್ಪಿಗೆ ನೀಡಿದ್ದು, 5 ಜೀವಗಳಿಗೆ ಹೊಸ ಬೆಳಕು ನೀಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

ದಿನ ವಿಶೇಷ

13 ಏಪ್ರಿಲ್ 2026 ಸೋಮವಾರ

» ಸೂರ್ಯೋದಯ	: 6-25
» ಸೂರ್ಯಾಸ್ತ	: 6-35
» ತಿಥಿ	: ಏಕಾದಶಿ
» ನಕ್ಷತ್ರ	: ಧನಿಷ್ಠ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಕೃಷ್ಣಪಕ್ಷ

ಹೈಕಮಾಂಡ್ ಜವಾಬ್ದಾರಿ ಕೊಟ್ಟರೆ ನಿಭಾಯಿಸುವೆ | ಶಾಸಕ, ಕ್ರೆಡೆಲ್ ಅಧ್ಯಕ್ಷ ಟಿ.ಡಿ. ರಾಜೇಗೌಡ ವಿಶೇಷ ಸಂದರ್ಶನ

ಶೃಂಗೇರಿ ಕ್ಷೇತ್ರದ ಅಭಿವೃದ್ಧಿಯೇ ನನ್ನ ಧ್ಯೇಯ

ಕ್ಷೇತ್ರದ, ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕ ಜೀವನ ಸಾಗಿಸುತ್ತಿದ್ದೇವೆ. ಶಾಸಕನಾಗಿ ನನ್ನ ಕ್ಷೇತ್ರದ ಅಭಿವೃದ್ಧಿಯೇ ಪ್ರಮುಖ ಧ್ಯೇಯ. ರಾಜ್ಯ ರಾಜಕೀಯದಲ್ಲಿ ಪಕ್ಷದ ಹೈಕಮಾಂಡ್ ನೀಡುವ ಯಾವುದೇ ಜವಾಬ್ದಾರಿಯನ್ನು ನಿಭಾಯಿಸಲು ಸಿದ್ಧ ಎಂದು ಶೃಂಗೇರಿ ಶಾಸಕ, ಕ್ರೆಡೆಲ್ ಅಧ್ಯಕ್ಷ ಟಿ.ಡಿ. ರಾಜೇಗೌಡ ತಿಳಿಸಿದ್ದಾರೆ. ವಿಶ್ವವಾಣಿಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ರಾಜಕೀಯವಾಗಿ ನಡೆದು ಬಂದ ಹಾದಿ, ಕ್ಷೇತ್ರದ ಅಭಿವೃದ್ಧಿ, ಅನುದಾನ ಹೊಸ ಯೋಜನೆ ಸೇರಿದಂತೆ ವಿವಿಧ ಅಂಶಗಳ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

- **ನಿಮ್ಮ ರಾಜಕೀಯ ಜೀವನವನ್ನು ಹಿಂದಿರುಗಿ ನೋಡಿದರೆ ಏನನಿಸುತ್ತದೆ?**

ನಾನು ಮೂಲತಃ ಕೃಷಿಕನಾಗಿದ್ದೆ. ಕಬ್ಬು ತೋಟಗಳನ್ನು ಮಾರಿ ಹೊಸದಾಗಿ ಕೃಷಿ ಜೀವನ ಆರಂಭಿಸಿದ್ದೆ. ಇದೇ ಸಮಯದಲ್ಲಿ ಜಿಲ್ಲಾ ಪಂಚಾಯತ್ ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಹಲವು ಪ್ರಯತ್ನಗಳನ್ನು ನಡೆಸಿದ್ದೆ. ಮೊದಲಿಗೆ ಆಸಕ್ತಿ ಇರದಿದ್ದರೂ, ಸ್ಥಳೀಯ ಮುಖಂಡರಾದ ಎಸ್.ಯು. ಮಂಜುನಾಥ್, ಎಚ್. ಆರ್. ಶಂಕರ್, ವಿ.ಎಲ್. ಪ್ರಧಾನ ಶೇಖರ್ ಸೇರಿದಂತೆ ಹಲವರ ಒತ್ತಾಯದ ಮೇರೆಗೆ ಚುನಾವಣೆಗೆ ಸ್ಪರ್ಧಿಸಿದೆ. ಜನರ ಬೆಂಬಲದಿಂದ ನಿರೀಕ್ಷೆಗೂ ಮೀರಿ ಗೆಲುವು ಸಾಧಿಸಿ, ನಂತರ ಜನತಾ ದಳದೊಂದಿಗೆ ರಾಜಕೀಯ ಜೀವನ ಆರಂಭಿಸಿದೆ. ಐದು ವರ್ಷಗಳ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡಿ ಸೇತುವೆ, ಚೆಕ್ ಡ್ಯಾಮ್, ಕುಡಿಯುವ ನೀರಿನ ಯೋಜನೆಗಳು ಸೇರಿದಂತೆ ಅನೇಕ ಮೂಲಭೂತ ಸೌಕರ್ಯಗಳ ಅಭಿವೃದ್ಧಿಪಡಿಸಿದ್ದರಿಂದ ಆ ಕಾರ್ಯ ಪದ್ಧತಿ ಜನರಲ್ಲಿ ವಿಶ್ವಾಸ ಮೂಡಿಸಿತು.

ರಾಜಕೀಯ ಪಥದಲ್ಲಿ ಹಲವು ತಿರುವುಗಳನ್ನು ಕಂಡಿರುವೆ. ಜೆಡಿಎಸ್‌ನಿಂದ ಹೊರಬಂದು, ಕಾಂಗ್ರೆಸ್‌ಗೆ ಸೇರಿ ಜನಸೇವೆ ಮುಂದುವರಿಸಿದೆ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಪ್ರಮುಖ ನಾಯಕರ ಮಾರ್ಗದರ್ಶನದಲ್ಲಿ ರಾಜಕೀಯವಾಗಿ ಮತ್ತಷ್ಟು ಬಲ ಪಡೆದುಕೊಂಡೆ. ಶೃಂಗೇರಿ ಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳು ಸ್ಥಳೀಯ ಜನರ ಜೀವನಮಟ್ಟವನ್ನು ಉತ್ತಮಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಆರಂಭದಲ್ಲಿ ಯಾವುದೇ ವಿಶೇಷ ಯೋಜನೆಗಳಿಲ್ಲದೇ ಸರಳವಾಗಿ ಸಾರ್ವಜನಿಕರ ಜತೆ ಸಂಪರ್ಕ ಸಾಧಿಸಿದ ನಾಯಕತ್ವವು, ನಂತರ ಹಂತ ಹಂತವಾಗಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ. ಹಳೆಯ ಕಾಲದಲ್ಲಿ ನಿರ್ಮಾಣಗೊಂಡಿದ್ದ ಕಾಲುವೆಗಳು ಮುಚ್ಚಿಕೊಂಡು ರೈತರಿಗೆ ನೀರಿನ ಕೊರತೆ ಉಂಟಾಗಿತ್ತು. ಈ ಸಮಸ್ಯೆಯನ್ನು ಗುರುತಿಸಿ ಕಾಲುವೆಗಳ ಶುದ್ಧೀಕರಣ ಹಾಗೂ ಪುನರ್‌ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದ್ದು, ಕೃಷಿಗೆ ನೀರಿನ ಹರಿವು ಸುಗಮಗೊಂಡಿದೆ. ಇದರಿಂದ ಸ್ಥಳೀಯ ರೈತರಿಗೆ ದೊಡ್ಡ ಮಟ್ಟದಲ್ಲಿ ನೆರವು ಲಭಿಸಿದೆ. ರಸ್ತೆ ನಿರ್ಮಾಣ, ಬಸ್ ಸೌಲಭ್ಯ, ಕುಡಿಯುವ ನೀರು ಸೇರಿದಂತೆ ಅನೇಕ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ.

- **ರಾಜಕೀಯದಲ್ಲಿ ನೀವು ಎದುರಿಸಿದ ಸವಾಲುಗಳೇನು?**

ಮೊದಲ ಅವಧಿಯಲ್ಲಿ ಮಲ್ಲಾಡ ಬುದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ, ಮುಖ್ಯಮಂತ್ರಿಗಳನ್ನು ಮನವೊಲಿಸಿ ಪ್ರತಿಯೊಬ್ಬ ಶಾಸಕರಿಗೂ ಒಂದು ಕೋಟಿ ರುಪಾಯಿ ಅನುದಾನ ತಂದುಕೊಟ್ಟದ್ದು ಮಹತ್ವದ ಸಾಧನೆ. ರಾಜಕೀಯ ಜಂಜಾಟ ಮತ್ತು ಶಾಸಕರ ಖರೀದಿ ಯತ್ನಗಳ ನಡುವೆಯೂ ಪಕ್ಷದ ನಿಷ್ಠೆಯನ್ನು ಕಾಯ್ದುಕೊಂಡು ಯಾವುದೇ ಒತ್ತಡಕ್ಕೆ ಮಣಿಯದೇ ಕಾರ್ಯನಿರ್ವಹಿಸಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ಸುಮಾರು 22 ಕೋಟಿ ರು. ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿಸಿಕೊಂಡರೂ, ರಾಜಕೀಯ ದ್ವೇಷದಿಂದಾಗಿ ಅದನ್ನು ಬೇರೆ ಕ್ಷೇತ್ರಕ್ಕೆ ವರ್ಗಾವಣೆ ಮಾಡಲಾಗಿದೆ. ಒಂದು ವರ್ಷ ನಾಲ್ಕು ತಿಂಗಳ ಅವಧಿಯಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದೇನೆ. ನಂತರದ ಅವಧಿಯಲ್ಲಿ ವಿರೋಧಿಗಳಿಂದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ ಉಂಟಾಯಿತು, ಅಪಪ್ರಚಾರಗಳು ನಡೆದವು ಮತ್ತು ಅನುದಾನ ಬಿಡುಗಡೆಗೂ ತೊಂದರೆ ತಂದರು. ಈ ಎಲ್ಲ ಅಡೆತಡೆಗಳ ನಡುವೆಯೂ ಜನರ ವಿಶ್ವಾಸದಿಂದ ಮತ್ತೆ ಗೆಲುವು ಸಾಧಿಸಿದೆ.

ಇದೀಗ ನಮ್ಮ ಕ್ಷೇತ್ರದಲ್ಲಿ ಮಾನವ-ಪ್ರಾಣಿ ಸಂಘರ್ಷ, ಒತ್ತುವರಿ ಸಮಸ್ಯೆಗಳು ಮತ್ತು ಅತಿವೃಷ್ಟಿಯಿಂದ ಉಂಟಾದ ಹಾನಿ ಸೇರಿದಂತೆ ಹಲವು ಸಮಸ್ಯೆಗಳು ಎದುರಾಗಿವೆ. ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಪ್ರಾಮಾಣಿಕವಾಗಿ ಪರಿಹರಿಸುವ ಕೆಲಸ ಮಾಡುತ್ತಿದ್ದೇನೆ. ರಾಜ್ಯ ಸರಕಾರದಿಂದ ಸಂಪೂರ್ಣ ಸಹಕಾರ ದೊರೆಯುತ್ತಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಉತ್ತಮ ಸ್ಪಂದನೆ ಸಿಕ್ಕಿದ್ದು, ಕ್ಷೇತ್ರದ ಅಭಿವೃದ್ಧಿಗೆ ವೇಗ ಬಂದಿದೆ. ತಮ್ಮ ಮೊದಲ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ, ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಸುಧಾರಣೆಯಲ್ಲಿ ಸಹಕಾರ ದೊರಕಿತ್ತು.



> ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾವುಕರಾಗಿ ಕಣ್ಣೀರು ಹಾಕಿದ್ದು ಯಾವುದೇ ರಾಜಕೀಯ ಲಾಭಕ್ಕಾಗಿ ಅಲ್ಲ. ನಿರಂತರ ಕಿರುಕುಳ ಮತ್ತು ಒತ್ತಡದಿಂದ ಭಾವನಾತ್ಮಕವಾಗಿ ಆ ಕ್ಷಣದಲ್ಲಿ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಮ್ಮ ನಡುವಿನ ರಾಜಕೀಯ ಭಿನ್ನಾಭಿಪ್ರಾಯಗಳಿಂದ ಕ್ಷೇತ್ರದ ಅಭಿವೃದ್ಧಿಗೆ ಹಾನಿಯಾಗಬಾರದು. ಜನರ ಹಿತವೇ ಮೊದಲ ಆದ್ಯತೆ. ಮುಂದಿನ ಚುನಾವಣೆ ಸ್ಪರ್ಧಿಸಬೇಕಾ ಬೇಡವೇ ಎನ್ನುವ ತೀರ್ಮಾನವನ್ನು ಜನರು ಮತ್ತು ಪಕ್ಷದ ಹೈಕಮಾಂಡ್‌ಗೆ ಬಿಟ್ಟಿದ್ದೇನೆ. ಪಕ್ಷ ಟಿಕೆಟ್ ಕೊಟ್ಟರೆ ಸ್ಪರ್ಧೆ ಮಾಡುತ್ತೇನೆ, ಇಲ್ಲ ಹೊಸಬರಿಗೆ ಅವಕಾಶ ಕೊಡಲು ಸಹ ಸಿದ್ಧನಿದ್ದೇನೆ.
>
> - ಟಿ.ಡಿ ರಾಜೇಗೌಡ, ಶಾಸಕ, ಶೃಂಗೇರಿ

ಸಂದರ್ಶನದ ಪ್ರಮುಖಾಂಶ

- ಚಿಕ್ಕಮಗಳೂರಿನಲ್ಲಿ ಪಕ್ಷದ ಬಲ ಹೆಚ್ಚಿದ್ದು, ಕಳೆದ ಚುನಾವಣೆಯಲ್ಲಿ ಕ್ಲೀನ್ ಸ್ವೀಪ್ ಸಾಧನೆ ಸಾಧ್ಯವಾಗಿದೆ.
- ರಾಜ್ಯ ರಾಜಕೀಯದಲ್ಲಿ ಹೈಕಮಾಂಡ್ ಏನೇ ಜವಾಬ್ದಾರಿ ನೀಡಿದರೂ ಅದನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತೇನೆ.
- ನಾಯಕತ್ವ ಬದಲಾವಣೆ ಹೈಕಮಾಂಡ್ ತೀರ್ಮಾನ. ನಾವು ಅಭಿವೃದ್ಧಿ ಕೆಲಸಗಳ ಕಡೆ ಗಮನ ಕೊಡುತ್ತೇವೆ.
- ಸುಳ್ಳು ಅಪಪ್ರಚಾರಗಳಿಂದ ಮನಸ್ಸಿಗೆ ನೋವಾಗುತ್ತದೆ. ಆದರೆ ಜನಸೇವೆಯೇ ನನ್ನ ಉದ್ದೇಶ.
- ಜನಸೇವೆಗೆ ನಮ್ಮ ಆಸ್ತಿಗಳನ್ನು ಬಳಕೆ ಮಾಡಿದ್ದೇವೆ. ಜಿಲ್ಲಾ ಪಂಚಾಯತ್ ಅಧ್ಯಕ್ಷನಾಗಿದ್ದಾಗಿನಿಂದ ಪಡೆದ ಟಿಎ/ಡಿಎ ಹಣವನ್ನು ಅನಾಥ ಮಕ್ಕಳ ಶಿಕ್ಷಣಕ್ಕೆ ನೀಡುತ್ತಿದ್ದೇನೆ.
- ರಾಜಕೀಯದಲ್ಲಿ ಧರ್ಮ ತರಬಾರದು. ಎಲ್ಲ ಧರ್ಮಗಳನ್ನೂ ಸಮಾನವಾಗಿ ಗೌರವಿಸುವುದು ನಮ್ಮ ಕರ್ತವ್ಯ.
- ದೇಶದಲ್ಲಿ ಜಾತಿ-ಧರ್ಮಗಳ ನಡುವೆ ವಿಭಜನೆ ಸೃಷ್ಟಿಸುವ ರಾಜಕೀಯ ತಪ್ಪು.

ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಬಗ್ಗೆ ಕನಸೇನು?

ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವಾಗ, ಪಾವಗಡದಲ್ಲಿ 2000 ಮೆಗಾವಾಟ್ ಸೌರ ವಿದ್ಯುತ್ ಯೋಜನೆಗೆ ಚಾಲನೆ ನೀಡಲಾಗುತ್ತಿದೆ. ರಾಜ್ಯದ ವಿದ್ಯುತ್ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು 2030ರೊಳಗೆ 50 ಗಿಗಾವಾಟ್ ವಿದ್ಯುತ್ ಉತ್ಪಾದನೆ ಗುರಿ ಹೊಂದಲಾಗಿದ್ದು, ಇದಕ್ಕಾಗಿ 27 ಸಬ್‌ಸ್ಟೇಷನ್‌ಗಳನ್ನು ಗುರುತಿಸಿ, ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಬಲಪಡಿಸುವ ಕೆಲಸ ನಡೆಯುತ್ತಿದೆ. ಜತೆಗೆ ಬ್ಯಾಟರಿ ಸಂಗ್ರಹ ವ್ಯವಸ್ಥೆ ಮೂಲಕ ವಿದ್ಯುತ್ ಸಂಗ್ರಹಿಸಿ ಪೀಕ್ ಅವಧಿಯಲ್ಲಿ ಬಳಸುವ ಯೋಜನೆ ರೂಪಿಸಲಾಗಿದೆ. ರೈತರಿಗೆ ಸಹಾಯವಾಗುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಹಯೋಗದಲ್ಲಿ ಕುಸುಮ್ ಯೋಜನೆಯಡಿ 40,000 ಪಂಪ್‌ಸೆಟ್‌ಗಳನ್ನು ವಿತರಿಸಲಾಗುತ್ತಿದೆ. ಮುಂದಿನ ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿ 24★7 ವಿದ್ಯುತ್ ಪೂರೈಕೆ ನೀಡುವ ಗುರಿ ಹೊಂದಿದ್ದು, ವಿಶೇಷವಾಗಿ ರೈತರಿಗೆ ದಿನದ ವೇಳೆ ನಿರಂತರ ವಿದ್ಯುತ್ ಒದಗಿಸಲು ಯೋಜನೆಗಳು ರೂಪಿಸಲಾಗುತ್ತಿವೆ.

ವಿಶ್ವವಾಣಿ ಸಂದರ್ಶನ

- **ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಏನು ಹೇಳಲು ಬಯಸುವಿರಿ?**

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಾನು ಬದ್ಧನಾಗಿದ್ದೇನೆ. ಆರೋಗ್ಯ, ಶಿಕ್ಷಣ, ನೀರಾವರಿ, ರಸ್ತೆ ಹಾಗೂ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಭಾರಿ ಪ್ರಮಾಣದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಆಲೋಚನೆಯಿದೆ. ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆ ಇಡಲಾಗಿದ್ದು, ಶೃಂಗೇರಿಯಲ್ಲಿ 100 ಹಾಸಿಗೆಗಳ ಆಧುನಿಕ ಆಸ್ಪತ್ರೆ ನಿರ್ಮಾಣಕ್ಕೆ ಸುಮಾರು 37.65 ಕೋಟಿ ರು. ಅನುದಾನ ಮಂಜೂರಾಗಿದೆ. ಈಗಾಗಲೇ ಜಾಗ ಗುರುತಿಸಿ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ. ಕೊಪ್ಪದಲ್ಲಿ ತಾಯಿ-ಮಕ್ಕಳ ಆಸ್ಪತ್ರೆಯನ್ನು 12 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ. ಜಯಪುರದಲ್ಲಿ 12.40 ಕೋಟಿ ವೆಚ್ಚದಲ್ಲಿ 50 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಗೊಂಡಿದೆ. ಕೊಪ್ಪದ ಹಳೆಯ ಆಸ್ಪತ್ರೆಯ ದುರಸ್ತಿಗೆ 1.47 ಕೋಟಿ ರು. ವೆಚ್ಚ ಮಾಡಲಾಗಿದೆ. ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ಶೃಂಗೇರಿ, ಕೊಪ್ಪ ಹಾಗೂ ಎನ್. ಆರ್.ಪುರದಲ್ಲಿ ಸ್ಥಾಪಿಸಲಾಗಿದ್ದು, ಕೇಂದ್ರ ಸರಕಾರದಿಂದ ರಿಫಿಲ್ಲಿಂಗ್ ಘಟಕಕ್ಕೂ ಅನುಮೋದನೆ ದೊರೆತಿದೆ. ಜತೆಗೆ ಶೃಂಗೇರಿ ಮತ್ತು ಬಾಳೆಹೊನ್ನೂರಿನಲ್ಲಿ ಹೊಸ ಡಯಾಲಿಸಿಸ್ ಕೇಂದ್ರಗಳನ್ನು ಆರಂಭಿಸಲಾಗಿದೆ.

ಶಿಕ್ಷಣ ಕ್ಷೇತ್ರದಲ್ಲೂ ಪ್ರಮುಖ ಅಭಿವೃದ್ಧಿ ನಡೆಯುತ್ತಿದೆ. ಕೊಪ್ಪ ತಾಲೂಕಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಮಂಜೂರಾಗಿದೆ. ಹರಿಹರಪುರ ಮತ್ತು ಜಯಪುರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳು ಸುಮಾರು 30-34 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಲಿವೆ. ಕೊಪ್ಪ ಪ್ರಥಮ ದರ್ಜೆ ಕಾಲೇಜಿನ ಒಳಾಂಗಣ ಕ್ರೀಡಾಂಗಣಕ್ಕೆ 2.5 ಕೋಟಿ ರು. ವೆಚ್ಚ ಮಾಡಲಾಗಿದೆ. ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಮುಖ್ಯಮಂತ್ರಿಗಳಿಂದ 50 ಕೋಟಿ ರು., 22 ಕೋಟಿ ರು. ಹಾಗೂ 10 ಕೋಟಿ ರು. ವಿಶೇಷ ಅನುದಾನ ದೊರೆತಿದ್ದು, ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ನರಸಿಂಹರಾಜಪುರ ರಸ್ತೆ ಅಗಲೀಕರಣಕ್ಕೆ 60 ಕೋಟಿ ರು. ಮಂಜೂರಾಗಿದೆ. ಅತಿವೃಷ್ಟಿ ಹಾನಿ ಪರಿಹಾರಕ್ಕೆ 14 ಕೋಟಿ ರು. ಹಾಗೂ ಹೆಚ್ಚುವರಿ 10 ಕೋಟಿ ರು. ಬಿಡುಗಡೆಯಾಗಿ, ಭೂಕುಸಿತ ಪ್ರದೇಶಗಳಲ್ಲಿ ಪುನರ್ ನಿರ್ಮಾಣ ಕಾರ್ಯಗಳು ನಡೆಯುತ್ತಿವೆ. ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಸುಮಾರು 75 ಕೋಟಿ ರು. ವೆಚ್ಚ ಮಾಡಲಾಗಿದೆ. ಹೊನ್ನಕೆರೆಯ ಸೇತುವೆ ನಿರ್ಮಾಣಕ್ಕೆ 23 ಕೋಟಿ ರು. ವೆಚ್ಚವಾಗಿದ್ದು, ಶೀಘ್ರದಲ್ಲೇ ಲೋಕಾರ್ಪಣೆ ಆಗಲಿದೆ. ಶೃಂಗೇರಿ ಮತ್ತು ಬಾಳೆಹೊನ್ನೂರಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೂ ಒತ್ತು ನೀಡಲಾಗಿದ್ದು, 4 ಕೋಟಿ ರು. ವೆಚ್ಚದಲ್ಲಿ ಪ್ರವಾಸಿ ಮಂದಿರ ನಿರ್ಮಾಣವಾಗುತ್ತಿದೆ.

- **ಮಾನವ-ಪ್ರಾಣಿ ಸಂಘರ್ಷದ ಕುರಿತು ನಿಮ್ಮ ಮಾತು?**

ಮಾನವ-ಪ್ರಾಣಿ ಸಂಘರ್ಷ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕ್ಷೇತ್ರದಲ್ಲಿ ಆರು ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲಾಗಿದೆ. ಮತ್ತೊಂದು ಆನೆಗೆ ಅನುಮತಿ ದೊರೆತಿದೆ. ಕಾಡುಕೋಣಗಳ ಹಾವಳಿ ತೀವ್ರವಾಗಿದ್ದು, ಈಗಾಗಲೇ 13-14 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇಂತಹ ಘಟನೆಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ 20 ಲಕ್ಷ ರು. ಪರಿಹಾರ ಹಾಗೂ ಶಾಶ್ವತ ಗಾಯಗೊಂಡವರಿಗೆ 10 ಲಕ್ಷ ರು. ಪರಿಹಾರ ನೀಡಲಾಗುತ್ತಿದೆ. ಚಿಕಿತ್ಸಾ ವೆಚ್ಚವನ್ನು ಸರಕಾರವೇ ಭರಿಸುತ್ತಿದ್ದು, ಗುಣಮಟ್ಟದ ಚಿಕಿತ್ಸೆ ಒದಗಿಸಲಾಗುತ್ತಿದೆ.

ಕಾಡುಕೋಣಗಳ ನಿಯಂತ್ರಣಕ್ಕಾಗಿ ಬೇರೆ ರಾಜ್ಯಗಳಿಂದ ತಜ್ಞರನ್ನು ಕರೆಸಿ ತರಬೇತಿ ನೀಡಲಾಗುತ್ತಿದೆ. ಶೀಘ್ರದಲ್ಲೇ ಅವುಗಳನ್ನು ಸೆರೆಹಿಡಿದು ಕಾಡಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಆರಂಭವಾಗಲಿದೆ. ಪ್ರಾಣಿಗಳ ಹಾವಳಿ ತಡೆಗಟ್ಟಲು 12.77 ಕೋಟಿ ರು. ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್‌ಗಳು, ಆನೆ ಕಂದಕಗಳು ಮತ್ತು ಟೆಂಟಿಕಲ್ ಫೆನ್ಸಿಂಗ್ ನಿರ್ಮಾಣ ನಡೆಯುತ್ತಿದೆ. 7.64 ಕಿಲೋಮೀಟರ್ ವ್ಯಾಪ್ತಿಯಲ್ಲಿ ಈ ಕಾಮಗಾರಿಗಳು ಟೆಂಡರ್ ಹಂತದಲ್ಲಿವೆ. ಎಕೋ-ಸೆನ್ಸಿಟಿವ್ ವಲಯವನ್ನು 10 ಕಿಲೋಮೀಟರ್‌ನಿಂದ 1 ಕಿಲೋಮೀಟರ್‌ಗೆ ಇಳಿಸಲು ರಾಜ್ಯ ಸರಕಾರ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಇದರಿಂದ ಜನರಿಗೆ ಅನುಕೂಲವಾಗಲಿದೆ. ಹಿಂದೆ ನಡೆದ ಭೂ ವರ್ಗಾವಣೆಯ ಪ್ರಕರಣಗಳ ಪರಿಶೀಲನೆ ನಡೆಯುತ್ತಿದ್ದು, ಅಕ್ರಮವಾಗಿ ಕಾಡುಭೂಮಿಗೆ ಸೇರಿಸಿದ ಜಾಗಗಳನ್ನು ಗುರುತಿಸಿ ಹಕ್ಕುಪತ್ರ ನೀಡುವ ಕಾರ್ಯ ನಡೆಯುತ್ತಿದೆ.

ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ ಮುಖ್ಯ ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಎಸ್‌ಎಸ್‌ಜಿಪಿ ಮತ್ತು ಸಿಆರ್‌ಎಫ್ ಯೋಜನೆಗಳಡಿ ಹಾಳಾದ ರಸ್ತೆಗಳನ್ನು ಮರು ಡಾಮರೀಕರಣ ಮಾಡಲು ಯೋಜನೆ ರೂಪಿಸಲಾಗಿದೆ. ಅರಣ್ಯ ಹಕ್ಕು ಕಾಯ್ದೆಯಡಿ ಪಾರಂಪರಿಕವಾಗಿ ಕಾಡಿನಲ್ಲಿ ವಾಸಿಸುವವರಿಗೆ ಹಕ್ಕುಪತ್ರ ನೀಡುವ ಪ್ರಕ್ರಿಯೆ ವಿಸ್ತರಿಸಲು ರಾಜ್ಯ ಸರಕಾರ ಕ್ರಮ ಕೈಗೊಂಡಿದೆ. ಇದನ್ನು ಇತರ ಸಮುದಾಯಗಳಿಗೂ ಅನ್ವಯಿಸಲು ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ನನ್ನ ಮೇಲೆ ನಡೆದ ತನಿಖೆಗಳು, ದಾಳಿಗಳು ಹಾಗೂ ರಾಜಕೀಯ ಕಿರುಕುಳಗಳಿಂದಾಗಿ ಕ್ಷೇತ್ರದಲ್ಲಿ ಹೆಚ್ಚು ಕಾಲ ಕಳೆಯಲು ಸಾಧ್ಯವಾಗಿಲ್ಲ. ಇದಕ್ಕಾಗಿ ಜನರ ಕ್ಷಮೆ ಯಾಚಿಸುವೆ. ನನ್ನ ಮೇಲೆ ಜನರ ವಿಶ್ವಾಸವೇ ನನ್ನ ಶಕ್ತಿ. ಅವರ ನಿರೀಕ್ಷೆಗಳಿಗೆ ಸ್ಪಂದಿಸಲು ಮುಂದಿನ ಎರಡು ವರ್ಷಗಳಲ್ಲಿ ಇನ್ನಷ್ಟು ಶ್ರಮಿಸುತ್ತೇನೆ.

ಆದಿಚುಂಚನಗಿರಿಯ ಗುರುಭೈರವ್ಯ ಮಂದಿರದ ಕುಂಭಾಭಿಷೇಕ ಪ್ರತಿಷ್ಠಾಪನೆಯನ್ನು ಡಾ.ನಿರ್ಮಲಾನಂದನಾಥ ಮಹಾಸ್ವಾಮಿಜಿ ನೆರವೇರಿಸಿದರು. ಈ ವೇಳೆ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ, ರಾಜಕೋಟ್‌ನ ಪರಮಾತ್ಮನಂದ ಸರಸ್ವತಿ ಸ್ವಾಮೀಜಿ, ಮಠದ ಸ್ವಾಮೀಜಿಗಳು, ಭಕ್ತರು ಸೇರಿದಂತೆ ಇನ್ನಿತರರು ಇದ್ದರು.

ಸೇತುವೆ ಉದ್ಘಾಟನೆ ಹಿನ್ನೆಲೆ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ಭವ್ಯ ಸ್ವಾಗತ ಮಾಡಲಾಯಿತು.

ಹುಲಿಕಲ್ ಘಾಟ್ ರಸ್ತೆ ಸಂಚಾರ ತಾತ್ಕಾಲಿಕ ಬಂದ್

ಶಿವಮೊಗ್ಗ: ತೀರ್ಥಹಳ್ಳಿ ಮತ್ತು ಕುಂದಾಪುರವನ್ನು ಸಂಪರ್ಕಿಸುವ ರಾಜ್ಯ ಹೆದ್ದಾರಿ-52ರ ಹುಲಿಕಲ್ ಘಾಟ್ (ಬಾಳೆಬರೆ ಘಾಟ್) ರಸ್ತೆಯಲ್ಲಿ ಭೂಕುಸಿತ ಸಂಭವಿಸಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಿ ಜಿಲ್ಲಾಡಳಿತ ಆದೇಶಿಸಿದೆ.

ಮಳೆಗಾಲದಲ್ಲಿ ಈ ಮಾರ್ಗದ ಹೇರ್‌ಪಿನ್ ತಿರುವಿನಲ್ಲಿ ಭೂಕುಸಿತ ಸಂಭವಿಸಿತ್ತು. ಇದರ ದುರಸ್ತಿಗಾಗಿ ತಡೆಗೋಡೆ ನಿರ್ಮಾಣ ಮತ್ತು ರಸ್ತೆ ಅಗಲೀಕರಣ ಕಾಮಗಾರಿ ನಡೆಯುತ್ತಿತ್ತು. ಆದರೆ, ಏ.9ರಂದು ಕಾಮಗಾರಿ ನಡೆಯುತ್ತಿದ್ದ ಸ್ಥಳದಲ್ಲಿ ಮತ್ತೆ ಭೂಕುಸಿತ ಉಂಟಾಗಿತ್ತು.

ಪರ್ಯಾಯ ಮಾರ್ಗಗಳು

- ತೀರ್ಥಹಳ್ಳಿಯಿಂದ ಕುಂದಾಪುರಕ್ಕೆ ಹೋಗುವ ಭಾರಿ ವಾಹನಗಳು: ತೀರ್ಥಹಳ್ಳಿ- ರಾವೆ-ಕಾನುಗೋಡು-ನಗರ-ಕೊಲ್ಲೂರು- ಕುಂದಾಪುರ ರಸ್ತೆ.
- ಯಡೂರು/ಮಾಸ್ತಿಕಟ್ಟೆ ಮಾರ್ಗವಾಗಿ ಹೋಗುವ ಭಾರಿ ವಾಹನಗಳು: ತೀರ್ಥಹಳ್ಳಿ- ಕಾನುಗೋಡು-ನಗರ-ಕೊಲ್ಲೂರು-ಕುಂದಾಪುರ ರಸ್ತೆ.
- ಶಿವಮೊಗ್ಗ/ಸಾಗರದಿಂದ ಹೊಸನಗರ ಮಾರ್ಗವಾಗಿ ಹೋಗುವ ಭಾರಿ ವಾಹನಗಳು: ಶಿವಮೊಗ್ಗ-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ-ಹೊನ್ನಾವರ-ಭಟ್ಕಳ-ಬೈಂದೂರು-ಕುಂದಾಪುರ ರಸ್ತೆ.

ಕಿಡ್ನಾಪ್ ಆಗಿದ್ದ ವ್ಯಕ್ತಿ ರಕ್ಷಣೆ: ನಾಲ್ವರ ಸೆರೆ

ಮಣಿಪಾಲ: ತೆಲಂಗಾಣದಲ್ಲಿ ಅಡಗಿಕೊಂಡಿದ್ದ ಅಪಹರಣ ಪ್ರಕರಣದ ಆರೋಪಿಗಳನ್ನು ಪೊಲೀಸರು ಬಂಧಿಸಿ, ಅಪಹರಣಕ್ಕೊಳಗಾಗಿದ್ದ ವ್ಯಕ್ತಿಯನ್ನು ರಕ್ಷಿಸಿದ್ದಾರೆ. ಕುಂದಾಪುರದ ನಿವಾಸಿ ರಾಮ ಮಡಿವಾಳ ಅವರು ತಮ್ಮ ಲಕ್ಷ್ಮಣ ಅವರಿಗೆ ಚಿಕಿತ್ಸೆ ಕೊಡಿಸಲು ಮಣಿಪಾಲ ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಚಿಕಿತ್ಸೆ ನಂತರ ಆಸ್ಪತ್ರೆ ಹೊರಗಿನ ಕ್ಯಾಂಟೀನ್‌ನಲ್ಲಿ ರಾಮ ಮಡಿವಾಳ, ಅವರ ಅಣ್ಣ ರಾಜೇಶ್ ಹಾಗೂ ಸುಧೀರ್ ಟೀ ಕುಡಿಯುತ್ತಿದ್ದರು. ಈ ವೇಳೆ ನಂಬರ್ ಪ್ಲೇಟ್ ಇಲ್ಲದ ಕಪ್ಪು ಬಣ್ಣದ ಕಾರಿನಲ್ಲಿ ಬಂದ ಸುಮಾರು ಏಳೆಂಟು ಮಂದಿ ಏಕಾಏಕಿ ರಾಜೇಶ್ ಅವರನ್ನು ಹಿಡಿಯಲು ಯತ್ನಿಸಿದರು. ಅವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಆರೋಪಿಗಳು ಅವರನ್ನು ಬಲವಂತವಾಗಿ ಕಾರಿನಲ್ಲಿ ಕೂರಿಸಿಕೊಂಡು ಮಣಿಪಾಲದಿಂದ ಹಿರಿಯಡ್ಕ ಕಡೆಗೆ ಕೊಂಡೊಯ್ದಿದ್ದರು. ದೂರುದಾರರ ಪ್ರಕಾರ, ಆರೋಪಿಗಳು ಈ ಹಿಂದೆ ವ್ಯವಹಾರದ ವಿಚಾರವಾಗಿ ಮನೆಗೆ ಬಂದಿದ್ದ ಪರಿಚಿತರಾಗಿದ್ದರು. ಆರೋಪಿಗಳಾದ ಮಲ್ಲಾರೆಡ್ಡಿ, ತುಳಜಾ, ನರಸಿಂಗ, ಹುಸೇನ್, ಶಂಕರ, ನಾಗೇಶ್, ಪರಮೇಶ್ವರ್ ಹಾಗೂ ವಿಜಯ್ ತೆಲಂಗಾಣದಲ್ಲಿ ನಡೆಯುತ್ತಿದ್ದ ವ್ಯವಹಾರದ ವಿಚಾರಕ್ಕೆ ಸಂಬಂಧಿಸಿ ಅಪಹರಣ ನಡೆದಿರುವುದು ತನಿಖೆಯಿಂದ ತಿಳಿದುಬಂದಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು, ತೆಲಂಗಾಣ ರಾಜ್ಯದ ಜಗತಿಹಾಳ್ ಜಿಲ್ಲೆಯ ಕರೀಂನಗರದ ಗೋವಿಂದಪಳ್ಳಿ ಪ್ರದೇಶದ ಸಿಲ್ವರ್ ಸ್ಟೈ ಲಾಡ್ಜ್‌ಗೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಅಪಹರಣಕ್ಕೆ ಬಳಸಿದ ಕಿಯಾ ಕ್ಯಾರೆನ್ಸ್ ಕಾರು ಹಾಗೂ ನಂಬರ್ ಪ್ಲೇಟ್ ಇಲ್ಲದ ಮಹೀಂದ್ರ ಥಾರ್ ಕಾರನ್ನು ವಶಕ್ಕೆ ಪಡೆದು, ಅಪಹರಣಕ್ಕೊಳಗಾದ ರಾಜೇಶ್ ಅವರನ್ನು ರಕ್ಷಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್ ತಿಳಿಸಿದ್ದಾರೆ.

ಹಂಪಿ ಕನ್ನಡ ವಿವಿ ಡಾ.ರಾಜ್ ಕುಮಾರ್ ಅಧ್ಯಯನ ಪೀಠ ಸಂಪಾದನೆ | ಬರಗೂರು ರಾಮಚಂದ್ರಪ್ಪ ಭಾಗಿ

ಡಾ.ರಾಜ್ ಜೀವನಚರಿತ್ರೆ ಕಥಾನಾಯಕನ ಕಥೆ ಕೃತಿ ಬಿಡುಗಡೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಮೇರುನಟ ಡಾ.ರಾಜ್ ಕುಮಾರ್ ಅವರು ಜನಜೀವನದ ನಾನಾ ಆಯಾಮಗಳನ್ನು ತಮ್ಮ ಕಲಾ ಬದುಕಿನ ಮೂಲಕ ಪ್ರತಿಬಿಂಬಿಸಿದ ಅಪರೂಪದ ವ್ಯಕ್ತಿತ್ವ ಎಂದು ನಾಡೋಜ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ನಗರದ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಡಾ.ರಾಜ್ ಕುಮಾರ್ ಅಧ್ಯಯನ ಪೀಠ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯುಕ್ತ ಸಹಯೋಗದಲ್ಲಿ ನಡೆದ ಡಾ.ರಾಜ್ ಕುಮಾರ್ ಜೀವನಚರಿತ್ರೆ ಕಥಾನಾಯಕನ ಕಥೆ ಕೃತಿ ಬಿಡುಗಡೆ ಹಾಗೂ ಛಾಯಾಚಿತ್ರ ಗ್ಯಾಲರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನಸಾಮಾನ್ಯರಲ್ಲೇ ದೇವರನ್ನು ಕಂಡಂತಹ ವ್ಯಕ್ತಿ ಡಾ.ರಾಜ್ ಕುಮಾರ್. ಅವರ ಸರಳತೆ, ಸಜ್ಜನಿಕೆ ಹಾಗೂ ಮಾನವೀಯ ಗುಣಗಳ ಕಾರಣದಿಂದ ಅವರು ಪ್ರಜಾಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ. ರಂಗಭೂಮಿಯಲ್ಲಿ ಪಳಗಿ, ಬೆಳ್ಳಿ ಪರದೆಯಲ್ಲಿ ಅಸಾಧಾರಣ ಸಾಧನೆ ಮಾಡಿದ ರಾಜ್ ಕುಮಾರ್, ಕನ್ನಡ ನಾಡು-ನುಡಿಯ ರಕ್ಷಣೆಗೆ ತಮ್ಮ ಸಂಪೂರ್ಣ ಜೀವನವನ್ನೇ ಅರ್ಪಿಸಿದ ಸಾಂಸ್ಕೃತಿಕ ನಾಯಕ. ಗೋಕಾಕ್ ಚಳವಳಿಯಂತಹ ಭಾಷಾ ಚಳವಳಿಗಳಿಗೆ ಅವರ ಪ್ರೇರಣೆ ಮಹತ್ವದದ್ದು, ಎಷ್ಟೇ ಎತ್ತರಕ್ಕೆ ಏರಿದರೂ ಅವರ ವಿನಮ್ರತೆ, ಸರಳತೆ ಎಂದಿಗೂ ಕಡಿಮೆಯಾಗಲಿಲ್ಲ. ಕಥಾನಾಯಕನ ಕಥೆ ಕೃತಿಯಲ್ಲಿ ಅವರ ಜೀವನದ ಹೋರಾಟಗಳು, ಸವಾಲುಗಳು ಮತ್ತು ಅನುಭವಗಳು ಸ್ಪಷ್ಟವಾಗಿ ಮೂಡಿಬಂದಿವೆ ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲ, ಹಿರಿಯ ನಿರ್ದೇಶಕ ಭಾರ್ಗವ, ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ. ಡಿ.ವಿ. ಪರಮಶಿವ ಮೂರ್ತಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ರಮೇಶ್.ಬಿ., ಅಧ್ಯಯನ ಪೀಠದ ಸಂಚಾಲಕ ಡಾ. ಎ.ಎಸ್. ಪ್ರಭಾಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಡೋಜ ಡಾ.ರಾಜ್‌ಕುಮಾರ್ ಅವರ ಜೀವನಚರಿತ್ರೆ, ಕಥಾನಾಯಕನ ಕಥೆ ಬಿಡುಗಡೆ ಪುಸ್ತಕವನ್ನು ನಾಡೋಜ ಬರಗೂರು ರಾಮಚಂದ್ರಪ್ಪ ಬಿಡುಗಡೆಗೊಳಿಸಿದರು. ಈ ವೇಳೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲ, ಹಿರಿಯ ನಿರ್ದೇಶಕ ಭಾರ್ಗವ, ಹಂಪಿ ಕನ್ನಡ ವಿವಿ ಕುಲಪತಿ ಪ್ರೊ. ಡಿ.ವಿ. ಪರಮಶಿವಮೂರ್ತಿ, ಬೆಂಗಳೂರು ನಗರ ವಿವಿ ಕುಲಪತಿ ಪ್ರೊ. ರಮೇಶ್. ಸೇರಿ ಹಲವರಿದ್ದರು.

> ನಮ್ಮ ತಂದೆಯ ಕುರಿತು ಒಂದು ದಿನವೂ ಮಾತನಾಡದೆ ಇರಲು ಸಾಧ್ಯವಿಲ್ಲ. ಅವರಂತಹ ಮಹಾನ್ ವ್ಯಕ್ತಿತ್ವವನ್ನು ವಿಶ್ವವಿದ್ಯಾಲಯಗಳು ಅಧ್ಯಯನ ಮಾಡುವ ಮಟ್ಟಕ್ಕೆ ತಂದಿರುವುದು ಹೆಮ್ಮೆಯ ವಿಷಯ. ಅವರ ವ್ಯಕ್ತಿತ್ವ, ಮೌಲ್ಯಗಳು ಮತ್ತು ಜೀವನ ಪಾಠಗಳು ಇಂದಿನ ಪೀಳಿಗೆಗೆ ದಿಕ್ಕು ತೋರಿಸುವಂತಿವೆ. ಕಥಾನಾಯಕನ ಕಥೆ ಕೃತಿ ಯುವಜನತೆಗೆ ಪ್ರೇರಣೆಯಾಗಲಿದೆ.
>
> -ಡಾ.ಶಿವರಾಜ್ ಕುಮಾರ್, ನಟ

ವಿಶ್ವವಾಣಿ

ಸಂಪಾದಕೀಯ

ಹಠ ಬಿಡದಿದ್ದರೆ ಶಾಂತಿ ಹೇಗೆ ಸಾಧ್ಯ?

ಇಡೀ ಜಗತ್ತೇ ಭಾರೀ ಕುತೂಹಲದಿಂದ ನೋಡುತ್ತಿದ್ದ ಅಮೆರಿಕ, ಇರಾನ್ ನಡುವಿನ ಶಾಂತಿ ಮಾತುಕತೆ ವಿಫಲವಾಗಿವೆ. ಪಾಕಿಸ್ತಾನದ ಪಾರುಪತ್ಯದಡಿ ಮಾತುಕತೆಗೆ ಕುಳಿತಿದ್ದ ಈ ಎರಡೂ ದೇಶಗಳು ತಮ್ಮ ಷರತ್ತುಗಳಿಗೆ ಅಂಟಿಕೊಂಡಿದ್ದರಿಂದ ಮಾತುಕತೆಯಲ್ಲಿ ಯಾವುದೇ ನಿರ್ಧಾರಕ್ಕೆ ಬರಲಾಗಲಿಲ್ಲ. ಅದರ ಪರಿಣಾಮ, ಪೂರ್ವನಿಗದಿಯಂತೆ 21 ಗಂಟೆಗಳ ಮಾತುಕತೆ ವಿಫಲವಾಗಿದೆ. ಇಲ್ಲಿ ಮೂಲ ತಕರಾರಿರುವುದು ಅಮೆರಿಕದ ಬಳಿಯೇ. ಇರಾನಿನ ಅಣುಕಾರ್ಯಕ್ರಮವನ್ನು ಶತಾಯಗತಾಯ ನಿಲ್ಲಿಸಬೇಕು ಎಂಬ ಪ್ರತಿಜ್ಞೆ ಮಾಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕ ಇರಾನ್ ತನ್ನ ಅಣ್ವಸ್ತ್ರ ಯೋಜನೆಯನ್ನು ಸಂಪೂರ್ಣ ನಿಲ್ಲಿಸಬೇಕು ಎಂದು ಒತ್ತಾಯಿಸುತ್ತಿದ್ದರೆ, ಇರಾನ್ ಅದನ್ನು ಒಪ್ಪಲು ಸಿದ್ಧವಾಗಿಲ್ಲ. ಎರಡನೆಯದಾಗಿ, ಆರ್ಥಿಕ ನಿರ್ಬಂಧಗಳ ವಿಚಾರದಲ್ಲಿ ಭಿನ್ನಾಭಿಪ್ರಾಯ ಇದೆ. ಇರಾನ್ ಮೇಲಿನ ನಿರ್ಬಂಧಗಳನ್ನು ತಕ್ಷಣ ತೆಗೆದುಹಾಕಬೇಕು ಎಂದು ಕೇಳುತ್ತಿದ್ದರೆ, ಅಮೆರಿಕ ಹಂತಹಂತವಾಗಿ ಸಡಿಲಿಕೆ ಮಾಡಲು ಮಾತ್ರ ಸಿದ್ಧವಾಗಿದೆ. ಮೂರನೆಯದಾಗಿ, ಪರಸ್ಪರ ನಂಬಿಕೆಯ ಕೊರತೆ ಪ್ರಮುಖ ಸಮಸ್ಯೆಯಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ನಡೆದ ಸಂಘರ್ಷಗಳು, ಯುದ್ಧ ಮತ್ತು ದಾಳಿಗಳ ಪರಿಣಾಮವಾಗಿ ಎರಡೂ ದೇಶಗಳ ನಡುವಿನ ವಿಶ್ವಾಸ ಕುಂದಿದೆ. ನಾಲ್ಕನೆಯದಾಗಿ, ಪ್ರಾದೇಶಿಕ ರಾಜಕೀಯ ಪ್ರಭಾವ ಮತ್ತು ಹೊರ್ಮುಜ್ ಜಲಸಂಧಿಯ ಮೇಲೆ ತನ್ನ ನಿಯಂತ್ರಣವನ್ನು ಮುಂದುವರಿಸಲು ಇರಾನ್ ಹಠ ಹಿಡಿದಿರುವುದು ಕೂಡ ಅಮೆರಿಕದ ಅಸಮಾಧಾನಕ್ಕೆ ಕಾರಣವಾಗಿದೆ. ಒಟ್ಟಿನಲ್ಲಿ, ಮೂಲಭೂತ ವಿಚಾರಗಳಲ್ಲಿ ಒಪ್ಪಂದವಾಗದಿರುವುದರಿಂದ ಮಾತುಕತೆಗಳು ಈ ಮೊದಲ ಸುತ್ತಿನ ಸಂಧಾನದಲ್ಲಿ ವಿಫಲವಾಗಿವೆ. ಕದನ ವಿರಾಮ ಇನ್ನೂ ಜಾರಿಯಲ್ಲಿರುವುದರಿಂದ ಮತ್ತೊಂದು ಸುತ್ತಿನ ಸಂಧಾನ ಮಾತುಕತೆಗೆ ಎರಡೂ ದೇಶಗಳು ಮುಂದಾಗಬಹುದು ಆದರೆ, ಹಠಗಳನ್ನು ಬಿಡದಿದ್ದರೆ ಇಂಥ ನೂರು ಸಭೆಗಳನ್ನು ನಡೆಸಿದರೂ ಯಾವುದೇ ಪ್ರಯೋಜನವಾಗುವುದಿಲ್ಲ. ಬಹುಶಃ ಇದಕ್ಕೆ ವಿಶ್ವಸಂಸ್ಥೆಯೇ ಮದ್ದು ಅರೆದರೆ ಸೂಕ್ತವೇನೋ! ವಿಶ್ವಸಂಸ್ಥೆಯ ವೇದಿಕೆಯಲ್ಲಿ ಯುದ್ಧ ಬೇಡ ಎನ್ನುವ ರಾಷ್ಟ್ರಗಳ ಸಮಕ್ಷಮದಲ್ಲಿ ಇರಾನ್-ಅಮೆರಿಕ ದೇಶಗಳ ಷರತ್ತುಗಳನ್ನು ಮಾತುಕತೆಗೆ ಬರುವ ಅನ್ಯರಾಷ್ಟ್ರಗಳ ಪ್ರತಿನಿಧಿಗಳ ಸಮಿತಿಯಿಂದ ಪರಿಷ್ಕರಿಸಿ, ಅಮೆರಿಕ - ಇರಾನ್ ಎರಡೂ ದೇಶಗಳಿಗೆ ಸಮ್ಮತವಾಗುವಂಥ ಷರತ್ತುಗಳನ್ನು ರೂಪಿಸಿ, ಇಬ್ಬರನ್ನೂ ಓಲೈಸಿ ಒಪ್ಪಿಸುವುದೇ ಸೂಕ್ತವಾದ ಮಾರ್ಗ.

ಸೊಂಪಾದಕೀಯ

ಯುದ್ಧದಿಂದ ಕಾಂಡೋಮ್ ದುಬಾರಿ

ಇರಾನ್ ಯುದ್ಧಕ್ಕೂ ಅದಕ್ಕೂ ಏನ್ರೀ ಸಂಬಂಧ?'' ರೋಡ್ ಸೈಡ್ ಸಣ್ಣ ಕೆಫೆಯಲ್ಲಿದ್ದ ಟಿವಿ ನೋಡ್ತಿದ್ದ ಆ ಅಂಕಲ್ ಒಮ್ಮಿಂದೊಮ್ಮೆಲೇ ಸಿಟ್ಟಾದರು. ಯಾಕೆ ಅಂತ ಅವರ ಅಕ್ಕಪಕ್ಕ ಕುಳಿತಿದ್ದ ಅವರ ಸ್ನೇಹಿತರು ಕೇಳಿದ್ದಕ್ಕೆ ಅವರು ಟಿವಿ ತೋರಿಸುತ್ತಾ ''ನೋಡ್ರೀ ಅಲ್ಲಿ, ಇರಾನ್ ಯುದ್ಧದ ಎಫೆಕ್ಟ್ ಅಂತೆ, ಕಾಂಡೋಮ್‌ಗಳ ಬೆಲೆ ಜಾಸಿಯಾಗಿದೆ ಅಂತ ಬರ್ತಾ ಇದೆ'' ಅಂದರು. ಅವರ ಅಕ್ಕಪಕ್ಕ ನಿಂತು ಕಾಫಿ ಹೀರುತ್ತಿದ್ದ ಅವರ ಸ್ನೇಹಿತರೂ ಅತ್ತ ನೋಡಿ ಏನು ಹೇಳ್ಬೇಕೋ ಗೊತ್ತಾಗದೇ ಸುಮ್ಮನೇ ಬ್ರೇಕಿಂಗ್ ನ್ಯೂಸ್ ಸ್ಕ್ರಾಲಿಂಗ್ ಓದುತ್ತಾ ನಿಂತರು. ಅಂಕಲ್ ಮಾತು ಮುಂದುವರಿಸಿ, ''ಓಕೆ... ಯುದ್ಧದಿಂದ ಎಲ್‌ಪಿಜಿ ಕೊರತೆ ಆಯ್ತು ಒಪ್ಕೊಳ್ಳೋಣ. ಸಿಎನ್‌ಜಿ ಕೊರತೆ ಆಯ್ತು, ಅದನ್ನೂ ಒಪ್ಕೊಳ್ಳೋಣ. ಆದರೆ ಈಗೇನ್ರೀ ಇದು ಕಾಂಡೋಮ್‌ಗಳೂ ದುಬಾರಿ?'' ಎಂದು ಗೊಣಗಿದರು. ಅದಕ್ಕೆ ಅವರ ಪೋಲಿ ಸ್ನೇಹಿತನೊಬ್ಬ, ''ಎಲ್ಲೇ ಆದ್ರೂ ಯುದ್ಧ, ಯುದ್ಧನೇ ತಾನೇ'' ಅಂತ ಕಣ್ಣು ಹೊಡೆದರು. ''ಇಲ್ಲಿ ಯುದ್ಧ ಮತ್ತು ಪ್ರೀತಿ ಎರಡು ವಿಚಾರಗಳಿವೆ. ಆದರೆ, ಎವೆರಿಥಿಂಗ್ ಈಸ್ ಫೇರ್ ಇನ್ 'ಲವ್ ಆ್ಯಂಡ್ ವಾರ್' ಅನ್ನೋದನ್ನ ಕೇಳಿಲ್ವೇ? ಇಲ್ಲಿ ಬರೋ ಇಂಗ್ಲೀಷ್ ಪದ FAIR ಅನ್ನೇ FARE ಅಂತ ಓದಿ ಕೊಂಡು ಸುಮ್ಮನಾಗಬೇಕು'' ಎಂದರು. ಆದರೆ, ಅಂಕಲ್ ಮಾತ್ರ ಆ ಮಾತಿಗೆ ತಲೆದೂಗಿದ ಹಾಗೆ ಕಾಣಲಿಲ್ಲ. ''ಅಲ್ರೀ... ರೇಟ್ ಯಾಕೆ ಜಾಸ್ತಿ ಅಂತ ಕೇಳಿದರೆ ನೀವು ಏನೇನೋ ಹೇಳ್ತೀರಿ. ನನ್ನ ಪ್ರಶ್ನೆ ಏನಂದ್ರೆ, ಕಾಂಡೋಮಿಗಳಿಗೇನು ಪೆಟ್ರೋಲ್ ಹಾಕಿ ತಯಾರಿಸ್ತಾರಾ? ಯಾಕೆ ಅದರ ರೇಟು ಜಾಸ್ತಿ ಮಾಡ್ಬೇಕು?'' ಅಂತ. ಅದಕ್ಕೆ ಮತ್ತೊಬ್ಬ ಮಿತ್ರ, ''ಹೋಗ್ಲಿ ಬಿಡ್ರಿ, ಮಕ್ಕಳ್ಳಾ ಮದ್ವೆ ವಯಸ್ಸಿಗೆ ಬಂದ್ರೂ ಈ ಮನುಷ್ಯನಿಗೆ ಚಪಲ ಹೋಗಿಲ್ಲ ನೋಡು... ಅಂತ ಅಂದ್ಕೋತಾರೆ, ಸುಮ್ನಿರಿ'' ಅಂತ ಪಿಸುಗುಟ್ಟಿದಾಗ ಅಂಕಲ್ ಕೂಡ ಹುಳ್ಳಗೆ ಮುಖ ಮಾಡಿಕೊಂಡು ಸುಮ್ಮನಾದ್ರು.

ಸಂಪಾದಕರ ಸದ್ಯಶೋಧನೆ

ಉಗ್ರರು ಹೀಗೇಕೆ ಮಾಡುತ್ತಾರೆ?

ಜಗತ್ತಿನಲ್ಲಿ ಎಲ್ಲಿಯೇ ಭಯೋತ್ಪಾದಕ ಅಥವಾ ವಿಧ್ವಂಸಕ ಕೃತ್ಯಗಳು ಜರುಗಲಿ, ಭಯೋತ್ಪಾದನಾ ಗುಂಪುಗಳು ಈ ಕೃತ್ಯವನ್ನು ನಾವೇ ಮಾಡಿದ್ದು ಎಂದು ಸ್ವಯಂಘೋಷಿಸಿಕೊಳ್ಳುತ್ತವೆ. ಇನ್ನು ಕೆಲವು ದಾಳಿಗಳ ಬಗ್ಗೆ ಮೌನ ವಹಿಸುತ್ತವೆ ಅಥವಾ ನಿರಾಕರಿಸುತ್ತವೆ. ಇದು ಕೇವಲ ಕಾಕತಾಳೀಯವಲ್ಲ. ಇದರ ಹಿಂದೆ ಆಳವಾದ ಕಾರ್ಯತಂತ್ರದ ಲೆಕ್ಕಾಚಾರ, ರಾಜಕೀಯ ಲಾಭ-ನಷ್ಟದ ವಿಶ್ಲೇಷಣೆ ಮತ್ತು ಸಾರ್ವಜನಿಕ ಸಂಬಂಧಗಳ ತಂತ್ರಗಾರಿಕೆ ಅಡಗಿರುತ್ತದೆ. ಭಯೋತ್ಪಾದನೆಯು ಮೂಲಭೂತವಾಗಿ ಒಂದು ರೀತಿಯ ಸಂವಹನ ತಂತ್ರ'. ಹಿಂಸಾಚಾರದ ಮೂಲಕ ಸಂದೇಶ ರವಾನಿಸುವುದು ಅವರ ಉದ್ದೇಶವಾಗಿರುತ್ತದೆ. ದಾಳಿಯ ಹೊಣೆ ಹೊರುವುದರಿಂದ ಅವರಿಗೆ ಕೆಲವು ಲಾಭಗಳಿವೆ. ಯಾವುದೇ ಭಯೋತ್ಪಾದನಾ ಗುಂಪು ತಾನು ಸಕ್ರಿಯವಾಗಿದ್ದೇನೆ ಮತ್ತು ಶಕ್ತಿಯುತವಾಗಿದ್ದೇನೆ ಎಂದು ತೋರಿಸಿಕೊಳ್ಳಲು ತಕ್ಷಣ ದಾಳಿಯ ಜವಾಬ್ದಾರಿಯನ್ನು ಹೊರುತ್ತದೆ. ಉದಾಹರಣೆಗೆ, ಐಸಿಸ್ ತನ್ನ ಪ್ರಭಾವ ಕುಗ್ಗುತ್ತಿದೆ ಎಂಬ ವದಂತಿಗಳು ಹರಡಿದಾಗ, ಸಣ್ಣಪುಟ್ಟ ದಾಳಿಗಳಿಗೂ ತನ್ನ ಹೆಸರನ್ನು ಸೇರಿಸಿಕೊಳ್ಳುತ್ತದೆ. ಇದು ಅವರ ಬೆಂಬಲಿಗರಲ್ಲಿ ಉತ್ಸಾಹ ತುಂಬಲು ಮತ್ತು ಶತ್ರುಗಳಲ್ಲಿ ಭೀತಿ ಮೂಡಿಸಲು ಸಹಕಾರಿ. ಭೀಕರ ದಾಳಿಯ ಜವಾಬ್ದಾರಿ ಹೊರುವುದರಿಂದ ಆ ಸಂಘಟನೆಯು ಉಗ್ರಗಾಮಿ ವಲಯದಲ್ಲಿ ದೊಡ್ಡಣ್ಣ' ಆಗಿ ಬಿಂಬಿತವಾಗುತ್ತದೆ. ಇದು ಆನ್ಲೈನ್ ಮೂಲಕ ಹೊಸ ಯುವಕರನ್ನು ಆಕರ್ಷಿಸಲು ಮತ್ತು ಪ್ರಪಂಚದಾದ್ಯಂತ ಇರುವ ಮೂಲಭೂತವಾದಿಗಳಿಂದ ದೇಣಿಗೆ ಪಡೆಯಲು ಸುಲಭವಾಗುತ್ತದೆ. ನೋಡಿ, ನಾವು ಶತ್ರುವಿನ ಎದೆಯಲ್ಲಿ ನಡುಕ ಹುಟ್ಟಿಸಿದ್ದೇವೆ' ಎಂಬ ಪ್ರಚಾರವು ಅವರ ಆರ್ಥಿಕ ಮೂಲಗಳಿಗೆ ಬಲ ನೀಡುತ್ತದೆ. ಸರಕಾರಗಳ ಮೇಲೆ ಒತ್ತಡ ಹೇರಲು ಇವರು ಜವಾಬ್ದಾರಿಯನ್ನು ಹೊರುತ್ತಾರೆ. ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದೆಯೂ ಇಂಥ ದಾಳಿಗಳು ನಡೆಯುತ್ತವೆ ಎಂದು ಎಚ್ಚರಿಸಲು ಇದು ಸುಲಭವಾದ ಮಾರ್ಗ. ಹಾಗಾದರೆ ಕೆಲವು ದಾಳಿಗಳ ಬಗ್ಗೆ ಮೌನ ವಹಿಸುವುದು ಏಕೆ? ಕೆಲವು ಸಂದರ್ಭಗಳಲ್ಲಿ, ದಾಳಿ ನಡೆದಿದ್ದರೂ ಉಗ್ರಗಾಮಿಗಳು ಅದರ ಹೊಣೆ ಹೊರುವುದಿಲ್ಲ ಅಥವಾ ಸಾರಾಸಗಟಾಗಿ ನಿರಾಕರಿಸುತ್ತಾರೆ. ಇದರ ಹಿಂದೆಯೂ ಬಲವಾದ ಕಾರಣಗಳಿವೆ. ಯಾವುದೇ ಉಗ್ರ ಸಂಘಟನೆಗೆ ತನ್ನದೇ ಆದ ಒಂದು ಜನಕೋಟಿಯ ಬೆಂಬಲವಿರುತ್ತದೆ. ಒಂದು ವೇಳೆ ದಾಳಿಯಲ್ಲಿ ಅತಿ ಹೆಚ್ಚು ಸಂಖ್ಯೆಯ ಸಾಮಾನ್ಯ ನಾಗರಿಕರು, ವಿಶೇಷವಾಗಿ ಮಹಿಳೆಯರು, ಮಕ್ಕಳು ಅಥವಾ ತಮಗೆ ಬೆಂಬಲ ನೀಡುವ ಸಮುದಾಯದವರೇ ಮೃತಪಟ್ಟರೆ, ಅಂಥ ದಾಳಿಯ ಜವಾಬ್ದಾರಿಯನ್ನು ಅವರು ಹೊರುವುದಿಲ್ಲ. ಉದಾಹರಣೆಗೆ, ಮಸೀದಿ ಅಥವಾ ಶಾಲೆಗಳ ಮೇಲೆ ನಡೆದ ದಾಳಿಗಳಲ್ಲಿ ಮುಸ್ಲಿಮರೇ ಹೆಚ್ಚಾಗಿ ಮೃತಪಟ್ಟಾಗ, ಅಲ್-ಖೈದಾದಂಥ ಸಂಘಟನೆಗಳು ಜಾಣ ಮೌನ ವಹಿಸುತ್ತವೆ. ಅತಿರೇಕದ ಹಿಂಸೆ ತಮ್ಮ ಸಂಘಟನೆಯ ಇಮೇಜ್ ಅನ್ನು ಕೆಡಿಸುತ್ತದೆ ಎಂದು ಅವರಿಗೆ ತಿಳಿದಾಗ ಹೀಗೆ ಮಾಡುತ್ತವೆ. ಜವಾಬ್ದಾರಿಯನ್ನು ಹೊರುವುದರಿಂದ ತನಿಖಾ ಸಂಸ್ಥೆಗಳಿಗೆ ಪುರಾವೆ ಒದಗಿಸಿದಂತಾಗುತ್ತದೆ. ದಾಳಿ ನಡೆಸಿದ ಘಟಕ ಅಥವಾ ಸೆಲ್ ನ್ನು ರಕ್ಷಿಸಲು ಮತ್ತು ತನಿಖಾ ಸಂಸ್ಥೆಗಳ ಸಂಪೂರ್ಣ ಗಮನ ತಮ್ಮತ್ತ ಬೀಳದಂತೆ ತಡೆಯಲು ಅವರು ಮೌನ ವಹಿಸುತ್ತಾರೆ. ಹೊಣೆ ಹೊತ್ತರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿರ್ಬಂಧಗಳು ಬಿಗಿಯಾಗಬಹುದು ಅಥವಾ ನಿಖರ ದಾಳಿ ನಡೆಯಬಹುದು ಎಂಬ ಭಯವಿರುತ್ತದೆ. ಯಾರು ದಾಳಿ ನಡೆಸಿದ್ದಾರೆ ಎಂದು ತಿಳಿಯದಿದ್ದಾಗ ದೇಶದೊಳಗೆ ಗೊಂದಲ ಸೃಷ್ಟಿಯಾಗುತ್ತದೆ. ಸರಕಾರವು ಪ್ರತಿಪಕ್ಷದ ಮೇಲೆ ಅಥವಾ ಅನ್ಯ ದೇಶದ ಮೇಲೆ ಸಂಶಯ ಪಡಬಹುದು. ಈ ಆಂತರಿಕ ಕಚ್ಚಾಟ ಭಯೋತ್ಪಾದಕರಿಗೆ ಲಾಭದಾಯಕ. ಹೊಣೆ ಹೊರದೇ ಇದ್ದಾಗ ಜನರಲ್ಲಿ ಯಾರು ಬೇಕಾದರೂ ನಮ್ಮ ಮೇಲೆ ದಾಳಿ ಮಾಡಬಹುದು' ಎಂಬ ಅತೀಂದ್ರಿಯ ಭಯ ಹೆಚ್ಚಾಗುತ್ತದೆ. ಕೆಲವೊಮ್ಮೆ ಒಂದೇ ದಾಳಿಗೆ ಎರಡು-ಮೂರು ಸಂಘಟನೆಗಳು ಜವಾಬ್ದಾರಿ ಘೋಷಿಸುತ್ತವೆ. ಇದನ್ನು ಕ್ರೆಡಿಟ್‌ಕ ಎನ್ನಲಾಗುತ್ತದೆ. ಉದಾಹರಣೆಗೆ, ಅಫ್ಘಾನಿಸ್ತಾನದಲ್ಲಿ ನಡೆದ ದಾಳಿಗೆ ತಾಲಿಬಾನ್ ಮತ್ತು ಐಸಿಸ್ ಎರಡೂ ಹೊಣೆ ಹೊತ್ತ ಸಂದರ್ಭಗಳಿವೆ. ಇದು ತಮ್ಮ ಸಂಘಟನೆಯೇ ಹೆಚ್ಚು ಪ್ರಬಲ ಎಂದು ತೋರಿಸಿಕೊಳ್ಳುವ ಪೈಪೋಟಿ. ಮತ್ತೊಂದೆಡೆ, ಉಗ್ರ ಸಂಘಟನೆಯು ತನ್ನ ಶ್ರೇಣಿಯ ಕೆಳಮಟ್ಟದ ಕಾರ್ಯಕರ್ತರು ಸ್ವಯಂಪ್ರೇರಿತರಾಗಿ ಮಾಡಿದ ದಾಳಿಯನ್ನು ತನ್ನದೇ ಯೋಜನೆ ಎಂದು ಬಿಂಬಿಸಿಕೊಳ್ಳುತ್ತದೆ. ಇದು ಅವರಿಗೆ ಉಚಿತ ಪ್ರಚಾರ' ನೀಡುತ್ತದೆ.

ಶಾಮನೂರು ಕೋಟೆಯಲ್ಲಿ ಸಂಪತ್ತಿಗೆ ಸವಾಲ್

ಮೂರ್ತಿಪೂಜೆ

ಆರ್.ಟಿ. ವಿಠ್ಠಲಮೂರ್ತಿ
vveditoped@gmail.com

ಅವತ್ತು ರಾಜ್ಯದಲ್ಲಿ ಜೆ.ಹೆಚ್.ಪಟೇಲ್ ನೇತೃತ್ವದ ಜನತಾದಳ ಸರ್ಕಾರ ಅಸ್ತಿತ್ವದಲ್ಲಿತ್ತು.ಜನತಾದಳದ ಸುಪ್ರಿಮೋ ದೇವೇಗೌಡರು ಪ್ರಧಾನಿ ಗದ್ದುಗೆ ಏರಿ ವಾಪಸ್ಸು ಬಂದಿದ್ದರು.ಈ ಸಂದರ್ಭದಲ್ಲೇ ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ಎದುರಾಯಿತು.

ಹೀಗೆ ಉಪಚುನಾವಣೆ ನಡೆದ ಎರಡು ಕ್ಷೇತ್ರಗಳ ಪೈಕಿ ಒಂದು ರಾಮನಗರ.ಮತ್ತೊಂದು ಮೊಳಕಾಲ್ಮೂರು.

ಅವತ್ತು ರಾಜಕೀಯ ಬಲಾಬಲದ ದೃಷ್ಟಿಯಿಂದ ಜನತಾದಳ ಭರ್ಜರಿ ಗೆಲುವು ಸಾಧಿಸಬೇಕಿತ್ತು.ಆದರೆ ಉಪಚುನಾವಣೆಯಲ್ಲಿ ಜನತಾದಳದ ಲೆಕ್ಕಾಚಾರ ಉಲ್ಟಾ ಆಗಿ ಪ್ರತಿಪಕ್ಷ ಕಾಂಗ್ರೆಸ್ಸಿನ ಅಭ್ಯರ್ಥಿಗಳು ಗೆಲುವು ಸಾಧಿಸಿದರು.

ಅವತ್ತು ರಾಮನಗರ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಸಿ.ಎಂ. ಲಿಂಗಪ್ಪ,ಮೊಳಕಾಲ್ಮೂರಿನಲ್ಲಿ ಎನ್.ವೈ.ಗೋಪಾಲಕೃಷ್ಣ ಗೆಲುವು ಗಳಿಸಿದ್ದರು.ಅಂದಹಾಗೆ ಅವತ್ತು ಜಿದ್ದಾಜಿದ್ದಿನ ಕ್ಷೇತ್ರವಾದ ರಾಮನಗರ ಕ್ಷೇತ್ರದಲ್ಲಿ ಸಿ.ಎಂ.ಲಿಂಗಪ್ಪ ಅವರ ಗೆಲುವಿಗೆ ಅಗತ್ಯವಾದ ರಣತಂತ್ರ ಹೆಣೆದವರು ಇವತ್ತು ಉಪಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್.

ಈ ಘಟನೆಯನ್ನು ಏಕೆ ನೆನಪಿಸಿಕೊಳ್ಳಬೇಕೆಂದರೆ ಅವತ್ತು ಜನತಾದಳ ಇದ್ದ ಜಾಗದಲ್ಲಿ ಇವತ್ತು ಕಾಂಗ್ರೆಸ್ ನಿಂತಿರುವಂತೆ ಭಾಸವಾಗುತ್ತಿದೆ.ಅದೇ ರೀತಿ ಅವತ್ತು ರಾಮನಗರ, ಮೊಳಕಾಲ್ಮೂರು ಕ್ಷೇತ್ರಗಳಿದ್ದ ಜಾಗದಲ್ಲಿ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಿರುವಂತೆ ಕಾಣುತ್ತಿದೆ.

ಹಾಗಂತ ಏಪ್ರಿಲ್ ಒಂಬತ್ತರಂದು ಉಪಚುನಾವಣೆಗಳನ್ನು ಎದುರಿಸಿದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸೋತೇ ಬಿಡುತ್ತದೆ ಅಂತಲ್ಲ.ಆದರೆ ಉಪಚುನಾವಣೆಯ ಕಣದಲ್ಲಿ ಜಾತಿವಾರು ಮತಗಳ ವಿಭಜನೆಯಾಗಿರುವ ರೀತಿಯನ್ನು ನೋಡಿದರೆ 2028 ರ ವಿಧಾನಸಭಾ ಚುನಾವಣೆ ಕಾಂಗ್ರೆಸ್ ಪಾಲಿಗೆ 'ವಾಟರ್‌ಲೂ ಯುದ್ಧ'ದಂತೆ ಕಾಣುತ್ತಿದೆ.

ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಅದುವರೆಗೂ ಅಜೇಯನಾಗಿದ್ದ ನೆಪೋಲಿಯನ್ ಬೋನಾಪಾರ್ಟೆ 'ವಾಟರ್‌ಲೂ' ಕದನದಲ್ಲಿ ಬ್ರಿಟಿಷರು ಮತ್ತವರ ಮಿತ್ರಕೂಟದೆದುರು ಸೋಲು ಅನುಭವಿಸಿದ. ಆ ಮೂಲಕ ಯೂರೋಪಿಯನ್ನರು ವಿಶ್ವದೆದುರು ತಲೆ ಎತ್ತಿ ನಿಲ್ಲುವಂತಾಯಿತು. ಈಗ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆ ಕೂಡಾ ಭವಿಷ್ಯದಲ್ಲಿ ಕಾಂಗ್ರೆಸ್ ನಡೆ 'ವಾಟರ್ ಲೂ' ಕಡೆ ಎಂಬಂತೆ ಭಾಸವಾಗುತ್ತಿದೆ. ಕಾರಣ? ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಸಾಲಿಡ್ ಮತ ಬ್ಯಾಂಕು ಅನ್ನಿಸಿಕೊಂಡಿದ್ದ ಮುಸ್ಲಿಮರ ಮತಗಳು ಚೆದುರಿ ಹೋಗಿವೆ.

ಮತದಾನ ನಡೆಯುವ ಮುನ್ನ ಕ್ಷೇತ್ರದ ಇತಿಹಾಸದಲ್ಲಿ ಹಿಂದೆಂದೂ ಬಳಕೆಯಾಗದಷ್ಟು ಪ್ರಮಾಣದ ಶಸ್ತ್ರಾಸ್ತ್ರಗಳನ್ನು ನಾವು ಬಳಸಿದ್ದೇವೆ.ಹೀಗಾಗಿ ಅಲ್ಪ ಅಂತರದಲ್ಲಿ ನಾವು ಗೆಲ್ಲುತ್ತೇವೆ ಅಂತ ಕಾಂಗ್ರೆಸ್ಸಿನ ಕೆಲ ನಾಯಕರು ಹೇಳುತ್ತಿದ್ದರೂ ವಾಸ್ತವದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರ ಗೆಲುವು ಲಿಂಗಾಯತ ಮತ ಬ್ಯಾಂಕು ಸಾಲಿಡ್ಡಾಗಿ ಕಾಂಗ್ರೆಸ್ ಜತೆ ನಿಂತಿದೆಯೇ?ಎಂಬುದರ ಮೇಲೆ ನಿಂತಿದೆ. ಹೀಗಾಗಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಸಮರ್ಥ್ ಶಾಮನೂರು ಗೆದ್ದರೂ ಅಥವಾ ಸೋತರೂ ಕ್ಷೇತ್ರದ ರಾಜಕೀಯ ಸ್ವರೂಪ ಬದಲಾಗುವುದು ನಿಶ್ಚಿತ.

ಇನ್ನು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಕತೆಯಾದರೂ ಅಷ್ಟೇ.ಯಾಕೆಂದರೆ ಕ್ಷೇತ್ರದ ಲಿಂಗಾಯತ ಮತದಾರರು ಸಾಲಿಡ್ಡಾಗಿ ಬಿಜೆಪಿಯ ವೀರಣ್ಣ ಚರಂತಿ ಮಠ ಅವರನ್ನು ಬೆಂಬಲಿಸಿದ್ದರೂ ಅಹಿಂದ ವರ್ಗಗಳ ಮತಗಳು ಕಾಂಗ್ರೆಸ್ಸಿನ ಉಮೇಶ್ ಮೇಟಿ ಪರವಾಗಿ ನಿಂತಂತೆ ಕಾಣುತ್ತಿಲ್ಲ.ಸಿಎಂ ಸಿದ್ದರಾಮಯ್ಯ ಅವರು ಕ್ಷೇತ್ರದಲ್ಲಿ ಬೀಡು ಬಿಟ್ಟು ರೂಪಿಸಿದ ತಂತ್ರಗಾರಿಕೆಯ ಬಲ ಕೈ ಅಭ್ಯರ್ಥಿಯ ಪಾಲಿಗೆ ಆಶಾದಾಯಕ ಎಂಬುದನ್ನು ಬಿಟ್ಟರೆ ಕಾಂಗ್ರೆಸ್ ಪಾಳಯಕ್ಕೆ ಈ ಕ್ಷೇತ್ರದ ವಿಷಯದಲ್ಲೂ ಅನುಮಾನಗಳಿವೆ.

ಹೀಗಾಗಿ ಉಪಚುನಾವಣೆಯ ಕಣದಲ್ಲಿ ನಿರಾಯಾಸವಾಗಿ ಗೆಲ್ಲಬೇಕಿದ್ದ ಕಾಂಗ್ರೆಸ್ ಆತಂಕದ ಘಳಿಗೆಗಳನ್ನು ಎದುರಿಸುತ್ತಿದೆ. ಅದರ ಆತಂಕ ನಿಜವಾಗುತ್ತದಾ ಅಥವಾ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರ ಪಾಳಯದಲ್ಲಿರುವ ಆತಂಕ ನಿಜವಾಗುತ್ತದಾ ಎಂಬುದನ್ನು ಕಾದು ನೋಡಬೇಕು.

ವಿಜಯೇಂದ್ರ ಪಾಳಯದ ಲೆಕ್ಕಾಚಾರ

ಅಂದಹಾಗೆ ಉಚುನಾವಣೆಯ ಫಲಿತಾಂಶದ ಬಗ್ಗೆ ಬಿಜೆಪಿ ಪಾಳಯ ಅಷ್ಟೇನೂ ಆತಂಕಪಟ್ಟುಕೊಳ್ಳುವ ಅಗತ್ಯವಿಲ್ಲ. ಯಾಕೆಂದರೆ ಉಪಚುನಾವಣೆ ನಡೆದ ಎರಡೂ ಕ್ಷೇತ್ರಗಳು ಆ ಪಕ್ಷದ ಕೈಲಿ ಇದ್ದವಲ್ಲ? ಹೀಗಾಗಿ ಈ ಕ್ಷೇತ್ರಗಳ ಸೋಲಿನಿಂದ ಬಿಜೆಪಿ ಕಳೆದುಕೊಳ್ಳುವುದೇನೂ ಇಲ್ಲ. ಆದರೆ ಒಂದೊಮ್ಮೆ ಎರಡೂ ಕ್ಷೇತ್ರಗಳಲ್ಲಿ,ಇಲ್ಲವೇ ಒಂದು ಕ್ಷೇತ್ರದಲ್ಲಿ ಗೆಲುವು ಗಳಿಸಿದರೆ ಅದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಪಾಲಿಗೆ ಪ್ಲಸ್ಸಾಗುವುದು ಗ್ಯಾರಂಟಿ. ವಾಸ್ತವವಾಗಿ ಉಪಚುನಾವಣೆಯ ರಣಾಂಗಣದಲ್ಲಿ ವಿಜಯೇಂದ್ರ ಸಾಲಿಡ್ಡಾಗಿಯೇ ಹೋರಾಡಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಕೆ.ಆರ್.ಪೇಟೆ ಸೇರಿದಂತೆ ಹಲವೆಡೆ ನಡೆದ ಉಪಚುನಾವಣೆಗಳಲ್ಲಿ ಪಕ್ಷದ ಗೆಲುವಿಗೆ ಅವರು ಯಾವ ರಣತಂತ್ರ ಹೆಣೆದಿದ್ದರೋ ಅಂತಹದೇ ರಣತಂತ್ರವನ್ನು ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳ ರಣಾಂಗಣದಲ್ಲೂ ಹೆಣೆದಿದ್ದಾರೆ.

ಮೂಲಗಳ ಪ್ರಕಾರ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ವಿರುದ್ಧ ತಿರುಗಿಬಿದ್ದ ಹಲವು ಮುಸ್ಲಿಂ ಮುಖಂಡರು ಬಿಜೆಪಿಯ ಪರವಾಗಿರುವಂತೆ ವಿಜಯೇಂದ್ರ ನೋಡಿಕೊಂಡಿದ್ದಾರೆ. ಆದರೆ ಈ ತಂತ್ರದಿಂದ ಬಿಜೆಪಿಗೆ ಎಷ್ಟು ಪ್ರಮಾಣದಲ್ಲಿ ಮುಸ್ಲಿಮರ ಮತಗಳು ಬರುತ್ತವೋ? ಅದಕ್ಕಿಂತ ಹೆಚ್ಚಿನ ಪ್ರಮಾಣದ ಮತಗಳು ಕಾಂಗ್ರೆಸ್ ವಿರುದ್ಧ ಚಲಾವಣೆಯಾಗುತ್ತವೆ. ಹಾಗಾದಾಗ ಗೆಲುವು ಬಿಜೆಪಿಯ ತಟ್ಟೆಗೆ ಬಂದು ಬೀಳುತ್ತದೆ ಎಂಬುದು ವಿಜಯೇಂದ್ರ ಅವರ ಲೆಕ್ಕಾಚಾರ.

ಬಾಗಲಕೋಟೆಯ ವಿಷಯ ಬಂದರೂ ಅಷ್ಟೇ. ಕ್ಷೇತ್ರದ ಸಣ್ಣ-ಸಣ್ಣ ಜಾತಿಗಳ ಮತಗಳನ್ನು ಒಂದು ಮಾಡಿ ಅದು ದೊಡ್ಡ ಮೊತ್ತವಾಗುವಂತೆ ಮಾಡಿರುವ ವಿಜಯೇಂದ್ರ ಅವರಿಗೆ ಲಿಂಗಾಯತ ಮತ ಬ್ಯಾಂಕಿನ ಸಾಲಿಡ್ಡು ಬೆಂಬಲದ ನಿರೀಕ್ಷೆ ಇದೆ. ಅರ್ಥಾತ್, ವಿಜಯೇಂದ್ರ ಅವರ ಲೆಕ್ಕಾಚಾರದ ಪ್ರಕಾರ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹತ್ತರಿಂದ ಹದಿನಾಲ್ಕು ಸಾವಿರ ಮತಗಳ ಅಂತರದಿಂದ ಗೆಲ್ಲಬಹುದು. ಆದರೆ ಇದರ ನಡುವೆಯೇ ವಿಜಯೇಂದ್ರ ಅವರ ಕ್ಯಾಂಪಿಗಿರುವ ಸಣ್ಣ ಅನುಮಾನವೆಂದರೆ, ಬಸವನಗೌಡ ಪಾಟೀಲ್ ಯತ್ನಾಳ್ ಮತ್ತು ಸಿ.ಸಿ.ಪಾಟೀಲ್ ಅವರಂತಹ ನಾಯಕರು ಮಾಡಿದ ಒಂದು ಕೆಲಸ. ಅದೆಂದರೆ ಲಿಂಗಾಯತ ಒಳಪಂಗಡಗಳ ಸಭೆ ಮಾಡಿ 'ಲಿಂಗಾಯತರು ಒಂದು' ಅಂತ ಈ ನಾಯಕರು ಕೊಟ್ಟ ಮೆಸೇಜು ಕ್ಷೇತ್ರದ ಇತರ ಮತದಾರರ ಭಾವನೆಯನ್ನು ಕೆರಳಿಸಿ ಅವರೆಲ್ಲ ಒಂದಾಗಿದ್ದರೆ ಬಿಜೆಪಿಗೆ ಹಿನ್ನಡೆಯಾಗಬಹುದು ಎಂಬುದು ವಿಜಯೇಂದ್ರ ಕ್ಯಾಂಪಿನ ಯೋಚನೆ. ಅದೇನೇ ಇದ್ದರೂ ಉಪಚುನಾವಣೆಯ ನಂತರ ವಿಜಯೇಂದ್ರ ಅವರ ನಾಯಕತ್ವಕ್ಕೆ ಬಲ ತರುವ ಸಾಧ್ಯತೆಗಳು ಜಾಸ್ತಿ.

ಸಲೀಂ-ಹ್ಯಾರೀಸ್ ಹೊಸ ಜೋಡೆತ್ತುಗಳು?

ಇನ್ನು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕೆಲ ಮುಸ್ಲಿಂ ನಾಯಕರು ನಡೆಸಿದ 'ಸಂಪತ್ತಿಗೆ ಸವಾಲ್' ಡ್ರಾಮಾ ಏಕಕಾಲಕ್ಕೆ ಕಾಂಗ್ರೆಸ್ ಮತ್ತು ಮುಸ್ಲಿಂ ಮತ ಬ್ಯಾಂಕಿಗೆ ಹೊರೆಯಾಗಲಿದೆ. ಅಂದಹಾಗೆ ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಮುಸ್ಲಿಮರಿಗೆ ಸಿಗಬೇಕು ಅಂತ ಪಟ್ಟು ಹಿಡಿದಿದ್ದ ಸಚಿವ ಜಮೀರ್ ಅಹ್ಮದ್ ಖಾನ್, ಅಬ್ದುಲ್ ಜಬ್ಬಾರ್ ಅವರಂತಹ ನಾಯಕರನ್ನು ಖುದ್ದು ರಣದೀಪ್ ಸಿಂಗ್ ಸುರ್ಜೇವಾಲಾ ಸಮಾಧಾನಿಸಿದ್ದರಾದರೂ ಕ್ಷೇತ್ರದ ಮುಸ್ಲಿಮರಲ್ಲಿ ಕಂಡು ಬಂದ ಆತಂಕ ಸಂಪತ್ತಿಗೆ ಸವಾಲ್ ಡ್ರಾಮಾ ನಡೆಯಲು ಕಾರಣವಾಯಿತು.

ಎಷ್ಟೇ ಆದರೂ ಸಮರ್ಥ್ ಚಿಕ್ಕವರು.ಈಗ ಅವರು ಗೆದ್ದರೆ ಮುಂದಿನ ಮೂವತ್ತು-ಮೂವತ್ತೈದು ವರ್ಷ ಕ್ಷೇತ್ರದಲ್ಲಿ ಮುಸ್ಲಿಮರಿಗೆ ಅವಕಾಶ ಸಿಕ್ಕುವುದು ಕಷ್ಟ.ಎಷ್ಟೇ ಆದರೂ ದುಡ್ಡಿನ ಬಲ ಇರುವವರು. ಗೆದ್ದರೆ ನೆಲೆಯಾಗುವುದು ಸುಲಭ ಎಂಬ ಮಾತು ಮುಸ್ಲಿಂ ಮತ ಬ್ಯಾಂಕಿನಲ್ಲಿ ಯಾವ ಮಟ್ಟದ ಪ್ರಚಾರ ಪಡೆಯಿತು ಎಂದರೆ ಲಿಟರಲಿ ಮುಸ್ಲಿಂ ಸಮುದಾಯದ ಮತದಾರರು ಕಾಂಗ್ರೆಸ್ಸಿಗೆ ಉಲ್ಟಾ ಹೊಡೆದರು. ಪರಿಣಾಮ? ಮುಸ್ಲಿಂ ಮತದಾರರ ಅಂತಹ ಭಾವನೆಗೆ ಕುಮ್ಮಕ್ಕು ನೀಡಿದ ಆರೋಪ ಈಗ ಸಚಿವರಾದ ಜಮೀರ್ ಅಹ್ಮದ್, ಅಬ್ಬುಲ್ ಜಬ್ಬಾರ್ ಅವರಂತಹ ನಾಯಕರನ್ನು ಸುತ್ತಿಕೊಂಡಿದೆ.

ಈ ಅಂಶವೇ ಕಾಂಗ್ರೆಸ್ ಪಾಳಯದಲ್ಲಿ ಹೊಸ ಲೆಕ್ಕಾಚಾರಗಳಿಗೆ ಕಾರಣವಾಗಿದೆ ಯಲ್ಲದೆ ಮುಸ್ಲಿಂ ನಾಯಕತ್ವದಿಂದ ಜಮೀರ್ ಅವರನ್ನು ಕೆಳಗಿಳಿಸುವ ಯತ್ನ ಆರಂಭವಾಗಿದೆ. ಅಂದಹಾಗೆ ಈ ಹಿಂದೆ ಕಾಂಗ್ರೆಸ್ಸಿನಲ್ಲಿದ್ದ ಸಿ.ಎಂ.ಇಬ್ರಾಹಿಂ,ರೋಷನ್ ಬೇಗ್ ಅವರಂತಹ ನಾಯಕರನ್ನು ಸೈಡ್ ಲೈನಿಗೆ ಸರಿಸಿ ಮುಸ್ಲಿಮರ ಟಾಪ್ ಲೀಡರ್ ಅನ್ನಿಸಿಕೊಂಡಿದ್ದ ಜಮೀರ್ ಅವರನ್ನು ಕೆಳಗೆಳೆದು ಹಾಕಲು ಈಗ ಕೈ ಪಾಳಯದ ಬಹುತೇಕ ಮುಸ್ಲಿಂ ನಾಯಕರು ಒಂದಾಗಿದ್ದಾರೆ. ಹೀಗೆ ಅವರು ನಡೆಸಿರುವ ಯತ್ನ ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಸಲೀಂ ಅಹ್ಮದ್ ಮತ್ತು ಶಾಂತಿನಗರದ ಶಾಸಕ ಎನ್.ಎ. ಹ್ಯಾರಿಸ್ ಮುಸ್ಲಿಂ ಕೋಟೆಯ ಜೋಡೆತ್ತುಗಳಾಗುವುದು ಗ್ಯಾರಂಟಿ.

ಆದರೆ ಇಂತಹ ಬೆಳವಣಿಗೆಗಳೇನೇ ಇರಲಿ,ಆದರೆ ಇದರಿಂದ ಭವಿಷ್ಯದಲ್ಲಿ ಮುಸ್ಲಿಂ ಮತ ಬ್ಯಾಂಕ್ ದುರ್ಬಲವಾಗುವುದು ಮಾತ್ರವಲ್ಲ,ಆ ಮೂಲಕ ಕಾಂಗ್ರೆಸ್ ಸೈನ್ಯ ದುರ್ಬಲವಾಗುವಂತೆ ಮಾಡಿ ಬಿಜೆಪಿ-ಜೆಡಿಎಸ್ ಮಿತ್ರಕೂಟಕ್ಕೆ ಅನುಕೂಲ ಮಾಡಿಕೊಡುವುದು ನಿಶ್ಚಿತ. ಒಂದು ವೇಳೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದರೂ ಮುಸ್ಲಿಂ ಮತ ಬ್ಯಾಂಕಿನ ಸ್ವರೂಪ ಈಗಿನಂತಿರುವುದಿಲ್ಲ ಎಂಬುದು ನಿಜ.

ಲಾಸ್ಟ್ ಸಿಪ್

ಕರ್ನಾಟಕದ ರಾಜಕಾರಣದಲ್ಲಿ ಶುರುವಾಗಿರುವ ಹೊಸ ಟ್ರೆಂಡ್ ಎಂದರೆ ಟಾಪ್ ಲೀಡರುಗಳ ಮಕ್ಕಳನ್ನು ಚುನಾವಣೆಯಲ್ಲಿ ಸೋಲಿಸುವುದು. ಇದಕ್ಕೆ ಇತ್ತೀಚೆಗೆ ನಡೆದ ಶಿಗ್ಗಾಂವಿ ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗಳೇ ಸಾಕ್ಷಿ.ಈ ಪೈಕಿ ಶಿಗ್ಗಾಂವಿಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿ ಕಾಂಗ್ರೆಸ್ಸಿನ ಪಠಾಣ್ ಎದುರು ಸೋಲು ಅನುಭವಿಸಿದರು.

ಇನ್ನು ಚನ್ನಪಟ್ಟಣದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಿದ್ದರು.ಆದರೆ ಕಾಂಗ್ರೆಸ್ಸಿನ ಸಿ.ಪಿ.ಯೋಗೀಶ್ವರ್ ಅವರ ವಿರುದ್ಧ ಸೋತರು. ಈಗ ದಾವಣಗೆರೆಯಲ್ಲಿ ಶಾಮನೂರು ಸಾಮ್ರಾಜ್ಯದ ಕುಡಿ,ಹಾಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಈ ದಾಖಲೆಯನ್ನು ಮುರಿದು ಗೆಲ್ಲುತ್ತಾರೋ? ಇಲ್ಲವೇ ಆ ಪರಂಪರೆಗೆ ಸೇರುತ್ತಾರೋ ಕಾದು ನೋಡಬೇಕು.

ಪ್ರಸ್ತುತ

ಡಾ.ವಿಜಯಕುಮಾರ ಎಚ್.ಕೆ.

ಆಪ್ತರ ಅಗಲಿಕೆಯಿಂದ ನಲುಗಿದ್ದ ಆಶಾ ಭೋಸ್ಲೆ

ಆಶಾ ಭೋಸ್ಲೆ ಅವರು ಭಾರತೀಯ ಸಂಗೀತ ಲೋಕದ ಅಪ್ರತಿಮ ಗಾಯಕಿ. ಏಳು ದಶಕಗಳಿಗೂ ಹೆಚ್ಚು ಕಾಲ ತಮ್ಮ ಕಂಠಸಿರಿಯಿಂದ ಕೋಟ್ಯಂತರ ಅಭಿಮಾನಿಗಳನ್ನು ರಂಜಿಸಿರುವ ಇವರು, ಕೇವಲ ಒಬ್ಬ ಗಾಯಕಿಯಲ್ಲ; ಬದಲಾಗಿ ಭಾರತೀಯ ಚಿತ್ರರಂಗದ ಒಂದು ಜೀವಂತ ದಂತಕಥೆ.

ಆಶಾ ಭೋಸ್ಲೆ ಅವರು 1933 ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನಿಸಿದರು. ಅವರ ತಂದೆ ಪಂಡಿತ್ ದೀನನಾಥ್ ಮಂಗೇಶ್ಕರ್ ಅವರು ಶಾಸ್ತ್ರೀಯ ಸಂಗೀತಗಾರ ಮತ್ತು ರಂಗಭೂಮಿ ಕಲಾವಿದರಾಗಿದ್ದರು. ಆಶಾ ಅವರಿಗೆ ಕೇವಲ 9 ವರ್ಷ ವಯಸ್ಸಿದ್ದಾಗ ಅವರ ತಂದೆ ನಿಧನರಾದರು. ಕುಟುಂಬದ ಜವಾಬ್ದಾರಿಯನ್ನು ಹೊರಲು ಅವರು ಮತ್ತು ಅವರ ಹಿರಿಯ ಅಕ್ಕ ಲತಾ ಮಂಗೇಶ್ಕರ್ ಅವರು ಚಿತ್ರಗಳಲ್ಲಿ ಹಾಡಲು ಮತ್ತು ನಟಿಸಲು ಪ್ರಾರಂಭಿಸಿದರು.

ಆಶಾ ಭೋಸ್ಲೆ ಅವರ ಹೆಸರಿನಲ್ಲಿ ಒಂದು ದೊಡ್ಡ ವಿಶ್ವ ದಾಖಲೆ ಇದೆ. 2011 ರಲ್ಲಿ ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಇವರನ್ನು 'ಸಂಗೀತ ಇತಿಹಾಸದಲ್ಲಿ ಅತಿ ಹೆಚ್ಚು ಹಾಡುಗಳನ್ನು ರೆಕಾರ್ಡ್ ಮಾಡಿದ ಕಲಾವಿದೆ' ಎಂದು ಅಧಿಕೃತವಾಗಿ ಗುರುತಿಸಿತು. ಅವರು ಸುಮಾರು 20 ಕ್ಕೂ ಹೆಚ್ಚು ಭಾಷೆಗಳಲ್ಲಿ 11,000 ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಆಶಾ ಅವರ ವಿಶೇಷತೆ ಎಂದರೆ ಅವರ ಧ್ವನಿಯ ವೈವಿಧ್ಯತೆ. ಅವರು ಶಾಸ್ತ್ರೀಯ ಸಂಗೀತ, ಭಜನೆಗಳು, ಗಝಲ್‌ಗಳು, ಪಾಪ್ ಮತ್ತು ಪ್ರಣಯ ಗೀತೆಗಳನ್ನು ಸಮಾನವಾಗಿ ಹಾಡಬಲ್ಲವರಾಗಿದ್ದರು.

1950 ಮತ್ತು 60ರ ದಶಕದಲ್ಲಿ ಅವರು ಚಿತ್ರರಂಗದ 'ಕ್ಯಾಬರೆ' ಹಾಡುಗಳಿಗೆ ಹೊಸ ಆಯಾಮ ನೀಡಿದರು. ಹೆಲೆನ್ ಅವರಂತಹ ನೃತ್ಯಗಾರ್ತಿಯರಿಗೆ ಆಶಾ ಅವರ ಧ್ವನಿ ಜೀವ ತುಂಬುತ್ತಿತ್ತು.ಕನ್ನಡಿಗರಿಗೆ ಆಶಾ ಭೋಸ್ಲೆ ಅವರ ಧ್ವನಿ ಚಿರಪರಿಚಿತ. ಅವರು ಕನ್ನಡದ ಅನೇಕ ಸೂಪರ್ ಹಿಟ್ ಚಿತ್ರಗಳಲ್ಲಿ ಹಾಡಿದ್ದಾರೆ. ಪ್ರಮುಖವಾಗಿ: ಸಂಶಯ ಫಾಶ ಚಿತ್ರದ ಹಾಡುಗಳು. ರಾಜ್‌ಕುಮಾರ್ ಅಭಿನಯದ 'ಒಂದೇ ರೂಪ ಎರಡು ಗುಣ' ಚಿತ್ರದ ಗೀತೆಗಳು.

ಇತ್ತೀಚಿನ ವರ್ಷಗಳಲ್ಲಿ ಜೋಗಿ ಚಿತ್ರದ ಏಳು ಮಲೆ ಮೇಲೆ ಎಂಬ ಜನಪದ ಸೊಗಡಿನ ಹಾಡು ಇಂದಿಗೂ ಮನೆಮಾತಾಗಿದೆ.ಅವರ ಸುದೀರ್ಘ ವೃತ್ತಿಜೀವನಕ್ಕಾಗಿ ಭಾರತ ಸರ್ಕಾರವು ಅವರಿಗೆ 2000 ನೇ ಇಸವಿಯಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಮತ್ತು 2008 ರಲ್ಲಿ ಪದ್ಮವಿಭೂಷಣ ನೀಡಿ ಗೌರವಿಸಿದೆ. ಇನ್ನು ಫಿಲ್ಮ್‌ಫೇರ್ ಪ್ರಶಸ್ತಿಗಳ ವಿಷಯಕ್ಕೆ ಬಂದರೆ, ಅವರು ಸತತವಾಗಿ ಪ್ರಶಸ್ತಿಗಳನ್ನು ಗೆಲ್ಲುತ್ತಿದ್ದುದರಿಂದ, ಹೊಸಬರಿಗೆ ಅವಕಾಶ ಸಿಗಲಿ ಎಂಬ ಉದ್ದೇಶದಿಂದ 1977ರ ನಂತರ ಪ್ರಶಸ್ತಿ ಸ್ವೀಕರಿಸುವುದಿಲ್ಲ ಎಂದು ಘೋಷಿಸಿದರು.

ಕಳೆದ ಕೆಲವು ವರ್ಷಗಳಲ್ಲಿ ಅವರು ವೈಯಕ್ತಿಕ ಜೀವನದಲ್ಲಿ ಕೆಲವು ನೋವಿನ ಸಂಗತಿಗಳನ್ನು ಎದುರಿಸಿದ್ದಾರೆ. ಅವರ ಮಗಳು ವರ್ಷಾ ಭೋಸ್ಲೆ ಅವರು ಆತ್ಮಹತ್ಯೆ ಮಾಡಿಕೊಂಡದ್ದು ಆಶಾ ಅವರಿಗೆ ದೊಡ್ಡ ಆಘಾತ ನೀಡಿತು. ಅವರ ಹಿರಿಯ ಮಗ ಹೇಮಂತ್ ಭೋಸ್ಲೆ ಅವರು ಕ್ಯಾನ್ಸರ್‌ನಿಂದಾಗಿ ನಿಧನರಾದರು. ಅವರ ಪ್ರೀತಿಯ ಅಕ್ಕ, ಭಾರತ ರತ್ನ ಲತಾ ಮಂಗೇಶ್ಕರ್ ಅವರ ನಿಧನವೂ ಆಶಾ ಅವರಿಗೆ ತುಂಬ ಲಾರದ ನಷ್ಟವನ್ನುಂಟು ಮಾಡಿತು. ಅಕ್ಕನ ಅಗಲಿಕೆಯ ಸಮಯದಲ್ಲಿ ಆಶಾ ಅವರು ತೀವ್ರ ದುಃಖಿತರಾಗಿದ್ದರು.

ಆಶಾ ಭೋಸ್ಲೆ ಅವರು ಕೇವಲ ಒಬ್ಬ ಗಾಯಕಿಯಲ್ಲ, ಅವರು ಪ್ರತಿಭೆ ಮತ್ತು ಆತ್ಮವಿಶ್ವಾಸದ ಸಂಕೇತ. ಅವರ ಧ್ವನಿ ಸದಾ ಕಾಲ ಭಾರತೀಯರ ಹೃದಯದಲ್ಲಿ ಅಮರವಾಗಿ ಉಳಿಯುತ್ತದೆ. ಅವರ ಬಗ್ಗೆ ಹರಡುವ ಸುಳ್ಳು ವದಂತಿಗಳನ್ನು ನಂಬದೆ, ಅವರ ಕಲೆಯನ್ನು ಗೌರವಿಸುವುದು ನಮ್ಮ ಕರ್ತವ್ಯ. ಸಂಗೀತ ಲೋಕದ ಅತ್ಯಂತ ಪ್ರಭಾವಶಾಲಿ ಧ್ವನಿಗಳಲ್ಲಿ ಒಬ್ಬರಾಗಿದ್ದ ಆಶಾ ಅವರ ನಿಧನ ಅತೀವ ದುಃಖಕರ.

ದರ್ಪಕ್ಕೆ ದಂಡನೆ: ನ್ಯಾಯದ ಜ್ಯೋತಿಯಲ್ಲಿ ಬೆಳಗಿದ ತೀರ್ಪು

ವಿಚಾರ ಮಂಥನ

ಡಾ. ಜಗದೀಶ ಮಾನೆ
vveditoped@gmail.com

ಇವತ್ತು ನ್ಯಾಯ ಎಂಬುದು ಶ್ರೀಮಂತರು, ಅಧಿಕಾರ ಉಳ್ಳವರು ತಮ್ಮ ಹಣಬಲ ತೋಳ್ಬಲದ ಮೂಲಕ ಖರೀದಿ ಮಾಡುತ್ತಾರೆ ಎನ್ನುವ ಭಯ ಬಹುತೇಕ ಜನರಲ್ಲಿದೆ. ಒಮ್ಮೊಮ್ಮೆ ಈ ನೆಲದಲ್ಲಿ ಕಾನೂನು ಇನ್ನೂ ಜೀವಂತವಾಗಿ ಉಳಿದಿದೆ ಮತ್ತು ಬಡವರಿಗೂ ನ್ಯಾಯ ಸಿಗುತ್ತದೆ ಅಂತ ಅನಿಸುವುದು ಈ ರೀತಿಯ ತೀರ್ಪುಗಳು ಬಂದಾಗ ಮಾತ್ರ. ಅದೇ ರೀತಿ ಮೊನ್ನೆಯ ಎ. 6ರಂದು ತಮಿಳುನಾಡಿನ ನ್ಯಾಯಾಲಯವು 9 ಜನ ಪೊಲೀಸ್ ಅಧಿಕಾರಿಗಳಿಗೆ ಗಲ್ಲು ಶಿಕ್ಷೆಯ ತೀರ್ಪನ್ನು ಘೋಷಿಸಿದೆ. ಕಾನೂನಿನ ಪಾಲಕರು ನಾವು, ನಾವೇ ಕಾನೂನು ಎನ್ನುವ ದರ್ಪದಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವ ಪೊಲೀಸ್ ಅಧಿಕಾರಿಗಳ ಎದೆಯಲ್ಲೀಗ ನಡುಕು ಹುಟ್ಟಿದೆ.

ಇದೀಗ ಕಾಲ ಬಹಳ ಬದಲಾಗಿದೆ. ಮೊದಲಿನಂತೆ ಏನೂ ಕಲಿಯದ ಅನಕ್ಷರಸ್ಥ ಪೊಲೀಸ್ ಜಮಾನ ಈಗಿಲ್ಲ. ಕೆಳವರ್ಗದ ನೌಕರರಾದ ಪೊಲೀಸರಲ್ಲೂ ಬಿ.ಎ, ಎಂ.ಎ ಹಾಗೂ ಇಂಜಿನಿಯರಿಂಗ್‌ನಂತಹ ಮುಂತಾದ ಪದವಿಗಳನ್ನು ಪಡೆದವರೇ ಹೆಚ್ಚಾಗಿ ಪೊಲೀಸ್ ಕಾನ್ಸ್ಟೇಬಲ್ ಗಳಾಗಿ ಕೆಲಸ ಮಾಡುತ್ತಿದ್ದಾರೆ. ಮೇಲಾಗಿ ಇಂತಹ ಸೋಶಿಯಲ್ ಮೀಡಿಯಾ ಜಮಾನಾದಲ್ಲಿ ಸ್ವಲ್ಪ ಯಾಮಾರಿದರೂ ವೈರಲ್ ಆಗುವ ಭಯ ಪೊಲೀಸರಲ್ಲಿದೆ. ಮತ್ತು ತಾವುಗಳು ತೀರಾ ಹಾದಿ ತಪ್ಪಿದರೆ ತಮ್ಮ ಕೆಲಸವೂ ಹೋಗುತ್ತದೆ ಎಂಬ ಭಯದಲ್ಲಿ ಇತ್ತೀಚಿಗೆ ಅದೆಷ್ಟೋ ಅಧಿಕಾರಿಗಳು ಬದಲಾಗಿದ್ದಾರೆ. ಹಾಗೇ ಬದಲಾಗದವರೂ ಇದ್ದಾರೆ.

ಪ್ರಕರಣ: ಅದು 2020ರ ಸಮಯ, ಆ ದಿನ ಇಡೀ ದೇಶವೇ ಚೀನಾ ವೈರಾಣುವಿನ ಕಪಿಮುಷ್ಠಿಯಲ್ಲಿ ಬಳಲಿ ಒದ್ದಾಡುತ್ತಿತ್ತು. ಬಳಿಕ ಲಾಕಡೌನ್ ಮುಗಿದು ಎಲ್ಲರಿಗೂ ಅಲ್ಪ ಸ್ವಲ್ಪ ರಿಲೀಫ್ ಕೂಡಾ ಸಿಕ್ಕಿತ್ತು. ಆದ್ದರಿಂದ ದೇಶದ ನಾನಾ ಕಡೆಗಳಲ್ಲಿ ಒಂದಿಷ್ಟು ಸಮಯದ ನಿಯಮಗಳನ್ನು ವಿಧಿಸುವ ಮೂಲಕ ಅಂಗಡಿ ಮುಂಗಟ್ಟುಗಳನ್ನು ತೆರೆಯುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿತ್ತು. ಅದರಂತೆ ತಮಿಳುನಾಡಿನ ಸಾತಂಕುಲಂ ಎಂಬ ನಗರದಲ್ಲಿ ತಂದೆ ಜೈರಾಜ್ ಮತ್ತು ಮಗ ಬೆನಿಕ್ ಒಂದು ಸಣ್ಣ ಮೊಬೈಲ್ ಶಾಪ್ ಇಟ್ಟುಕೊಂಡಿದ್ದರು. ಅವರ ಬದುಕಿಗೆ ಆ ಮೊಬೈಲ್ ಅಂಗಡಿಯೇ ಆಸರೆಯಾಗಿತ್ತು. ಹೀಗಿರುವಾಗ 2020ರ ಜೂ. 19ರ ಸಂಜೆಯ ಸಮಯದ ಹೊತ್ತಲ್ಲಿ ಅವರ ಮೊಬೈಲ್ ಅಂಗಡಿ ಮುಂದೆ ಪೊಲೀಸರ ತಂಡವೊಂದು ಬರುತ್ತದೆ. ನಿಯಮ ಮೀರಿ ಹೆಚ್ಚು ಸಮಯ ಅಂಗಡಿ ತೆರೆದ ಕಾರಣಕ್ಕಾಗಿ ಆ ಅಂಗಡಿಯ ಮಾಲಿಕ ಬೆನಿಕ್ ನನ್ನು ಅರೆಸ್ಟ್ ಮಾಡಿ ಠಾಣೆಗೆ ಕರೆದೊಯುತ್ತಾರೆ. ಬಳಿಕ ಠಾಣೆಗೆ ಆಗಮಿಸಿದ ತಂದೆ ಜೈರಾಜ್ 'ಯಾಕೆ ಹೀಗೆ ಮಾಡಿರಿ ಸರ್? ನನ್ನ ಮಗನನ್ನು ಬಿಟ್ಟುಬಿಡಿ' ಹೀಗಂತ ಪೊಲೀಸರಿಗೆ ಮನವಿ ಮಾಡುತ್ತಾರೆ. ಆಗ ಮಾತಿಗೆ ಮಾತು ಬೆಳೆಯುತ್ತದೆ. ಮತ್ತಷ್ಟು ರೊಚ್ಚಿಗೆದ್ದ ಪೊಲಿಸರು ಜೈರಾಜ್‌ರನ್ನೂ ಲಾಕಪ್ಪಿಗೆ ತಳ್ಳುತ್ತಾರೆ. ಆದರೆ ಪೊಲೀಸರಿಗೆ ಅದ್ಯಾವ ಕಾರಣಕ್ಕೆ ಇವರಿಬ್ಬರ ಮೇಲೆ ಅಷ್ಟೊಂದು ದ್ವೇಷವಿತ್ತೋ ದೇವರೆ ಬಲ್ಲ! ಬಳಿಕ ಮನುಷ್ಯತ್ವವನ್ನೇ ಮರೆತ ಪೊಲೀಸರು ಮೃಗಗಳಂತೆ ವರ್ತಿಸುತ್ತಾ ತಂದೆ-ಮಗ ಇಬ್ಬರಿಗೂ ಪ್ರಜ್ಞೆ ತಪ್ಪಿ ಬೀಳುವಷ್ಟರ ಮಟ್ಟಿಗೆ ಹೊಡೆಯುತ್ತಾರೆ. ನಂತರ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆ ಇಬ್ಬರನ್ನೂ ಪಕ್ಕದಲ್ಲಿರುವ ಸರಕಾರಿ ಆಸ್ಪತ್ರೆಗೆ ದಾಖಲಿಸುತ್ತಾರೆ. ಆದರೆ ಬಲವಾಗಿ ಪೆಟ್ಟು ಬಿದ್ದ ಪರಿಣಾಮ ಚಿಕಿತ್ಸೆ ಫಲಕಾರಿಯಾಗದೆ ಇಬ್ಬರೂ ಆಸ್ಪತ್ರೆಯಲ್ಲೇ ಸಾವನ್ನಪ್ಪುತ್ತಾರೆ. ಇದರಿಂದ ರೊಚ್ಚಿಗೆದ್ದ ಕುಟುಂಬದ ಸದಸ್ಯರು ಕಾನೂನಿನ ಮೊರೆ ಹೋಗುತ್ತಾರೆ. ಆ ಪ್ರಕರಣದ ಕುರಿತು ನ್ಯಾಯಾಲಯದಲ್ಲಿ ಅನೇಕ ವಾದ ವಿವಾದಗಳು ನಡೆದ ನಂತರ ಈ ಕೇಸನ್ನು ಸಿ.ಬಿ.ಐ ತನಿಖೆ ಮಾಡುವಂತೆ ನ್ಯಾಯಾಲಯವು ಆದೇಶಿಸುತ್ತದೆ. ಬಳಿಕ ಪೊಲೀಸರ ಆ ಗುಂಡಾ ವರ್ತನೆಯ ವಿರುದ್ಧ ಹಲವಾರು ಸಂಘಟನೆಗಳು, ಸಂಸ್ಥೆಗಳು ಸಿಡಿದೆದ್ದು ಹೋರಾಟದ ಮೂಲಕ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸುತ್ತವೆ. ಆ ಘಟನೆಯು ಇಡೀ ತಮಿಳುನಾಡಿನ ಪೊಲೀಸರ ಬಗ್ಗೆ ಇಡೀ ದೇಶಾದ್ಯಂತ ಬಹಳಷ್ಟು ಅಸಹ್ಯದ ಭಾವನೆ ಉಂಟಾಗುವಂತೆ ಮಾಡುತ್ತದೆ.

ಆ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಒಟ್ಟು ಹತ್ತು ಜನ ಪೊಲೀಸರ ಪೈಕಿ ಠಾಣೆಯ ಸಬ್ ಇನ್ಸ್‌ಪೆಕ್ಟರ್ 'ಪಾಲ್ ದೊರೈ' ಎಂಬುವವರು ಚೀನಿ ವೈರಾಣುವಿನ ಕಾರಣದಿಂದ ಸಾವನ್ನಪ್ಪಿದರು. ಬಳಿಕ ಆ 9 ಜನ ಪೊಲೀಸ್ ಆರೋಪಿಗಳ ವಿರುದ್ಧ ಸುದೀರ್ಘವಾದ ತನಿಖೆಯನ್ನು ನಡೆಸಿದ ಸಿ.ಬಿ.ಐ ಅಧಿಕಾರಿಗಳ ತಂಡವು ಸಾಕಷ್ಟು ವಿಷಯಗಳ ಕುರಿತು ಸೂಕ್ಷ್ಮವಾಗಿ ಅಧ್ಯಯನ ಮಾಡುತ್ತದೆ. ಸ್ಟೇಷನ್ ಒಳಗಿನ ಪೀಠೋಪಕರಣಗಳಾದ ಟೇಬಲ್ ಮತ್ತು ಲಾಠಿಗಳ ಮೇಲೆ ಮೃತ ವ್ಯಕ್ತಿಗಳ ಸಾಕಷ್ಟು ರಕ್ತದ ಗುರುತುಗಳಿದ್ದವು. ಘಟನೆ ನಡೆದ ಸಂದರ್ಭದಲ್ಲಿ ಸಿ.ಸಿ ಟಿವಿ ವಿಡಿಯೋಗಳ ಎಲ್ಲಾ ಪುಟೇಜ್ ಗಳನ್ನು ಬೇಕಂತಲೇ ಅಳಿಸಿ ಹಾಕಿರುವ ಮಾಹಿತಿ ಕೂಡಾ ತಿಳಿಯುತ್ತದೆ. ಹೀಗೆ ಸತತ ಐದು ವರ್ಷಗಳವರೆಗೆ ಈ ಪ್ರಕರಣದ ತನಿಖೆ ನಡೆಸಿದ ಸಿ.ಬಿ.ಐ ಒಟ್ಟು 105 ಜನ ಸಾಕ್ಷಿಗಳನ್ನು ವಿಚಾರಿಸಿತ್ತು. ಬಳಿಕ ಮೃತ ವ್ಯಕ್ತಿಗಳ ಮೈಮೇಲೆ ಬಿದ್ದ ಹೊಡೆತಗಳೇ ಅವರ ಸಾವಿಗೆ ಕಾರಣ ಎನ್ನುವ ಶವ ಪರೀಕ್ಷೆಯ ವರದಿಯಿಂದಲೂ ಸಾಬೀತಾಗುತ್ತದೆ. ಮೇಲಾಗಿ ವೈದ್ಯಕೀಯ ವಿಧಿ ವಿಜ್ಞಾನಗಳ ಎಲ್ಲಾ ವರದಿಗಳು ಕೂಡಾ ಆ ಪೊಲೀಸ್ ಅಧಿಕಾರಿಗಳ ವಿರುದ್ಧವೇ ಸಾಕ್ಷಿ ಹೇಳುತ್ತಿದ್ದವು. ಕೊನೆಗೆ ಈ ಎಲ್ಲಾ ಸಾಕ್ಷ್ಯಾಧಾರಗಳ ಸಾವಿರಕ್ಕೂ ಹೆಚ್ಚು ಪುಟಗಳುಳ್ಳ ಚಾರ್ಜ್ ಶೀಟ್ ಗಳನ್ನು ಸಿ.ಬಿ.ಐ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸುತ್ತದೆ.

ಬಡ ಕುಟುಂಬಕ್ಕೆ ಆಧಾರವಾಗಿದ್ದ ಆ ಎರಡು ಜೀವಗಳನ್ನು ಬಲಿಪಡೆಯುವ ಮೂಲಕ ಆ ಕುಟುಂಬದ ಆಧಾರವನ್ನೇ ಪೊಲೀಸರು ಕಿತ್ತುಕೊಂಡಿರುವ ಅಂಶವನ್ನು ನ್ಯಾಯಾಲಯ ಬಹಳ ಗಂಭೀರವಾಗಿ ಪರಿಗಣಿಸುತ್ತದೆ. ಕಾರಣ ಜೈರಾಜರ ಪತ್ನಿ 'ಶೆಲ್ವರಾಣಿ' ಅವರು ನ್ಯಾಯಾಲಯದಲ್ಲಿ 'ನನ್ನ ಗಂಡ ಹಾಗೂ ಮಗ ಇಬ್ಬರೂ ಯಾವುದೇ ತಪ್ಪುಗಳನ್ನು ಮಾಡಿರಲಿಲ್ಲ ಮತ್ತು ಅವರ ಮೇಲೆ ಈ ಹಿಂದೆ ಕೂಡಾ ಯಾವುದೇ ಕೇಸುಗಳು ದಾಖಲಾಗಿರಲಿಲ್ಲ. ಮೇಲಾಗಿ ಅವರ ಮೇಲೆ ಯಾವುದೇ ಅಪರಾಧದ ಹಿನ್ನೆಲೆಯೂ ಇರಲಿಲ್ಲ. ಹೀಗಿರುವಾಗ ಅವರಿಬ್ಬರನ್ನು ಅಮಾನವೀಯವಾಗಿ ಹೊಡೆದು ಕೊಲ್ಲಲಾಗಿದೆ' ಹೀಗಂತ ನ್ಯಾಯಾಧೀಶರ ಮುಂದೆ ಕಣ್ಣೀರು ಸುರಿಸುತ್ತಾ ಗೋಗರೆಯುತ್ತಿದ್ದರೆ, ಆ ಒಂದು ಕ್ಷಣ ಇಡೀ ನ್ಯಾಯಾಲಯವೇ ಪಿನ್‌ಡ್ರಾಪ್ ಸೈಲೆನ್ಸ್ ಆಗಿತ್ತು. ಜೊತೆಗೆ ಆ ಎಲ್ಲಾ ಸಾಕ್ಷಿ ಆಧಾರಗಳು ಆ ಸಾವಿಗೆ ಪೊಲೀಸರೇ ಹೊಣೆಗಾರರೆಂದು ಕೂಗಿ ಹೇಳುತ್ತಿದ್ದವು. ನ್ಯಾಯಾಲಯ ಆ ಎಲ್ಲಾ ಸಾಕ್ಷಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಆ ಸಂದರ್ಭದಲ್ಲಿ ಪೊಲೀಸರಿಗೂ ತಮ್ಮ ಮೇಲಿನ ಆರೋಪವನ್ನು ಅಲ್ಲಗಳೆಯುವುದಕ್ಕೆ ಸಾಧ್ಯವಾಗಲಿಲ್ಲ. ಇವರಿಗೂ ಕುಟುಂಬಗಳಿವೆ, ಈ ಅಂಶಗಳನ್ನು ತಾವು ಗಮನದಲ್ಲಿಟ್ಟುಕೊಂಡು ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡುವಂತೆ ಆರೋಪಿಗಳ ಪರ ವಕೀಲರು ಮನವಿ ಮಾಡುತ್ತಾರೆ. ಆದರೆ ಅವರ ಮನವಿಯನ್ನು ಬಿಲ್ಕುಲ್ ಆಗಿ ತಳ್ಳಿ ಹಾಕಿ ವಾದ ಪ್ರತಿವಾದಗಳನ್ನು ಆಲಿಸಿದ ನ್ಯಾಯಾಲಯವು ಆ ಒಂಭತ್ತೂ ಜನ ಆರೋಪಿಗಳನ್ನು ಅಪರಾಧಿಗಳೆಂದು ಘೋಷಿಸುವ ಮೂಲಕ ಅವರಿಗೆ ಗಲ್ಲು ಶಿಕ್ಷೆಯನ್ನು ಪ್ರಕಟಿಸುತ್ತದೆ.

ನ್ಯಾಯಾಲಯದ ಸೂಕ್ಷ್ಮತೆ: ಇಲ್ಲಿ ಬೇರೆ ಯಾರೇ ಈ ರೀತಿಯ ಕೆಲಸ ಮಾಡಿದರೆ ಅದು ಕೇವಲ ಕೊಲೆಯ ಪ್ರಕರಣ ಮಾತ್ರ ಆಗುತ್ತಿತ್ತು. ಮತ್ತು ಆ ಕೃತ್ಯದ ಹಿಂದಿನ ಉದ್ದೇಶಗಳನ್ನು ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಳ್ಳುತ್ತಿತ್ತೇನೊ ಗೊತ್ತಿಲ್ಲ. ಆದರೆ ಇಲ್ಲಿ ಮುಖ್ಯವಾಗಿ ಅಪರಾಧಿಗಳ ಸ್ಥಾನದಲ್ಲಿ ನಿಂತಿರುವವರು ಬೇರಾರೋ ಸಾಮಾನ್ಯರಲ್ಲ. ಬದಲಿಗೆ ಅವರೆಲ್ಲರೂ ಕಾನೂನನ್ನು ಕಾಪಾಡುವ ಪ್ರತಿಜ್ಞೆ ಮಾಡಿಯೇ ಖಾಕಿ ತೊಟ್ಟವರು. ಕಾನೂನು ಕಾಪಾಡುವ ಜವಾಬ್ದಾರಿ ಹೊತ್ತವರು, ಹೀಗಿರುವಾಗ ಅವರಿಂದಲೇ ಇಂತಹ ಹೀನ ಕೃತ್ಯಗಳು ನಡೆಯುತ್ತವೆ ಅಂತಾದರೆ ಅದನ್ನು ಕ್ಷಮಿಸುವುದಕ್ಕೆ ಹೇಗೆ ಸಾಧ್ಯ?! ಉದಾ: ಮಹಾಭಾರತದಲ್ಲಿ ಆಗಿರುವುದು ಕೂಡಾ ಇದೆ. ಗುರು ದ್ರೋಣ ಮತ್ತು ಭೀಷ್ಮರಿಬ್ಬರ ಕಣ್ಣೆದುರೇ ಒಂದು ಹೆಣ್ಣಿನ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ತಡೆಯಲಾಗಲಿಲ್ಲ. ಅದು ಕೇವಲ ಹಸ್ತಿನಾಪುರದ ರಕ್ಷಣೆಯ ತಮ್ಮ ಗೊಡ್ಡು ಪ್ರತಿಜ್ಞೆಯ ಕಾರಣಕ್ಕೆ ಅವರಂದು ಅನ್ಯಾಯವನ್ನು ಸಹಿಸಿದರು. ವಾಸ್ತವದಲ್ಲಿ 'ಯಾರು ಏನೇ ಪ್ರತಿಜ್ಞೆ ಮಾಡಿರಲಿ, ಕಣ್ಣು ಮುಂದೆ ದೌರ್ಜನ್ಯ ನಡೆಯುತ್ತಿದ್ದರೆ ತಮ್ಮ ಆ ಪ್ರತಿಜ್ಞೆಯನ್ನು ಮುರಿದು ಅನ್ಯಾಯವನ್ನು ತಡೆದರೆ ಅದುವೆ ನಿಜವಾದ ಧರ್ಮ'. ಅಂದು ಗುರು ದ್ರೋಣ ಮತ್ತು ಭೀಷ್ಮರು ಈ ಕೆಲಸ ಮಾಡಿದ್ದರೆ ಅವರಿಬ್ಬರೂ ಆ ಕುರುಕ್ಷೇತ್ರದಲ್ಲಿ ಸಾಯುತ್ತಿರಲಿಲ್ಲ. ಹಾಗೆಯೇ ಅಂದು ಪೊಲೀಸರು ಕೂಡಾ ನ್ಯಾಯವನ್ನು ಕಾಪಾಡುವ ಕೆಲಸ ಮಾಡಿದ್ದರೆ ಈ ರೀತಿಯ ತೀರ್ಪು ಬರುತ್ತಿರಲಿಲ್ಲ.

ಈ ಸಂದರ್ಭದಲ್ಲಿ ನ್ಯಾಯಾಲಯ ಕೊಟ್ಟ ತೀರ್ಪು ಬೇರೆ ಅಧಿಕಾರಿಗಳಿಗೆಲ್ಲ ಒಂದು ದೊಡ್ಡ ಪಾಠವಾಗುತ್ತದೆ. ಆದ್ದರಿಂದ ಇದು ಒಂದು ವಿಶೇಷ ಪ್ರಕರಣವೆಂದು ಹೇಳಿರುವ ನ್ಯಾಯಾಲಯವು ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡುವ ಔಚಿತ್ಯವೇ ಇಲ್ಲ ಎಂದು ಹೇಳುವ ಮೂಲಕ ಆ ಎಲ್ಲಾ 9 ಜನರಿಗೂ ಮರಣದಂಡನೆಯನ್ನು ವಿಧಿಸಿದೆ. ಜೊತೆಗೆ ಮೃತರಾದ ಆ ಜೈರಾಜ್ ಕುಟುಂಬಕ್ಕೆ ಗಲ್ಲು ಶಿಕ್ಷೆಗೆ ಗುರಿಯಾದ ಪೊಲೀಸರೆಲ್ಲರೂ ಸೇರಿ 1.40 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡುವಂತೆ ತನ್ನ ಆದೇಶದಲ್ಲಿ ತಿಳಿಸಿರುವುದು ಬಹಳ ವಿಶೇಷ. ಅಪರಾಧಿಗಳಿಂದಲೇ ಪರಿಹಾರವನ್ನು ಕೊಡಿಸುವ ಆ ತೀರ್ಪು ಬಹಳ ಒಳ್ಳೆಯ ತೀರ್ಪು. ಇದರಂತೆ ಎಲ್ಲಾ ಪ್ರಕರಣಗಳಲ್ಲೂ ಅಪರಾಧಿಗಳಿಂದಲೇ ಪರಿಹಾರವನ್ನು ಕೊಡಿಸುವ ಕೆಲಸವಾದರೆ ಮುಂಬರುವ ದಿನಗಳಲ್ಲಿ ಅಪರಾಧದ ಪ್ರಮಾಣಗಳು ಕೂಡಾ ಸ್ವಲ್ಪ ಕಡಿಮೆ ಆಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.

ಲಾಕಪ್ ಡೆತ್ ಆದಂತಹ ಸಂದರ್ಭದಲ್ಲಿ ಆ ತನಿಖೆಯು ಬಹಳಷ್ಟು ನಿಧನವಾಗಿ ನಡೆಯುತ್ತದೆ. ಇಲ್ಲಿ ಪೊಲೀಸರ ವಿರುದ್ಧ ಪೊಲೀಸರೇ ತನಿಖೆ ಮಾಡುವುದರಿಂದ ಹೆಚ್ಚಾಗಿ ಆ ಕೇಸ್ ಗಳು ಕ್ಲೋಸ್ ಆಗುತ್ತದೆ ಎನ್ನುವ ಧೈರ್ಯ ಅವರಲ್ಲಿರುತ್ತದೆ. ಆದರೆ ಈ ಪ್ರಕರಣದಲ್ಲಿ ಮಾತ್ರ ಹೈಕೋರ್ಟ್ ನೇರವಾಗಿ ಭಾಗವಹಿಸಿದ್ದರ ಪರಿಣಾಮದ ಫಲವಾಗಿ ಈ ರೀತಿಯ ಫಲಿತಾಂಶ ಬಂದಿದೆ. ಮುಂದೆ ಈ ಪ್ರಕರಣವು ರಾಜ್ಯದ ಹೈಕೋರ್ಟ್ ಮೆಟ್ಟಿಲೇರುತ್ತದೆ. ಸೆಕ್ಷನ್ 366ರ ಪ್ರಕಾರ ಹೈಕೋರ್ಟ್ ಈ ಶಿಕ್ಷೆಯನ್ನು ಕುಲಂಕುಶವಾಗಿ ಪರಿಶೀಲನೆ ಮಾಡುತ್ತದೆ. ಆ ಸಂದರ್ಭದಲ್ಲಿ ಹೈಕೋರ್ಟಿಗೆ ಏನಾದರೂ ಸಾಕ್ಷಿಗಳು ಕಡಿಮೆ ಅಂತ ಅನಿಸಿದರೆ ಅವರ ಶಿಕ್ಷೆಯ ಪ್ರಮಾಣವನ್ನು ಮರಣದಂಡನೆಯಿಂದ ಜೀವಾವಧಿ ಶಿಕ್ಷೆಯಾಗಿಯೂ ಬದಲಿಸಬಹುದು. ಆದರೆ ಈ ಕೇಸಿನ ಆರಂಭದಿಂದ ಇಲ್ಲಿಯವರೆಗೆ ಹೈಕೋರ್ಟ್ ನೇರವಾಗಿ ತಾನೇ ಭಾಗವಹಿಸಿದ್ದರಿಂದ ಈ ತೀರ್ಪನ್ನು ಎತ್ತಿ ಹಿಡಿಯುವ ಸಾಧ್ಯತೆಗಳೇ ಹೆಚ್ಚು ಅಂತ ಅನಿಸುತ್ತದೆ. ಹೀಗಾದರೆ ಆ ಅಪರಾಧಿಗಳಿಗೆ ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವ ಅವಕಾಶ ಸಿಗುತ್ತದೆ. ಆಗ ಸುಪ್ರೀಂ ಕೋರ್ಟ್ ಆ ಶಿಕ್ಷೆಯನ್ನು ಖಚಿತಪಡಿಸಿದರೆ ಮಾತ್ರ ಅವರನ್ನು ಗಲ್ಲಿಗೇರಿಸಲಾಗುತ್ತದೆ. ಕೊನೆಯದಾಗಿ ಕೋರ್ಟಿನ ಎಲ್ಲಾ ಬಾಗಿಲುಗಳು ಮುಚ್ಚಿದ ಸಂದರ್ಭದಲ್ಲಿ ಆರೋಪಿಗಳ ಮುಂದೆ ಇರುವ ಕೊನೆಯ ಆಯ್ಕೆ ಅಂದ್ರೆ, ಅದು 'ಕ್ಷಮಾದಾನದ' ಅರ್ಜಿ. ರಾಜ್ಯದ ರಾಜ್ಯಪಾಲರಿಗೆ ಅಥವಾ ರಾಷ್ಟ್ರಪತಿಗಳಿಗೆ ಕ್ಷಮೆ ಕೋರಿ ಅರ್ಜಿ ಸಲ್ಲಿಸುವುದು. ನಮ್ಮ ಕಾನೂನು ವ್ಯವಸ್ಥೆಯಲ್ಲಿ ನ್ಯಾಯ ಸಿಗಬೇಕಾದರೆ ಕುಬೇರನಷ್ಟು ಹಣ ಮತ್ತು ಬ್ರಹ್ಮನಷ್ಟು ಆಯಸ್ಸು ಇರಬೇಕೆನ್ನುವ ಭಾವನೆ ಅನೇಕರಲ್ಲಿದೆ. ಈ ಮಾತನ್ನು ಈ ಹಿಂದೆ ಓರ್ವ ಗೌರವಾನ್ವಿತ ನ್ಯಾಯಮೂರ್ತಿಯೊಬ್ಬರು ಬರೆದಿದ್ದರು. ವಾಸ್ತವದಲ್ಲಿ ಈ ರೀತಿಯ ಭಾವನೆಗಳು ಜನರಲ್ಲಿ ಇರುವುದು ಕೂಡಾ ಸುಳ್ಳಲ್ಲ! ಆದರೆ ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಈ ತರಹದ ನಂಬಿಕೆಗಳನ್ನು ಹುಸಿಗೊಳಿಸಬಲ್ಲ ಇಂತಹ ಅನೇಕ ತೀರ್ಪುಗಳನ್ನು ನ್ಯಾಯಾಲಯಗಳು ಆಗಾಗ ಕೊಡುತ್ತಲೇ ಇರುತ್ತವೆ ಎಂಬುದು ಕೂಡಾ ಅಷ್ಟೇ ಸತ್ಯ.

ಜನರ ಈ ರೀತಿಯ ಅಪನಂಬಿಕೆಗಳಿಗೆಲ್ಲ ಮುಖ್ಯ ಕಾರಣವೆಂದರೆ ಅದುವೇ 'ಭ್ರಷ್ಟಾಚಾರ'. ಇದಂತೂ ನಮ್ಮಲ್ಲಿ ಒಂದು ರೀತಿ ಸರ್ವಾಂತರ್ಯಾಮಿ. ನಾವು ಪ್ರಾಮಾಣಿಕರಾಗಿರದೆ ಬೇರೆಯವರು ಪ್ರಾಮಾಣಿಕವಾಗಿ ಇರಬೇಕೆಂದು ಬಯಸುತ್ತೇವೆ. ಜನರು ಮತದಾನಕ್ಕಾಗಿ ಹಣ ಪಡೆಯುತ್ತಾರೆ, ಅದೇ ನಮ್ಮ ರಾಜಕಾರಣಿಗಳು ನೇಮಕಾತಿಯಲ್ಲಿ ಬಡವರಿಂದ ಸುಲಿಗೆ ಮಾಡುತ್ತಾರೆ. ಹೀಗೆ ಹಣ ಕೊಟ್ಟು ನೇಮಕರಾದ ಅಧಿಕಾರಿಗಳು ತಮ್ಮ ಜೀವನಪರ್ಯಂತ ಜನರನ್ನು ಪೀಕುವುದರಲ್ಲಿಯೇ ಕಾಲ ಕಳೆಯುತ್ತಾರೆ. ಹಾಗಾಗಿ ನಮ್ಮ ಶಾಸಕಾಂಗ ಮತ್ತು ಕಾರ್ಯಾಂಗ ವ್ಯವಸ್ಥೆಗಳು ಒಂದು ರೀತಿಯಲ್ಲಿ ಭ್ರಷ್ಟಾಚಾರದ ಚೈನ್ ಸಿಸ್ಟಮ್ ಸೈಕಲ್. ಇಲ್ಲಿ ಸಾಮಾನ್ಯ ನಾಗರಿಕದಿಂದ ಹಿಡಿದು ಉನ್ನತ ಮಟ್ಟದ ಅಧಿಕಾರ ವಲಯವೆಲ್ಲವೂ ಭ್ರಷ್ಟರಕೂಟವೇ ಆಗಿದೆ.... ಇರಲಿ ಬಿಡಿ!

ಮರಣದಂಡನೆ ತೀರ್ಪಿನ ಪರಿಣಾಮ: ತಪ್ಪು ಮಾಡಿದ ವ್ಯಕ್ತಿ ಅದೆಷ್ಟೇ ಪ್ರಭಾವಶಾಲಿ ಆದರೂ ಆತ ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸಂದೇಶ ಬಹಳ ಸ್ಪಷ್ಟವಾಗಿ ಹೊರಹೊಮ್ಮಿದೆ. ಇನ್ಮುಂದೆ ಪೊಲೀಸರು ತಮ್ಮ ಲಾಠಿ ಎತ್ತುವ ಮೊದಲು ಹತ್ತಾರು ಬಾರಿ ಯೋಚಿಸಬೇಕಾಗುತ್ತದೆ. ಈ ಸಂದೇಶ ಇಡೀ ದೇಶದ ಪೊಲೀಸ್ ಠಾಣೆಗಳವರೆಗೂ ತಲುಪಿದೆ. ನ್ಯಾಯ ತಡವಾದರೂ ತಡವಾದ ನ್ಯಾಯವು ಸತ್ಯದ ಗೆಲುವಿಗೆ ಸಾಕ್ಷಿಯಾಗುತ್ತದೆ. ಹಾಗಾಗಿ ಈ ತೀರ್ಪು ಕೇವಲ 'ದರ್ಪಕ್ಕೆ ದಂಡನೆಯಾಗಿದೆ ಅಷ್ಟೇ, ಅದು ಪೊಲೀಸರಿಗಾದ ಶಿಕ್ಷೆಯಲ್ಲ, ಹೀಗಾದಾಗ ಸಾಮಾನ್ಯನಿಗೆ ನ್ಯಾಯಾಂಗದ ಮೇಲೆ ಇರುವ ನಂಬಿಕೆಯನ್ನು ಮತ್ತಷ್ಟು ಹೆಚ್ಚಾಗುತ್ತದೆ.

ಭಟ್ಟರ್ ಸ್ಕಾಚ್

● **ಕೃಷ್ಣ ಗೌಡ, ಮಂಡ್ಯ**
ಭಟ್ರೇ, ಸೊಳ್ಳೆಗಳು ಮನುಷ್ಯರಿಗೆ ಕಚ್ಚಿದ ಮೇಲೆ ಯಾಕೆ ಹಾರಿ ಹೋಗುತ್ತವೆ?
– **ಯಾಕೆಂದರೆ ಕಚ್ಚಿದ ಮೇಲೆ ಅವುಗಳಿಗೆ 'ಬ್ಲಡ್ ಪ್ರೆಷರ್' ಜಾಸ್ತಿಯಾಗಿರುತ್ತದೆ!**

● **ರಾಘವೇಂದ್ರಾಚಾರ್, ಮೈಸೂರು**
ಭಟ್ರೇ, ಲಾಯರ್ ಮಗ ಪರೀಕ್ಷೆಯಲ್ಲಿ ಫೇಲ್ ಆದಾಗ ಲಾಯರ್ ಏನಂದರು?
– **'ಡೋಂಟ್ ವರಿ ಮಗನೇ, ನಾವು ಮುಂದಿನ ಬೆಂಚ್‌ಗೆ ಅಪೀಲ್ ಹೋಗೋಣ!'**

● **ಕೆ.ಜಿ.ಶೇಷಾದ್ರಿ, ಬೆಂಗಳೂರು**
ಭಟ್ರೇ, ಕುದುರೆ ಯಾಕೆ ಯಾವಾಗಲೂ ಸೀರಿಯಸ್ ಆಗಿ ಇರುತ್ತೆ?
– **ಅದಕ್ಕೆ 'ಜೋಕ್' ಬದಲು, ಬರೀ 'ಜಾಕಿ'ನೇ ಸಿಗ್ತಾರಲ್ಲ!**

● **ನಿರಂಜನ ಗೌಡ, ಕನಕಪುರ**
ಭಟ್ರೇ, ಕಂಪ್ಯೂಟರ್ ಮೇಲೆ ಯಾಕೆ ಧೂಳು ಕುಳಿತಿರುತ್ತದೆ?
– **ಅದರ 'ವಿಂಡೋಸ್' ಓಪನ್ ಆಗಿ ಇರುತ್ತದಲ್ಲ?!**

● **ಬಾಬು ಕುಂದಾಪುರ, (ಇಮೇಲ್ ಮೂಲಕ)**
ಭಟ್ರೇ, ನನ್ನ ಸ್ನೇಹಿತ ಸಕ್ಕರೆ ಡಬ್ಬದ ಮೇಲೆ 'ಉಪ್ಪು' ಎಂದು ಬರೆದಿಟ್ಟಿದ್ದಾನಲ್ಲ?
– **ಇರುವೆ ಗಾಳಿಗೆ ಕನ್ಫ್ಯೂಸ್ ಮಾಡಲು ಇರಬಹುದು!**

● **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಸ್ವಿಚ್ ಬೋರ್ಡ್‌ಗೆ ಯಾಕೆ ಅಹಂಕಾರ ಜಾಸ್ತಿ?
– **ಯಾಕೆಂದರೆ ಅದು ಸದಾ 'ಪವರ್' ಹತ್ತಿರವೇ ಇರುತ್ತದಲ್ಲ?!**

● **ಮಂಡ್ಯ ಸತೀಶ, ಮಂಡ್ಯ**
ಭಟ್ರೇ, ಪೇಪರ್ ಮತ್ತು ಪೆನ್ ಜಗಳವಾಡಿದಾಗ ಪೆನ್ ಗೆದ್ದಿದ್ದಕ್ಕೆ ಕಾರಣವೇನು?
– **ಯಾಕೆಂದರೆ ಪೆನ್ ಹತ್ತಿರ 'ಪಾಯಿಂಟ್' ಇತ್ತು!**

● **ಬಾಲಕೃಷ್ಣ ಪುತ್ತೂರು, ಬೆಂಗಳೂರು**
ಭಟ್ರೇ, ಪರೀಕ್ಷೆಯಲ್ಲಿ ಫೇಲ್ ಆದವನು ರಸ್ತೆಯಲ್ಲಿ ಯಾಕೆ ಲಡ್ಡು ಹಂಚುತ್ತಿದ್ದ?
– **'ನಾನು ಮಾತ್ರವಲ್ಲ, ನನ್ನ ಜತೆ ಇಡೀ ಕ್ಲಾಸ್ ಫೇಲ್ ಆಗಿದೆ' ಅಂತ!**

● **ವಿಶ್ವನಾಥ ಕುಲಕರ್ಣಿ, ಧಾರವಾಡ**
ಭಟ್ರೇ, ಚಹಾ ಮತ್ತು ಸಕ್ಕರೆ ಜಗಳವಾಡಿದರೆ ಯಾರು ಗೆಲ್ಲುತ್ತಾರೆ?
– **ಚಹಾ, ಯಾಕೆಂದರೆ ಅದಕ್ಕೆ 'ಕಪ್' ಸಿಗುತ್ತದೆ!**

● **ಸಂದೀಪ ಭಟ್, ಉಡುಪಿ**
ಭಟ್ರೇ, ಬಲ್ಬ್ ಯಾಕೆ ಪರೀಕ್ಷೆಯಲ್ಲಿ ಫೇಲ್ ಆಯ್ತಂತೆ?
– **ಯಾಕೆಂದರೆ ಅದು ಪರೀಕ್ಷೆಯನ್ನು ತುಂಬಾ 'ಲೈಟ್' ಆಗಿ ತಗೊಂಡಿತ್ತು!**

ಎಣ್ಣೆ ನಮ್ದು... ಸುಂಕ ನಿಮ್ದು...!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
vveditoped@gmail.com

ಕಳೆದ ಮೂರು ದಶಕದಿಂದ ಕೊಲ್ಲಿ ರಾಷ್ಟ್ರಗಳಾದ ಸೌದಿ ಅರೇಬಿಯಾ ಮತ್ತು ಬಹ್ರೈನ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ನಡುವೆ ಕುವೈತ್, ಯುಎಇ, ಖತಾರ್, ಒಮನ್ ದೇಶಗಳಿಗೂ ಸಾಕಷ್ಟು ಬಾರಿ ಓಡಾಡಿದ್ದೇನೆ. ಕೊಲ್ಲಿ ರಾಷ್ಟ್ರದಲ್ಲಿ ವೃತ್ತಿ ಬದುಕಿನ ಹೆಚ್ಚು ಸಮಯ ವಿಶ್ವದ ಪ್ರಸಿದ್ಧ ತೈಲ ಅಥವಾ ಅದಕ್ಕೆ ಸಂಬಂಧಪಟ್ಟ ಸಂಸ್ಥೆಯೊಂದಿಗೆ ಕೆಲಸ ಮಾಡಿದ್ದೇನೆ. ಸುಮಾರು ಎರಡು ದಶಕಗಳವರೆಗೆ ತೈಲದ ಬಾವಿ ಕೊರೆಯುವ ಕೆಲಸದಲ್ಲಿ ಭಾಗಿಯಾಗಿದ್ದೆ. ಮಾರುಕಟ್ಟೆಯಲ್ಲಿ ತೈಲದ ಬೆಲೆ ಎಷ್ಟು, ಅದರ ಏರಿಳಿತ ಹೇಗೆ, ಬಾವಿಯಿಂದ ತೈಲ ಸಂಸ್ಕರಣೆಯಾಗಿ ರಿಫೈನರಿ ಸೇರುವ ಬಗೆ ಇತ್ಯಾದಿ ಇಂಧನದ ಎಣ್ಣೆಯ ಕುರಿತಾಗಿ ತಿಳಿದುಕೊಂಡಿದ್ದೆ. ಅದು ವೃತ್ತಿಯ ಅನಿವಾರ್ಯವಾಗಿತ್ತು. ಆದರೆ 'ಹಾರ್ಮುಜ್ ಜಲಸಂಧಿ' (Strait of Harmuz) ಬಗ್ಗೆ ಮೂವತ್ತು ವರ್ಷದಲ್ಲಿ ಮೂರು ಬಾರಿ ಕೇಳಿದ್ದಿರಬಹುದು. ಈಗ ಅದೇ ಜಲಸಂಧಿಯ ವಿಷಯ ದಿನಕ್ಕೆ ಮೂವತ್ತು ಸಲ ಕೇಳುವ ಪರಿಸ್ಥಿತಿ ಬಂದೊದಗಿದೆ.

ಪರ್ಶಿಯನ್ ಕೊಲ್ಲಿ ಮತ್ತು ಒಮನ್ ಕೊಲ್ಲಿ (ಅರಬ್ಬಿ ಸಮುದ್ರದ ವಾಯುವ್ಯ ಭಾಗದಲ್ಲಿದೆ) ಸೇರುವ ಜಾಗ ಹಾರ್ಮುಜ್ ಜಲಸಂಧಿ. ಇದರ ಉತ್ತರಕ್ಕೆ ಇರಾನ್, ದಕ್ಷಿಣಕ್ಕೆ ಒಮನ್ ದೇಶಗಳಿವೆ. ಭೂಮಿ ಹಂಚುವವರು ಅಂದು ಹೇಗೆ ಹಂಚಿದರೋ ಗೊತ್ತಿಲ್ಲ, ಒಮನ್ ದೇಶದ ಒಂದು ಭಾಗ ಒಮನ್ನಿಂದ ಬೇರ್ಪಟ್ಟು ಯುಎಇಯ ಒಳಗೂ, ಇನ್ನೊಂದು ಭಾಗ ಯುಎಇಯ ಒಂದು ಮೂಲೆಯಲ್ಲೂ ಇದೆ. ಮೂಲೆಯಲ್ಲಿರುವುದು ದೊಡ್ಡ ಭಾಗ ಅಲ್ಲವಾದರೂ ಹರ್ಮುಜ್ ಜಲಸಂಧಿ ಇರುವುದು ಈ ಜಾಗದಲ್ಲಿ. ಆದ್ದರಿಂದ ಈ ಜಲಸಂಧಿ ಇರಾನ್ ಮತ್ತು ಒಮನ್ ವ್ಯಾಪ್ತಿಗೆ ಸೇರಿದ್ದು ಎಂದು ಹೇಳಲಾಗುತ್ತದೆ. ಕುವೈತ್, ಬಹರೈನ್, ಖತಾರ್ ಮತ್ತು ಇರಾಕ್ ದೇಶಗಳ ಯಾವುದೇ ಬಂದರಿನಿಂದ, ಸೌದಿ ಅರೇಬಿಯಾದ ಪೂರ್ವ ತಟದಲ್ಲಿರುವ ದಮ್ಮಾಮ್, ಜುಬೈಲ್ ಬಂದರು, ಯುಎಇಯ ಅಬು ಧಾಬಿ, ದುಬೈ, ಶಾರ್ಜಾ (ಖೊಫರ್‌ಕ್ಕನ್ ಬಿಟ್ಟು) ಬಂದರಿನಿಂದ ಹಡಗುಗಳು ಬೇರೆ ದೇಶಗಳಿಗೆ ಹೋಗಬೇಕಾದರೆ ಈ ಜಲಸಂಧಿಯನ್ನು ದಾಟಿಯೇ ಹೋಗಬೇಕು. ಪ್ರಪಂಚದ ಭೂಪಟದಲ್ಲಿ ಸುಮಾರು ಇನ್ನೂರು ದೇಶಗಳಿರುವಾಗ, ಆರೋ–ಏಳೋ ದೇಶಗಳಿಗೆ ಸೀಮಿತವಾಗಿರುವ ಈ ಜಲಸಂಧಿಗೆ ಇಷ್ಟು ಪ್ರಾಮುಖ್ಯತೆ ಏಕೆ?

ಇಂದು ವಿಶ್ವದಾದ್ಯಂತ ಚಲಿಸುವ ಒಟ್ಟೂ ಹಡಗುಗಳಲ್ಲಿ ಶೇಕಡಾ ಇಪ್ಪತ್ತರಷ್ಟು ಹಡಗುಗಳು ನಲವತ್ತು ಕಿಲೋಮೀಟರ್‌ಗಿಂತ ಕಮ್ಮಿ ಅಗಲವಿರುವ ಇದೇ ಹರ್ಮುಜ್ ಜಲಸಂಧಿಯನ್ನು ದಾಟಿಯೇ ಹೋಗಬೇಕು. ಜಲಸಂಧಿ ಇರಾನ್ ಮತ್ತು ಒಮನ್ ಎರಡೂ ದೇಶಕ್ಕೆ ಸೇರಿದ್ದರೂ ಜಲಸಂಧಿಯ ಸುತ್ತ ಹೆಚ್ಚಿನ ಭೂಭಾಗ ಇರುವ ಕಾರಣಕ್ಕೋ ಅಥವಾ ಹತ್ತಿರದಲ್ಲಿ ಇರಾನ್ ಆಡಳಿತದಲ್ಲಿರುವ ದ್ವೀಪಗಳು ಇರುವ ಕಾರಣಕ್ಕೋ, ಇರಾನ್‌ನ ಐಆರ್‌ಜಿಸಿ ಜಲಪಡೆ ಹಾರ್ಮೋಜ್ ಮೇಲೆ ನಿಯಂತ್ರಣ ಹೊಂದಿದೆ. ಇದು ಇರಾನ್ ಯುದ್ಧ ಆರಂಭವಾದ ನಂತರದ ಬೆಳವಣಿಗೆಯಲ್ಲ. ಅದಕ್ಕೂ ಮೊದಲೇ ಆ ಜಲಸಂಧಿಯ ಸಂಚಾರ, ಸುರಕ್ಷತೆಯ ನಿಯಂತ್ರಣ ಇರಾನ್ ಕೈಯಲ್ಲಿತ್ತು, ಸುಂಕ ಮುಕ್ತವಾಗಿತ್ತು. ಯುದ್ಧ ಆರಂಭವಾದ ನಂತರ ಈ ಜಲಸಂಧಿ ದಾಟಿ ಹೋಗುವ ಹಡಗಿಗೆ ಸುಂಕ ವಿಧಿಸುತ್ತೇವೆ ಎಂದು ಇರಾನ್ ಹೇಳುತ್ತಿದೆ.

ನಾಲ್ಕು ವರ್ಷದ ಹಿಂದೆ ರಷ್ಯಾ ಮತ್ತು ಯುಕ್ರೇನ್ ನಡುವೆ ಯುದ್ಧ ಆರಂಭವಾದಾಗ ಹೇಗೆ ಯುರೋಪ್ ಕಷ್ಟಕ್ಕೊಳಗಾಗಿತ್ತೋ, ಹೆಚ್ಚು ಕಮ್ಮಿ ಅದೇ ಪರಿಸ್ಥಿತಿ ಇಂದು ಇತರ ಕೊಲ್ಲಿ ರಾಷ್ಟ್ರಗಳಿಗಾಗಿದೆ. ಯಾರದ್ದೋ ಯುದ್ಧದಲ್ಲಿ ಇನ್ಯಾರೋ ಸೊರಗಬೇಕು ಅಂದಂತೆ. ಈ ಯುದ್ಧದಿಂದ ಯುರೋಪ್ ದೇಶಗಳಿಗೆ ಯಾವುದೇ ನಷ್ಟವಾಗಿಲ್ಲ ಎಂದಲ್ಲ. ಅಲ್ಲಿಯೂ ಪೆಟ್ರೋಲ್ ಡೀಸೆಲ್ ಬೆಲೆ ಈಗಾಗಲೇ ದ್ವಿಗುಣಗೊಂಡಿದೆ. ಆ ನಿಟ್ಟಿನಲ್ಲಿ ಭಾರತವೇ ಅಡ್ಡಿಯಿಲ್ಲ. ಅನಿಲದ ಕೊರತೆ ಬಿಟ್ಟರೆ ಇದುವರೆಗೆ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಏರಿಕೆಯಾಗಲಿ, ಕೊರತೆಯಾಗಲಿ ಇದುವರೆಗಂತೂ ಕಂಡು ಬರಲಿಲ್ಲ. ಕೊಲ್ಲಿ ರಾಷ್ಟ್ರಗಳಿಗೆ ಸದ್ಯ ಯಾವುದೇ ವಸ್ತುವಿನ ಅಭಾವ ಇಲ್ಲ. ಆದರೆ ಯುದ್ಧ ಕೆಲ ಕಾಲ ಮುಂದುವರಿದರೆ ಹಾರ್ಮುಜ್ ಅನಿವಾರ್ಯವಾಗಿರುವ ದೇಶಗಳಿಗೆ ಕೆಲವು ಕೊರತೆಯಂತೂ ಉಂಟಾಗುತ್ತದೆ.

ಹಾರ್ಮುಜ್ ಜಲಸಂಧಿಯಿಂದ ಪ್ರತಿನಿತ್ಯ ಸುಮಾರು ನೂರಮೂವತ್ತರಿಂದ ನೂರನಲವತ್ತು ಹಡಗುಗಳು ಸುಮಾರು ಇಪ್ಪತ್ತು ಮಿಲಿಯನ್ ಬ್ಯಾರೆಲ್ ತೈಲ, ಅನಿಲ, ಇನ್ನಿತರ ಪೆಟ್ರೋಲಿಯಮ್ ಉತ್ಪನ್ನ ಹೊತ್ತು ಬರುತ್ತಿದ್ದವು. ಈಗ ಇರಾನ್ ಒಂದು ಹಡಗಿಗೆ ಎರಡು ಮಿಲಿಯನ್ ಡಾಲರ್ (ಸುಮಾರು ನೂರ ಎಂಬತ್ತೈದು ಕೋಟಿ ರೂಪಾಯಿ) ಅಥವಾ ಒಂದು ಬ್ಯಾರೆಲ್‌ಗೆ (159 ಲೀಟರ್) ಒಂದು ಡಾಲರ್ ಸುಂಕ ನೀಡಬೇಕು ಎಂದು ತಾಕೀತು ಮಾಡುತ್ತಿದೆ. ಸುಂಕದಿಂದ ಬಂದ ಹಣವನ್ನು ಯುದ್ಧದಲ್ಲಾದ ಹಾನಿ ಭರಿಸಲು ಬಳಸುವುದಾಗಿ ಇರಾನ್ ಹೇಳಿಕೊಳ್ಳುತ್ತಿದೆ. ಇದನ್ನು ಬರೆಯುವ ಹೊತ್ತಿಗೆ ಅಮೆರಿಕ ಮತ್ತು ಇರಾನ್ ನಡುವಿನ ಸಂಧಾನದ ಮಾತುಕತೆ ವಿಫಲವಾಗಿದೆ ಎಂಬ ಸುದ್ದಿ ಬರುತ್ತಿದೆ. ಅದಕ್ಕೆ ಇರುವ ಹದಿನೈದು ಕಾರಣಗಳಲ್ಲಿ ಹಾರ್ಮುಜ್ ಜಲಸಂಧಿಯ ಸುಂಕದ ವಿಷಯವೂ ಒಂದು ಕಾರಣ.

ಒಂದು ವೇಳೆ ಸುಂಕ ಕೊಡಲೇಬೇಕಾದ ಪರಿಸ್ಥಿತಿ ಬಂತು ಅಂದುಕೊಳ್ಳಿ, ಎಲ್ಲಕ್ಕಿಂತ ಹೆಚ್ಚು ಸಂಕಷ್ಟಕ್ಕೊಳಗಾಗುವುದು ಇದೇ ಕೊಲ್ಲಿ ರಾಷ್ಟ್ರಗಳು. ಏಕೆಂದರೆ ಉಳಿದ ದೇಶಗಳಿಗೆ ತೈಲ ಆಮದು ಮಾಡಿಕೊಳ್ಳಲು ಹಾರ್ಮೋಜ್ ಜಲಸಂಧಿಯನ್ನು ತಪ್ಪಿಸುವ ಪರ್ಯಾಯ ದೇಶಗಳಿವೆ. ಅಲ್ಲದೇ, ಸೌದಿ ಅರೇಬಿಯಾದ ಪಶ್ಚಿಮ ಮತ್ತು ಯುಎಇಯ ಪೂರ್ವದಲ್ಲಿರುವ ಇತರ ಬಂದರುಗಳೂ ಇವೆ. ಆದರೆ ಕುವೈತ್, ಬಹ್ರೈನ್, ಇರಾಕ್ ಮತ್ತು ಖತಾರ್ ನಷ್ಟಕ್ಕೊಳಗಾಗುತ್ತವೆ. ಏಕೆಂದರೆ ಆ ದೇಶಗಳಿಂದ ಆಮದು ಮಾಡಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತದೆ. ಇದರಿಂದಾಗಿ ಇಂಧನದ ಎಣ್ಣೆ ತೆಗೆಯುವ ಈ ದೇಶಗಳು 'ಎಣ್ಣೆ ನಮ್ದು, ಸುಂಕ ನಿಮ್ದು...?' ಎನ್ನುವ ಪರಿಸ್ಥಿತಿ ಇದೆ.

ಯುದ್ಧ ಆರಂಭಕ್ಕೆ ಮುನ್ನ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ ಅರವತ್ತೈದರಿಂದ ಎಪ್ಪತ್ತು ಡಾಲರ್ ಇತ್ತು. ಈಗ ಯುದ್ಧ ಮುಗಿದರೂ ಒಂದು ಬ್ಯಾರೆಲ್ ಬೆಲೆ ತೊಂಬತ್ತರಿಂದ ನೂರು ಡಾಲರ್ ಆಸುಪಾಸಿನಲ್ಲಿ ನಿಲ್ಲಬಹುದು, ಅದಕ್ಕಿಂತ ಕಮ್ಮಿ ಆಗುವುದಿಲ್ಲ ಎನ್ನಲಾಗುತ್ತಿದೆ. ಬಹುತೇಕ ಕೊಲ್ಲಿ ರಾಷ್ಟ್ರಗಳಲ್ಲಿ ಈಗ ಒಂದು ಲೀಟರ್ ಪೆಟ್ರೋಲ್ ಬೆಲೆ ಐವತ್ತು ರೂಪಾಯಿ. ಭಾರತದಲ್ಲಿ ನೂರು ರೂಪಾಯಿಯ ಆಸುಪಾಸು. ಅಂದರೆ, ಹೆಚ್ಚು ಕಮ್ಮಿ ನೂರು ಪ್ರತಿಶತ ಹೆಚ್ಚು. ಅದರಲ್ಲಿ ಸಾಗಾಣಿಕೆ, ಸಂಸ್ಕರಣೆ, ವಿತರಣೆ, ದಲ್ಲಾಳಿ, ಮಜೂರಿ, ಕೇಂದ್ರ ಮತ್ತು ರಾಜ್ಯ ಸರಕಾರದ ತೆರಿಗೆ, ಎಲ್ಲೆಲ್ಲಿ ಎಷ್ಟೆಷ್ಟು ಸಲ್ಲಬೇಕೋ ಅದು, ಎಲ್ಲವೂ ಬಂತು. ಆದರೂ, ಒಂದು ಲೀಟರ್‌ಗೆ ಮೂವತ್ತೈದು ರೂಪಾಯಿ ಇರುವ ಕಚ್ಚಾ ಎಣ್ಣೆ, ಜನಸಾಮಾನ್ಯರ ವಾಹನದ ಹೊಟ್ಟೆಗೆ ಊಟವಾಗುವಾಗ ಅರವತ್ತೈದು ರೂಪಾಯಿ ಹೆಚ್ಚು ಜೋಡಣೆಯಾಗುತ್ತದೆ. ಮುಂದೆ ಒಂದು ಬ್ಯಾರೆಲ್‌ಗೆ ನೂರು ಡಾಲರ್ ಆದರೆ, ಅದರಲ್ಲಿ ಯಾರ್ಯಾರು ಎಷ್ಟೆಷ್ಟು ಉಣ್ಣುತ್ತಾರೋ ಗೊತ್ತಿಲ್ಲ. ಆಗ ಕೊಲ್ಲಿ ರಾಷ್ಟ್ರಗಳು 'ಎಣ್ಣೆ ನಮ್ದು... ಊಟ ನಿಮ್ದು...' ಎನ್ನುವಂತಾಗುತ್ತದೆ.

ಅಷ್ಟಕ್ಕೂ ಭಾರತ ಕೊಲ್ಲಿ ರಾಷ್ಟ್ರಗಳಿಂದ ಎಷ್ಟು ತೈಲ ಆಮದು ಮಾಡಿಕೊಳ್ಳುತ್ತಿದೆ? 'ದಿ ಇಂಡಿಯನ್ ಎಕ್ಸ್‌ಪ್ರೆಸ್' ವರದಿಯ ಪ್ರಕಾರ ಶೇಕಡಾ ನಲವತ್ತಕ್ಕಿಂತಲೂ ಕಮ್ಮಿ. ಇತ್ತೀಚಿನ ದಿನಗಳಲ್ಲಿ ಭಾರತ

ರಷ್ಯಾದಿಂದ ನಲವತ್ತು ಪ್ರತಿಶತ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಎರಡನೆಯ ಸ್ಥಾನ ಇರಾಕ್, ಇಪ್ಪತ್ತು ಪ್ರತಿಶತ. ಮೂರನೆಯ ಸ್ಥಾನದಲ್ಲಿ ಸೌದಿ ಅರೇಬಿಯಾ, ಹನ್ನೊಂದು ಪ್ರತಿಶತ. ಇತರ ಕೊಲ್ಲಿ ರಾಷ್ಟ್ರಗಳಾದ ಯುಎಇ, ಕುವೈತ್ ಇತ್ಯಾದಿಗಳಿಂದ ಶೇಕಡಾ ಐದು. ಉಳಿದಂತೆ ಅಮೆರಿಕ, ನೈಜೀರಿಯಾ, ಅಂಗೋಲಾ, ಬ್ರೆಝಿಲ್ ದೇಶಗಳಿಂದ ಸುಮಾರು ಹತ್ತು ಪ್ರತಿಶತ. ಮುಂದಿನ ದಿನಗಳಲ್ಲಿ ಭಾರತಕ್ಕೆ ಕೊಲ್ಲಿ ರಾಷ್ಟ್ರಗಳ ಮೇಲೆ ಅವಲಂಬಿತವಾಗುವುದನ್ನು ಬಿಟ್ಟು ಇತರ ದೇಶಗಳಿಂದ ಆಮದು ಹೆಚ್ಚಿಸಿಕೊಳ್ಳದೆ ಬೇರೆ ಮಾರ್ಗವಿಲ್ಲ. ಯುದ್ಧ ಆರಂಭವಾದಾಗಿನಿಂದ ಇದುವರೆಗೆ ಭಾರತದ ಐದು ಹಡಗು ಮಾತ್ರ ಭಾರತ ತಲುಪಿದೆ. ಇನ್ನೂ ಹತ್ತು ಹಡಗು ಸಿಕ್ಕಿಹಾಕಿಕೊಂಡಿದೆ. ಮತ್ತೆ ಮತ್ತೆ ಅದೇ ಸುಳಿಯಲ್ಲಿ ಸಿಲುಕಿ ಭಾರತವಷ್ಟೇ ಅಲ್ಲ, ಯಾವ ದೇಶವೂ ಬಯಸುವುದಿಲ್ಲ. ಹಾಗಾಗಿ ಮುಂದೊಂದು ದಿನ ಕೊಲ್ಲಿ ರಾಷ್ಟ್ರಗಳಿಂದ ರಫ್ತು ಕಮ್ಮಿಯಾದರೂ ಆಶ್ಚರ್ಯಪಡಬೇಕಾಗಿಲ್ಲ.

ಭಾರತ ಅಮೆರಿಕದಿಂದಲೂ ತೈಲ ಆಮದು ಅಮಾಡಿಕೊಳ್ಳುತ್ತದೆಯೇ? ಅಮೆರಿಕದಲ್ಲಿ ಅಷ್ಟು ತೈಲ ಇದೆಯೇ? ಹಾಗಾದರೆ ಅಮೆರಿಕದಲ್ಲಿ ಎಷ್ಟು ತೈಲ ಇದೆ? ಅಮೆರಿಕದಲ್ಲಿ ತೈಲ ಇದ್ದರೂ ಅಮೆರಿಕ ಬೇರೆ ದೇಶಗಳಿಂದ ಏಕೆ ತೈಲವನ್ನು ಆಮದು ಮಾಡಿಕೊಳ್ಳುತ್ತದೆ? ತೈಲ ಇರುವ ರಾಷ್ಟ್ರಗಳ ಮೇಲೆ ಯಾವುದಾದರೂ ನೆಪ ಹೇಳಿಕೊಂಡು ಯುದ್ಧಕ್ಕೆ ಮುಗಿಬೀಳುವುದೇಕೆ?

ವಿಶ್ವದಲ್ಲಿ ಅತಿ ಹೆಚ್ಚು ತೈಲ ನಿಕ್ಷೇಪ ಹೊಂದಿರುವ ದೇಶ ಅಮೆರಿಕ. ವಿಶ್ವದ ಶೇಕಡಾ ಇಪ್ಪತ್ತು ಪ್ರತಿಶತ ಅಮೆರಿಕದಲ್ಲಿದ್ದರೆ, ಸೌದಿ ಅರೇಬಿಯಾ ಮತ್ತು ರಷ್ಯಾ ತಲಾ ಹತ್ತು ಪ್ರತಿಶತ ತೈಲ ನಿಕ್ಷೇಪ ಹೊಂದಿವೆ. ಅಮೆರಿಕದ ಬಳಿ ನಲವತ್ತಾರು ಬಿಲಿಯನ್ ಬ್ಯಾರೆಲ್ ತೈಲ ಇಂದಿಗೂ ದಾಸ್ತಾನಿನಲ್ಲಿದೆ. ಪ್ರತಿನಿತ್ಯ ಅತಿ ಹೆಚ್ಚು (ಸುಮಾರು ಹದಿಮೂರು ಮಿಲಿಯನ್ ಬ್ಯಾರೆಲ್) ತೈಲ ಉತ್ಪಾದಿಸುವ ದೇಶವೂ ಅಮೆರಿಕ. ಆದರೂ ಅಮೆರಿಕ ಇತರ ದೇಶಗಳಿಂದ ಕಚ್ಚಾ ತೈಲ ತೈಲ ಆಮದು ಮಾಡಿಕೊಳ್ಳಲು ಕಾರಣ, ಅಮೆರಿಕದಲ್ಲಿ ತೈಲ ಭೂಮಿಗಿಂತ ಕಲ್ಲಿನಲ್ಲಿನಲ್ಲಿ ಹೆಚ್ಚಾಗಿದೆ. ಅವು ಸಣ್ಣ ಕಣಗಳಿಂದ ಕೂಡಿದ ದೊಡ್ಡ ಕಲ್ಲುಗಳು (fine grained sedimentary rocks). ಇವುಗಳನ್ನು ಶೆಲ್ ಫೀಲ್ಡ್ ಎಂದು ಕರೆಯುತ್ತಾರೆ. ಅದರಿಂದ ತೈಲ ಹೊರಗೆ ತೆಗೆಯುವುದು ಭೂಮಿಯಿಂದ ಹೊರಗೆ ತೆಗೆಯುವಷ್ಟು ಸುಲಭವಲ್ಲ. ಇದರಿಂದ ಒಂದು ಬ್ಯಾರೆಲ್ ತೈಲವನ್ನು ಹೊರಗೆ ತೆಗೆಯಬೇಕಾದರೆ ಸುಮಾರು ಐವತ್ತು ಡಾಲರ್ ಖರ್ಚಾಗುತ್ತದೆ. ಅದೇ ಭೂಮಿಯಿಂದ ಕಚ್ಚಾ ತೈಲ ಹೊರಗೆದರೆ ಹತ್ತರಿಂದ ಹದಿನೈದು ಡಾಲರ್ ಒಳಗೆ ಕೆಲಸ ಮುಗಿಯುತದೆ. ತನ್ನ ಬಳಿ ಇರುವ ತೈಲಕ್ಕಿಂತ ಕಡಿಮೆ ದರದಲ್ಲಿ ಬೇರೆ ದೇಶದಲ್ಲಿ ತೈಲ ದೊರಕುತ್ತದೆ, ಅದನ್ನು ತನ್ನ ದೇಶಕ್ಕೆ ತಂದಲ್ಲಿ ಹಣವೂ ಉಳಿಯುತ್ತದೆ, ತನ್ನ ಬಳಿ ಇರುವ ತೈಲವೂ ತನ್ನಲ್ಲಿಯೇ ಇರುತ್ತದೆ ಎನ್ನುವುದು ಅಮೆರಿಕದ ಲೆಕ್ಕಾಚಾರ. ಅಮೆರಿಕ ಮಾತ್ರವಲ್ಲ, ಯಾವುದೇ ದೇಶವಾದರೂ ಇದನ್ನೇ ಮಾಡುತ್ತಿತ್ತು. ಈ ಕಾರಣದಿಂದ ಅಮೆರಿಕಕ್ಕಷ್ಟೇ ಅಲ್ಲ, ವಿಶ್ವದ ಬಹುತೇಕೆ ದೇಶಗಳಿಗೆ ಹಾರ್ಮುಜ್ ಜಲಸಂಧಿ ಅತ್ತ ಉಗುಳಲೂ ಆಗದ, ನುಂಗಲೂ ಆಗದ ಬಿಸಿ ತುಪ್ಪವಾಗಿದೆ.

ಹಾಗಾದರೆ ಈ ತೈಲದ ಸಮಸ್ಯೆ ಎದುರಾದದ್ದು ಇದೇ ಮೊದಲಬಾರಿಯೇ ಎಂದರೆ ಖಂಡಿತ ಅಲ್ಲ. 1973ರ ಅಕ್ಟೋಬರ್ ನಲ್ಲಿ ನಡೆದ ಅರಬ್ ಇಸ್ರೇಲ್ ಯುದ್ಧದ ಸಂದರ್ಭದಲ್ಲಿ ಕೊಲ್ಲಿ ರಾಷ್ಟ್ರಗಳು ಕಚ್ಚಾ ತೈಲದ ರಫ್ತನ್ನು ನಿಷೇಧಿಸಿದ್ದವು. ರಸ್ತೆಗಳಲ್ಲಿ ಚಲಿಸುತ್ತಿದ್ದ ಬಹುತೇಕ ವಾಹನಗಳು ಮನೆಯ ಮುಂದೆ ನಿಂತುಕೊಂಡವು. ಸುಮಾರು ಅರ್ಧಕ್ಕರ್ಧ ಪ್ರಪಂಚವೇ ಸ್ಥಗಿತಗೊಂಡಿತ್ತು. ಕಚ್ಚಾ ತೈಲದ ಬೆಲೆ ಇದ್ದಕ್ಕಿದ್ದಂತೆ ಹಲವಾರು ಬಾರಿ ಏರಿತ್ತು. ಪೆಟ್ರೋಲ್ ಡೀಸೆಲ್ ಮತ್ತು ಅನಿಲದ ಬೆಲೆ ಗಗನಕ್ಕೆ ಏರಲು ಆರಂಭವಾಯಿತು. ಜನರ ಜೀವನವೂ ವಾಹನದಂತೆಯೇ ಆಗಿತ್ತು. ಅಮೆರಿಕದಂತಹ ಪ್ರಬಲ ದೇಶಗಳ ಆರ್ಥಿಕತೆಯೂ ಕುಸಿತದ ಅಂಚಿನಲ್ಲಿತ್ತು. ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದವು. ಈ ಘಟನೆ ವಿಶ್ವಕ್ಕೆ ಕಚ್ಚಾ ತೈಲದ ನಿಜವಾದ ಶಕ್ತಿಯ ಬಗ್ಗೆ ಸೂಚನೆ ನೀಡಿತು. ಜನರು ಕಚ್ಚಾತೈಲವನ್ನು 'ಕಪ್ಪು ಚಿನ್ನ' ಎಂದು ಕರೆಯಲು ಆರಂಭಿಸಿದರು. ಹಾಗೆ ನೋಡಿದರೆ ತೈಲದ ಸತ್ವ ಸ್ವರ್ಣದ ಸತ್ವಕ್ಕೆ ಕಡಿಮೆ ಏನೂ ಅಲ್ಲ. ಈ ದಿನಗಳಲ್ಲಿ ಬಂಗಾರ ಇಲ್ಲದೇ ಬದುಕಬಹುದು, ಪೆಟ್ರೋಲಿಯಮ್ ಉತ್ಪನ್ನಗಳಿಲ್ಲದೆ ಬದುಕಲು ಸಾಧ್ಯವೇ ಇಲ್ಲ. 1992ರ ಗಲ್ಫ್ ಯುದ್ಧದ ಸಂದರ್ಭದಲ್ಲಿಯೂ ತೈಲದ ಬೆಲೆ ಏರಿತ್ತು. ಇದಾದ ನಂತರ 2008ರಲ್ಲಿ ಚೀನಾದಲ್ಲಿ ಕೈಗಾರಿಕಾ ಆರ್ಥಿಕತೆ ಬದಲಾಗುವ ಸಂದರ್ಭದಲ್ಲಿ ತೈಲದ ಬೆಲೆ ಬ್ಯಾರೆಲ್‌ಗೆ ನೂರ ಐವತ್ತಕ್ಕೆ ತಲುಪಿತ್ತು. 2022 ರಲ್ಲಿ ರಷ್ಯಾ–ಯುಕ್ರೇನ್ ಯುದ್ಧ ಆರಂಭವಾದಾಗಲೂ ಬೆಲೆ ನೂರ ಇಪ್ಪತ್ತಕ್ಕೆ ಏರಿತ್ತು.

ಹಾಗಾದರೆ ಈ ಕಚ್ಚಾ ತೈಲದ ಇತಿಹಾಸವೇನು? ಅದು ಇಷ್ಟು ಮಹತ್ವ ಪಡೆದದ್ದು ಹೇಗೆ? ಈ ತೈಲವನ್ನು ಮಾರಿ ಹಣಗಳಿಸಬಹುದು ಎಂದು ಮೊದಲು ಸ್ಕೆಚ್ ಹಾಕಿದವರು ಯಾರು? ವಿವರ ಮುಂದಿನ ಅಂಕಣದಲ್ಲಿ...

ಒದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇವರಿಗೇಕೆ ಭಾರತ ರತ್ನವಿಲ್ಲ?

ಈಗ ಕೆಲ ದಿನಗಳ ಹಿಂದಷ್ಟೇ ಹರಿದಾಡಿದ ಸಾಮಾಜಿಕ ಜಾಲತಾಣದ ಸುದ್ದಿ, ನಿಜಕ್ಕೂ ಆಶ್ಚರ್ಯಕಾರಕವಷ್ಟೇ ಅಲ್ಲ,ಆಘಾತಕಾರಿಯೂ ಹೌದು.

'ಭಾರತ ರತ್ನ' ಪ್ರಶಸ್ತಿ ವಿಷಯ ತಿಳಿದೇ ಇದೆ. ಯಾವುದೇ ಒಂದು ಕ್ಷೇತ್ರದಲ್ಲಿ ಅಭೂತ ಪೂರ್ವ ಸೇವೆ ಅಥವಾ ಸಾಧನೆ ಮಾಡಿದವರಿಗೆ ಸಲ್ಲುವ ಗೌರವ ಇದು. ಇದು ಪ್ರಾರಂಭವಾಗಿದ್ದು 1954ರಲ್ಲಿ, ಇಲ್ಲಿಯ ತನಕ 53 ಜನರಿಗೆ ಈ ಗೌರವ ನೀಡಲಾಗಿದೆ. ಅವುಗಳಲ್ಲಿ 35– 38 ರಾಜಕಾರಣಿಗಳಿಗೆ, 6–7 ಸಿನಿಮಾ ನಟ–ನಟಿಯರಿಗೆ, ಸಂಗೀತಗಾರರಿಗೆ,ವಿಜ್ಞಾನಿಗಳಿಗೆ, ಸಮಾಜ ಸೇವಕರಿಗೆ, ಕ್ರಿಕೆಟಿಗರಿಗೆ. ಆದರೆ ಕೇವಲ ಒಂದೇ ಒಂದು ಪ್ರಶಸ್ತಿ ಉದ್ಯಮಿಗೆ ಸಂದಿದೆ ಅದು ಜೆಆರ್‌ಡಿ ಟಾಟಾ ಅವರಿಗೆ !! ಇದೆಂತಹ ವಿಪರ್ಯಾಸ ಅಂತ ಅನಿಸುತ್ತಿಲ್ಲವೆ ? ದೇಶದ ಆರ್ಥಿಕ ಬುನಾದಿ, ಉದ್ಯೋಗಸೃಷ್ಟಿ, ಅವಕಾಶಗಳನ್ನು ಕಲ್ಪಿಸಿದ, 6 ಮಿಲಿಯನ್ ಉದ್ಯೋಗ, ಶೇ. 6ರ ಜಿಡಿಪಿ, 250 ಬಿಲಿಯನ್ ಡಾಲರ್ ಆದಾಯ ತಂದ ಕೇವಲ ಬೆಂಗಳೂರು ಒಂದರ ಮೂವರು ಉದ್ಯಮಿಗಳಿಗೆ ಇನ್ನೂ ಈ ಪ್ರಶಸ್ತಿ ಲಭಿಸಿಲ್ಲ. ಟಿಸಿಎಸ್, ವಿಪ್ರೋ, ಇನ್ಫೋಸಿಸ್ ಕಂಪನಿಗಳ ಕೊಡುಗೆಯನ್ನು ಯಾರಾದರೂ ನಿರ್ಲಕ್ಷ ಮಾಡಲು ಸಾಧ್ಯವೆ ? ಇಷ್ಟಾದರೂ, ಈ ಪ್ರಶಸ್ತಿ ಕಮಿಟಿಗೆ ಇವರಾರೂ ಕಣ್ಣಿಗೆ ಬೀಳಲಿಲ್ಲವೇಕೆ ? ಅದೇ, ಕೇವಲ ಮತ ಬ್ಯಾಂಕ್ ಹೆಚ್ಚಿಸಿ, ಅಧಿಕಾರ ಗಿಟ್ಟಿಸಿಕೊಂಡು, ತಮ್ಮ ಆದಾಯ ಹೆಚ್ಚಿಸಿಕೊಂಡ ರಾಜಕಾರಣಿಗಳಿಗೆ ಇಷ್ಟೊಂದು ಮಹತ್ವದ ಪ್ರಶಸ್ತಿಯನ್ನು ಕೊಟ್ಟಿರುವ ಉದ್ದೇಶ ಯಾರಿಗಾದರೂ ಅರ್ಥವಾದೀತೆ ? ಉದ್ಯಮಿ ಅಂದರೆ ಕೇವಲ ಹಣ ಸಂಪಾದಿಸುವವ ಎಂಬ ತಪ್ಪು ಕಲ್ಪನೆ ನಮ್ಮವರದ್ದಾಗಿದೆ. ಅವರಿಂದ ರಾಜ್ಯಕ್ಕೆ, ದೇಶಕ್ಕೆಏನೆಲ್ಲ ಕೊಡುಗೆ ಸಲ್ಲುತ್ತಿದೆ ಎಂಬುದು ಗಣನೆಗೇ ಬಾರದಿರುವುದು ನಿಜಕ್ಕೂ ಬೇಸರದ ಸಂಗತಿ. ಕೇವಲ ಬೆಂಗಳೂರು ಅಥವಾ ಕರ್ನಾಟಕವೊಂದನ್ನೇ ತೆಗೆದುಕೊಂಡರೆ, ನಾರಾಯಣ ಮೂರ್ತಿ, ಸುಧಾ ಮೂರ್ತಿ, ಅಜಿತ್ ಪ್ರೇಮ್ ಜೀ, ಎಫ್.ಸಿ.ಕೊಹ್ಲಿ ಇವರುಗಳ ಯೋಗದಾನವನ್ನು ಅನುಲಕ್ಷಿಸಿ ಅವರಿಗೂ 'ಭಾರತ ರತ್ನ' ಸಿಗುವಂತಾದರೆ, ಪ್ರಶಸ್ತಿಯ ಮೌಲ್ಯವೂ ವೃದ್ಧಿ ಆದೀತು. ನಮ್ಮಲ್ಲಿ ಅದೆಷ್ಟೋ ಉದ್ಯಮಿಗಳು, ತಮಗಾಗಿಯಷ್ಟೇ ಇರದೆ, ರಾಜ್ಯದ/ ದೇಶದ ಅಭ್ಯದಯದ ಬಗ್ಗೂ ವಿಚಾರಿಸುತ್ತಿರುವಾಗ, ಅಂಥವರ ಶ್ರಮ, ಕೊಡುಗೆಯನ್ನೂ ಪರಿಗಣಿಸಲೇ ಬೇಕಲ್ಲವೆ ? 1954ರಿಂದ ಇಲ್ಲಿಯ ತನಕ ಕೇವಲ ಒಬ್ಬ ಉದ್ಯಮಿಗೆ ನೀಡಿದ್ದು ವ್ಯವಸ್ಥೆಯ ಅಣಕು ಅಂತಲೂ ಅನಿಸುತ್ತಿದೆ. ಪ್ರಶಸ್ತಿ ಆಯ್ಕೆ ಸಮಿತಿ ಇನ್ನು ಮುಂದಾದರೂ, ಉದ್ಯಮ ಕ್ಷೇತ್ರಕ್ಕೂ ಇಂತಹ ಪ್ರಶಸ್ತಿ ಕೊಡುವಂತಾಗಿ, ಅವರ ಮನೋಬಲ ಹೆಚ್ಚಿಸುವಂತಾಗಲಿ!

–ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ಸಿಎಂ ಸಲಹೆ ಸೂಕ್ತವಾದದ್ದು!

ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಬೀದರದಲ್ಲಿ ಶನಿವಾರದಂದು ಉದ್ಘಾಟನೆಗೊಂಡ ರಾಜ್ಯ ಮಟ್ಟದ ಪತ್ರಕರ್ತರ ಸಮೇಳನ ಉದ್ಘಾಟಿಸಿ ಮಾತನಾಡುತ್ತಾ ಊಹಾ ಪತ್ರಿಕೋದ್ಯಮ ಅಪಾಯಕಾರಿಯಾದುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಮುಖ್ಯಮಂತ್ರಿಗಳ ಸಲಹೆ ಉಪಯುಕ್ತವಾದುದು. ಏಕೆಂದರೆ, ಇತ್ತಿಚಿನ ದಿನಗಳಲ್ಲಿ ಪ್ರಿಂಟ್ ಹಾಗೂ ದೃಶ್ಯ ಮಾಧ್ಯಮಗಳು ಕೆಲವು ಕ್ಷುಲ್ಲಕ ಸುದ್ದಿಗಳನ್ನು ದಿನವಿಡೀ ಬಿತ್ತರಿಸುವ ಮಾಧ್ಯಮಗಳು ಅದರ ಅಡ್ಡ ಪರಿಣಾಮದ ಬಗ್ಗೆಯೂ ಯೋಚನೆ ಮಾಡುವುದು ಅವಶ್ಯ. ಮಾಧ್ಯಮಗಳು ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಆಶಯಗಳಿಗೆ ಧಕ್ಕೆ ತರುವಂಥ ವಿಚಾರಗಳಿಗೆ ಹೆಚ್ಚಿನ ಆದ್ಯತೆ ನಿಡುವುದು ಸಾಮಾನ್ಯವಾಗುತ್ತಿರುವುದು ವಿಷಾದದ ಸಂಗತಿ. ಸದಾಕಾಲ ಸಮಾಜದ ಒಳಿತಿಗಾಗಿ ಮಾಧ್ಯಮಗಳು ಸಂವಿಧಾನದ ಆಶಯಕ್ಕೆ ಧಕ್ಕೆ ತರುವಂಥ ಸುದ್ದಿಗಳನ್ನು ಪ್ರಕಟಿಸಿ ಸಮಾಜದಲ್ಲಿ ಕಲುಷಿತ ವಾತಾವರಣ ನಿರ್ಮಾಣ ಮಾಡಬಾರದು ಎಂಬ ಮುಖ್ಯಮಂತ್ರಿಗಳ ಸಲಹೆ ಉಪಯುಕ್ತವಾದುದು.

–ವಿ.ಜಿ.ಇನಾಮದಾರ.ಸಾ:ಸಾರವಾಡ.

ಒರಟುಸೂತ್ರಗಳ ಅರ್ಥಾನರ್ಥಗಳು

ಕಳೆದ ವಾರವಷ್ಟೇ ಪಿಯುಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮೇಲಿನ ಸ್ಥಾನಗಳನ್ನು ಗಳಿಸಿವೆ. ಈ ಜಿಲ್ಲೆಗಳು ಸತತವಾಗಿ ಪರೀಕ್ಷೆಗಳಲ್ಲಿ ಒಳ್ಳೆಯ ಫಲಿತಾಂಶಗಳನ್ನು ಪಡೆದುಕೊಳ್ಳುತ್ತಿರುವುದರಿಂದ ವಿದ್ಯಾ ವಂತರ ಬುದ್ಧಿವಂತರ ಜಿಲ್ಲೆಗಳೆಂದು ಹೆಸರು ಪಡೆದಿವೆ. ಅದು ಸರಿಯೇ.

ಆದರೆ ಬೇರೆ ಎರಡು ಮಾನದಂಡಗಳನ್ನು ಇಟ್ಟುಕೊಂಡು ನೋಡಿದರೆ ಹೇಗೆ ತೋರುತ್ತದೆ ಗಮನಿಸೋಣ:

1. ಭಾರತದ ಸರ್ವೋನ್ನತ ಪ್ರಶಸ್ತಿ ಭಾರತ ರತ್ನ. ಕರ್ನಾಟಕದ ಮೂವರಿಗೆ ಈ ಪ್ರಶಸ್ತಿ ಬಂದಿದೆ: ವಿಶ್ವೇಶ್ವರಯ್ಯ, ಭೀಮಸೇನ್ ಜೋಶಿ, ಮತ್ತು ಸಿಎನ್‌ಆರ್ ರಾವ್ ಇವರಲ್ಲಿ ಯಾರೂ ಕರಾವಳಿಯವರಲ್ಲ!
2. ಅಂತೆಯೇ, ಸಾಹಿತ್ಯ ಕ್ಷೇತ್ರದಲ್ಲಿ ನಮ್ಮ ದೇಶದಲ್ಲಿ ಸರ್ಕಾರದಿಂದ ಸಲ್ಲುವ ಸರ್ವೋತ್ಕೃಷ್ಟ ಗೌರವವೆಂದರೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್. ಅದು ಇದುವರೆಗೂ ಕನ್ನಡದ ಹತ್ತು ಜನ ಸಾಹಿತಿಗಳಿಗೆ ಲಭಿಸಿದೆ: ಬೇಂದ್ರೆ, ಮಾಸ್ತಿ, ಕುವೆಂಪು, ಕಾರಂತ, ಗೋಕಾಕ್, ಪುತಿನ, ಕೆ ಎಸ್ ನರಸಿಂಹ ಸ್ವಾಮಿ, ಅನಂತಮೂರ್ತಿ, ಭೈರಪ್ಪ, ಮತ್ತು ಕಂಬಾರ. ಇವರಲ್ಲಿ ಕಾರಂತರೊಬ್ಬರೆ ಕರಾವಳಿಯವರು.

ಪಿಯುಸಿ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಬುದ್ಧಿವಂತರ ಜಿಲ್ಲೆಗಳೆಂದರೆ, ಮೇಲೆ ಹೇಳಿದ ಬೇರೆ ಎರಡು ಮಾನದಂಡಗಳಿಂದ ನೋಡಿದರೆ ಅವುಗಳನ್ನು ಆ ಸ್ಥಾನದಿಂದ ಇಳಿಸಬೇಕಾಗುತ್ತದೆ! ಬೆಂಗಳೂರು ಮೈಸೂರುಗಳನ್ನು ಅಲ್ಲಿ ಕೂರಿಸಬೇಕಾಗುತ್ತದೆ.

ವಿಷಯ ಇಷ್ಟೇ : ನಾವು ನಿತ್ಯವ್ಯವಹಾರದಲ್ಲಿ ಅಗಾಗ ಸಿಗುವ ಮಾಹಿತಿಗಳ ಆಧಾರದ ಮೇಲೆ ಆಯಾ ಹೊತ್ತಿಗೆ ತೋಚಿದಂತೆ ನಮ್ಮ ರಾಗದ್ವೇಷಗಳನ್ನೂ ಕೊಂಚ ಬೆರೆಸಿ ಹತ್ತಾರು ಒರಟುಸೂತ್ರಗಳನ್ನು (heuristics) ರಚಿಸಿಕೊಳ್ಳುತ್ತಿರುತ್ತೇವೆ. ಲೋಕವನ್ನು ಸ್ವಲ್ಪಮಟ್ಟಿಗಾದರೂ ಅರ್ಥಮಾಡಿಕೊಳ್ಳಲು ಈ ಸೂತ್ರಗಳು ಒದಗಿಬರುತ್ತವೆ. ಅದರ ಜೊತೆಗೆ, ಇಂತಹ ಕೆಲವು ಒರಟುಸೂತ್ರಗಳಿಗೆ ಸುತ್ತಲ ಜನರ ಒಪ್ಪಿಗೆಯೂ ಸಿಕ್ಕಿಬಿಡುತ್ತದೆ. ಆಗ ನಾವು ದುಡುಕಿ ನಮ್ಮ ಒರಟುಸೂತ್ರಗಳೇ ಪರಮಸಿದ್ಧಾಂತಗಳು ಎಂದು ಭ್ರಾಂತರಾಗಿಬಿಡುತ್ತೇವೆ.

ಆ ಭ್ರಾಂತಿ ಆ ಸೂತ್ರಗಳನ್ನು ಪುನಃ ಪರಿಶೀಲಿಸಲು ಬಿಡುವುದೇ ಇಲ್ಲ ಅನೇಕ ವೇಳೆ. ಹಿಂದೆ ಹೇಳಿದ ಹಾಗೆ ಈ ಸೂತ್ರಗಳ ರಚನೆಯಲ್ಲಿ ನಿಜವಾದ ಮಾಹಿತಿಗಳ ಜೊತೆ ಒಂದಷ್ಟು ರಾಗದ್ವೇಷಗಳೂ ಬೆರೆತುಕೊಂಡುಬಿಟ್ಟಿರುತ್ತವೆ. ಒರಟುಸೂತ್ರಗಳ ಪುನಃ ಪರಿಶೀಲನೆ ನಡೆಯದಿದ್ದಾಗ ಆ ರಾಗದ್ವೇಷಗಳೂ ಸಿದ್ಧಾಂತದ ಹೆಸರಿನಲ್ಲಿ ಸತ್ಯದ ಹೆಸರಿನಲ್ಲಿ ನಮ್ಮನ್ನು ಆಡಿಸುತ್ತಿರುತ್ತವೆ.

ಹಾಗಾಗಿ ಒರಟುಸೂತ್ರಗಳನ್ನು ಬಳಸುವಾಗ ಅವುಗಳ ವ್ಯವಹಾರ ಸೌಲಭ್ಯದ ಜೊತೆ ಅವುಗಳಲ್ಲಿರಬಹುದಾದ ಭ್ರಾಂತಿಗಳ ಬಗ್ಗೆಯೂ ನಮ್ಮ ಗಮನ ಇರಬೇಕು. ಈ ಗಮನ ಇಲ್ಲದಿರುವುದರಿಂದಲೇ ಅನೇಕ ಅತಿವಾದಗಳು ಹುಟ್ಟುವುದು. ಅತಿವಾದಗಳಿಂದಲೇ ಲೋಕದ ಶಾಂತಿ ಕೆಡುವುದು.

–ಜಿ.ಎಲ್.ಕೃಷ್ಣ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಓದು ಯಜ್ಞದ ಮಹಾ ಬೋಧಿವೃಕ್ಷ ಡಾ.ಬಿ.ಆರ್.ಅಂಬೇಡ್ಕರ್

ಮಂಗಳವಾರ (ಏ. 14) ನಮ್ಮ ದೇಶಕ್ಕೆ ಸಂವಿಧಾನ ನೀಡುವಲ್ಲಿ ಗುರುತರ ಪಾತ್ರ ವಹಿಸಿದ ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನ. ಅವರ ಚಿಂತನೆ, ವಿಚಾರಧಾರೆಗಳನ್ನು ಜಗತ್ತೇ ಮೆಚ್ಚಿಕೊಂಡಿದೆ. ಆ ಉತ್ಕೃಷ್ಟ ವಿಚಾರಧಾರೆಗಳು ಅವರಲ್ಲಿ ಮೂಡಲು ಕಾರಣ ಅವರಲ್ಲಿದ್ದ ಜ್ಞಾನ, ವಿದ್ವತ್ತು. ಈ ಬಾರಿಯ ಅವರ 135ನೇ ಜನ್ಮದಿನದಂದು ಅವರ 'ಓದಿನ ಕೃಷಿ'ಯ ಬಗ್ಗೆ ಒಂದಿಷ್ಟು ತಿಳಿಯೋಣ.

ವ್ಯಕ್ತಿ – ವ್ಯಕ್ತಿತ್ವ
ಡಾ. ರಾಜೇಂದ್ರಕುಮಾರ್ ಕೆ
vveditoped@gmail.com

ಡಾ. ಬಿ. ಆರ್. ಅಂಬೇಡ್ಕರ್ ಅವರ 136ನೇ ಜನ್ಮದಿನವನ್ನು 'ವಿಶ್ವ ಜ್ಞಾನದ ದಿನ'ವನ್ನಾಗಿ ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಅಂಬೇಡ್ಕರ್ ಓದಿನ ಹೋರಾಟಕ್ಕೆ ಸಂದ ಗೌರವ ಎಂದರೂ ಅತಿಶಯೋಕ್ತಿಯಲ್ಲ. ಮನುಷ್ಯತ್ವದ ಆಲೋಚನೆಗಳನ್ನು ಇಟ್ಟುಕೊಂಡ ಅಂಬೇಡ್ಕರ್ ಹೇಗೆ ಓದಿದರು, ನಾವು ಹೇಗೆ ಓದುತ್ತಿದ್ದೇವೆ ? ಏಕೆ ಓದುತ್ತಿದ್ದೇವೆ ಎಂಬುದನ್ನು ಮನಗಾಣಿಸಲು ಅಂಬೇಡ್ಕರ್ ಓದಿನ ಅಂತರಾಳವನ್ನು ಅರಿಯಲು ಕೆಲವೊಂದು ಘಟನೆಗಳ ಹಿನ್ನೆಲೆಯಲ್ಲಿ ಅಂಬೇಡ್ಕರ ಓದಿನ ಧ್ಯಾನವನ್ನು ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಂಬೇಡ್ಕರರ ಓದು ನಮಗೆ ಸ್ಪೂರ್ತಿಯ ದೀಪವಾಗಲಿ ಎಂಬುದು ಈ ಲೇಖನದ ಆಶಯ.

ಭೀಮ್ ರಾವ್ ವಿದ್ಯಾರ್ಥಿ ದೆಸೆಯಿಂದ ಸಾಧಾರಣ ಓದುಗನಾಗಿದ್ದ. ಆದರೆ ಓದಿನ ದಾಹ ತೀವ್ರವಾಗಿತ್ತು. ಏಕೆಂದರೆ ತಾನು ಶಾಲೆಯಲ್ಲಿ ಓದುತ್ತಿರುವಾಗ ನೀರಿನ ದಾಹವಾದರೆ ನೀರಿದ್ದರೂ ಕುಡಿಯಲು ನೀರು ಸಿಗುತ್ತಿರಲಿಲ್ಲ . ಬಹಳಷ್ಟು ಬಾರಿ ನೀರಿನ ದಾಹದಿಂದಲೇ ಮನೆಗೆ ವಾಪಸ್ ಆಗುತ್ತಿದ್ದ ಭೀಮರಾವ್. ಒಂದು ವೇಳೆ ನೀರಿನ ದಾಹದಿಂದ ಶಾಲೆ ಬಿಟ್ಟಿದ್ದರೆ ಏನಾಗುತ್ತಿತ್ತು ಎಂದು ಊಹಿಸಿಕೊಳ್ಳುವುದಕ್ಕೂ ಅಸಾಧ್ಯ ನೀರು ಮುಟ್ಟದಂತಹ ಪರಿಸ್ಥಿತಿಯಲ್ಲಿದ್ದರೂ ಭೀಮರಾವ್ ಓದಿದ್ದರು. ಸಂಸ್ಕೃತ ಕಲಿಬೇಕೆಂಬ ಇಚ್ಚೆ ಇದ್ದರೂ ಕಲಿಸುವ ಮನಸ್ಸು ಶಿಕ್ಷಕರಿಗಿರಲಿಲ್ಲ. ಅಕ್ಷರ ಕಲಿಯುವುದಕ್ಕೆ ಪರ್ಶಿಯನ್ ಭಾಷೆ ಆಯ್ಕೆ ಮಾಡಿಕೊಂಡು ಓದಿದ್ದರು. ತದನಂತರದಲ್ಲಿ ಮುಂದೆ ಸಂಸ್ಕೃತ ಕಲಿತು ಪಂಡಿತರಾದರು. ಅಂಬೇಡ್ಕರ್ ಸಂಸತ್ತಿನಲ್ಲಿ ಸಂಸ್ಕೃತ ಭಾಷೆಯ ಕುರಿತು, ಸಂಸ್ಕೃತ ಬಹುತೇಕ ಭಾರತೀಯ ಭಾಷೆಗಳ ತಾಯಿ ಅದನ್ನು ಬ್ರಾಹ್ಮಣರಾದ ತಾವು ಸರಿಯಾಗಿ ಬಳಸಿಕೊಳ್ಳಲಿಲ್ಲ. ಉಳಿದವರು ಬಳಸಲು ಅವಕಾಶ ಕೊಡಲಿಲ್ಲ.ಅದು ಸಾಹಿತ್ಯದ ಗಣಿ.ಸಂಸ್ಕೃತ ನಮ್ಮ ರಾಷ್ಟ್ರೀಯ ಭಾಷೆಯಾಗಲಿ ಎಂದಿದ್ದರು. ಒಳ್ಳೆಯದನ್ನು ಸ್ವೀಕರಿಸುವ ಮನೋಭಾವ ಅಂಬೇಡ್ಕರ ರ ದಾಗಿತ್ತು. ಈ ತರದ ಮನಸ್ಸು ಇಂದು ಎಷ್ಟು ಜನರಿಗಿದೆ ಎಂಬುದೇ ಯಕ್ಷಪ್ರಶ್ನೆ?.

ಆತ್ಮವಿಶ್ವಾಸದ ಓದು: ತಮ್ಮ ಓದಿನ ಬಗ್ಗೆ ಬಹಳ ಅಪಾರವಾದ ಪ್ರೀತಿ ವಿಶ್ವಾಸವನ್ನು ಹೊಂದಿದ್ದರೆಂಬುದಕ್ಕೆ ಈ ಸಂಭಾಷಣೆ ಸಾಕ್ಷಿ. ಅಂಬೇಡ್ಕರ್ ಅವರು ಶೆಡ್ಯೂಲ್ ಕ್ಯಾಸ್ಟ ಕಮಿಷನ್ ರಿಪೋರ್ಟ್ ಬರೆದಿದ್ದು ಸರಿ ಇಲ್ಲ ಎಂದು ಸಂಸತ್ತಿನಲ್ಲಿ ಅಂಬೇಡ್ಕರ್ ಅವರು ಹೇಳಿದಾಗ , ಅಂದಿನ ಗೃಹಮಂತ್ರಿ ಕೆ. ಎನ್. ಕಟಜು 'ಡಾ. ಅಂಬೇಡ್ಕರ್ ಅದನ್ನು ಸರಿಯಾಗಿ ಓದಿರಲಿಕ್ಕಿಲ್ಲ ಬರಿಯ ಕವರ್ ಪೇಜ್ ಮಾತ್ರ ನೋಡಿರಬೇಕು' ಎಂದರು. ತಮ್ಮ ಓದೇ ಸ್ವಾಭಿಮಾನವಾಗಿದ್ದರಿಂದ, 'ಇದು ಆಯೋಗ ಬರೆದ ರಿಪೋರ್ಟಿನಂತಿಲ್ಲ, ಯಾರೋ ನೌಕರರ ಬರೆದ ರಿಪೋರ್ಟಿನಂತಿದೆ. ನಾನು ಈ ರಿಪೋರ್ಟಿನ ಕವರ್ ಪೇಜನ್ನಷ್ಟೇ ಓದಿರಬೇಕು ಎಂದಿರಿ, ನಾನು ಕವರ್ –ಟು– ಕವರ್ ಓದಿರುವೆ. ನನ್ನ ಓದುವ ಹವ್ಯಾಸ ನಿಮಗೆ ತಿಳಿದಂತಿಲ್ಲ. ನಿಮ್ಮ ತಾತ ಮುತ್ತಾತಂದಿರು, ಮಕ್ಕಳು, ಮೊಮ್ಮಕ್ಕಳು ಓದುವುದನ್ನೆಲ್ಲ ಸೇರಿಸಿದರು. ನಾನು ಓದಿದಷ್ಟು ಆಗುವುದಿಲ್ಲ ತಿಳಿದಿರಲಿ' ಎಂದು ಪ್ರತ್ಯುತ್ತರಿಸಿದ್ದರು. ಅಂಬೇಡ್ಕರ್‌ರ ಕ್ರಮಬದ್ಧ ಓದು, ವಿದ್ವತ್ತಿಗೆ ಲಂಡನಿನ ಮಹಿಳೆ ಫ್ಯಾನಿ ಫಿಟ್ಜ್ ರಾಲ್ಡ್ ಮಾರುಹೋಗಿ ಮದುವೆ ಪ್ರಸ್ತಾಪವನ್ನು ಮುಂದಿಟ್ಟಿದ್ದರು!

ಓದಿನ ಮೂಲಕವೇ ಅಪಾರವಾದ ಜನರನ್ನು ಸಂಪಾದಿಸುವ ಶಕ್ತಿ ಅಂಬೇಡ್ಕರ್ ಅವರದಾಗಿತ್ತು. ಮುಂಬೈ 'ರಾಜಗೃಹ' ಹಾಗೂ ದೆಹಲಿಯ ಮನೆಗಳಲ್ಲಿ ಪುಸ್ತಕಗಳ ರಾಶಿ, ಅಲ್ಲಿನ ಕೋಣೆಗಳನ್ನು ಆವರಿಸಿತ್ತು. ಮುಸ್ಲಿಂ ಜಮೀನ್ದಾರರೊಬ್ಬನ ಮನೆಗೆ ಭೇಟಿ ಕೊಟ್ಟಾಗ ಅವರ ಮನೆಯಲ್ಲಿದ್ದ ಬಂಗಾರದ ಅಕ್ಷರಗಳ ಕುರಾನನ್ನು ನೋಡಿ ಎಂಟು ಸಾವಿರ ರೂಪಾಯಿಗಳನ್ನು ಕೊಟ್ಟು ಆ ಪುಸ್ತಕವನ್ನು ಅಂಬೇಡ್ಕರ್ ಖರೀದಿಸಿದ್ದರು. ಪುಸ್ತಕಗಳ ಕಡು ವ್ಯಾಮೋಹಿ ಅಂಬೇಡ್ಕರ್ ಆಗಿದ್ದರು ಎಂಬುದನ್ನು ಈ ಘಟನೆ ತಿಳಿಸುತ್ತದೆ. ವಿಶಿಷ್ಟವಾದ ಫೌಂಟನ್ ಪೆನ್ನುಗಳನ್ನು ಅವರು ಸಂಗ್ರಹಿಸುತ್ತಿದ್ದರು. ಯಾರೋ ಒಬ್ಬರು ಇಂಗ್ಲೆಂಡಿನಲ್ಲಿ ಅವರಿಗೆ ಬಂಗಾರದ ಪೆನ್ ಅನ್ನು ಕೊಟ್ಟಿದ್ದನ್ನು ಜತನವಾಗಿಟ್ಟುಕೊಂಡಿದ್ದರು. ಗ್ರಂಥಾಲಯದ ವಿಷಯವಾಗಿ ಓದುಬರಹದ ಆತ್ಮೀಯನಾಗಿ ನಾನಕ್ ಚಂದ್ ರತ್ತು ಸಹಾಯಕರಾಗಿದ್ದರು. ಅಂಬೇಡ್ಕರರ ಸಮಗ್ರ ಬರಹಗಳು ಮತ್ತು ಭಾಷಣಗಳು ಹಲವು ಭಾಷೆಗಳಲ್ಲಿ 22 ಸಂಪುಟಗಳಲ್ಲಿ ಪ್ರಕಟಗೊಂಡಿವೆ ಎಂಬುದನ್ನು ನಾವು ಮರೆಯುವಂತಿಲ್ಲ.

ಭೂತಬಂಗ್ಲೆಯಲ್ಲಿ ಕೈತೋಟ ನಿರ್ಮಿಸಿದ ಅಂಬೇಡ್ಕರ್: ಬ್ರಿಟಿಷ್ ಭಾರತದಲ್ಲಿ 1942ರ ಸುಮಾರಿಗೆ ಕಾರ್ಮಿಕ ಮಂತ್ರಿ ಆಗಿದ್ದ ಅಂಬೇಡ್ಕರ್, ದೆಹಲಿಯಲ್ಲಿನ ಭೂತ ಬಂಗ್ಲೆ ಎಂದು ಕರೆಯಲ್ಪಟ್ಟ ಕಟ್ಟಡವನ್ನು ಖರೀದಿಸಿ ಅಲ್ಲಿ ಉತ್ತಮವಾದ ತೋಟವನ್ನು ನಿರ್ಮಿಸಿ ಹಲವರ ಮೆಚ್ಚುಗೆಗೆ ಪಾತ್ರರಾಗಿದ್ದರು. ದೆಹಲಿಯಲ್ಲಿರುವ ಮನೆಗಳ ಆವರಣದಲ್ಲಿನ ತೋಟಗಳಲ್ಲಿ ಅತ್ಯುತ್ತಮವಾದದ್ದು ಎಂದು ಲಂಡನ್ನಿನ 'ಡೈಲಿ ಮೇಲ್' ಪತ್ರಿಕೆ ವರದಿ ಮಾಡಿತ್ತು. ಅರೆಬರೆ ಓದು ಅಜ್ಞಾನವನ್ನು, ಮೂಢನಂಬಿಕೆಯನ್ನು ಬಿತ್ತುತ್ತದೆ. ಪರಿಪೂರ್ಣವಾದ ಓದು ಯಾವ ಭೂತ ಪ್ರೇತಗಳಿಗೂ ಅಂಜದೆ ಮುನ್ನುಗ್ಗುತ್ತದೆ. ಇಲ್ಲಿ ಜ್ಞಾನದ ಬೆಳಕು ಇರುತ್ತದೆ. ಅಲ್ಲಿ ಯಾವ ಕತ್ತಲೆಗೂ ಕೆಲಸವಿರುವುದಿಲ್ಲ ಎಂದು ತೋರಿಸಿಕೊಟ್ಟ ಮೇಧಾವಿ. ಬಂಗ್ಲೆಯ ಕಡೆ ಬ್ರಿಟಿಷರು ಕೂಡ ಬರಲು ಹೆದರುತ್ತಾರೆಂದು ಅಲ್ಲಿನ ವಾಚ್ ಮ್ಯಾನ್ ಅಂಬೇಡ್ಕರ್‌ಗೆ ಹೇಳಿದಾಗ, ಭಾರತೀಯ ಸಮಾಜದ ಭೂತ ಪ್ರೇತಗಳೊಂದಿಗೆ ಗುದ್ದಾಡುತ್ತಲೇ ಇದ್ದೇನೆ. ಈಗ ಹೊಸ ಭೂತಗಳು ಹೊಸ ಅನುಭವಗಳು ನೀಡುವುದಾದರೆ ನೋಡೆ ಬಿಡುತ್ತೇನೆ ಎಂದು ಚಟಾಕಿ ಹಾರಿಸಿದ್ದರು.

ಅಂಬೇಡ್ಕರರ ಪುಸ್ತಕ ಆಯ್ಕೆ ಹಾಗೂ ಓದು ಹೇಗಿತ್ತು : ಒಮ್ಮೆ ಯು.ಆರ್. ರಾವ್ ಅವರನ್ನು 'ಇಷ್ಟು ಪುಸ್ತಕಗಳನ್ನು ಯಾವಾಗ ಓದುತ್ತಿರಿ?' ಎಂದು ಒಮ್ಮೆ ಕೇಳುತ್ತಾರೆ. 'ಓದುವುದು ಎಂದರೇನು? ಹೇಳಿ' ಎನ್ನುತ್ತಾರೆ. ಮೊದಲ ಪುಟದಿಂದ ಕೊನೆಯ ಪುಟದವರೆಗೆ ಓದಿ ಅದನ್ನು ಅರಗಿಸಿಕೊಂಡು ವಿಶ್ಲೇಷಿಸಿ ನೆನಪಿಸಿಕೊಳ್ಳುವುದು ಎಂದು ಉತ್ತರ ಕೊಟ್ಟರು ರಾವ್. ಆಗ ಅಂಬೇಡ್ಕರ್, 'ಇಲ್ಲ ಇಲ್ಲ ನನ್ನದು ಆ ಶೈಲಿಯಲ್ಲ. ಕೆಲವೇ ಪುಸ್ತಕಗಳು ಮಾತ್ರ ಆಳ ಓದಿಗೆ, ಸಂಪೂರ್ಣ ಓದಿಗೆ ಪ್ರಶಸ್ತವಾಗಿರುತ್ತವೆ. ಉಳಿದಂತೆ ನಾನು ಪುಸ್ತಕ ನೋಡಿದ ಕೂಡಲೇ ಅದರ ಪರಿವಿಡಿ ಪರಿಚಯ ಬೆನ್ನುಡಿ ಮುನ್ನುಡಿಗಳನ್ನು ನೋಡುತ್ತೇನೆ. ಆನಂತರವಷ್ಟೇ, ನನಗೆ ಅದು ಬೇಕು ಬೇಡವೋ ಎಂದು ನಿರ್ಧರಿಸುತ್ತೇನೆ.ನನಗೆ ಮುಖ್ಯವೆನಿಸಿದ ಅಧ್ಯಾಯದ ಮೇಲೆ ಕಣ್ಣು ಹಾಯಿಸುತ್ತೇನೆ ನನಗೆ ಗೊತ್ತಿರುವ

ವಿಚಾರಧಾರೆಯ ಭಾಗ ಓದುವುದಿಲ್ಲ. ಯಾವುದಾದರೂ ಹೊಸ ಯೋಚನೆಗಳು ಇದ್ದರೆ ನಮ್ಮನ್ನು ಯೋಚನೆಗೆ ಹಚ್ಚುವಂತಿದ್ದರೆ ಆ ಭಾಗ ಓದುತ್ತೇನೆ ಅಲ್ಲಿಗೆ ಆ ಪುಸ್ತಕದ ಓದು ಮುಗಿಯಿತು ಎಂದರ್ಥ'' ಎಂದು ಕ್ರಿಯಾತ್ಮಕ ಓದಿನ ಬಗೆಯನ್ನು ವಿಶ್ಲೇಷಿಸುತ್ತಾರೆ.

ಪುಸ್ತಕಗಳ ಆಲಯ 'ರಾಜಗೃಹ': ಮುಂಬೈಯಲ್ಲಿರುವ ತಮ್ಮ ಮನೆ ರಾಜಗೃಹದಲ್ಲಿನ ಕೋಣೆಗಳೆಲ್ಲವೂ ಪುಸ್ತಕಗಳ ಕಪಾಟುಗಳಿಂದ ತುಂಬಿರುತ್ತಿದ್ದವು. ಸುಮಾರು 35 ಸಾವಿರ ಪುಸ್ತಕಗಳ ಖಾಸಗಿ ಗ್ರಂಥಾಲಯ ಅಂಬೇಡ್ಕರರದಾಗಿತ್ತು . ರಾಜಕಾರಣದಿಂದ ಹಿಡಿದು ಕೋಳಿ ಸಾಕಣೆಯ ತನಕ ಕಟ್ಟಡ,ಕೃಷಿ, ಆರ್ಥಿಕತೆ,ಸಾಪೇಕ್ಷ ಸಿದ್ದಾಂತ,ಬೌದ್ಧ ಧರ್ಮ, ಪರಮಾಣು ಶಕ್ತಿ,ಕಲ್ಲಿದ್ದಲಿನ ಮಾಹಿತಿ ಇತ್ಯಾದಿ ಪುಸ್ತಕಗಳು ಇವರ ಬಳಿ ಇದ್ದವು. ಸಮಯಕ್ಕ ನುಗುಣವಾಗಿ ಓದುವ ಬರೆಯುವ ನೆನಪನ್ನು ಇಟ್ಟುಕೊಳ್ಳುವ ಅಗಾಧ ಸಾಮರ್ಥ್ಯ ಅಂಬೇಡ್ಕರ್ ಗಿತ್ತು. ಒಂದು ವಿಷಯದಿಂದ ಮತ್ತೊಂದು ವಿಷಯವನ್ನು ವಿಭಿನ್ನವಾಗಿ ಕಲಿಯುವುದೇ ಓದಿನ ರಿಲ್ಯಾಕ್ಸ್ ಮಾಡಿದಂತೆ ಎಂಬ ಮಾತು ಅವರದಾಗಿತ್ತು. ಪ್ರತಿಯೊಬ್ಬರು ತಮ್ಮ ಆದಾಯದ ಪ್ರತಿಶತ ಹತ್ತರಷ್ಟಾದರೂ ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂಬುದು ಅವರ ಆಶಯವಾಗಿತ್ತು. ಟಾಲ್‌ಸ್ಟಾಯ್ ಆದಿಯಾಗಿ ಹಲವು ಮಹನೀಯರ ಜೀವನ ಚರಿತ್ರೆಗಳು ಅಂಬೇಡ್ಕರರ ಗ್ರಂಥಾಲಯದಲ್ಲಿದ್ದವು.

ಬೋಧಕರಾಗಿ ಅಂಬೇಡ್ಕರ್: ಮುಂಬೈನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಉಪ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದಾಗ ಅಸ್ಪೃಶ್ಯ ಸಮುದಾಯದ ವಿದ್ಯಾರ್ಥಿ ಯನ್ನು ಉತ್ತೀರ್ಣಗೊಳಿಸಬೇಕೆಂದು ಅಂಬೇಡ್ಕರ್ ಅವರನ್ನು ಕೇಳಿಕೊಂಡಾಗ, ಅವನು ಅರ್ಹನಾಗಿದ್ದಲ್ಲಿ ತೇರ್ಗಡೆಯಾಗುತ್ತಾನೆ. ಜಾಣತನದಲ್ಲಿಯಾಗಲಿ ಹಾಕಬೇಕಾದ ಶ್ರಮದಲ್ಲಿಯಾಗಲಿ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ವಿನಾಯಿತಿ ಇಲ್ಲ. ಹಾಗೆ ನೋಡಿದರೆ ಈ ಸಮುದಾಯದ ವಿದ್ಯಾರ್ಥಿಯು ಆದರ್ಶ ವಿದ್ಯಾರ್ಥಿಯಾಗಬೇಕು. ಈ ವಿಷಯದಲ್ಲಿ ನನ್ನ ಸಹಾಯ ಕೇಳಬೇಡಿ ಎಂದು ಅಂಬೇಡ್ಕರ್ ಓದಿನ ಮಹತ್ವವನ್ನು ತಿಳಿಸಿಕೊಟ್ಟರು. ಇಂದಿನ ದಿನಮಾನಗಳಲ್ಲಿ ನಮ್ಮ ಜಾತಿಯವ ಅಂತ ಹೇಳಿ ಪ್ರಶಸ್ತಿ ಸನ್ಮಾನ ಕೊಡುತ್ತಿದ್ದಾರೆ. ಅರ್ಹ ವ್ಯಕ್ತಿಗೆ ಸಿಗದ ಬಿರುದುಗಳು ಅನರ್ಹರ ವ್ಯಕ್ತಿಗಳ ಪಾಲಾಗುತ್ತಿರುವುದು ಅಂಬೇಡ್ಕರ್‌ರವರಿಗೆ ಮಾಡುವ ಅವಮಾನವೆಂದೇ ಭಾವಿಸಬೇಕು. ವಕೀಲ ವೃತ್ತಿ ಒಂದು ರೀತಿಯಲ್ಲಿ ಬೋಧನೆ ಮಾದರಿ ಎಂದರೆ ತಪ್ಪಾಗಲಾರದು. ಸಮಾಜಕ್ಕೆ ಉತ್ತಮ ಸಂದೇಶಗಳನ್ನು ಸಂವಾದ ಮಾಡುವುದರ ಮೂಲಕ ತಿಳಿಯಪಡಿಸುತ್ತಿದ್ದರು. ಮನುಷ್ಯರ ಲೈಂಗಿಕತೆಯ ಆರೋಗ್ಯದ ಮಾಹಿತಿಗಳನ್ನು ನೀಡುತ್ತಿರುವುದು ಉತ್ತಮವೆಂದು ತಮ್ಮ ವಕೀಲರ ಪರ ವಾದ ಮಂಡಿಸುತ್ತಾ, 'ಅಶ್ಲೀಲತೆ ಎನ್ನುವುದು ಅರ್ಥದಲ್ಲಿ ಇಲ್ಲ,ಅಭಿವ್ಯಕ್ತಿಸುವ ಕ್ರಮದಲ್ಲಿದೆ' ಎಂಬ ಈ ಮೊದಲ ತೀರ್ಪನ್ನು ಉಲ್ಲೇಖಿಸಿ ತಮ್ಮ ಗೆಳೆಯ ಕರ್ವೆ ಬಿಡುಗಡೆಗೊಳ್ಳಲು ಅವರ ಓದಿನ ಅರಿವೇ ಕಾರಣವಾಯಿತು.

ಕೊನೆಯ ದಿನಗಳ ಓದಿನ ಧ್ಯಾನ: ಅಂಬೇಡ್ಕರ್ ತಮ್ಮ ಕೊನೆಯ ದಿನಗಳಲ್ಲೂ ಓದನ್ನ ಬಿಡದ ಯೋಧ. 'ಬುದ್ಧ ಮತ್ತು ದಮ್ಮ' ಪುಸ್ತಕ ರಚನೆಯಲ್ಲಿ ಧ್ಯಾನಸ್ತ ರಾಗಿದ್ದರು. ರಾತ್ರಿಯ ಪರಿವಿಲ್ಲದೆ ಮರುದಿನ ತನಕ ಓದಿ ನಾನಕ್ ಚಂದು ರತ್ತು ಅವ್ರಿಗೆ ಆಶ್ಚರ್ಯ ಮೂಡಿಸಿದ್ದರು. ಗ್ರಂಥಾಲಯಗಳಲ್ಲಿ ಅತಿ ಹೆಚ್ಚು ಕಾಲ ಕಳೆದ ವ್ಯಕ್ತಿತ್ವ ಅಂಬೇಡ್ಕರರದು. ಇಂದಿನ ಅತಿ ಹೆಚ್ಚು ಗ್ರಂಥಾಲಯಗಳಲ್ಲಿ ಧೂಳು ಆವರಿಸಿದೆ. ಸರಿಯಾದ ಕ್ರಮದಲ್ಲಿ ಪುಸ್ತಕಗಳ ಜೋಡಣೆ ಇಲ್ಲ. ಗ್ರಂಥಾಲಯಕ್ಕೆ ಹೋಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಓದಿನ ಆಸಕ್ತಿಯು ಕೊನೆ ಉಸಿರು ಎಳೆಯುತ್ತಿದೆ ಎಂದು ಭಾಸವಾಗುತ್ತಿದೆ. ಬಹು ಆಯ್ಕೆಯ ಓದಿಗಿಂತ ವಿಶ್ಲೇಷಣಾತ್ಮಕ ಓದು ನಮ್ಮನ್ನು ರೂಪಿಸುತ್ತದೆ. ಇದರಿಂದ ಹೊರಬರಲು ಅಂಬೇಡ್ಕರ್ ಎಲ್ಲರಿಗೂ ಓದಿನ ಸ್ಪೂರ್ತಿ ದೀಪವಾಗಲಿ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 87

ಸಮಾಚಾರ ಸಣ್ಣದಲ್ಲ

163 ಬಿಹಾರ ಬಾಲಕರ ಕಳ್ಳಸಾಗಣೆ ವೇಳೆ ರಕ್ಷಣೆ

ಭೋಪಾಲ್: ಬಿಹಾರ ರಾಜ್ಯದ ಅರಾರಿಯಾದಿಂದ ಮಹಾರಾಷ್ಟ್ರದ ಲಾತೂರ್‌ಗೆ ಕಾರ್ಮಿಕ ಕೆಲಸಗಳಿಗಾಗಿ ಅಪ್ರಾಪ್ತ ವಯಸ್ಕರನ್ನು ಅಕ್ರಮವಾಗಿ ರೈಲಿನಲ್ಲಿ ಸಾಗಣೆ ಮಾಡುತ್ತಿದ್ದ ಜಾಲವನ್ನು ಮಧ್ಯಪ್ರದೇಶ ಪೊಲೀಸರು ಭಾನುವಾರ ಬಯಲಿಗೆಳೆದಿದ್ದು, 163 ಬಾಲಕರನ್ನು ರಕ್ಷಿಸಿದ್ದಾರೆ. ರೈಲು ಮಧ್ಯಪ್ರದೇಶದ ಕಟ್ನಿ ಜಿಲ್ಲೆಗೆ ಬಂದಾಗ ಮಕ್ಕಳ ರಕ್ಷಣಾ ಸಮಿತಿಯಿಂದ ಬಂದ ಮಾಹಿತಿ ಮೇರೆಗೆ ಸರಕಾರಿ ರೈಲ್ವೆ ಪೊಲೀಸ್(ಜಿಆರ್‌ಪಿ) ಮತ್ತು ರೈಲ್ವೆ ರಕ್ಷಣಾ ದಳ(ಆರ್‌ಪಿಎಫ್) ಸಿಬ್ಬಂದಿ ಜಂಟಿಯಾಗಿ ಕಾರ್ಯಾಚರಣೆ ಆರಂಭಿಸಿ ರೈಲನ್ನು ಶೋಧಿಸಿದರು. ಆಗ ಕೆಲವು ಬೋಗಿಗಳಲ್ಲಿ ಚಿಕ್ಕ ಪ್ರಾಯದ ಬಾಲಕರನ್ನು ಒಟ್ಟಾಗಿ ಕರೆದೊಯ್ಯುತ್ತಿದ್ದುದು ಪತ್ತೆಯಾಯಿತು. ಬಾಲಕರನ್ನು ರಕ್ಷಿಸಿ ಬಿಹಾರಕ್ಕೆ ಕರೆದೊಯ್ದಿರುವ 'ಜಿಆರ್‌ಪಿ ' ಅಧಿಕಾರಿಗಳ ತಂಡ, ಬಿಹಾರದ ವಿವಿಧ ಜಿಲ್ಲೆಗಳ 8 ಏಜೆಂಟರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಿದ್ದಾರೆ.

ಅಮೆರಿಕ ಪ್ರವಾಸದಲ್ಲಿ ಏರ್‌ಚೀಫ್ ಎಪಿ ಸಿಂಗ್

ವಾಷಿಂಗ್ಟನ್: ಭಾರತೀಯ ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಅವರು ಅಮೆರಿಕ ಪ್ರವಾಸದಲ್ಲಿದ್ದು, ಅಮೆರಿಕದ ವಾಯುಪಡೆ ಮುಖ್ಯಸ್ಥ ಜನರಲ್

ಕೆನ್ ವಿಲ್ಸ್‌ಬಾಚ್ ಅವರ ಜತೆ ಉಭಯ ದೇಶಗಳ ರಕ್ಷಣಾ ಸಹಕಾರ, ಸಹಭಾಗಿತ್ವ, ಪಾಲುದಾರಿಕೆ ಕುರಿತು ಚರ್ಚೆ ನಡೆಸಿದ್ದಾರೆ. ಬಳಿಕ ಪೆಂಟಗನ್ ಕಾರ್ಯಾಲಯಕ್ಕೂ ತೆರಳಿ ವಾಯುಪಡೆ ಕಾರ್ಯದರ್ಶಿ ಟ್ರಾಯ್‌ಮಿಂಕ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಬಳಿಕ ಕೊಲೊರಾಡೋದಲ್ಲಿನ ಪೀಟರ್ಸನ್ ಸ್ಪೇಸ್ ಫೋರ್ಸ್ ಬೇಸ್‌ಗೆ ತೆರಳಿ ವಾಯುಪಡೆಯಲ್ಲಿನ ಹೊಸ ತಂತ್ರಜ್ಞಾನಗಳ ಕುರಿತು ಮಾಹಿತಿ ಪಡೆದುಕೊಂಡರು ಎಂದು ವರದಿಯಾಗಿದೆ.

ದೋಡಾದಲ್ಲಿ 4.6 ತೀವ್ರತೆ ಭೂಕಂಪ

ಶ್ರೀನಗರ: ಜಮ್ಮು-ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಭಾನುವಾರ ನಸುಕಿನ 4.32ರ ವೇಳೆ ಭೂಕಂಪವಾಗಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದಲ್ಲಿ ರಿಕ್ಟರ್ ಮಾಪಕದಲ್ಲಿ 4.6 ತೀವ್ರತೆ ದಾಖಲಾಗಿದೆ. ಆದರೆ ಯಾವುದೇ ಪ್ರಾಣ ಹಾನಿ ವರದಿಯಾಗಿಲ್ಲ. ಇದೇ ಸಮಯದಲ್ಲಿ ಮ್ಯಾನ್ಮಾರ್ ದೇಶದಲ್ಲಿಯೂ 4ರಷ್ಟು ತೀವ್ರತೆಯ ಭೂಕಂಪವಾಗಿದೆ ಎಂದು ತಿಳಿದುಬಂದಿದೆ.

ಪಾಕ್ 13,000 ಸೈನಿಕರು ಸೌದಿಗೆ

ಇಸ್ಲಾಮಾಬಾದ್: ಅಮೆರಿಕ-ಇರಾನ್ ಶಾಂತಿ ಮಾತುಕತೆ ವಿಫಲವಾದ ಬೆನ್ನಲ್ಲೇ ಪಾಕಿಸ್ತಾನ 13,000 ಸೈನಿಕರು ಮತ್ತು 18 ಯುದ್ಧ ವಿಮಾನ ಗಳನ್ನು ಸೌದಿ ಅರೇಬಿಯಾಕ್ಕೆ ಕಳುಹಿಸಿಕೊಟ್ಟಿದೆ. 2025ರಲ್ಲಿ ಸೌದಿ ಅರೇಬಿಯ ಜತೆ ಕಾರ್ಯತಂತ್ರ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದ್ದ ಹಿನ್ನೆಲೆಯಲ್ಲಿ ಪಾಕ್ ಈ ಕ್ರಮ ಕೈಗೊಂಡಿದೆ. ಆದರೆ, ಇದೊಂದು ವಿರೋಧಾಭಾಸದ ನಡೆ ಎಂದು ವಿಶ್ಲೇಷಿಸಲಾಗಿದೆ. ಪಾಕಿಸ್ತಾನದಿಂದ ಬಂದ ಸೇನಾ ತುಕಡಿಯನ್ನು ಸೌದಿ ಅರೇಬಿಯಾದ ಪೂರ್ವ ಭಾಗದ ಪ್ರದೇಶ ಅಬ್ದುಲ್ ಅಜೀಜ್ ವಾಯುನೆಲೆಯಲ್ಲಿ ನಿಯೋಜಿಸಲಾಗಿದೆ. ಜಂಟಿ ಕಾರ್ಯಾಚರಣೆಗೆ ಅಗತ್ಯವಾದ ಸೇನಾಪಡೆ ಸಮನ್ವಯವನ್ನು ಹೆಚ್ಚಿಸುವುದೇ ಈ ನಿಯೋಜನೆಯ ಉದ್ದೇಶ ಎಂದು ಸೌದಿ ರಕ್ಷಣಾ ಸಚಿವಾಲಯ ಹೇಳಿದೆ.

ವಿದ್ಯುಚ್ಚಾಲಿತ ಕಾರಿಗೆ ರಸ್ತೆತೆರಿಗೆ ಇಲ್ಲ: ದೆಹಲಿ

ದೆಹಲಿ: ವಾಯು ಮಾಲಿನ್ಯದಿಂದ ಕಂಗೆಟ್ಟಿರುವ ರಾಷ್ಟ್ರ ರಾಜಧಾನಿ ನಗರ ದೆಹಲಿ, ವಿದ್ಯುತ್ ಚಾಲಿತ

ವಾಹನಗಳ ಬಳಕೆಯನ್ನು ಮತ್ತಷ್ಟು ಉತ್ತೇಜಿಸಲು ಮುಂದಾಗಿದೆ. ಈ ಸಂಬಂಧ ವಿದ್ಯುಚ್ಚಾಲಿತ ಕಾರು ಗಳಿಗೆ ರಸ್ತೆ ತೆರಿಗೆ ವಿನಾಯಿತಿಯನ್ನೂ ಘೋಷಿಸಿದೆ. 30 ಲಕ್ಷ ರು.ಗಿಂತ ಕಡಿಮೆ ಬೆಲೆಯ 'ಎಲೆಕ್ಟ್ರಿಕ್ ವಾಹನ'(ಇವಿ)ಗಳಿಗೆ 2030ರ ಮಾ.31ರವರೆಗೂ ರಸ್ತೆ ತೆರಿಗೆಯಿಂದ ಪೂರ್ಣ ವಿನಾಯಿತಿ ನೀಡುವುದಾಗಿ ಘೋಷಿಸಿದೆ. ಅಲ್ಲದೇ, ಹೈಬ್ರಿಡ್ ರೀತಿಯ ವಾಹನಗಳಿಗೆ(ಪೆಟ್ರೋಲ್ ಮತ್ತು ಎಲೆಕ್ಟ್ರಿಕ್) ಶೇ.50ರಷ್ಟು ವಿನಾಯಿತಿ ನೀಡುವ ಕುರಿತೂ ಪ್ರಸ್ತಾಪಿಸಲಾಗಿದೆ. ಈ ಎರಡೂ ಅಂಶಗಳನ್ನು ಒಳಗೊಂಡ 'ದೆಹಲಿ ವಿದ್ಯುಚ್ಚಾಲಿತ ವಾಹನ ನೀತಿ-2026-2030' ಕರಡು ಪ್ರತಿಯನ್ನು ದೆಹಲಿ ರಸ್ತೆ ಸಾರಿಗೆ ಇಲಾಖೆಯ ವೆಬ್ ತಾಣದಲ್ಲಿ ಪ್ರಕಟಿಸಿದೆ.

{ **ರಾಹುಲ್ ಗಾಂಧಿ** } ಕಾಂಗ್ರೆಸ್ ಮುಖಂಡ

ಭಾರತದಲ್ಲಿ ಸಮಾನತೆ ಇರಬಾರದೆಂಬುದೇ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಮತ್ತು ಬಿಜೆಪಿ ಉದ್ದೇಶ. ಹಾಗಾಗಿಯೇ ಸಂವಿಧಾನವನ್ನೇ ಅಳಿಸಲು ಉದ್ದೇಶಿಸಿವೆ. ಸಂವಿಧಾನ ದೇಶದ ಅಡಿಪಾಯ. ಅದಿಲ್ಲದಿದ್ದರೆ ನಾವಿಂದು ಭಾರತ ಎಂದು ಕರೆಯಲಾಗುತ್ತಿರಲಿಲ್ಲ. ಅಂಬೇಡ್ಕರ್ ಪ್ರತಿಮೆ ಎದುರು ತಲೆಬಾಗಿ, ಈ ಕಡೆ ಸಂವಿಧಾನ ನಾಶಕ್ಕೆ ಹೊಂಚು ಹಾಕಿದ್ದಾರೆ.

ವಿಧೇಯಕಕ್ಕೆ ಇಷ್ಟೊಂದು ಆತುರ ಏಕೆ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನೆ

ಮಹಿಳಾ ಮೀಸಲು ಬೆಂಬಲಿಸಿ: ಮೋದಿ ಪತ್ರ

ದೆಹಲಿ: ಮಹಿಳೆಯರಿಗೆ ಸಂಸತ್ತು ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಶೇ.33ರಷ್ಟು(ಒಟ್ಟು ಜನಪ್ರತಿನಿಧಿಗಳ ಸಂಖ್ಯೆಯ ಮೂರನೇ ಒಂದು ಭಾಗ) ಮೀಸಲು ಸೌಲಭ್ಯ ಕಲ್ಪಿಸಿಕೊಡಲೆಂದೇ ವಿಶೇಷವಾಗಿ ರಚಿಸಲಾಗಿರುವ 'ನಾರಿ ಶಕ್ತಿ ವಂದನಾ ಕಾಯಿದೆ-2023' ಸಂಸತ್ತಿನ ಸಮ್ಮತಿ ಪಡೆದು

ದೇಶದಲ್ಲಿ ಜಾರಿಯಾಗುವುದಕ್ಕೆ ಎಲ್ಲಾ ಸಂಸದರೂ ಪೂರ್ಣ ಬೆಂಬಲ ಕೊಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ. ಈ ಸಂಬಂಧ ಅವರು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಸದನದ ನಾಯಕರಾಗಿರುವ ವಿವಿಧ ಪಕ್ಷಗಳ ಸಂಸದರಿಗೆ ಪತ್ರ ಬರೆದಿದ್ದಾರೆ.

ಮಹಿಳಾ ಮೀಸಲು ಕಾಯಿದೆಗೆ ಸಂಸತ್ತಿನ ಅನುಮೋದನೆ ಪಡೆಯಲೆಂದೇ ಏ.16ರಿಂದ 3 ದಿನಗಳ ಕಾಲ ಸಂಸತ್ತಿನ ವಿಶೇಷ ಅಧಿವೇಶನ ಕರೆಯಲಾಗಿದೆ. ಈ ಮೂರು ದಿನಗಳಲ್ಲಿ ನಾರಿ ಶಕ್ತಿ ವಂದನಾ ಕಾಯಿದೆ ಬಗ್ಗೆ ಸದನದಲ್ಲಿ ಚರ್ಚೆ ನಡೆಸಿ ಸರ್ವಸಮ್ಮತ ಅಂಗೀಕಾರ ಸಿಗುವಂತೆ ಮಾಡ ಬೇಕೆಂದು ಪ್ರಧಾನಿ ಮೋದಿ ಎಲ್ಲಾ ಪಕ್ಷಗಳ ಸಂಸದ ರಿಗೂ ಮನವಿ ಮಾಡಿದ್ದಾರೆ. 2029ರ ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲು ನೀಡಬೇಕು ಎಂಬುದು ಸರಕಾರದ ಗುರಿಯಾಗಿದೆ.

ಹಾಗಾಗಿಯೇ ಲೋಕಸಭೆ ಮತ್ತು ರಾಜ್ಯಸಭೆ ಯಲ್ಲಿನ ಸಂಸದೀಯ ಪಕ್ಷಗಳ ನಾಯಕರಿಗೆ ಪತ್ರ ಬರೆದು 'ನಾರಿ ಶಕ್ತಿ ವಂದನಾ ಕಾಯಿದೆ'(ಮಹಿಳಾ ಮೀಸಲು ತಿದ್ದುಪಡಿ ಕಾಯಿದೆ)ಗೆ ಪೂರ್ಣ ಬೆಂಬಲ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಪತ್ರ ಬರೆದು ಕೇಳಿಕೊಂಡಿದ್ದಾರೆ.

ಏ.16ರಿಂದ ಸಂಸತ್ತಿನಲ್ಲಿ ನಾರಿ ಶಕ್ತಿ ವಂದನಾ ಕಾಯಿದೆ ಕುರಿತು ಐತಿಹಾಸಿಕ ಚರ್ಚೆ ನಡೆಯಲಿದೆ. ಈ ವಿಶೇಷ ಸಭೆ ಪ್ರಜಾಪ್ರಭುತ್ವವನ್ನು ಮತ್ತಷ್ಟು ಬಲಪಡಿಸಲಿದೆ. ಎಲ್ಲರನ್ನೂ ಜತೆಗೆ ಕರೆದೊಯ್ಯುವ ಬದ್ಧತೆಯನ್ನು ಪುನರುಚ್ಚರಿಸಲು ಇದೊಂದು ಅವಕಾಶ. ಈ ಉತ್ಸಾಹ ಮತ್ತು ಉದ್ದೇಶದಿಂದ ನಾನು ನಿಮಗೆ ಪತ್ರ ಬರೆಯುತ್ತಿದ್ದೇನೆ ಎಂದು ಮೋದಿ ಪತ್ರದಲ್ಲಿ ತಿಳಿಸಿದ್ದಾರೆ.

ಬಿಜೆಪಿ ಸಂಸದರಿಗೆ 3 ಸಾಲಿನ ವಿಪ್ ಜಾರಿ

ಬಿಜೆಪಿ ಕೂಡಾ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿರುವ ಪಕ್ಷದ ಎಲ್ಲಾ ಸಂಸದರಿಗೂ 3 ಸಾಲಿನ ವಿಪ್ ಜಾರಿ ಮಾಡಿದ್ದು, ಏ.16ರಿಂದ 18ರವರೆಗೂ ಸದನದಲ್ಲಿ ತಪ್ಪದೇ ಹಾಜರಿರುವಂತೆ ನಿರ್ದೇಶನ ನೀಡಿದೆ. ಇದೇ ರೀತಿ ವಿಪ್ ಜಾರಿ ಮಾಡುವಂತೆ ಎನ್‌ಡಿಎ ಮಿತ್ರಪಕ್ಷಗಳಿಗೂ ಮನವಿ ಮಾಡಿದೆ.

ಸದ್ಯದ ಸನ್ನಿವೇಶದಲ್ಲಿ 2027ರ ಜನಗಣತಿ ಆಧರಿಸಿ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿನ ಕ್ಷೇತ್ರಗಳ ಮರು ವಿಂಗಡಣೆ ಮತ್ತು ಕ್ಷೇತ್ರಗಳ ಸಂಖ್ಯೆಯ ವಿಸ್ತರಣೆ ಬಳಿಕವಷ್ಟೇ(2034ಕ್ಕೆ) ಮಹಿಳಾ ಮೀಸಲು ಕಾಯಿದೆ ಜಾರಿಗೆ ಅವಕಾಶವಾಗುತ್ತದೆ. ಕ್ಷೇತ್ರ ಮರುವಿಂಗಡಣೆಯಿಂದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 816ಕ್ಕೆ ಹೆಚ್ಚಲಿದೆ. ಅದರಲ್ಲಿ 273 ಕ್ಷೇತ್ರಗಳು ಮಹಿಳೆಯರಿಗೆ ಮೀಸಲಾಗಲಿವೆ. ಆದರೆ, 2029ರ ಲೋಕಸಭಾ ಚುನಾವಣೆ ವೇಳೆಗೆ ಶೇ.33ರ ಮಹಿಳಾ ಮೀಸಲು ಕಾಯಿದೆಯನ್ನು ಜಾರಿಗೊಳಿಸಬೇಕು ಎಂದುಕೊಂಡಿರುವ ಕೇಂದ್ರ ಸರಕಾರ, ಅದಕ್ಕಾಗಿ ಸಂವಿಧಾನ ತಿದ್ದುಪಡಿ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಬೇಕಿದೆ.

ಮೊದಲು ಸಭೆ ಕರೆದು ಚರ್ಚೆ ಮಾಡಿ: ಖರ್ಗೆ

ಮಹಿಳಾ ಮೀಸಲು ತಿದ್ದುಪಡಿ ವಿಧೇಯಕದ ಮಂಡನೆ, ಚರ್ಚೆ ಮತ್ತು ಅಂಗೀಕಾರ ಪಡೆಯುವುದಕ್ಕಾಗಿ ಎನ್‌ಡಿಎ ಸರಕಾರ, ಏ.16ರಿಂದ 3 ದಿನಗಳ ವಿಶೇಷ

ಅಧಿವೇಶನ ಕರೆದಿರುವುದಕ್ಕೆ ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಭಾನುವಾರ ಪ್ರತಿಕ್ರಿಯಿಸಿದೆ. ಮಹಿಳಾ ಮೀಸಲು ವಿಧೇಯಕದ ಅನುಮೋದನೆಗೆ ತರಾತುರಿ ಮಾಡುತ್ತಿರುವುದಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರಾಜಕೀಯವಾಗಿ ಲಾಭ ಮಾಡಿಕೊಳ್ಳುವುದಕ್ಕಾಗಿ ಬಿಜೆಪಿ ಆತುರ ಮಾಡುತ್ತಿದೆ ಎಂದು ಟೀಕಿಸಿದ್ದಾರೆ. ಮೊದಲು ಕ್ಷೇತ್ರಗಳ ಮರು ವಿಂಗಡಣೆ-ವಿಸ್ತರಣೆ ವಿಚಾರವನ್ನೂ ಚರ್ಚೆ ಮಾಡಬೇಕಿದೆ ಎಂದು ಆಗ್ರಹಿಸಿದ್ದಾರೆ. ವಿಶೇಷ ಅಧಿವೇಶನದಲ್ಲಿ ಸದನಕ್ಕೂ ಮೊದಲು ಪಕ್ಷಗಳ ಸಭೆ ಕರೆದು ಚರ್ಚೆ ನಡೆಸಿರಿ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ಮೋದಿ ಅವರ ಪತ್ರಕ್ಕೆ ಪ್ರತಿಕ್ರಿಯಿಸಿದ್ದಾರೆ. 2023ರಲ್ಲಿಯೇ ಮಹಿಳಾ ಮೀಸಲು ವಿಧೇಯಕ ಮಂಡನೆ ಯಾಗಿ ಸರ್ವಾನುಮತದಿಂದ ಅಂಗೀಕಾರವಾಗಿತ್ತು. ನಂತರದಲ್ಲೇಕೆ ಸರಕಾರ ಜಾರಿ ಮಾಡಲಿಲ್ಲ ಎಂದು ಖರ್ಗೆ ಕೇಂದ್ರ ಸರಕಾರವನ್ನು ಪ್ರಶ್ನೆ ಮಾಡಿದ್ದಾರೆ.



ಸಾರ್ವಜನಿಕ ಜೀವನದಲ್ಲಿ ನಮ್ಮ ಸೋದರಿಯರು ಮತ್ತು ಹೆಣ್ಣುಮಕ್ಕಳು ಬಾಹ್ಯಾಕಾಶದಿಂದ ಕ್ರೀಡೆವರೆಗೂ, ಸಶಸ್ತ್ರ ಪಡೆಗಳಿಂದ ಸ್ಟಾರ್ಟಪ್‌ವರೆಗೂ ಪ್ರತಿ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಮಹಿಳೆಯರಿಗೆ ಮುನ್ನಡೆಯಲು, ನಿರ್ಧಾರ ತೆಗೆದುಕೊಳ್ಳಲು ಅವಕಾಶ ಸಿಕ್ಕಾಗ ಮಾತ್ರ ಯಾವುದೇ ಸಮಾಜ ಪ್ರಗತಿ ಹೊಂದುತ್ತದೆ. ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ದೇಶದ ಸಂಕಲ್ಪವನ್ನು ಸಾಧಿಸಲು ಮಹಿಳಾ ಶಕ್ತಿ ಈ ಪ್ರಯಾಣದಲ್ಲಿ ಪೂರ್ಣವಾಗಿ ಪಾಲ್ಗೊಳ್ಳುವುದು ಮುಖ್ಯ.

-ನರೇಂದ್ರ ಮೋದಿ, ಪ್ರಧಾನಿ

ಹೆಜ್ಬೊಲ್ಲಾ ನೆಲೆ ಮೇಲೆ ಇಸ್ರೇಲ್ ದಾಳಿ, 11 ಬಲಿ

ಲೆಬನಾನ್‌ನ ನಬತೈಹ್ ಪ್ರದೇಶದ ಮೇಲೆ ಇಸ್ರೇಲ್ ಸೇನಾಪಡೆ ದಾಳಿ ಮಾಡಿರುವುದು.

ಬೈರೂತ್: ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಶನಿವಾರ 21 ಗಂಟೆಗಳ ಕಾಲ ನಡೆದ ಅಮೆರಿಕ-ಇರಾನ್ ನಡುವಿನ ಶಾಂತಿ ಮಾತುಕತೆ ವಿಫಲವಾದ ಕೆಲವು ಗಂಟೆಗಳ ತರುವಾಯ ಇಸ್ರೇಲ್, ಲೆಬನಾನ್ ಮೇಲೆ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಶನಿವಾರ ರಾತ್ರಿಯಿಂದಲೇ ಹೆಜ್ಬೊಲ್ಲಾ ಉಗ್ರ ಸಂಘಟನೆಯ ಭದ್ರಕೋಟೆ ಎನಿಸಿಕೊಂಡ ಪ್ರದೇಶಗಳನ್ನೇ ಗುರಿಯಾಗಿಸಿಕೊಂಡು ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ. ಭಾನುವಾರ ಮುಂಜಾನೆ ನಡೆದ ದಾಳಿಗಳಲ್ಲಿ ಒಟ್ಟು 11 ಮಂದಿ ಸಾವನ್ನಪ್ಪಿದ್ದಾರೆ.

ಲೆಬನಾನ್‌ನ ದಕ್ಷಿಣ ಭಾಗದ ಟೇರ್ ಪ್ರದೇಶದ ಬಳಿಯ ಮಾರೂಬ್‌ನಲ್ಲಿದ್ದ ಹೆಜ್ಬೊಲ್ಲಾ ಉಗ್ರರ ನೆಲೆ ಮೇಲೆ ಇಸ್ರೇಲಿ ವಿಮಾನಗಳು ಬಾಂಬ್ ಮಳೆಗರೆದಿವೆ. ಈ ದಾಳಿಯಲ್ಲಿ ಆರು ಮಂದಿ ಹತರಾಗಿದ್ದಾರೆ. ಖಾನಾ ಭಾಗದಲ್ಲಿ ಐವರು ನಾಗರಿಕರು ಸಾವಿಗೀಡಾಗಿದ್ದಾರೆ. ಇನ್ನೊಂದೆಡೆ ಲೆಬನಾನ್ ದಕ್ಷಿಣ ಭಾಗದ ಪಟ್ಟಣ ಬಿಂಟ್ ಜೆಬೈಲ್‌ನಲ್ಲಿ ಇಸ್ರೇಲ್ ಸೇನಾಪಡೆ ಮತ್ತು ಹೆಜ್ಬೊಲ್ಲಾ ಉಗ್ರರ ನಡುವೆ ತೀವ್ರ ಘರ್ಷಣೆಗಳು ನಡೆದಿವೆ. ಹೆಜ್ಬೊಲ್ಲಾ ನೆಲೆಗಳಲ್ಲಿ ಮೂಲಸೌಕರ್ಯಗಳನ್ನು ನಾಶ ಪಡಿಸುವ ಕಾರ್ಯಾಚರಣೆಯ ಭಾಗವಾಗಿ ಪಟ್ಟಣವನ್ನು ಇಸ್ರೇಲ್ ಟ್ಯಾಂಕ್‌ಗಳು, ಸೈನಿಕರ ತಂಡ ಸುತ್ತುವರೆದಿದೆ ಎಂದು ವರದಿಯಾಗಿದೆ. ಇನ್ನೊಂದೆಡೆ, ನಬತೈಹ್ ಎಂಬ ಪ್ರದೇಶವನ್ನೂ ಇಸ್ರೇಲ್ ಸೇನಾಪಡೆಗಳು ಗುರಿಯಾಗಿಸಿಕೊಂಡು ನಿರಂತರ ದಾಳಿ ನಡೆಸುತ್ತಿವೆ. ಇಲ್ಲಿ ಹಲವಾರು ಕಟ್ಟಡಗಳು ನೆಲಸಮವಾಗಿವೆ ಎಂದು ತಿಳಿದುಬಂದಿದೆ.

ಪ್ರತಿದಾಳಿ: ಇಸ್ರೇಲ್ ದಾಳಿಗೆ ಪ್ರತಿಯಾಗಿ ಹೆಜ್ಬೊಲ್ಲಾ ಉಗ್ರ ಸಂಘಟನೆಯೂ ಇಸ್ರೇಲ್‌ನ ಗಡಿ ಭಾಗಗಳತ್ತ ಬಾಂಬ್ ಶೆಲ್‌ಗಳನ್ನು ಸಿಡಿಸುತ್ತಿದೆ, ಕ್ಷಿಪಣಿಗಳನ್ನು ಹಾರಿಸುತ್ತಿದೆ ಎಂದು ವರದಿಯಾಗಿದೆ.

ಟ್ರಕ್ ಉರುಳಿ ಕಾರು ಅಪ್ಪಚ್ಚಿ, ಸಾವು

ಅಮರಾವತಿ: ಆಂಧ್ರಪ್ರದೇಶದ ಎನ್‌ಟಿಆರ್ ಜಿಲ್ಲೆಯ ರಸ್ತೆಯಲ್ಲಿ ಹಾರುಬೂದಿ ಸಾಗಿಸುತ್ತಿದ್ದ ಕಂಟೇನರ್ ಟ್ಯಾಂಕರ್ ಬ್ರೇಕ್ ವಿಫಲವಾಗಿದ್ದರಿಂದ ಚಾಲಕನ ನಿಯಂತ್ರಣ ಕಳೆದುಕೊಂಡು ಪಕ್ಕದಲ್ಲೇ ಸಾಗುತ್ತಿದ್ದ ಬಿಎಂಡಬ್ಲ್ಯು ಕಾರಿನ ಮೇಲೆ ಮಗುಚಿ ಬಿದ್ದಿದೆ.



ಹಾರುಬೂದಿ ತುಂಬಿದ್ದ ಕಂಟೇನರ್ ಟ್ಯಾಂಕರ್‌ನ ಭಾರಕ್ಕೆ ಕೆಂಪು ಬಣ್ಣದ ಬಿಎಂಡಬ್ಲ್ಯು ಕಾರು ಸಂಪೂರ್ಣ ಅಪ್ಪಚ್ಚಿಯಾಗಿದೆ. ಕಾರಿನೊಳಗಿದ್ದ ಗುಂಟೂರು ಜಿಲ್ಲೆಯ ವಕೀಲ ಪಿ.ಶ್ರೀನಿವಾಸ ರಾವ್ ಸ್ಥಳದಲ್ಲೇ ದುರ್ಮರಣಕ್ಕೀಡಾಗಿದ್ದಾರೆ. ಫ್ಲೈಆಶ್ ಟ್ಯಾಂಕರನ್ನು ಮೇಲೆತ್ತಲು ಸ್ಥಳದಲ್ಲಿ ಕ್ರೇನ್ ಲಭ್ಯವಿಲ್ಲದೇ ಇದ್ದ ಕಾರಣ ರಕ್ಷಣಾ ಕಾರ್ಯಾಚರಣೆ 2 ಗಂಟೆ ವಿಳಂಬವಾಗಿದೆ. ಆ ಬಳಿಕವಷ್ಟೇ ಅಪ್ಪಚ್ಚಿಯಾಗಿದ್ದ ಕಾರಿನಿಂದ ವಕೀಲರ ಮೃತದೇಹವನ್ನು ಹೊರತೆಗೆಯಲು ಸಾಧ್ಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಶನಿವಾರ ಟೋಲ್ ಪ್ಲಾಜಾ ಬಳಿಯೇ ಅಪಘಾತವಾಗಿದ್ದರಿಂದ ವಾಹನಗಳ ಸಂಚಾರಕ್ಕೂ ಅಡಚಣೆಯಾಗಿದೆ.

ಬಾಂಗ್ಲಾದಲ್ಲಿ ಮತ್ತೆ ಹಿಂದೂ ಮೇಲೆ ದಾಳಿ

ಢಾಕಾ: ನೆರೆಯ ಬಾಂಗ್ಲಾದೇಶದಲ್ಲಿ ಮತ್ತೆ ಹಿಂದೂಗಳ ಮೇಲೆ ದಾಳಿ ಶುರುವಾಗಿದೆ. ಕುಷ್ಟಿಯಾ ಮತ್ತು ರಂಗಪುರ ಜಿಲ್ಲೆಗಳಲ್ಲಿ ಶನಿವಾರ ಹಿಂದೂಗಳನ್ನು ಗುರಿಯಾಗಿಸಿಕೊಂಡು ಗುಂಪು ದಾಳಿ ನಡೆಸಲಾಗಿದೆ. ಹಿಂದೂಗಳ ಒಡೆತನದ ಅಂಗಡಿ, ಮನೆಗಳಿಗೆ ಗುಂಪು ಬೆಂಕಿ ಹಚ್ಚಿದೆ.

ಸಿಯಾಟಲ್ ಮೇಯರ್ ಕೇಟೀ ವಿಲ್ಸನ್, ಕಾನ್ಸುಲ್ ಜನರಲ್ ಪ್ರಕಾಶ್ ಗುಪ್ತಾ ಭಾಗಿ

ಸಿಯಾಟಲ್‌ನಲ್ಲಿ ವಿವೇಕಾನಂದರ ಕಂಚಿನ ಪ್ರತಿಮೆ

ವಾಷಿಂಗ್ಟನ್: ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರ ಪೂರ್ಣ ಪ್ರಮಾಣದ ಲೋಹದ ಪ್ರತಿಮೆಯನ್ನು ಸಿಯಾಟಲ್‌ನಲ್ಲಿ ಸ್ಥಾಪಿಸಲಾಗಿದೆ. ಭಾರತೀಯ ಕಲಾವಿದ ನರೇಶ್ ಕುಮಾರ್ ಕುಮಾವತ್ ರಚಿಸಿದ ಕಂಚಿನ ಪ್ರತಿಮೆ ಯನ್ನು ಸಿಯಾಟಲ್ ನಗರದ ಡೌನ್ ಟೌನ್‌ನಲ್ಲಿರುವ ಜನನಿಬಿಡ ವೆಸ್ಟ್ ಲೇಕ್ ಚೌಕದಲ್ಲಿ ನೆಲೆಗೊಳಿಸಲಾಗಿದೆ. ಈ ಪ್ರತಿಮೆಯನ್ನು 'ಇಂಡಿಯನ್ ಕೌನ್ಸಿಲ್ ಆಫ್ ಕಲ್ಚರಲ್ ರಿಲೇಷನ್ಸ್' ಸಂಸ್ಥೆಯು ಸಿಯಾಟೆಲ್ ನಗರಕ್ಕೆ ಉಡುಗೊರೆಯಾಗಿ ನೀಡಿದೆ.

ಸ್ವಾಮಿ ವಿವೇಕಾನಂದರ ಕಂಚಿನ ಪ್ರತಿಮೆಯನ್ನು ಸಿಯಾಟಲ್ ನಗರದ ಮೇಯರ್ ಕೇಟೀ ವಿಲ್ಸನ್ ಮತ್ತು ಸಿಯಾಟಲ್ ನಗರದಲ್ಲಿರುವ ಭಾರತದ ಕಾನ್ಸುಲ್ ಜನರಲ್ ಪ್ರಕಾಶ್ ಗುಪ್ತಾ ಶನಿವಾರ ಜಂಟಿಯಾಗಿ ಅನಾವರಣಗೊಳಿಸಿದರು. ಇಲಿನಾಯ್ಸ್ ರಾಜ್ಯದ ಲೆಮೊಂಟೊದಲ್ಲಿನ 'ದಿ ಹಿಂದೂ ಟೆಂಪಲ್ ಆಫ್ ಗ್ರೇಟರ್ ಚಿಕಾಗೊ'ದಲ್ಲಿಯೂ 1998ರಲ್ಲಿಯೇ 10 ಅಡಿ ಎತ್ತರದ ಕಂಚಿನ ಪ್ರತಿಮೆ ಇದೆ ಎಂಬುದು ಉಲ್ಲೇಖಾರ್ಹ.

1893ರಲ್ಲಿ ಚಿಕಾಗೋ ನಗರದಲ್ಲಿ ನಡೆದ ವಿಶ್ವ ಧರ್ಮ ಸಂಸತ್‌ನಲ್ಲಿ ಸ್ವಾಮಿ ವಿವೇಕಾನಂದರು 'ಮೈ ಡಿಯರ್ ಅಮೆರಿಕನ್ ಬ್ರದರ್ಸ್ ಅಂಡ್ ಸಿಸ್ಟರ್ಸ್' ಎಂಬ ಸಂಭೋದನೆಯೊಂದಿಗೆ ತಮ್ಮ ಐತಿಹಾಸಿಕ ಭಾಷಣ ಮಾಡಿದ್ದರು. ಆ ಮೂಲಕ ಸಭಾಂಗಣದಲ್ಲಿ ಹಲವು ನಿಮಿಷಗಳ ಕಾಲ ನಿರಂತರ ಜೋರು ಚಪ್ಪಾಳೆ ಮೊರೆಯುವಂತಾಗಿತ್ತು. ಆನಂತರ ವಿವೇಕಾನಂದರು ಅಮೆರಿಕ-ಯೂರೋಪ್ ದೇಶಗಳಲ್ಲಿ ಪ್ರವಾಸ ಕೈಗೊಂಡು ಭಾರತ, ಸನಾತನ ಧರ್ಮ, ಹಿಂದೂ ತತ್ವಶಾಸ್ತ್ರ ಮೊದಲಾದ ವಿಷಯಗಳನ್ನು ಜಗತ್ತಿನೆದುರು ತೆರೆಟ್ಟಿದ್ದರು. ಆ ನೆನಪಿಗಾಗಿಯೇ ಸಿಯಾಟಲ್ ನಗರದಲ್ಲಿ ಕಂಚಿನ ಪ್ರತಿಮೆ ಸ್ಥಾಪಿಸಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.



ಸಿಯಾಟಲ್ ಮೇಯರ್ ಕೇಟೀ ವಿಲ್ಸನ್, ಭಾರತದ ಕಾನ್ಸುಲ್ ಜನರಲ್ ಪ್ರಕಾಶ್ ಗುಪ್ತಾ ಶನಿವಾರ ಜಂಟಿಯಾಗಿ ಪ್ರತಿಮೆ ಅನಾವರಣಗೊಳಿಸಿದರು.

ಮಧ್ಯಪ್ರದೇಶ ಕುನೊ ರಾಷ್ಟ್ರೀಯ ಉದ್ಯಾನದಲ್ಲಿನ ಚೀತಾ ಸಂಖ್ಯೆ 57ಕ್ಕೆ

ಗಾಮಿನಿಗೆ 4 ಮೊಮ್ಮಕ್ಕಳ ಜನನ

ಭೋಪಾಲ್: ಭಾರತದಲ್ಲಿ ವಿನಾಶವಾಗಿದ್ದ ಚುಕ್ಕಿ ಚೀತಾಗಳ ಸಂತತಿಯನ್ನು ವೃದ್ಧಿಸುವ ಸಲುವಾಗಿ ಭಾರತ ಸರಕಾರ 2022ರಲ್ಲಿ ಚೀತಾಗಳ ಆಮದು ಪ್ರಕ್ರಿಯೆ ಆರಂಭಿಸಿತು.

ಗಾಮಿನಿಯ 25 ತಿಂಗಳ ಮಗಳಿಗೂ ಪ್ರಸವ, 4 ಚೀತಾಮರಿ ಆರೋಗ್ಯ

ದಕ್ಷಿಣ ಆಫ್ರಿಕಾ ಖಂಡದ ದೇಶಗಳಿಂದ ಆಮದು ಮಾಡಿಕೊಳ್ಳಲಾಗಿದ್ದ ಚೀತಾಗಳು ಭಾರತದ ಹವಾಗುಣಕ್ಕೆ ಒಗ್ಗಿಕೊಂಡಿವೆ, ಸಂತತಿಯನ್ನೂ ಅಭಿವೃದ್ಧಿಪಡಿಸುತ್ತಿವೆ.

ಆಫ್ರಿಕಾ ಖಂಡದ ದೇಶಗಳಿಂದ ಆಮದು ಮಾಡಿಕೊಳ್ಳಲಾಗಿದ್ದ ಹಲವು ಚೀತಾಗಳಲ್ಲಿ ಹೆಣ್ಣು ಚಿತಾ ಗಾಮಿನಿಯೂ ಒಬ್ಬಳು. ಆಕೆ ಭಾರತಕ್ಕೆ ಬಂದ ಬಳಿಕ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿಯೇ ಗರ್ಭಧರಿಸಿ ಮರಿಗಳಿಗೆ ಜನ್ಮ ನೀಡಿದ್ದಳು. ಆ ಮರಿಗಳಲ್ಲಿಯೇ ಒಂದು ಹೆಣ್ಣು ಚೀತಾ ಬೆಳೆದು ದೊಡ್ಡವಳಾಗಿದ್ದಾಳೆ. ಆಕೆಗೀಗ 2 ವರ್ಷ 1 ತಿಂಗಳ ಪ್ರಾಯ. ಆಕೆಯೂ ಕುನೋದಲ್ಲಿ ಗಂಡು ಚೀತಾದ ಸಂಪರ್ಕ ಹೊಂದಿ ಗರ್ಭ ಧರಿಸಿ ಶನಿವಾರ 4 ಮರಿಗಳಿಗೆ ಜನ್ಮ ನೀಡಿದ್ದಾಳೆ. ಅಂದರೆ, ಭಾರತದಲ್ಲಿಯೇ ಜನಿಸಿದ್ದ ಹೆಣ್ಣು ಚೀತಾ ಈಗ 2ನೇ ತಲೆಮಾರಿನ ಜನನಕ್ಕೆ ಕಾರಣವಾಗಿದ್ದಾಳೆ.

ತಾಯಿ ಚೀತಾ ಮತ್ತು ನಾಲ್ಕೂ ಮರಿಗಳು ಆರೋಗ್ಯದಿಂದಿವೆ. ಮರಿಗಳು ಇನ್ನೂ ಕಣ್ಣು ಬಿಟ್ಟಿಲ್ಲ, ಆದರೆ, ತಾಯಿಯ ಮೊಲೆಹಾಲು ಕುಡಿಯುತ್ತಾ ಅಮ್ಮನ ಮಡಿಲಲ್ಲಿ ಸುರಕ್ಷಿತವಾಗಿವೆ ಎಂದು ಕುನೊ ರಾಷ್ಟ್ರೀಯ ಉದ್ಯಾನದ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕೇಂದ್ರ ಸರಕಾರದ ಪರಿಸರ ಮತ್ತು ಅರಣ್ಯ ಸಚಿವ ಭೂಪೇಂದರ್ ಯಾದವ್ 'ಎಕ್ಸ್' ಸಂದೇಶದಲ್ಲಿ ತಾಯಿ ಮಡಿಲಲ್ಲಿ ಪುಟ್ಟ ಮರಿಗಳು ಮಲಗಿರುವ ಫೋಟೊವೊಂದನ್ನು ಹಂಚಿಕೊಂಡಿದ್ದಾರೆ. ಈ ನಾಲ್ಕು ಮರಿಗಳ ಜನನದ ನಂತರ ಕುನೊದಲ್ಲಿನ ಆಫ್ರಿಕಾ ಚೀತಾಗಳ ಸಂಖ್ಯೆ 57ಕ್ಕೆ ಏರಿಕೆಯಾಗಿದೆ ಎಂದೂ ಸಚಿವರು ಬರೆದಿದ್ದಾರೆ.

26 ಸಾವಿರ ಟನ್ ಎಲ್‌ಪಿಜಿ ಸಾಗಣೆ ಮಾಡುತ್ತಿರುವ ಜಗ್ ವಿಕ್ರಮ್

ಹೊರ್ಮುಜ್ ದಾಟಿದ ಭಾರತದ ಮತ್ತೊಂದು ನೌಕೆ

ದಹಲಿ: ಪಶ್ಚಿಮ ಏಷ್ಯಾದಲ್ಲಿ ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧಕ್ಕೆ 2 ವಾರಗಳ ಅಲ್ಪ ವಿರಾಮ ಘೋಷಣೆಯಾದ ಬಳಿಕ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತ ಭಾರತದ ಹಡಗು ಜಗ್ ವಿಕ್ರಮ್ ಶನಿವಾರ ಹೊರ್ಮುಜ್ ಜಲಸಂಧಿಯನ್ನು ದಾಟಿ ಭಾರತದತ್ತ ಸಾಗಿ ಬರುತ್ತಿದೆ.

ಇದು ಅಮೆರಿಕ-ಇರಾನ್ ನಡುವೆ 2 ವಾರಗಳ ತಾತ್ಕಾಲಿಕ ಕದನ ವಿರಾಮ ಘೋಷಣೆಯಾದ ನಂತರ ಹೊರ್ಮುಜ್ ಜಲಸಂಧಿ ದಾಟಿದ ಮೊದಲ ಭಾರತೀಯ ಹಡಗು ಎಂದು ಹಡಗು-ಟ್ರ್ಯಾಕಿಂಗ್ ದತ್ತಾಂಶಗಳು ತಿಳಿಸಿವೆ.

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ಎಲ್‌ಪಿಜಿ ಅನಿಲ ಭರ್ತಿ ಮಾಡಿಕೊಂಡು ಶಾರ್ಜಾ ಆಂಚ್ ಬಂದರಿನಿಂದ ಏ.9ರಂದು ಬೆಳಗ್ಗೆ ಹೊರಟ 'ಜಗ್ ವಿಕ್ರಮ್' ಹಡಗು ಶನಿವಾರ ಬೆಳಗ್ಗೆ ಹೊರ್ಮುಜ್ ಜಲಸಂಧಿಯನ್ನು ದಾಟಿ ಮುನ್ನಡೆದಿದೆ. ಭಾರತದ ಕಾರ್ಯತಂತ್ರ ಜಲಮಾರ್ಗದ ಮೂಲಕ ಸಂಚರಿಸುತ್ತಿದ್ದು, ಭಾನುವಾರ ಮಧ್ಯಾಹ್ನ ಓಮನ್ ಕೊಲ್ಲಿಯ ಬಳಿ ಅರಬ್ಬೀ ಸಮುದ್ರದಲ್ಲಿ ಸಂಚರಿಸುತ್ತಿದೆ. ಪೂರ್ವ ದಿಕ್ಕಿನತ್ತ ಗಂಟೆಗೆ 11.9 ನಾಟಿಕಲ್ ಕಿಮೀ ವೇಗದಲ್ಲಿ ಸಾಗುತ್ತಿದೆ. ಈ ಹಡಗು ಏಪ್ರಿಲ್ 15ರಂದು ಮುಂಬೈ ತಲುಪುವ ನಿರೀಕ್ಷೆಯಿದೆ.

ಮುಂಬೈ ಮೂಲದ ಗ್ರೇಟ್ ಈಸ್ಟರ್ನ್ ಶಿಪ್ಪಿಂಗ್ ಕಂಪನಿ ಒಡೆತನದ ಜಗ್ ವಿಕ್ರಮ್, 26,000 ಟನ್ ಸಾಮರ್ಥ್ಯದ್ದಾಗಿದ್ದು, ಸದ್ಯ 20,400 ಟನ್ ಅಡುಗೆ ಅನಿಲ ಸಾಗಿಸುತ್ತಿದೆ. ಅದರಲ್ಲಿ 24 ನಾವಿಕ ಸಿಬ್ಬಂದಿಗಳಿದ್ದಾರೆ.

15 ಹಡಗು ಬಾಕಿ

ಮಾ.1ರಿಂದ ಇಲ್ಲಿಯವರೆಗೆ ಭಾರತದ 9ನೇ ಸರಕು ಸಾಗಣೆ ಹಡಗು ಇದಾಗಿದೆ. ಕದನ ವಿರಾಮ ಘೋಷಣೆಗೂ ಮುನ್ನ 6 ವಾರಗಳಲ್ಲಿ ಭಾರತ ಧ್ವಜ ಹೊತ್ತ 8 ಹಡಗುಗಳು ಜಲಸಂಧಿ ದಾಟಿ ಭಾರತಕ್ಕೆ ಬಂದಿದ್ದವು. ಭಾರತ ಧ್ವಜವಿರುವ 15 ಹಡಗುಗಳು ಈ ಪ್ರದೇಶದಲ್ಲಿ ಸಿಲುಕಿಕೊಂಡಿವೆ.

ಅಮೆರಿಕದ ಜತೆ ಇಂಥ ನಂಟು ಪಾಕಿಗಷ್ಟೇ ಸಾಧ್ಯ

ದೆಹಲಿ: ಇರಾನ್-ಅಮೆರಿಕ ನಡುವೆ ಕದನ ವಿರಾಮ ಬಗ್ಗೆ ಇಸ್ಲಾಮಾಬಾದ್‌ನಲ್ಲಿ ಮಾತುಕತೆ ನಡೆದಿರುವುದರಲ್ಲಿ ಪಾಕಿಸ್ತಾನದ

ಪಾತ್ರದ ಬಗ್ಗೆ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ತಿರುವನಂತಪುರಂ ಸಂಸದ ಶಶಿ ತರೂರ್ ವ್ಯಂಗ್ಯವಾಡಿದ್ದಾರೆ.

ಇರಾನ್-ಅಮೆರಿಕ ಯುದ್ಧ ಕೊನೆಗಾಣಿಸಲು ಪಾಕಿಸ್ತಾನ ಮಧ್ಯಸ್ಥಿಕೆ ವಹಿಸಿರುವುದನ್ನು ವಿಶ್ಲೇಷಣೆ ಮಾಡಿರುವ ಶಶಿ ತರೂರ್, ಇಂಥ ಪಾತ್ರಗಳನ್ನು ವಹಿಸುವುದು ಪಾಕ್‌ನಿಂದ ಮಾತ್ರ ಸಾಧ್ಯ. ಅವೆಲ್ಲವೂ ಪಾಕಿಸ್ತಾನದ ಅನಿವಾರ್ಯತೆಗಳು ಎಂದು ಹೇಳಿ ನಗೆ ಬೀರಿದ್ದಾರೆ. ಪಶ್ಚಿಮ ಏಷ್ಯಾ ಬಿಕ್ಕಟ್ಟು ವಿಚಾರದಲ್ಲಿ ಭಾರತದ ರಾಜತಾಂತ್ರಿಕ ನಡೆಯನ್ನು ಶಶಿ ತರೂರ್ ಸಮರ್ಥಿಸಿದ್ದಾರೆ. ಕದನ ವಿರಾಮ ವಿಚಾರವಾಗಿ ಅಮೆರಿಕ ಕಳುಹಿಸಿದ್ದ ಕರಡು ಪ್ರತಿಯನ್ನೇ ಪಾಕಿಸ್ತಾನದ ಪ್ರಧಾನಿ ಎಕ್ಸ್ ಖಾತೆಯಲ್ಲಿ ಯಥಾವತ್(ಕಾಪಿ-ಪೇಸ್ಟ್) ಪ್ರಕಟಿಸಿ ಜಾಲತಾಣದಲ್ಲಿ ಟ್ರೋಲ್ ಆಗಿದ್ದನ್ನು ಪ್ರಸ್ತಾಪಿಸಿ ವ್ಯಂಗ್ಯವಾಡಿದ್ದಾರೆ. ಪಾಕ್-ಇರಾನ್ 900 ಕಿ.ಮೀ ಗಡಿ ಹಂಚಿಕೊಂಡಿವೆ. ಎರಡೂ ದೇಶಗಳಲ್ಲಿ ಶಿಯಾ ಜನಸಂಖ್ಯೆ ದೊಡ್ಡದಿದೆ. ಶಾಂತಿ ಸಂಧಾನ ಆಗದೇ, ಮತ್ತೆ ಯುದ್ಧ ಆರಂಭವಾದರೆ ನಿರಾಶ್ರಿತರ ಮೊದಲ ಅಲೆಯನ್ನು ಪಾಕಿಸ್ತಾನ ಎದುರಿಸಬೇಕಾಗುತ್ತದೆ ಎಂದು ತರೂರ್ ಭವಿಷ್ಯ ನುಡಿದಿದ್ದಾರೆ.

ಡೀಸೆಲ್ 'ರಫ್ತು ಸುಂಕ' ಮತ್ತೆ ರು.55.50 ಏರಿಕೆ

ದೆಹಲಿ: ಕೇಂದ್ರ ಸರಕಾರ ಡೀಸೆಲ್ ಮೇಲಿನ ರಫ್ತು ಸುಂಕ(ವಿಂಡ್ ಫಾಲ್ ಟ್ಯಾಕ್ಸ್)ವನ್ನು ಲೀಟರ್‌ಗೆ 55.50ರಷ್ಟು ಏರಿಕೆ ಮಾಡಿದೆ. ವಿಮಾನಗಳ ಇಂಧನ(ಏರೊಪ್ಲೇನ್ ಟರ್ಬೈನ್ ಫ್ಯೂಯೆಲ್

-ಎಟಿಎಫ್) ತೆರಿಗೆ ಪ್ರಮಾಣವನ್ನೂ ಲೀ.ಗೆ 42 ರು.ಗಳಷ್ಟು ಏರಿಕೆ ಮಾಡಿದೆ. ಈ ಕುರಿತು ಕೇಂದ್ರ ಹಣಕಾಸು ಸಚಿವಾಲಯದಿಂದ ಅಧಿಸೂಚನೆ ಹೊರಬಿದ್ದು, ಸುಂಕ ಏರಿಕೆ ಕ್ರಮ ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ಅದರಲ್ಲಿ ಹೇಳಲಾಗಿದೆ. ಇದಕ್ಕೂ ಮುನ್ನ ಮಾ.26ರಂದು ಕೇಂದ್ರ ಸರಕಾರ ಡೀಸೆಲ್ ರಫ್ತು ವಹಿವಾಟಿನ ಮೇಲಿನ ಸುಂಕವನ್ನು ಲೀ.ಗೆ 21.50 ರು.ಗಳಷ್ಟು ಮತ್ತು 'ಎಟಿಎಫ್' ತೆರಿಗೆಯನ್ನು ಲೀ.ಗೆ 29.50ರಷ್ಟು ಏರಿಕೆ ಮಾಡಿತ್ತು. ಪಶ್ಚಿಮ ಏಷ್ಯಾದಲ್ಲಿ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧ ಮಾಡುತ್ತಿರುವುದರಿಂದ ಹಾಗೂ ಹೊರ್ಮುಜ್ ಜಲಸಂಧಿ ಬಂದ್ ಆಗಿ ಕಚ್ಚಾ ತೈಲ ಪೂರೈಕೆಯಲ್ಲಿ ಭಾರೀ ವ್ಯತ್ಯಯವಾಗಿರುವುದರಿಂದ ಇಂಧನ ಲಭ್ಯತೆ ಕಡಿಮೆಯಾಗಿದೆ, ನಿರ್ವಹಣಾ ವೆಚ್ಚ ಹೆಚ್ಚಾಗಿದೆ. ಹಾಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಆದರೆ, ಪೆಟ್ರೋಲ್ ಮೇಲಿನ ರಫ್ತು ಸುಂಕ ಎಂದಿನಂತೆ ಶೂನ್ಯದಲ್ಲೇ ಮುಂದುವರಿದಿದೆ ಎಂದು ಪೆಟ್ರೋಲಿಯಂ ಸಚಿವಾಲಯ ತಿಳಿಸಿದೆ.

ಬಿಹಾರ ಸರಣಿ ಅಪಘಾತ: 13 ಬಲಿ, 30 ಗಾಯಾಳು

ಪಟನಾ: ಬಿಹಾರದ ಕತಿಹಾರ್ ಜಿಲ್ಲೆಯ ಕೊಯಿರಾ ಪೊಲೀಸ್ ಠಾಣೆ ವ್ಯಾಪ್ತಿಯ ದಾದ್‌ಪುರ ಮತ್ತು ಬಸಾಗರ ಚೌಕ್ ನಡುವೆ ರಸ್ತೆಯಲ್ಲಿ ಹಲವು ವಾಹನಗಳ ನಡುವೆ ಸರಣಿ ಅಪಘಾತವಾಗಿದೆ.

ಪರಿಣಾಮ ಮಹಿಳೆಯರು ಸೇರಿದಂತೆ ಒಟ್ಟು 13 ಜನರು ದುರ್ಮರಣಕ್ಕೀಡಾಗಿದ್ದಾರೆ. ಇತರೆ 30 ಜನರು ಗಾಯ ಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾ ಗಿದೆ. ಶನಿವಾರ ಸಂಜೆ ರಾಷ್ಟ್ರೀಯ ಹೆದ್ದಾರಿ-31ರಲ್ಲಿ ವೇಗವಾಗಿ ಸಾಗಿ ಬಂದ ಬಸ್, ಪಿಕಪ್ ವಾಹನಕ್ಕೆ ನೇರವಾಗಿ ಡಿಕ್ಕಿ ಹೊಡೆದಿದೆ. ಅಷ್ಟಕ್ಕೆ ನಿಲ್ಲದ ಬಸ್, 1 ಕಾರು, ಸರಕು ಸಾಗಣೆ ಟ್ರಕ್, ಟೆಂಪೊ ಮತ್ತು 3 ಮೋಟಾರ್ ಬೈಕ್‌ಗಳಿಗೂ ಗುದ್ದಿಕೊಂಡು ಹೋಗಿ ನಿಂತಿದೆ. ಬಸ್ ಡಿಕ್ಕಿ ಹೊಡೆದ ರಭಸಕ್ಕೆ ಪಿಕಪ್ ವಾಹನ ಪೂರ್ಣ ನಜ್ಜುಗುಜ್ಜಾಗಿದೆ. ಸ್ಕಾರ್ಪಿಯೊ ವಾಹನ, 3 ಮೋಟಾರ್ ಬೈಕ್‌ಗಳೂ ಜಖಂಗೊಂಡಿವೆ. ಅಪಘಾತ ಸ್ಥಳದ ದೃಶ್ಯ ಬಹಳ ಭೀಕರವಾ ಗಿತ್ತು. ಪಿಕಪ್ ಟ್ರಕ್ ನಜ್ಜುಗುಜ್ಜಾಗಿದ್ದರಿಂದ ಅದರಲ್ಲಿದ್ದ ಎಲ್ಲರೂ ಸ್ಥಳದಲ್ಲೇ ಸಾವಿಗೀಡಾದರು. ಮೋಟಾರ್ ಬೈಕ್ ಸವಾರನೊಬ್ಬ ಕೂಡಾ ಮೃತನಾದ. ಪಿಕಪ್‌ನಲ್ಲಿ ಸಾವಿಗೀಡಾದವರೆಲ್ಲರೂ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಜಾರ್ಖಂಡ್‌ನಿಂದ ಕೆಲಸ ಮುಗಿಸಿ ಊರಿಗೆ ವಾಪಸಾಗುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅಪ್ಪನ ಹೆಗಲಲ್ಲಿ ಹೊತ್ತು ಕುಣಿದ ಪೊಲೀಸ್ ಪುತ್ರಿ

ಬೀಡ್: ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಯುವತಿ ಸುಮೇಧಾ ಶೇಖ್ ಮಹಾರಾಷ್ಟ್ರ ರಾಜ್ಯ ಪೊಲೀಸ್ ಇಲಾಖೆಗೆ ಆಯ್ಕೆಯಾಗಿದ್ದು, ಆ ಖುಷಿಯನ್ನು ಹಂಚಿಕೊಳ್ಳಲು, ತಂದೆ

ಯನ್ನು ಹೆಗಲ ಮೇಲೆ ಹೊತ್ತುಕೊಂಡು ಕುಣಿದಿದ್ದಾಳೆ. ತನ್ನ ಶ್ರೇಯಸ್ಸಿಗಾಗಿ ಶ್ರಮಿಸಿದ ತಂದೆಗೆ ಆ ಮೂಲಕ ಗೌರವ ಸಲ್ಲಿಸಿದ್ದಾಳೆ. ಮಹಾರಾಷ್ಟ್ರ ಪೊಲೀಸ್ ಇಲಾಖೆ ನೇಮಕ ಪ್ರಕ್ರಿಯೆ ಅತಿ ಕಠಿಣ. ಲಿಖಿತ ಮತ್ತು ದೇಹದಾರ್ಢ್ಯ ಪರೀಕ್ಷೆ ಗಳಲ್ಲಿ ಯಶಸ್ಸು ಕಂಡು ಸುಮೇಧಾ ಕಡೆಗೂ ತನ್ನ ಇಷ್ಟದ ನೌಕರಿಗೆ ಸೇರಿದ್ದಾಳೆ. ಆ ಖುಷಿಗಾಗಿ ತನ್ನ ಊರಲ್ಲಿ ಬ್ಯಾಂಡ್ ಬಾಜಾ ಭಜಂತ್ರಿ ಜತೆ ಅಪ್ಪನನ್ನು ಹೆಗಲ ಮೇಲೆ ಹೊತ್ತು ಕುಣಿದಿದ್ದಾಳೆ. ಈ ಸಂದರ್ಭದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ತಂದೆಯೆಡೆಗಿನ ಸುಮೇಧಾಳ ಪ್ರೀತಿ-ಗೌರವ ಮತ್ತು ಆಕೆಯ ದೈಹಿಕ ಸಾಮರ್ಥ್ಯವನ್ನು ಕಂಡು ನೆಟ್ಟಿಗರು ಬಹಳವಾಗಿ ಪ್ರಶಂಸಿಸಿದ್ದಾರೆ. 'ತಂದೆಗೆ ಇದಕ್ಕಿಂತ ದೊಡ್ಡ ಗೌರವ ಮತ್ತೊಂದಿಲ್ಲ' ಎಂದು ನೆಟ್ಟಿಗರೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೋರಿ ಕಾಮಗಾರಿ ಸಂಚಾರ ನಿಷೇಧ

ಉಡುಪಿ: ಆನೆಕೆರೆ ಫುಡ್ ಬಾಸ್ಕೆಟ್ ಸಮೀಪ ಮೋರಿ ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ರಸ್ತೆಯಾಗಿ ಘನ ವಾಹನ ಸಂಚಾರ ನಿಷೇಧಿಸಲಾಗಿದೆ. ಭಾರಿ ವಾಹನ ಚಾಲಕರು ಪರ್ಯಾಯ ಮಾರ್ಗ ಬಳಸುವಂತೆ ಜಿಲ್ಲಾಧಿಕಾರಿ ಸ್ವರೂಪ ಅವರು ಆದೇಶ ಹೊರಡಿಸಿದ್ದಾರೆ. ಏ.20ರವರೆಗೆ ಈ ನಿರ್ಬಂಧ ಜಾರಿಯಲ್ಲಿದ್ದು, ಕೇವಲ ಬಸ್ ಮತ್ತು ಲಾರಿಗಳ ಸಂಚಾರಕ್ಕೆ ಮಾತ್ರ ಈ ನಿಯಮ ಅನ್ವಯವಾಗಲಿದೆ.

ಪ್ರಸ್ತುತ ರಸ್ತೆ ಕಿರಿದಾಗಿದ್ದು ಭಾರಿ ವಾಹನಗಳ ಸಂಚಾರದಿಂದ ಕಾಮಗಾರಿಗೆ ಅಡ್ಡಿಯಾಗುವ ಹಾಗೂ ಅಪಘಾತಗಳು ಸಂಭವಿಸುವ ಸಾಧ್ಯತೆ ಇದ್ದು ಲೋಕೋಪಯೋಗಿ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಮನವಿ ಮೇರೆಗೆ ಸಂಚಾರ ನಿಷೇಧಿಸಲಾಗಿದೆ. ಈ ರಸ್ತೆ ಮೂಲಕ ಭಾರಿ ವಾಹನ ಸಂಚಾರ ನಿಷೇಧ ಹೇರಿರುವುದರಿಂದ ಮಂಗಳೂರು, ಮೂಡುಬಿದಿರೆ ಹಾಗೂ ಪಡುಬಿದ್ರಿಗೆ ತೆರಳುವ ಭಾರಿ ವಾಹನಗಳು ಕುಂಟಲ್ಪಾಡಿ ರಸ್ತೆಯ ಮೂಲಕ ಸಂಚರಿಸುವಂತೆ ತಿಳಿಸಲಾಗಿದೆ. ಇನ್ನು ಧರ್ಮಸ್ಥಳದ ಕಡೆಗೆ ಸಾಗುವ ವಾಹನಗಳು ಬಾಹುಬಲಿ ಬೆಟ್ಟದ ರಸ್ತೆಯ ಮೂಲಕ ಸಂಚರಿಸುವಂತೆ ಸೂಚಿಸಲಾಗಿದೆ.

ಚರಂಡಿ ಮುಚ್ಚಳದ ಮೇಲೆ ಕಳ್ಳರ ವಕ್ರದೃಷ್ಟಿ

ಶಿವಮೊಗ್ಗ: ಕಸಗಳು ಚರಂಡಿಗೆ ಪಾದಾಚಾರಿಗಳ ಸುರಕ್ಷತೆಗಾಗಿ ಈ ಛೇಂಬರ್‌ಗಳಿಗೆ ಜಾಲರಿ ಇರುವ ಕಬ್ಬಿಣದ ಮುಚ್ಚಳ ಅಳವಡಿಸಲಾಗಿತ್ತು. ಈಗ ಇವುಗಳ

ಮೇಲೆ ಕಳ್ಳರ ಕಾಕದೃಷ್ಟಿ ಬಿದ್ದು ಕಳ್ಳತನವಾಗಿ ಸಾರ್ವಜನಿಕರು ಮಳೆಗಾಲದಲ್ಲಿ ನೀರುತುಂಬಿ ಗೋತಾಗದೆ ಗುಂಡಿಗೆ ಬೀಳುವ ಪರಿಸ್ಥಿತಿ ಉಂಟಾಗಿದೆ. ಮಳೆಗಾಲದಲ್ಲಿ ರಸ್ತೆಯಲ್ಲಿ ಹರಿಯುವ ನೀರು ಬಾಕ್ಸ್ ಚರಂಡಿ ಸೇರಲು ಅಲ್ಲಲ್ಲಿ ಚಿಕ್ಕ ಚಿಕ್ಕ ಛೇಂಬರ್ ನಿರ್ಮಾಣ ಮಾಡಲಾಗಿತ್ತು. ಈಗ ಈ ಕಬ್ಬಿಣ ಮುಚ್ಚಳದ ಮೇಲೆ ಕಳ್ಳರ ದೃಷ್ಟಿ ಬಿದ್ದಿದೆ. ಅದನ್ನು ಕಿತ್ತು ಗುಜುರಿಗೆ ಸೇರಿಸಿ ಹಣ ಪಡೆಯುವ ಕಾರ್ಯ ನಗರದಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ಇಲ್ಲಿ ಸಾರ್ವಜನಿಕ ಸೊತ್ತನ್ನು ಕಳ್ಳತನ ಮಾಡುವುದು ಒಂದು ವಿಷಯವಾದರೆ ರಸ್ತೆಯಂಚಿನಲ್ಲಿ ನೆಲ ಮಟ್ಟದಲ್ಲಿರುವ ಈ ತೆರೆದ ಚೇಂಬರ್‌ಗಳು ಪ್ರಾಣಾ ಪಾಯಕಾರಿಯಾಗಿದೆ. ಮಹಾನಗರ ಪಾಲಿಕೆ ಎದುರಿನ ರಸ್ತೆಯಲ್ಲೇ ಸುಮಾರು 20ಕ್ಕೂ ಹೆಚ್ಚು ಈ ರೀತಿಯ ಬಾಯಿ ತೆರೆದು ನಿಂತಿರುವ ಛೇಂಬರ್‌ಗಳಿದ್ದು ಇಲ್ಲಿ ವಿದ್ಯಾರ್ಥಿಗಳು ಸೇರಿದಂತೆ ಹೆಚ್ಚು ಜನ ಸಂಚಾರ ಇರುವ ರಸ್ತೆಯಾಗಿದೆ. ಈ ಬಗ್ಗೆ ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಅನೇಕ ಬೀದಿದೀಪ ಕಂಬಗಳ ಕೆಳಭಾಗಗಳಲ್ಲಿರುವ ಮುಚ್ಚಳಗಳೂ ಕಳ್ಳತನ ವಾಗಿದ್ದು ಅವುಗಳಲ್ಲಿನ ವಿದ್ಯುತ್ ತಂತಿಗಳು ತೆರೆದು ಅಪಾಯವನ್ನು ಅಹ್ವಾನಿಸುತ್ತಿವೆ. ಕೂಡಲೇ ಪಾಲಿಕೆ ಸಿಸಿ ಕ್ಯಾಮೇರಾ ಆಧಾರದ ಮೇಲೆ ಇಂತಹ ವ್ಯಕ್ತಿಗಳ ಮೇಲೆ ಕಠಿಣಕ್ರಮಕ್ಕೆ ಮುಂದಾಗಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪಾದಚಾರಿಗಳ ಮೇಲೆ ಡಿಕ್ಕಿ : ಮಹಿಳೆಗೆ ಗಾಯ

ಬೆಳ್ತಂಗಡಿ ಅತಿ ವೇಗವಾಗಿ ಬಂದ ಓಮ್ನಿ ಕಾರೊಂದು ನಿಯಂತ್ರಣ ತಪ್ಪಿ ಪಾದಚಾರಿಗಳ ಮೇಲೆ ಡಿಕ್ಕಿ ಹೊಡೆದ ಘಟನೆ ಕೊಲ್ವೆದಬೈಲು ಎಂಬಲ್ಲಿ ಭಾನುವಾರ ಮಧ್ಯಾಹ್ನ ಸಂಭವಿಸಿದೆ. ಈ ಭೀಕರ ಅಪಘಾತದಲ್ಲಿ ಮಹಿಳೆಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಉಳಿದ ಮೂವರು ಪವಾಡಸದೃಶವಾಗಿ ಪಾರಾಗಿದ್ದಾರೆ. ಇಬ್ಬರು ಮಹಿಳೆಯರು ಹಾಗೂ ಇಬ್ಬರು ಮಕ್ಕಳು ರಸ್ತೆಬದಿ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ತಿರುವಿನಲ್ಲಿ ವೇಗವಾಗಿ ಬಂದ ಓಮ್ನಿ ಕಾರು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ಪಾದಚಾರಿಗಳ ಮೇಲೆ ಉರುಳಿದೆ. ಅದೃಷ್ಟವಶಾತ್ ಮಕ್ಕಳಿಬ್ಬರು ಹಾಗೂ ಮಹಿಳೆಯೊಬ್ಬರು ಯಾವುದೇ ಗಾಯಗಳಿಲ್ಲದೆ ಅಪಾಯದಿಂದ ಪಾರಾಗಿದ್ದಾರೆ. ಆದರೆ ಓರ್ವ ಮಹಿಳೆ ಓಮ್ನಿ ಕಾರಿನಡಿ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದಾರೆ. ತಕ್ಷಣ ಸ್ಥಳೀಯರು ಆಕೆಯನ್ನು ರಕ್ಷಿಸಿ ಬೆಳ್ತಂಗಡಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಘಾತದ ಭಯಾನಕ ದೃಶ್ಯಗಳು ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಛತ್ರದಲ್ಲಿ ಪಾರ್ಕಿಂಗ್ ಇಲ್ಲವೆಂದರೆ ಕೇಸ್

ಮಂಗಳೂರು: ಮದುವೆ ಅಥವಾ ಇನ್ನಿತರ ಸಮಾರಂಭಗಳನ್ನು ಆಯೋಜಿಸುವಾಗ ಅತಿಥಿಗಳ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸದಿದ್ದರೆ ಇನ್ನು ಮುಂದೆ ಸಂಕಷ್ಟ ಕಟ್ಟಿಟ್ಟ ಬುತ್ತಿ. ಗಂಜಿಮಠದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಎರಡು ಕಲ್ಯಾಣ ಮಂಟಪಗಳ ಮಾಲೀಕರು ಹಾಗೂ ಆಯೋಜ ಕರ ಮೇಲೆ ಬಜಪೆ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದಾರೆ. ಭಾನುವಾರ ಮಧ್ಯಾಹ್ನ ಗಂಜಿಮಠದ ಮುಚ್ಚೂರು ಕ್ರಾಸ್ ಬಳಿ ಇರುವ ರಾಯಲ್ ಪ್ಯಾಲೇಸ್ ಮತ್ತು ಒಂಡೆಲಾ ಹಾಲ್ ನಲ್ಲಿ ನಡೆದ ಮದುವೆ ಗೆ ಬಂದ ವಾಹನಗಳು ಹೆದ್ದಾರಿ 169ರಲ್ಲಿ ಸಾಲುಗಟ್ಟಿ ನಿಂತಿದ್ದವು. ಇದರಿಂದ ಟ್ರಾಫಿಕ್ ಜಾಮ್ ಉಂಟಾಗಿ ಸಾರ್ವಜನಿಕರು ತೊಂದರೆ ಅನುಭವಿಸಿದರು. ಹಾಲ್ ಮಾಲೀಕರು ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಳ್ಳದೆ ಹೆದ್ದಾರಿಯಲ್ಲೇ ವಾಹನಗಳನ್ನು ನಿಲ್ಲಿಸಬೇಕಾಗಿತ್ತು.

{ಡಾ.ಮೋಹನ್ ಆಳ್ವ} ಆಳ್ವಾಸ್ ಸಂಸ್ಥೆ ಅಧ್ಯಕ್ಷ

ಕ್ಲಾಸ್ ರೂಮ್ ಶಿಕ್ಷಣದ ಜೊತೆಗೆ ಸಮಾಜದ ಬಯಲು ಶಾಲೆಯ ಕಲಿಕೆ ಜೀವನದಲ್ಲಿ ಬಹಳ ಮುಖ್ಯ. ನನಗೆ ಈಗ 75 ವರ್ಷವಾದರೂ ನಾನು ಇನ್ನೂ ಬಯಲು ಶಾಲೆಯ ವಿದ್ಯಾರ್ಥಿಯೇ ಆಗಿದ್ದೇನೆ. ನಮ್ಮ ಕಾಲದಲ್ಲಿ ಕೂಡು ಕುಟುಂಬಗಳಿದ್ದವು. ಈಗ ಅವು ಕಡಿಮೆಯಾಗಿವೆ. ಬೇಸಿಗೆ ಕಲಿಕಾ ಶಿಬಿರಗಳ ಮೂಲಕ ಕೂಡು ಕುಟುಂಬದ ಮಹತ್ವ ಮಕ್ಕಳಿಗೆ ತಿಳಿಸಬೇಕಿದೆ.



ಬಂಟರ ಯಾನೆ ನಾಡವರ ಮಾತೃ ಸಂಘದ ಬಹಿರಂಗ ಅಧಿವೇಶನ | ಸಾಧಕರಿಗೆ ಸನ್ಮಾನ | ನ್ಯಾ. ವಿಶ್ವಜಿತ್ ಶೆಟ್ಟಿ

ಸ್ಪರ್ಧಾತ್ಮಕ ಪರೀಕ್ಷೆಗೆ ಕರಾವಳಿ ಯೂತ್ಸ್ ಹಿಂದೇಟು

ಮಂಗಳೂರು: ಮಂಗಳೂರಿನ ಪುರಭವನದಲ್ಲಿ ಭಾನುವಾರ ನಡೆದ ಬಂಟರ ಯಾನೆ ನಾಡವರ ಮಾತೃ ಸಂಘದ ಬಹಿರಂಗ ಅಧಿವೇಶನ ಸಮಾಜದ ಹಿರಿಯರು, ಸಾಧಕರು ಮತ್ತು ಯುವ ಪೀಳಿಗೆಯ ಸಮಾಗಮಕ್ಕೆ ಸಾಕ್ಷಿಯಾಯಿತು.

ಕಾರ್ಯಕ್ರಮವನ್ನು ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾದ ವಿಶ್ವಜಿತ್ ಶೆಟ್ಟಿ ಸವಣೂರು ಮತ್ತು ರಾಜೇಶ್ ರೈ ಕಲ್ಲಂಗಳ ಅವರು ದೀಪ ಬೆಳಗಿಸಿ ಹಾಗೂ ಕಳಸದಲ್ಲಿದ್ದ ತೆಂಗಿನ ಸಿರಿಯನ್ನು ಅರಳಿಸುವ ಮೂಲಕ ಸಾಂಪ್ರದಾಯಿಕವಾಗಿ ಉದ್ಘಾಟಿಸಿದರು. ಉದ್ಘಾಟನಾ ಭಾಷಣ ಮಾಡಿದ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಸವಣೂರು ಅವರು, 118 ವರ್ಷಗಳ ಇತಿಹಾಸವಿರುವ ಈ ಸಂಘದೊಂದಿಗೆ ತಮಗೆ ವಿದ್ಯಾರ್ಥಿ ದಿನದಿಂದಲೇ ಇರುವ 40 ವರ್ಷಗಳ ಸುದೀರ್ಘ ಒಡನಾಟವನ್ನು ಸ್ಮರಿಸಿದರು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುಂಚೂಣಿಯಲ್ಲಿದ್ದರೂ, ಯುಪಿಎಸ್ಸಿ ಮತ್ತು ಕೆಪಿಎಸ್ಸಿಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಆಸಕ್ತಿ ತೋರುತ್ತಿಲ್ಲ. ಯಾದಗಿರಿಯಂತಹ ಜಿಲ್ಲೆಗಳು ಎಸ್‌ಎಸ್‌ಎಲ್ಸಿಯಲ್ಲಿ ಕೊನೆಯ ಸ್ಥಾನದಲ್ಲಿದ್ದರೂ ಯುಪಿಎಸ್ಸಿಯಲ್ಲಿ ಹೆಚ್ಚು ಸಾಧನೆ ಮಾಡುತ್ತಿವೆ ಎಂದು ಉದಾಹರಿಸಿದರು. ಬಂಟರ ಸಂಘ ಸಮುದಾಯದ ಅಭ್ಯರ್ಥಿಗಳಿಗೆ ಇಂತಹ ಪರೀಕ್ಷೆ ಎದುರಿಸಲು ವಿಶೇಷ ತರಬೇತಿ ನೀಡುವ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು ಎಂದು ಸಲಹೆ ನೀಡಿದರು.

ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ ಅವರು

ಮಂಗಳೂರಿನ ಪುರಭವನದಲ್ಲಿ ನಡೆದ ಬಂಟರ ಸಂಘದ ಬಹಿರಂಗ ಅಧಿವೇಶನವನ್ನು ನ್ಯಾಯಮೂರ್ತಿಗಳಾದ ವಿಶ್ವಜಿತ್ ಶೆಟ್ಟಿ ಸವಣೂರು ಮತ್ತು ರಾಜೇಶ್ ರೈ ಕಲ್ಲಂಗಳ ಅವರು ಉದ್ಘಾಟಿಸಿದರು.

ಮಾತನಾಡಿ, ಸಂಸ್ಕೃತಿ ನಾಶವಾದರೆ ದೇಶವೇ ವಿಭಜನೆಗೊಳ್ಳಬಹುದು, ಆದ್ದರಿಂದ ತುಳು ಭಾಷೆ ಮತ್ತು ದೈವಾರಾಧನೆಯಂತಹ ನಮ್ಮ ಮೂಲ ಪರಂಪರೆಯನ್ನು ಉಳಿಸುವುದು ಪ್ರತಿಯೊಬ್ಬರ ಕರ್ತವ್ಯ. ತುಳು ಭಾಷೆಯನ್ನು ಮಾತನಾಡುತ್ತಾ ಅದರ ಬೆಳವಣಿಗೆಗೆ ಶ್ರಮಿಸಬೇಕು ಹಾಗೂ ದೈವಗಳ ಕೋಲ ಆಚರಣೆಗಳಿಗೆ ಮಕ್ಕಳನ್ನು ಕಡ್ಡಾಯವಾಗಿ ಕರೆದೊಯ್ಯಬೇಕು ಎಂದರು.

ಸಂಘದ ಅಧ್ಯಕ್ಷರಾದ ಕೆ. ಅಜಿತ್ ಕುಮಾರ್‌ರೈ ಮಾಲಾಡಿ ಸ್ವಾಗತ ಕೋರಿ, ಜನರು ಹಳ್ಳಿಯಲ್ಲಿದ್ದು, ಯಾವುದೇ ಸಂಪರ್ಕ ಸಾಧನ ಇರಲಿಲ್ಲ. ಆಧುನಿಕ ಶಿಕ್ಷಣದ ಅಗತ್ಯ ಮನಗಂಡ ನಾಡವರು ದೋಣಿಯ ಮೂಲಕ ನದಿಗಳನ್ನು ದಾಟಿ ಕಷ್ಟಪಟ್ಟು ನಗರದಲ್ಲಿ ಆಧುನಿಕ ಶಿಕ್ಷಣ ಪಡೆದರು. ಮಕ್ಕಳು ನಗರದಲ್ಲಿ ಉಳಿದು ಶಿಕ್ಷಣ ಪಡೆಯಬೇಕೆಂಬ ಉದ್ದೇಶದಿಂದ 1908ರಲ್ಲಿ ಬಂಟ್ಸ್ ಹಾಸ್ಟೆಲ್ ಮಾಡಿದರು. ಅಂತಹ ಹಿರಿಯರನ್ನು ಸ್ಮರಿಸುತ್ತೇವೆ ಎಂದರು.

ನಮ್ಮ ಮಾತೃ ಸಂಘದಿಂದ ನಮ್ಮ ಸಮುದಾಯ ಮಾತ್ರವಲ್ಲದೆ ಬೇರೆ ಸಮಾಜದವರಿಗೂ ನೆರವು ನೀಡುತ್ತೇವೆ ಎಂದರು. ನಮ್ಮತನವನ್ನು ಬಿಡಬಾರದೆಂಬ ಉದ್ದೇಶದಿಂದ ''ಬಾಂಧವ್ಯ'' ಎಂಬ ಕಾರ್ಯಕ್ರಮ ರೂಪಿಸಿದ್ದು ಇದರಲ್ಲಿ ಕೂಡು ಕುಟುಂಬ ಸೇರುವಂತೆ ಮಾಡಲಾಗುವುದು ಎಂದು ಘೋಷಿಸಿದರು.

ಸಂಗೀತ ನಿರ್ದೇಶಕ ಗುರುಕಿರಣ್ ಶೆಟ್ಟಿ ಅವರು, ವಿವಿಧ ರಂಗಗಳ ಸಾಧಕರನ್ನು ಗುರುತಿಸಿ ಗೌರವಿಸುತ್ತಿರುವ ಸಂಘದ ಕಾರ್ಯಕ್ಕೆ ಮೆಚ್ಚುಗೆ

ಬಡವರಿಗೆ ಉಳ್ಳವರ ಸಹಕಾರವೂ ಅಗತ್ಯ

ಬಂಟ ಸಮುದಾಯದವರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದು ಹೆಮ್ಮೆಯ ವಿಷಯ. ಆದರೆ, ಇಷ್ಟೊಂದು ಶೈಕ್ಷಣಿಕ ಸೌಲಭ್ಯಗಳಿದ್ದರೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಮ್ಮವರ ಸಂಖ್ಯೆ ಕಡಿಮೆಯಾಗಿರುವುದು ಆತಂಕಕಾರಿ. ನಮ್ಮ ಯುವಜನರಲ್ಲಿ ಈ ಬಗ್ಗೆ ಆಸಕ್ತಿ ಇಲ್ಲವೇ ಎಂಬ ಸಂಶಯ ಕಾಡುತ್ತಿದೆ ಎಂದರು. ಬಡವರಿಗೆ ಉನ್ನತ ಶಿಕ್ಷಣ ಒದಗಿಸಲು ಉಳ್ಳವರ ಸಹಕಾರವೂ ಅಗತ್ಯವಿದೆ ಎಂದು ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ ಅವರು ಹೇಳಿದರು.

ವ್ಯಕ್ತಪಡಿಸಿದರು. ಸಾಧನೆಯ ಹಿಂದಿರುವ ನಿಜವಾದ ಪರಿಶ್ರಮಿಗಳನ್ನೂ ಸಮಾಜ ಗುರುತಿಸಿ ಗೌರವಿಸಬೇಕು ಎಂದರು.

ಸಮಾವೇಶದ ಪ್ರಮುಖ ಆಕರ್ಷಣೆಯಾಗಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಡಾ. ಕೊಡ್ಮಾಣ್ ನಾಗಪ್ಪ ಆಳ್ವ ಮತ್ತು ಕಲ್ಯಾಣಿ ಆಳ್ವ ಸ್ಮರಣಾರ್ಥ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ. ಸತೀಶ್ ಭಂಡಾರಿ (ವೈದ್ಯಕೀಯ), ಪ್ರೊ. ವಸಂತ್ ಶೆಟ್ಟಿ ಮುಳ್ಳಾಡ್ (ಶೈಕ್ಷಣಿಕ), ಕೆ. ಉಷಾ ಪಿ. ರೈ (ಸಾಹಿತ್ಯ), ಗುರುಕಿರಣ್ ಶೆಟ್ಟಿ (ಸಂಗೀತ), ವಿದುಷಿ ನಯನ ವಿ. ರೈ ಕುದ್ಕಾಡಿ (ನೃತ್ಯ), ಲೆ. ಕರ್ನಲ್ ಅಜಿತ್ ಕುಮಾರ್‌ಶೆಟ್ಟಿ (ದೇಶ ಸೇವೆ), ಪ್ರಶಾಂತ್ ರೈ ಪುತ್ತೂರು ಮತ್ತು ಚಿಂತನ್ ಎಸ್. ಶೆಟ್ಟಿ (ಕ್ರೀಡೆ) ಅವರು ಪ್ರಶಸ್ತಿ ಸ್ವೀಕರಿಸಿದರು.

ಕೈಗಾರಿಕಾ ಕ್ಷೇತ್ರದಲ್ಲಿ ವಿವೇಕ್ ಶೆಟ್ಟಿ ಬೊಳ್ಯಗುತ್ತು ಮತ್ತು ಕರುಣಾಕರ ಶೆಟ್ಟಿ ಮದ್ಯಗುತ್ತು, ಸಾಂಸ್ಕೃತಿಕ ರಂಗದಲ್ಲಿ ಪ್ರಕಾಶ್ ಭಂಡಾರಿ, ಧಾರ್ಮಿಕ ಕ್ಷೇತ್ರದಲ್ಲಿ ಕೆ. ಕೆ. ಶೆಟ್ಟಿ ಕುತ್ತಿಕಾರ್‌ಹಾಗೂ ಸಹಕಾರಿ ಕ್ಷೇತ್ರದಲ್ಲಿ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು, ಆತಿಥ್ಯ ಉದ್ಯಮದಲ್ಲಿ ವೇಣುಗೋಪಾಲ್ ಎಲ್. ಶೆಟ್ಟಿ, ನಿರ್ಮಾಣ ಕ್ಷೇತ್ರದಲ್ಲಿ ಮುಗ್ರೋಡಿ ಸುಧಾಕರ್‌ಶೆಟ್ಟಿ, ಸಂಶೋಧನಾ ಕ್ಷೇತ್ರದಲ್ಲಿ ಡಾ. ನವೀನ್ ಚಂದ್ರ ಶೆಟ್ಟಿ, ಮತ್ತು ದೈವಾರಾಧನೆ ಕ್ಷೇತ್ರದಲ್ಲಿ ಡಾ. ಅಶೋಕ್ ಆಳ್ವ ಅವರು ಗೌರವಕ್ಕೆ ಪಾತ್ರರಾದರು. ಸಮಾಜ ಸೇವೆಯಲ್ಲಿ ಕಂಚನೂರು ಸೋಮಶೇಖರ ಶೆಟ್ಟಿ, ಶಿಕ್ಷಣ ಕ್ಷೇತ್ರದಲ್ಲಿ ದಿನೇಶ್ ಆಳ್ವ, ಕೃಷಿ ಕ್ಷೇತ್ರದಲ್ಲಿ ಮುರ ಸದಾಶಿವ ಶೆಟ್ಟಿ ಎಕ್ಕಾರು, ಕೃಷಿ ಅಭಿವೃದ್ಧಿಗಾಗಿ ಡಾ. ಸರಿತಾ ಹೆಗ್ಡೆ ಹಾಗೂ ಉತ್ಪಾದನಾ ಕ್ಷೇತ್ರದಲ್ಲಿ ರವೀಂದ್ರನಾಥ ಮಾರ್ಲ ಅವರನ್ನು ಸನ್ಮಾನಿಸಲಾಯಿತು. ಪಿ. ಕಿಶನ್ ಹೆಗ್ಡೆ ಅವರಿಗೆ ವಿಶೇಷ ಗೌರವ ಸಮರ್ಪಿಸಲಾಯಿತು. ಕೊಡ್ಮಾಣ್ ಮೋಹನದೇವ ಆಳ್ವ ಹಾಗೂ ಡಾ. ಎಮ್. ಕೆ. ಶೈಲಜಾ ಆಳ್ವ ಅವರನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಉಪಾಧ್ಯಕ್ಷ ಹೇಮನಾಥ ಶೆಟ್ಟಿ ಕಾವು, ಪ್ರಧಾನ ಕಾರ್ಯದರ್ಶಿ ಕೆ. ಎಮ್. ಶೆಟ್ಟಿ, ಕೋಶಾಧಿಕಾರಿ ಸಿಎ ರಾಮ್ ಮೋಹನ್ ರೈ, ಜೊತೆ ಕಾರ್ಯದರ್ಶಿ ಸಂಜೀವ ಶೆಟ್ಟಿ ಸಂಪಿಗೇಡಿ ಉಪಸ್ಥಿತರಿದ್ದರು.

ಹೊನ್ನಾಳಿ ಕ್ಷೇತ್ರದ ಬಿಜೆಪಿಗೆ ನಾನೇ ಮುಖ್ಯ: ರೇಣುಕಾ

ದಾವಣಗೆರೆ: ಜಿಲ್ಲೆಯ ಯಾವುದೇ ಕ್ಷೇತ್ರದಿಂದ ಪಕ್ಷೇತರ, ಅಭ್ಯರ್ಥಿಯಾಗಿ ಬೇಕಿದ್ದರೆ ಸ್ಪರ್ಧಿಸಲಿ. ಅದಕ್ಕೆ ನಮ್ಮ ವಿರೋಧವಿಲ್ಲ. ಬಿಜೆಪಿಯಿಂದ ಸ್ಪರ್ಧೆ ಮಾಡುತ್ತೇನೆಂದರೆ ನಾವು ಬಾಗಿಲು ತೆಗೆಯಲ್ಲ ಎಂದು ಮಾಜಿ ಸಚಿವ

ಎಂ.ಪಿ.ರೇಣುಕಾಚಾರ್ಯ ಅವರು ಸ್ವಾಭಿಮಾನಿ ಬಳಗದ ಜಿ.ಬಿ.ವಿನಯಕುಮಾರ ಹೇಳಿಕೆಗೆ ಪ್ರತಿಕ್ರಿಯಿಸಿದರು. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಯಾರ ಹೆಸರನ್ನೂ ಪ್ರಸ್ತಾಪಿಸುವುದಿಲ್ಲ. ಆದರೆ, ದಾವಣಗೆರೆ ಉತ್ತರ, ಹೊನ್ನಾಳಿ ಕ್ಷೇತ್ರಕ್ಕೆ ಸ್ಪರ್ಧಿಸುತ್ತೇನೆಂದವರು ಬೇಕಿದ್ದರೆ ಪಕ್ಷೇತರನಾಗಿ, ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಲಿ. ಅದಕ್ಕೆ ಯಾವ ನಾಯಕರ ಅಪ್ಪಣೆಯೂ ಬೇಕಿಲ್ಲ ಎಂದರು. ದಾವಣಗೆರೆ ದಕ್ಷಿಣ ಉಪ ಚುನಾವಣೆ ವೇಳೆ ಬಂದು ಸಹಕಾರ ನೀಡಿದ್ದಾರೆ. ದಾವಣಗೆರೆ ಉತ್ತರ, ಹೊನ್ನಾಳಿಯಿಂದ ಸ್ಪರ್ಧೆ ಮಾಡುತ್ತೇನೆಂದಿದ್ದರೂ ಯಾವ ಪಕ್ಷವೆಂದು ಹೇಳಿಲ್ಲ. ಹಾಗಾಗಿ

ನಾನ್ಯಾಕೆ ಉತ್ತರ ಕೊಡಲಿ? ಹೊನ್ನಾಳಿಯಲ್ಲಿ ನಾನು 5 ಸಲ ಸ್ಪರ್ಧಿಸಿ, 3 ಸಲ ಗೆದ್ದಿದ್ದೇನೆ. ಬಿಜೆಪಿಯಲ್ಲಿ ಎಲ್ಲ ಕ್ಷೇತ್ರದಲ್ಲೂ ಸಮರ್ಥ ಆಕಾಂಕ್ಷಿಗಳಿದ್ದಾರೆ. ಹೊನ್ನಾಳಿಗೆ ನಾನು, ಉತ್ತರಕ್ಕೆ ಪರಾಜಿತ ಅಭ್ಯರ್ಥಿ ಲೋಕಿಕೆರೆ ನಾಗರಾಜ ಸೇರಿದಂತೆ 8–10 ಜನ ಆಕಾಂಕ್ಷಿಗಳು ಪಕ್ಷದಲ್ಲಿದ್ದಾರೆ ಎಂದು ಅವರು ತಿಳಿಸಿದರು.

ಚನ್ನಗಿರಿ, ಜಗಳೂರು ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಸಮರ್ಥರಿದ್ದಾರೆ. ಬಿಜೆಪಿ ಸಂಘಟನೆಗೆ, ಪಕ್ಷಕ್ಕೆ ನಮ್ಮ ಕೊಡುಗೆ ಇದೆ. ಕಾರ್ಯಕರ್ತರು, ಜನರೊಂದಿಗೆ ಬೆರೆತಿದ್ದೇವೆ. ಶಾಸಕ, ಸಚಿವ ನಾಗಿ ಕೆಲಸ ಮಾಡಿದ್ದೇನೆ. ಕ್ಷೇತ್ರಕ್ಕೆ ನಮ್ಮ ಕೊಡುಗೆ ಇದೆ. ಹೊನ್ನಾಳಿಯಲ್ಲಿ ಸಮರ್ಥರಿಲ್ಲವೆಂದುಕೊಂಡಿದ್ದಾರಾ? ಟಿಕೆಟ್ ಕೊಡುವುದು ನನ್ನ ಕೈಯಲ್ಲಿಲ್ಲ. ಹೊನ್ನಾಳಿ, ಚನ್ನಗಿರಿ, ಜಗಳೂರು, ಉತ್ತರ ಸೇರಿದಂತೆ ಎಲ್ಲಾ ಕಡೆ ಸಮರ್ಥರು, ಆಕಾಂಕ್ಷಿಗಳಿದ್ದಾರೆ ಎಂದು ಅವರು ಹೇಳಿದರು.

ಯಾರೋ ಈಗ ಬಂದು ಬಿಜೆಪಿಯಿಂದ ಸ್ಪರ್ಧಿಸುತ್ತೇನೆಂದರೆ ನಾನು ಒಪ್ಪುವುದಿಲ್ಲ. ದಕ್ಷಿಣದ ಟಿಕೆಟ್ ವಿಚಾರ ಮುಗಿದ ಅಧ್ಯಾಯ. ಹೊರ ಜಿಲ್ಲೆಯಿಂದ ಬಂದವರು ಇಲ್ಲಿ ಅನಗತ್ಯವಾಗಿ ನಮ್ಮ ಚುನಾವಣೆ ವೇಳೆ ಗೊಂದಲ ಮೂಡಿಸಲು ಪ್ರಯತ್ನಿಸಿದರು. ನಾವ್ಯಾರೂ ಚುನಾವಣೆ ಕೆಲಸವನ್ನೇ ಮಾಡಿಲ್ಲವಾ? ಚುನಾವಣೆಯಲ್ಲಿ ಗೊಂದಲ ಆಗಬಾರದೆಂದು ಮೌನವಾಗಿದ್ದೆವು. ಕೆಲವರು ಅನಗತ್ಯವಾಗಿ ಬೇರೆ ಜಿಲ್ಲೆಯಿಂದ ಬಂದು, ಇಲ್ಲಿ ಹೀಗೆಲ್ಲಾ ಮಾಡುತ್ತಿದ್ದಾರೆ. ಬಿಜೆಪಿಗೇನು ಶಕ್ತಿ, ಸಾಮರ್ಥ್ಯವಿಲ್ಲವೆಂದು ಕೊಂಡಿದ್ದಾರಾ ಎಂದು ಅವರು ಕಿಡಿಕಾರಿದರು.

ಕೆಲವರು ಅಂತಹವರಿಗೆ ಬ್ಯಾಕ್ ಅಪ್ ಮಾಡುತ್ತಿದ್ದಾರೆ. ಹೊನ್ನಾಳಿಗೆ ನಿಲ್ಲಿಸುತ್ತೇವೆ, ಅಲ್ಲಿಗೆ ನಿಲ್ಲಿಸುತ್ತೇವೆಂದು ಹೇಳುತ್ತಿರುವುದು ನನ್ನ ಗಮನಕ್ಕೂ ಬಂದಿದೆ. ನಾನು ಆ ವ್ಯಕ್ತಿ ಬಗ್ಗೆ ಮಾತ ನಾಡುವುದಿಲ್ಲ. ಯಾರನ್ನೋ ಕರೆ ತಂದು, ಇಲ್ಲಿ, ಅಲ್ಲಿ ನಿಲ್ಲಿಸುತ್ತೇವೆಂದವರ ಕ್ಷೇತ್ರದ ಬಗ್ಗೆ, ಎಲ್ಲೆಲ್ಲಿ ಆಟವಾಡಬೇಕೆಂಬುದು ನನಗೂ ಗೊತ್ತಿದೆ. ಬಿಜೆಪಿ ನನಗೆ ತಾಯಿ ಸಮಾನ. ಸ್ಥಾನಮಾನ, ಅಧಿಕಾರ ಎಲ್ಲವನ್ನೂ ಪಕ್ಷ ನೀಡಿದೆ. ಯಾವುದೋ ವ್ಯಕ್ತಿಯನ್ನು ಕರೆ ತಂದು, ವೈಭವೀಕರಿಸುವುದನ್ನು ಸಹಿಸುವುದಿಲ್ಲ. ನಾನು ಯಾವುದೇ ವ್ಯಕ್ತಿ ಹೆಸರು ಹೇಳಿಲ್ಲ ಎಂದರು. ಪಕ್ಷದ ರಾಜು ವೀರಣ್ಣ, ಪ್ರವೀಣ ಜಾಧವ್, ಪಂಜು ಪೈಲ್ವಾನ್ ಇತರರು ಇದ್ದರು.

ಅಮೆಚೂರ್ ಕಬಡ್ಡಿ ಸಮಿತಿ ವಜಾ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಅಮೆಚೂರ್‌ಕಬಡ್ಡಿ ಅಸೋಸಿಯೇಷನ್ನಲ್ಲಿ ನಿಯಮಬಾಹಿರ ಚಟುವಟಿಕೆಗಳು ಹಾಗೂ ವ್ಯಾಪಕ ಅವ್ಯವಹಾರಗಳು ನಡೆದಿರುವುದು ತನಿಖೆಯಲ್ಲಿ ದೃಢಪಟ್ಟಿದ್ದು ಹಾಲಿ ಸಮಿತಿಯನ್ನು ವಜಾಗೊಳಿಸಿರುವ ಸರಕಾರ ಆಡಳಿತಾಧಿಕಾರಿ ನೇಮಕ ಮಾಡಿ ಆದೇಶ ಹೊರಡಿಸಿದೆ.

ಸಹಕಾರ ಇಲಾಖೆಯು ನಡೆಸಿದ ಸರಣಿ ವಿಚಾರಣೆಗಳಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನೋಂದಣಿ ಕಾಯ್ದೆ 1960ರ ನಿಯಮಗಳನ್ನು ಗಾಳಿಗೆ ತೂರಿ ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವುದು ಸಾಬೀತಾಗಿದ್ದು ಕ್ರೀಡಾ ಸಂಸ್ಥೆಯ ಆಡಳಿತದಲ್ಲಿ ಪಾರದರ್ಶಕತೆ ತರುವಲ್ಲಿ ಸರಕಾರ ಈ ಕಠಿಣ ಕ್ರಮ ಕೈಗೊಂಡಿದೆ.

ಸಹಕಾರ ಇಲಾಖೆಯ ತನಿಖಾ ವರದಿಯಲ್ಲಿ ಅಸೋಸಿಯೇಷನ್ನ ಹಲವು ಗಂಭೀರ ಲೋಪಗಳನ್ನು ಪಟ್ಟಿ ಮಾಡಲಾಗಿದೆ.

ಅನರ್ಹ ಸದಸ್ಯತ್ವ: ಕೇವಲ ಚುನಾವಣೆಯಲ್ಲಿ ಗೆಲುವು ಸಾಧಿಸುವ ಉದ್ದೇಶದಿಂದ ಕಾನೂನುಬಾಹಿರವಾಗಿ ಅನರ್ಹ ವ್ಯಕ್ತಿಗಳಿಗೆ ಸದಸ್ಯತ್ವ ನೀಡಿರುವುದು ಪತ್ತೆಯಾಗಿದೆ. ವಿಳಾಸ ಬದಲಾವಣೆ: ಸಂಸ್ಥೆಯ ಅಧಿಕೃತ ವಿಳಾಸವನ್ನು ನಿಯಮಬಾಹಿರವಾಗಿ ಅಂದಿನ ಕಾರ್ಯದರ್ಶಿಯವರ ಖಾಸಗಿ ಮನೆ ವಿಳಾಸಕ್ಕೆ ಬದಲಾಯಿಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಪ್ರತಿವರ್ಷ ಕ್ರಮಬದ್ಧವಾಗಿ ಲೆಕ್ಕ ಪರಿಶೋಧನೆ ನಡೆಸದೆ, ಆರ್ಥಿಕ ಶಿಸ್ತು ಉಲ್ಲಂಘಿಸಿರುವುದು ದೃಢಪಟ್ಟಿದೆ. ಕಡ್ಡಾಯವಾಗಿ ಪಾಲಿಸಬೇಕಾದ 'ಸ್ಪೋರ್ಟ್ಸ್ ಕೋಡ್' ನಿಯಮಗಳನ್ನು ಅಸೋಸಿಯೇಷನ್ ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಕೆಲವೇ ಮಂದಿಯ ಉಪಸ್ಥಿತಿಯಲ್ಲಿ ಸಾಮಾನ್ಯ ಸಭೆ ನಡೆಸಿರು ವುದು ಸಾಬೀತಾಗಿದೆ. ತಕ್ಷಣದಿಂದ ಜಾರಿಗೆ ಬರುವಂತೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ.

ಮಹಾ ಮಸ್ತಕಾಭಿಷೇಕಕ್ಕೆ ಸಹಕಾರ ಅಗತ್ಯ

ಕಾರ್ಯಾಲಯ ಆರಂಭ ಏ.19ಕ್ಕೆ | ಡಾ.ರಾಜೇಂದ್ರಕುಮಾರ್

ಕಾರ್ಕಳ: ಕಾರ್ಕಳದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಮಹೋತ್ಸವ 2027ರ ಫೆಬ್ರವರಿ ತಿಂಗಳಲ್ಲಿ ನಡೆಯಲಿದ್ದು, ಆ ಹಿನ್ನೆಲೆಯಲ್ಲಿ ವಿವಿಧ ಸಮಿತಿಯನ್ನು ರಚಿಸಿದ್ದು, ಸಮಾಜ ಬಾಂಧವರನ್ನೆಲ್ಲ ಒಗ್ಗೂಡಿಸಿ ಸರಕಾರದ ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ನಡೆಸಲು ನಿರ್ಣಯಿಸಿರುವುದಾಗಿ ಸಮಿತಿಯ ಕಾರ್ಯಾಧ್ಯಕ್ಷ ಡಾ. ಎಂ.ಎನ್.ರಾಜೇಂದ್ರ ಕುಮಾರ್‌ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರಿ.ಶ.1432ರಲ್ಲಿ ಭೈರವಸರ ಮನೆತನದ ಪ್ರಸಿದ್ಧ ಅರಸನಾದ ಪಾಂಡ್ಯ ರಾಜ ಲಲಿತಕೀರ್ತಿ ಯತಿಶ್ರೇಷ್ಠರ ಪ್ರೇರಣೆಯಂತೆ 42 ಅಡಿ ಎತ್ತರದ ಈ ಉತ್ತುಂಗ ವಿಗ್ರಹವನ್ನು ಪ್ರತಿಷ್ಠಾಪಿಸಿದ. 1954, 1990, 2002 ಮತ್ತು 2015ರಲ್ಲಿ ಮಹಾಮಸ್ತಕಾಭಿಷೇಕ ನಡೆದಿತ್ತು ಎಂದು ಮಾಹಿತಿ ನೀಡಿದರು.

ಈ ಮಹೋತ್ಸವದಲ್ಲಿ ಭಗವಾನ್ ಬಾಹುಬಲಿ ಸ್ವಾಮಿಯ ಅಹಿಂಸೆ, ತ್ಯಾಗ, ಸತ್ಯ, ಶಾಂತಿ, ಧರ್ಮದ ಸಂದೇಶವನ್ನು ತಿಳಿಸುವುದರ ಜತೆಗೆ ಸಂಸ್ಕೃತಿಯ ರಕ್ಷಣೆ, ಲೋಕಕಲ್ಯಾಣಾರ್ಥವಾಗಿ ಅನೇಕ ಜನಪರ ಯೋಜನೆ ಹಮ್ಮಿಕೊಳ್ಳುವುದು ಇದರ ಭಾಗವಾಗಿದೆ ಎಂದರು.

ಅನುದಾನಕ್ಕಾಗಿ ಮನವಿ:

ಈಗಾಗಲೆ ನಾನಾ ಇಲಾಖೆಗಳಡಿ ಅನುದಾನವನ್ನು ಒದಗಿಸಿ, ಮಸ್ತಕಾಭಿಷೇಕಕ್ಕೆ ಸೂಕ್ತ ಮೂಲ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ 82.37 ಕೋಟಿ ರೂ. ವೆಚ್ಚದ ಅಂದಾಜು ಪಟ್ಟಿಯ ಪ್ರಸ್ತಾವನೆ ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಲಾಗಿದೆ. ಅಟ್ಟಳಿಗೆ ನಿರ್ಮಾಣ, ಜೈನಮಠದ ಬಳಿಯಿರುವ ತ್ಯಾಗಿ ಭವನ ಮತ್ತು ಮಾತಾಜಿ ಭವನ ನವೀಕರಣ, ಸಭಾಂಗಣ ನವೀಕರಣ, ನೀರಿನ ಸರಬರಾಜಿಗೆ ಕೊಳವೆ ಬಾವಿ ನಿರ್ಮಾಣ ಸೌಕರ್ಯಗಳನ್ನು ಒದಗಿಸಲಾಗುವುದು ಎಂದರು.

ಕಾರ್ಯಾಲಯ ಉದ್ಘಾಟನೆ:

ಮಹಾಮಸ್ತಕಾಭಿಷೇಕದ ದಿನಾಂಕ ಘೋಷಣೆ ಮತ್ತು ಕಾರ್ಯಾಲಯದ ಉದ್ಘಾಟನೆ ಕಾರ್ಕಳ ದಾನಶಾಲೆ ಭಗವಾನ್ ಶ್ರೀ ಬಾಹುಬಲಿ ಪ್ರವಚನ ಮಂದಿರದಲ್ಲಿ ಏ.19ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ. ಕಾರ್ಕಳ ಜೈನಮಠದ ರಾಜಗುರು ಧ್ಯಾನಯೋಗಿ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿಯ ಪಾವನ ಸಾನಿಧ್ಯ, ಸಮಿತಿಯ ಅಧ್ಯಕ್ಷರಾದ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ದಿನಾಂಕವನ್ನು ಘೋಷಿಸಲಿದ್ದಾರೆ ಎಂದರು.

ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಾರ್ಯಾಲಯ ಉದ್ಘಾಟಿಸಲಿದ್ದಾರೆ. ಸಚಿವ ಡಿ.ಸುಧಾಕರ್ ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಮಿತಿಯ ಕಾರ್ಯಾಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್‌ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ವಿ.ಸುನಿಲ್ ಕುಮಾರ್,ಅಧಾನಿ ಗ್ರೂಫ್ ದಕ್ಷಿಣ ಭಾರತದ ಅಧ್ಯಕ್ಷ ಕಿಶೋರ್‌ಆಳ್ವ, ಉಡುಪಿ ಜಿಲ್ಲಾಕಾರಿ ಸ್ವರೂಪ ಟಿ.ಕೆ., ಸಮಿತಿ ಉಪಾಧ್ಯಕ್ಷ ಕೆ.ಅಭಯಚಂದ್ರ ಜೈನ್, ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ನ ಅಧ್ಯಕ್ಷ ಉದಯ ಕುಮಾರ್‌ಶೆಟ್ಟಿ ಮುನಿಯಾಲು ಉಪಸ್ಥಿತರಿರುವರು ಎಂದು ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳಾದ ಪುಷ್ಪರಾಜ್ ಜೈನ್ ಮಂಗಳೂರು, ಎ.ಮೋಹನ್ ಪಡಿವಾಳ್, ಸಿಎ ಪ್ರಭಾತ್ ಕುಮಾರ್,ಅನಂತರಾಜ ಪೂವಣಿ, ಸಂಪತ್ ಸಾಮ್ರಾಜ್ಯ, ಸುಧೀರ್‌ಪಡಿವಾಳ್, ಕೆ.ಜಯಕೀರ್ತಿ ಕಡಂಬ, ಹೇಮಚಂದ್ರ ಜೈನ್, ಸುನಿಲ್ ಕುಮಾರ್‌ಬಜಗೋಳಿ, ಮಹಾವೀರ ಹೆಗ್ಡೆ ಮುಡಾರು, ಭರತ್ ಕುಮಾರ್‌ಜೈನ್ ಇರ್ವತ್ತೂರು, ಶೀತಲ್ ಜೈನ್ ಶಿರ್ಲಾಲು, ಸುಭಾಶ್ಚಂದ್ರ ಚೌಟ, ಶಾಂತಿರಾಜ್ ಜೈನ್, ಮಹೇಂದ್ರವರ್ಮ ಜೈನ್, ಶಿಶುಪಾಲ್ ಜೈನ್ ಕಾರ್ಕಳ, ಅರುಣಾ ರಾಜೇಂದ್ರ ಕುಮಾರ್ ,ಶಶಿಕಲಾ ಹೆಗ್ಡೆ, ಹರ್ಷಿಣಿ ವಿಜಯರಾಜ್, ಮೋಹಿನಿ ವರ್ಧಮಾನ, ನಿರಂಜನ್ ಜೈನ್, ಪೃಥ್ವಿರಾಜ್ ಹೆಗ್ಡೆ, ಆದಿರಾಜ ಅಜ್ರಿ, ಅಮೃತಮಲ್ಲ, ಸಿ.ಪ್ರಭಾಕರ ಅತಿಕಾರಿ, ದೀಪಕ್ ಜೈನ್ ಉಡುಪಿ, ಅಶೋಕ್ ಕುಮಾರ್‌ಬಳ್ಳಾಲ್, ವಿನಯ ಆರಿಗ, ವಿನಯ ಉದಯ ಕುಮಾರ್,ವಿಖ್ಯಾತ್ ಜೈನ್, ಚಂದ್ರಕೀರ್ತಿ ಜೈನ್, ಧನಂಜಯ್ ಜೈನ್ ಉಪಸ್ಥಿತರಿದ್ದರು.

ಕೂಡು ಕುಟುಂಬದ ಮಹತ್ವ ಮಕ್ಕಳಿಗೆ ತಿಳಿಸಿ

ರಾಜ್ಯ ಮಟ್ಟದ ಚಿಣ್ಣರ ಮೇಳ | ಡಾ. ಎಂ. ಮೋಹನ ಆಳ್ವ ಉದ್ಘಾಟನೆ

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಆಯೋಜಿಸಲಾದ ರಾಜ್ಯಮಟ್ಟದ ಅಭಿನಯ ಪ್ರಧಾನ ಚಿಣ್ಣರ ಮೇಳದ ಉದ್ಘಾಟನೆ ಭಾನುವಾರ ಕನ್ನಡ ಭವನದಲ್ಲಿ ಜರುಗಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಅವರು, ಜೀವನದಲ್ಲಿ ಲವಲವಿಕೆ ಮತ್ತು ಸಮಯಪ್ರಜ್ಞೆ ಅತ್ಯಂತ ಮುಖ್ಯವೆಂದು ತಿಳಿಸಿದರು. ಡಾ. ಜೀವನ್ ರಾಂ ಸುಳ್ಯ ಅವರ ನಿರ್ದೇಶನದಲ್ಲಿ ನಡೆಯುತ್ತಿರುವ ಈ ರೀತಿಯ ಶಿಬಿರಗಳು ಮಕ್ಕಳ ಸಮಗ್ರ ಅಭಿವೃದ್ಧಿಗೆ ಬಹಳ ಉಪಯೋಗಕಾರಿಯಾಗಿವೆ ಎಂದು ಹೇಳಿದರು.

ತಮ್ಮ ಬಾಲ್ಯದ ಅನುಭವವನ್ನು ಹಂಚಿಕೊಂಡ ಅವರು, ''ನಾನು ಚಿಕ್ಕವನಾಗಿದ್ದಾಗ ನನ್ನ ತಂದೆ-ತಾಯಿಗೆ ಇಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ಇರಲಿಲ್ಲ. ನಾಲ್ಕನೇ ತರಗತಿಯಿಂದಲೇ ಹಾಸ್ಟೆಲ್ ಜೀವನ ಆರಂಭಿಸಿ ಸ್ವತಂತ್ರವಾಗಿ ಬೆಳೆಯುವ ಅವಕಾಶ ನನಗೆ ದೊರಕಿತು. ಸಾಂಸ್ಕೃತಿಕ ವೇದಿಕೆಗಳ ಮೂಲಕ ಫಿಲಿಫೈನ್ಸ್, ಜಪಾನ್, ಇಂಗ್ಲೆಂಡ್ ಸೇರಿದಂತೆ ಹಲವು ದೇಶಗಳಿಗೆ ತೆರಳಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಆದರೆ ನನ್ನ ತಂದೆ-ತಾಯಂದಿರು ನನ್ನ ಕಾರ್ಯಕ್ರಮಗಳನ್ನು ನೋಡುವ ಅವಕಾಶ ಪಡೆದಿರಲಿಲ್ಲ. ಇಂದಿನ ಪೋಷಕರು ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಕ್ಲಾಸ್ ರೂಮ್ ಶಿಕ್ಷಣದ ಜೊತೆಗೆ ಬಯಲು ಶಾಲೆಯ ಕಲಿಕೆ ಜೀವನದಲ್ಲಿ ಬಹಳ ಮುಖ್ಯ. ನನಗೆ ಈಗ 75 ವರ್ಷವಾದರೂ ನಾನು ಇನ್ನೂ ಬಯಲು ಶಾಲೆಯ ವಿದ್ಯಾರ್ಥಿಯೇ ಆಗಿದ್ದೇನೆ. ನಮ್ಮ ಕಾಲದಲ್ಲಿ ಕೂಡು ಕುಟುಂಬಗಳಿದ್ದವು. ಈಗ ಅವು ಕಡಿಮೆಯಾಗಿವೆ. ಇಂತಹ ಶಿಬಿರಗಳ ಮೂಲಕ ಕೂಡು ಕುಟುಂಬದ ಮಹತ್ವ ಮಕ್ಕಳಿಗೆ ತಿಳಿಯುತ್ತದೆ ಎಂದರು. ಮಕ್ಕಳಿಗೆ ಇಂತಹ ಶಿಬಿರಗಳಲ್ಲಿ ಹಾಡು, ನೃತ್ಯ, ಮಾತುಕತೆ, ವಿವಿಧ ಕೌಶಲ್ಯಗಳನ್ನು ಪ್ರದರ್ಶಿಸಲು ಅವಕಾಶ ದೊರೆಯುತ್ತದೆ. ಇದು ಆತ್ಮವಿಶ್ವಾಸ ವೃದ್ಧಿಸುತ್ತದೆ. ಪ್ರತಿಯೊಬ್ಬರ ಜೀವನದಲ್ಲಿ ಅಭಿನಯವೂ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಸಲಹೆ ನೀಡಿದರು.

ಸಿ. ಎ. ಉಮೇಶ್ ರಾವ್ ಮಿಜಾರ್‌ಅವರು ಮಾತನಾಡಿ, ಜೀವನದಲ್ಲಿ ಅಂಕಗಳು ಮಾತ್ರ ಮುಖ್ಯವಲ್ಲ; ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಅಗತ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಉಪಸ್ಥಿತರಿದ್ದರು. ಡಾ. ಜೀವನ್ ರಾಂ ಸುಳ್ಯ ಅವರು ನಿರೂಪಿಸಿ ವಂದಿಸಿದರು.

ಆಳ್ವಾಸ್ ರಂಗ ಅಧ್ಯಯನ ಕೇಂದ್ರದಿಂದ ಕನ್ನಡ ಭವನದಲ್ಲಿ ನಡೆದ ರಾಜ್ಯಮಟ್ಟದ ಅಭಿನಯ ಪ್ರಧಾನ ಚಿಣ್ಣರ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಅವರು ಮಾತನಾಡಿದರು.

ಶರಾವತಿ ಯೋಜನೆ ವಿರುದ್ಧ ಏ.16ರಂದು ರ‍್ಯಾಲಿ

ಶಿವಮೊಗ್ಗ: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ವಿರೋಧಿಸಿ ಶಿವಮೊಗ್ಗದಲ್ಲಿ ಏ.16ರಂದು ವಿವಿಧ ಸಂಘಟನೆಗಳಿಂದ ರಾಲಿ ನಗರದಾದ್ಯಂತೆ ನಡೆಯಲಿದೆ ಎಂದು ಶಿವಮೊಗ್ಗ ಸೈಕಲ್ ಕ್ಲಬ್, ಸಾಹಸ ಮತ್ತು ಸಂಸ್ಕೃತಿ ಅಕಾಡೆಮಿಯ ಪ್ರಮುಖರಾದ ಅ.ನಾ. ವಿಜಯೇಂದ್ರರಾವ್ ಹೇಳಿದ್ದಾರೆ.

ರಾಷ್ಟ್ರಭಕ್ತರ ಬಳಗ, ಶಿವಮೊಗ್ಗ ಸೈಕಲ್ ಕ್ಲಬ್, ಸಾಹಸ ಮತ್ತು ಸಂಸ್ಕೃತಿ ಅಕಾಡೆಮಿ, ಮಲೆನಾಡು ಇತಿಹಾಸ ಸಂಶೋಧನೆ ಮತ್ತು ಅಧ್ಯಯನ ವೇದಿಕೆ, ವೈ.ಹೆಚ್.ಎ.ಐ. ತರುಣೋದಯ ಘಟಕದ ಸಂಯುಕ್ತಾಶ್ರಯದಲ್ಲಿ ಈ ಬೃಹತ್ ವಾಹನ ಜಾಥಾ ಹಮ್ಮಿಕೊಳ್ಳಲಾಗಿದ್ದು, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಿಂದ ಪರಿಸರಕ್ಕೆ, ಜೀವ ಸಂಕುಲಕ್ಕೆ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ಪಶ್ಚಿಮ ಘಟ್ಟಗಳಿಗೆ ಆಗುತ್ತಿರುವ ಹಾನಿಯನ್ನು ಮನಗೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ಯೋಜನೆಯನ್ನು ಕೂಡಲೇ ರದ್ದುಗೊಳಿಸಬೇಕೆಂದು ಆಗ್ರಹಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ಈ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಡಾ.ಶೇಖರ್‌ಗೌಳೇರ್‌ಮಾತನಾಡಿ, ಈ ಯೋಜನೆಯಿಂದ ಶರಾವತಿ ಸಿಂಘಳೀಕ ಅಭಯಾರಣ್ಯದಲ್ಲಿ ಇರುವ ಸಂಘಳೀಕ ಸಂತತಿಯ ವಿನಾಶಕ್ಕೆ ಕಾರಣವಾಗುತ್ತದೆ. 10,700 ಕೋಟಿ ರೂ.ಗಳ ಈ ಯೋಜನೆಯಿಂದ ಸರಕಾರಕ್ಕೆ ಯಾವುದೇ ಆರ್ಥಿಕ ಲಾಭ ಇರುವುದಿಲ್ಲ. ಪಶ್ಚಿಮಘಟ್ಟಗಳಲ್ಲಿ ಮಾತ್ರ ಕಾಣಸಿಗುವ

ಅಪರೂಪದ ಮರಗಳ ನಾಶವಾಗಲಿದ್ದು, 11,900 ಕೋಟಿ ರೂ. ನಷ್ಟವಾಗಲಿದೆ. ಮುಂದಿನ ದಿನಗಳಲ್ಲಿ ಈ ಯೋಜನಾ ಪ್ರದೇಶದಲ್ಲಿ ಭೂಕಂಪ ಹಾಗೂ ಭೂಕುಸಿತ ಆಗುವ ಸಾಧ್ಯತೆಯಿದೆ ಎಂದು ಐಎಫ್‌ಎಸ್ ಅಧಿಕಾರಿ ಪ್ರಣೀತಾ ಕೌಲ್ ಅವರು ಈಗಾಗಲೇ ಕೇಂದ್ರಕ್ಕೆ ವರದಿಯನ್ನು ನೀಡಿದ್ದು, ಕೆಪಿಸಿಎಲ್ನವರು ಅದನ್ನು ಕಡೆಗಣಿಸಿ ಈ ಯೋಜನೆ ಮಾಡಲು ಹೊರಟಿದ್ದಾರೆ ಎಂದರು..

ಸೌರಶಕ್ತಿ, ಪವನಶಕ್ತಿ, ಬ್ಯಾಟರಿ ಸ್ಟೋರೇಜ್ ಪರ್ಯಾಯ ಇಂಧನ ಉತ್ಪತ್ತಿಗೆ ಅವಕಾಶ ಇರುವುದರಿಂದ ಈ ಯೋಜನೆಯನ್ನು ಹಿಂಪಡೆಯಬೇಕೆಂದು ಒತ್ತಾಯಿಸುತ್ತಿದ್ದೇವೆಂದರು.

ಈ ಜಾಥಾದಲ್ಲಿ 500ಕ್ಕೂ ಹೆಚ್ಚು ಸೈಕಲ್ಗಳು, 200 ಕಾರುಗಳು, 300 ದ್ವಿಚಕ್ರವಾಹನಗಳು ಭಾಗವಹಿಸಲಿದೆ. ಕಾರು ಹಾಗೂ ಇತರ ವಾಹನಗಳ ಜಾಥಾ ಪೊಲೀಸ್ ಚೌಕಿ, ಆದಿಚುಂಚನಗಿರಿ ರಸ್ತೆ, ಗುತ್ತಿ ನರ್ಸಿಂಗ್ ಹೋಂ, ಎಲ್‌ಎಲ್‌ಆರ್‌ರಸ್ತೆ, ಗೋಪಿ ಸರ್ಕಲ್, ಎ.ಎ. ಸರ್ಕಲ್, ಗಾಂಧಿಬಜಾರ್,ರಾಮಣ್ಣಶ್ರೇಷ್ಠಿ ಪಾರ್ಕ್, ಬೆಕ್ಕಿನಕಲ್ಮಠಕ್ಕೆ ತೆರಳಿ ಮಹಾವೀರ ಸರ್ಕಲ್ಗೆ ಬರಲಿದ್ದು ಅಲ್ಲಿ ಸಾರ್ವಜನಿಕ ಸಭೆ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಾ.ಶ್ರೀಪತಿ, ಬಳಗದ ಶ್ರೀಕಾಂತ್, ಪರಿಸರ ರಮೇಶ್, ವಾಗೀಶ್, ದಿಲೀಪ್ನಾಡಿಗ್, ಜನಾರ್ಧನ್ ಪೈ, ಚನ್ನವೀರಪ್ಪ ಗಾಮನಗಟ್ಟಿ ಮತ್ತಿತರರಿದ್ದರು.

70 ವರ್ಷಗಳ ಹಳೆ ಬೇಡಿಕೆ ಈಗ ಈಡೇರಿದೆ : ಶಾಸಕ

ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 31ನೇ ಬಿಜೈ ವಾರ್ಡಿನಲ್ಲಿ ಸುಮಾರು 50 ಲಕ್ಷ ರೂ.ವಿಶೇಷ ಅನುದಾನದಲ್ಲಿ ಕೊಟ್ಟಾರ ಕ್ರಾಸ್ನಿಂದ ಕೆ.ಎಸ್.ಆರ್.ಟಿ.ಸಿ. ಕ್ವಾಟ್ರಸ್ ಮುಖಾಂತರ ಎ.ಜೆ. ಆಸ್ಪತ್ರೆಗೆ ಸಂಪರ್ಕಿಸುವ ರಸ್ತೆಯ ಸಮಗ್ರ ಅಭಿವೃದ್ಧಿ ಕಾಮಗಾರಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಭೂಮಿ ಪೂಜೆ ನಡೆಯಿತು.



ನಂತರ ಮಾತನಾಡಿದ ಶಾಸಕರು, ಕೆ.ಎಸ್.ಆರ್.ಟಿ.ಸಿ ಅಧೀನದಲ್ಲಿರುವ ಈ ಸ್ಥಳವನ್ನು ಕಳೆದ 70 ವರ್ಷಗಳಿಂದ ಜನರು ಬಳಸುತ್ತಿದ್ದರೂ ಇಲ್ಲಿ ಸುಸಜ್ಜಿತ ರಸ್ತೆಯೇ ಇರಲಿಲ್ಲ. ರಸ್ತೆ ನಿರ್ಮಾಣವಾದರೆ ಸ್ಥಳೀಯರಿಗೆ ಹೆಚ್ಚಿನ ಉಪಯೋಗವಾಗಲಿದ್ದು ಆ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ಸ್ಥಳೀಯ ಬಿಜೆಪಿ ಪ್ರಮುಖರು, ಕಾರ್ಯಕರ್ತರು, ನಿವಾಸಿಗಳು, ಅನೇಕ ಬಾರಿ ನನ್ನಲ್ಲಿ ಮನವಿ ಮಾಡಿದ್ದರು.

ಅದರಂತೆ ಹಿಂದಿನ ಬಿಜೆಪಿ ಅವಧಿಯಲ್ಲಿ ಅನುದಾನವನ್ನು ಮೀಸಲಿಡಲಾಗಿತ್ತು. ಆದರೆ ಕೆ.ಎಸ್.ಆರ್.ಟಿ.ಸಿ ನಿರಪೇಕ್ಷಣೆಯಿಲ್ಲದೇ ಈ ಕಾರ್ಯ ಮುಂದುವರಿಯಲು ಸಾಧ್ಯವಿರಲಿಲ್ಲ. ಆಗ ಅಧಿಕಾರಿಯಾದ ರಾಜೇಶ್ ಶೆಟ್ಟಿಯವರ ಸಹಿತ ಅನೇಕರು ಸಹಕಾರ ನೀಡಿದ ಪರಿಣಾಮ ಇಂದು ರಸ್ತೆ ನಿರ್ಮಾಣ ಕಾಮಗಾರಿ ಆರಂಭವಾಗಲಿದ್ದು, ಏಳು ದಶಕಗಳ ಬೇಡಿಕೆಗೆ ಈಡೇರಿದಂತಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಪ್ರಮುಖರಾದ ಪ್ರಶಾಂತ್ ಆಳ್ವ, ರಾಜೇಶ್, ದಿನೇಶ್, ಸಂಜಯ್ ಪ್ರಭು, ಮನೋಜ್, ದೀಪಿಕಾ, ಸಂತೋಷ್ ಉಳ್ಳಾಲ್, ಋತ್ವಿಕ್ ಕದ್ರಿ, ಜಯ ಕುಮಾರ್,ನಾರಾಯಣ್, ಅನಂತ್ ಮಲ್ಯ, ಗೋಕುಲ್ ಕಾಮತ್, ಅಲ್ಬುಕರ್ಕ್, ಸೇರಿದಂತೆ ವಾರ್ಡಿನ ಕಾರ್ಯಕರ್ತರು, ಪರಿಸರದ ನಿವಾಸಿಗಳು ಹಾಗೂ ಮಹಾನಗರ ಪಾಲಿಕೆ, ಅರಣ್ಯ ಇಲಾಖೆ, ಕೆ.ಎಸ್.ಆರ್.ಟಿ.ಸಿ, ಮೆಸ್ಕಾಂ ಅಧಿಕಾರಿಗಳು ಉಪಸ್ಥಿತರಿದ್ದರು.

ಜನನ
08.09.1933
ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನನ.

ತಂದೆ
ದೀನಾನಾಥ್ ಮಂಗೇಶ್ಕರ್ ಖ್ಯಾತ ಶಾಸ್ತ್ರೀಯ ಗಾಯಕ, ರಂಗಭೂಮಿ ಕಲಾವಿದ.

ಮರಣ
12.04.2026
ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆ

ತಾಯಿ
ತಾಯಿ ಸೇವಂತಿ.

20ಕ್ಕೂ ಹೆಚ್ಚು ಭಾಷೆಗಳಲ್ಲಿ 11,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿ ವಿಶ್ವದಾಖಲೆ ಬರೆದ ಕೋಗಿಲೆ

ಆಶಾ ಅಸ್ತಂಗತ

ಪ್ರಶಸ್ತಿಗಳು
2000 ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ | 2008 ಪದ್ಮವಿಭೂಷಣ | 2011 ಗಿನ್ನಿಸ್ ವಿಶ್ವದಾಖಲೆ

1940

2001

2015

2025

ಸಾವಿರಾರು ಗೀತೆಗಳಿಗೆ ಜೀವ ತುಂಬಿದ್ದ ಧ್ವನಿ ಚಿರನಿದ್ರೆಗೆ | ಸಪ್ತಸ್ವರಗಳ ಲೋಕದಲ್ಲಿ ಶೋಕದ ಅಲೆ

ಖಾಮೋಶ್ ಹುಯಿ ಆವಾಜ್, ಯಾದೇ ರಹೇಗಿ ಜಿಂದಾ

ಆಶಾ ಅಲ್ವಿದಾ

ಸಂಗೀತ ದಂತಕಥೆ ಭಾರತ ರತ್ನ ಲತಾ ಮಂಗೇಶ್ಕರ್ ನಡುವೆಯೂ ಮಿಂಚಿದ ಕಿರಿಯ ಸಹೋದರಿ

ಭಾರತೀಯ ಚಿತ್ರರಂಗದಲ್ಲಿ ಖ್ಯಾತ ಗಾಯಕಿಯಾಗಿ ಪ್ರಸಿದ್ಧಿ ಪಡೆದಿದ್ದ ಆಶಾ ಭೋಸ್ಲೆ (93) ನಿಧನರಾಗಿದ್ದಾರೆ. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ ಶನಿವಾರ ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದ ಅವರು ಕೊನೆಯುಸಿರೆಳೆದಿದ್ದಾರೆ. ಭಾರತ ರತ್ನ ಪುರಸ್ಕೃತ ಲತಾ ಮಂಗೇಶ್ಕರ್ ಅವರ ಸಹೋದರಿಯಾಗಿದ್ದ ಆಶಾ ಭೋಸ್ಲೆ ಹಿಂದಿ, ಕನ್ನಡ, ಮರಾಠಿ, ತಮಿಳು, ತೆಲುಗು, ಅಸ್ಸಾಮಿ, ಭೋಜ್‌ಪುರಿ, ನೇಪಾಳಿ, ಬೆಂಗಾಲಿ ಸೇರಿದಂತೆ ಹಲವು ಭಾಷೆಗಳಲ್ಲಿ ಹಾಡಿ ಸಂಗೀತ ಪ್ರಿಯರ ಅಚ್ಚುಮೆಚ್ಚಿನ ಗಾಯಕಿಯಾಗಿ ಗುರುತಿಸಿಕೊಂಡಿದ್ದರು. ಆದರೀಗ ಬಾರದ ಲೋಕಕ್ಕೆ ಪಯಣಿಸಿದ್ದು, ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

ಆಶಾ ಭೋಸ್ಲೆ ಅವರ ಜೀವನ ಯಾವ ಸಿನಿಮಾ ಕಥೆಗೂ ಕಡಿಮೆ ಇಲ್ಲ, ನೋವಿನಲ್ಲಿಯೇ ಬೆಂದ ಆಶಾ, ತನ್ನ ಇಡೀ ಜೀವನವನ್ನು ಸಂಗೀತಕ್ಕಾಗಿಯೇ ಮುಡಿಪಾಗಿಟ್ಟಿದ್ದರು. ಸತತ ಎಂಟು ದಶಕಗಳ ಸಂಗೀತ ಸೇವೆಗೆ ತಮ್ಮನ್ನು ಮುಡಿಪಾಗಿಟ್ಟುಕೊಂಡಿದ್ದ ಆಶಾ ಭೋಸ್ಲೆ ಇಪ್ಪತ್ತಕ್ಕೂ ಹೆಚ್ಚು ಭಾಷೆಗಳಲ್ಲಿ 11 ಸಾವಿರಕ್ಕೂ ಹೆಚ್ಚು ಹಾಡುಗಳಿಗೆ ದನಿಯಾಗಿದ್ದಾರೆ.

ಆಶಾ ಭೋಸ್ಲೆ ಅವರ ತಂದೆ ಪಂಡಿತ್ ದೀನನಾಥ್ ಮಂಗೇಷ್ಕರ್ ಅವರು ರಂಗಭೂಮಿ ಕಲಾವಿರಾಗಿದ್ದರು. ಜತೆಗೆ ಗಾಯಕರಾಗಿಯೂ ಗುರುತಿಸಿಕೊಂಡಿದ್ದರು. ಹಾಗಾಗಿ ಅವರ ಇಡೀ ಕುಟುಂಬ ಸಂಗೀತವನ್ನು ಆರಾಧಿಸುತ್ತಿತ್ತು. ಆಶಾ ಅವರ ಅಕ್ಕ ಲತಾ ಮಂಗೇಶ್ಕರ್ ಕೂಡ ಭಾರತೀಯ ಸಂಗೀತ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದರು. ತಂದೆಯ ಅಕಾಲಿಕ ನಿಧನ ಆಶಾ ಅವರ ಕುಟುಂಬದವನ್ನು ಸಂಕಷ್ಟಕ್ಕೆ ದೂಡಿತು. ಆಶಾ ಅವರ ಅಕ್ಕ ಲತಾ ಮಂಗೇಶ್ಕರ್ ಕುಟುಂಬದ ಜವಾಬ್ದಾರಿ ವಹಿಸಿಕೊಂಡಿದ್ದರು. ಆಶಾ ಕೂಡ ಕುಟುಂಬದ ನಿರ್ವಹಣೆಗೆ ನಿಂತರು. ಸಂಗೀತವನ್ನು ಆರಾಧಿಸುವ ಕುಟುಂಬದಲ್ಲಿ ಬೆಳೆದ ಆಶಾ ಅವರು ಬಾಲ್ಯದಲ್ಲಿಯೇ ಹಿನ್ನೆಲೆ ಸಂಗೀತದಲ್ಲಿ ತೊಡಗಿಸಿಕೊಂಡರು.

ಒಲಿದು ಬಂದ ಪ್ರಮುಖ ಪ್ರಶಸ್ತಿಗಳು

ಸಂಗೀತ ಇತಿಹಾಸದಲ್ಲಿ ಅತಿ ಹೆಚ್ಚು ಹಾಡುಗಳನ್ನು ಹಾಡಿದ ಗಾಯಕಿ ಎಂಬ ಹೆಗ್ಗಳಿಕೆಗೆ 2011ರಲ್ಲಿ ಗಿನ್ನಿಸ್ ವಿಶ್ವ ದಾಖಲೆಗೆ ಪಾತ್ರರಾದರು. 2000ರಲ್ಲಿ ಭಾರತ ಸರಕಾರದ ಅತ್ಯುನ್ನತ ಸಿನಿಮಾ ಪ್ರಶಸ್ತಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿದೆ. 2008ರಲ್ಲಿ ಭಾರತದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮ ವಿಭೂಷಣ ನೀಡಿ ಗೌರವಿಸಲಾಗಿದೆ. ಅತ್ಯುತ್ತಮ ಹಿನ್ನೆಲೆ ಗಾಯಕಿಗಾಗಿ 2 ಬಾರಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಒಲಿದಿದೆ. 7 ಬಾರಿ ಅತ್ಯುತ್ತಮ ಗಾಯಕಿ ಪ್ರಶಸ್ತಿ ಗೆದ್ದ ನಂತರ, ಹೊಸ ಪ್ರತಿಭೆಗಳಿಗೆ ಅವಕಾಶ ನೀಡುವ ಉದ್ದೇಶದಿಂದ ತಾವು ಇನ್ನು ಮುಂದೆ ಪ್ರಶಸ್ತಿಯ ಕಣದಲ್ಲಿ ಇರುವುದಿಲ್ಲ ಎಂದು ಅವರೇ ಘೋಷಿಸಿದರು. 2001ರಲ್ಲಿ ಅವರಿಗೆ ಫಿಲ್ಮ್ ಫೇರ್ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಯಿತು.

1943ರಲ್ಲಿ ಆಶಾ ಅವರಿಗೆ ಆಗಿನ್ನು ಹತ್ತು ವಯಸ್ಸು, ಆಗಲೇ ಮರಾಠಿಯ 'ಮಾಝಾ ಬಾಲ್'ನಲ್ಲಿ 'ಚಲಾ ಚಲಾ ನವ ಬಾಲಾ..' ಹಾಡು ಹಾಡುವ ಮೂಲಕ ಚಿತ್ರರಂಗವನ್ನು ಪ್ರವೇಶಿಸಿದರು. ತಮ್ಮ ಇಂಪಾದ ದನಿಯಿಂದ ಪ್ರೇಕ್ಷಕರ ಗಮನಸೆಳೆದರು. 1948ರಲ್ಲಿ ತೆರೆಗೆ ಬಂದ 'ಸಾವನ್ ಆಯಾ..' ಗೀತೆಗೆ ದನಿಯಾದರು, 1957ರಲ್ಲಿ ಓ.ಪಿ.ನಾಯ್ಯರ್ ಸಂಗೀತ ಸಂಯೋಜಿಸಿದ್ದ 'ನಯಾ ದೌರ್' ಚಿತ್ರದಲ್ಲಿನ 'ಉಡೆ ಜಬ್ ಜಬ್ ಜುಲ್ಫೇನ್ ತೆರಿ..' ಹಾಡಿಗೆ ದನಿಯಾದರು. ಈ ಗೀತೆ ಆಶಾ ಅವರಿಗೆ ಹೊಸತನ ತಂದುಕೊಟ್ಟಿತು. ಅವರನ್ನು ಚಿತ್ರರಂಗದಲ್ಲಿ ಗುರುತಿಸುವಂತೆ ಮಾಡಿತು. ಎಸ್.ಡಿ.ಬರ್ಮನ್ ಸಂಗೀತ ನಿರ್ದೇಶನದಲ್ಲಿ ಮೂಡಿಬಂದ 'ಚಂದಾ ಮಾಮಾ ದೂರ್ ಕೆ..' 'ಆಜಾ ಆಜಾ ಮೇನ್ ಹೂಂ ಪ್ಯಾರ್ ತೆರೆ...' 'ಓ ಹಸೀನಾ ಜುಲ್ಫೋವಾಲಿ..', 'ಪಿಯಾ ತು ಅಬ್ ತೋ ಆಜಾ...', 'ದುಮ್ ಮಾರೋ ದುಮ್...', 'ಚುರಾ ಲಿಯಾ ಹೈ ತುಮ್ನೆ..' ಹೀಗೆ ಅನೇಕ ಹಾಡುಗಳು ಸಂಗೀತ ಪ್ರಿಯರನ್ನು ತಲೆದೂಗುವಂತೆ ಮಾಡಿದವು.

1966ರಲ್ಲಿ 'ಗರೀಬೋನ್ ಕಿ ಸುನೋ..' ಹಾಡಿಗಾಗಿ ಮೊದಲ ಬಾರಿಗೆ ಫಿಲಂಫೇರ್ ಪ್ರಶಸ್ತಿ ಪಡೆದರು. ಎಂಬತ್ತರ ದಶಕದಲ್ಲಿ ಘಜಲ್ ಮತ್ತು ಶಾಸ್ತ್ರೀಯ ಸಂಗೀತದಲ್ಲಿಯೂ ಹೊಸ ಛಾಪು ಮೂಡಿಸಿದರು. ಉಮ್ರಾವ್ ಜಾನ್‌ನ.., ದಿಲ್ ಚೀಜ್ ಕ್ಯಾ ಹೈ.., ಇಜಾಜತ್‌ನ.., ಮೇರಾ ಕುಛ್ ಸಾಮಾನ್ ಹಾಡುಗಳಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡರು. ಎ.ಆರ್.ರೆಹಮಾನ್ ಸಂಗೀತ ಸಂಯೋಜಿಸಿದ್ದ ರಂಗೀಲಾ ಚಿತ್ರದ ಹಾಡುಗಳು ಆಶಾ ಭೋಸ್ಲೆ ದನಿಯಲ್ಲಿ ಮಧುರವಾಗಿ ಮೂಡಿಬಂದಿವೆ.

ಸಂಗೀತವನ್ನೇ ಉಸಿರಾಗಿಸಿಕೊಂಡಿದ್ದ ಆಶಾ ಭೋಸ್ಲೆ, ತಮ್ಮ ತೊಂಬತ್ತನೇ ವಯಸ್ಸಿನಲ್ಲಿಯೂ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು. ವೇದಿಕೆಯಲ್ಲಿ ಗಂಟೆಗಟ್ಟಲೇ ನಿಂತು ಹಾಡುಗಳನ್ನು ಹಾಡಿ ಸಂಗೀತ ಪ್ರಿಯರನ್ನು ರಂಜಿಸುತ್ತಿದ್ದರು. ಇದರಿಂದ ಆಶಾ ಅವರು ಯಾವ ಮಟ್ಟಿಗೆ ಸಂಗೀತವನ್ನು ಆರಾಧಿಸುತ್ತಿದ್ದರು ಎಂಬುದು ತಿಳಿಯುತ್ತದೆ.

ಗಾಯನದ ಜತೆಗೆ 'ಮೈ' ಚಿತ್ರದಲ್ಲಿಯೂ ಅಭಿನಯಿಸಿದ್ದರು. ಆ ಮೂಲಕ ನಟಿಯಾಗಿಯೂ ಚಿರಪರಿಚಿತರಾ ದರು. ಇದೀಗ ಆಶಾ ಅವರ ಅಗಲಿಕೆಯಿಂದ ಸಂಗೀತ ಲೋಕ ಬಡವಾಗಿದೆ. ಸೋಮವಾರ (ಏ.13) ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ಆಶಾ ಭೋಸ್ಲೆ ಅವರ ಅಂತ್ಯಕ್ರಿಯೆ ನೆರವೇರಲಿದೆ.

ಆಶಾ ಹಾಡಿರುವ ಕನ್ನಡದ ಮೂರು ಹಾಡುಗಳು

1 ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ

1967ರಲ್ಲಿ ತೆರೆಕಂಡ 'ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ' ಸಿನಿಮಾದ 'ಯಾಕೋ ಏನೋ ಸೆರ್ಗ ನಿಲ್ಲವಲ್ದು..' ಹಾಡನ್ನು ಆಶಾ ಭೋಸ್ಲೆ ಹಾಡಿದ್ದರು. ಆ ಮೂಲಕ ಕನ್ನಡಕ್ಕೆ ಅಧಿಕೃತವಾಗಿ ಗಾಯಕಿಯಾಗಿ ಎಂಟ್ರಿ ಕೊಟ್ಟಿದ್ದರು. ವಿಶೇಷವೆಂದರೆ, ಆಶಾ ಭೋಸ್ಲೆ ಅವರ ಸಹೋದರಿಯರಾದ ಲತಾ ಮಂಗೇಶ್ಕರ್ ಮತ್ತು ಉಷಾ ಮಂಗೇಶ್ಕರ್ ಅವರು ಕೂಡ ಈ ಚಿತ್ರದ ಮೂಲಕ ಚಂದನವನಕ್ಕೆ ಪ್ರವೇಶ ಕೊಟ್ಟಿದ್ದರು. ಒಂದೇ ಚಿತ್ರದ ಹಾಡುಗಳನ್ನು ಮೂವರು ಸಹೋದರಯರು ಹಾಡಿದ್ದು ವಿಶೇಷವಾಗಿತ್ತು.

2 ದೂರದ ಬೆಟ್ಟ

ಡಾ.ರಾಜ್‌ಕುಮಾರ್ ಮತ್ತು ಭಾರತಿ ವಿಷ್ಣುವರ್ಧನ್ ಅಭಿನಯದ 'ದೂರದ ಬೆಟ್ಟ' ಸಿನಿಮಾವು 1973ರಲ್ಲಿ ತೆರೆಕಂಡಿತ್ತು. ಈ ಸಿನಿಮಾದ 'ಸವಾಲು ಹಾಕಿ ಸೋಲಿಸಿ ಎಲ್ಲರ..' ಹಾಡನ್ನು ಆಶಾ ಭೋಸ್ಲೆ ಹಾಡಿದ್ದರು. ಜಿ.ಕೆ.ವೆಂಕಟೇಶ್ ಅವರು ಸಂಗೀತ ಸಂಯೋಜಿಸಿದ್ದರು. ಈ ಹಾಡಿನ ನಂತರ ಸುಮಾರು ವರ್ಷಗಳ ತನಕ ಕನ್ನಡ ಚಿತ್ರರಂಗದತ್ತ ಆಶಾ ಮುಖ ಮಾಡಿರಲಿಲ್ಲ.

3 ಮತ್ತೆ ಮುಂಗಾರು

ದೂರದ ಬೆಟ್ಟ ತೆರೆಕಂಡು 37 ವರ್ಷಗಳ ನಂತರ 'ಮತ್ತೆ ಮುಂಗಾರು' ಸಿನಿಮಾದಲ್ಲಿ ಹಾಡುವ ಮೂಲಕ ಆಶಾ ಭೋಸ್ಲೆ ಮತ್ತೆ ಚಂದನವನಕ್ಕೆ ಮರಳಿದರು. ಈ ಚಿತ್ರದ 'ಹೇಳದೇ ಕಾರಣ..' ಹಾಡನ್ನು ಆಶಾ ಭೋಸ್ಲೆ ಹಾಡಿದ್ದರು. ಎಕ್ ಪೌಲ್ ರಾಜ್ ಸಂಗೀತ ನೀಡಿದ್ದ ಈ ಹಾಡು ಹಿಟ್ ಆಗಿತ್ತು. ನಿರ್ದೇಶಕ ರಾಘವ ದ್ವಾರ್ಕಿ ಅವರೇ ಈ ಹಾಡನ್ನು ಬರೆದಿದ್ದರು.

10 ಆಶಾ ಭೋಸ್ಲೆ ಹಾಡಿರುವ ಎವರ್‌ಗ್ರೀನ್ ಹಾಡುಗಳು

ಆಶಾ ಭೋಸ್ಲೆ ಹಾಡಿರುವ ಈಗಲೂ ಅಭಿಮಾನಿಗಳ ಮನಸ್ಸಿನಲ್ಲಿ ಸದಾ ಹಚ್ಚ ಹಸಿರಾಗಿ ಉಳಿದಿರುವ ಪ್ರಮುಖ 10 ಹಾಡುಗಳ ಪಟ್ಟಿ ಇಲ್ಲಿವೆ.

ಪಿಯಾ ತು ಅಬ್ ತೋ ಆಜಾ

1 'ಪಿಯಾ ತು ಅಬ್ ತೋ ಆಜಾ' ಜಿತೇಂದ್ರ ಮತ್ತು ಆಶಾ ಪರೇಖ್ ನಟನೆಯ 1971ರಲ್ಲಿ ತೆರೆಕಂಡ ಹಿಂದಿಯ ಸೂಪರ್‌ಹಿಟ್ ಐಕಾನಿಕ್ ಹಾಡಾಗಿದೆ. ಇದು ಬಾಲಿವುಡ್‌ನ ಎವರ್‌ಗ್ರೀನ್ ಹಾಡು ಗಳಲ್ಲಿ ಒಂದಾಗಿದೆ. ಆಶಾ ಭೋಸ್ಲೆ ಹಾಡಿರುವ ಮತ್ತು ಆರ್.ಡಿ.ಬರ್ಮನ್ ಸಂಗೀತ ನೀಡಿರುವ ಈ ಕ್ಯಾಬರೆ ಗೀತೆಯಲ್ಲಿ ಹೆಲೆನ್ ನರ್ತಿಸಿದ್ದಾರೆ. ಈ ಹಾಡಿನ ಸಾಹಿತ್ಯವನ್ನು ಮಜ್ರೂಹ್ ಸುಲ್ತಾನ್ಪುರಿ ಬರೆದಿದ್ದಾರೆ.

ದಮ್ ಮಾರೋ ದಮ್

2 'ಹರೇ ರಾಮ ಹರೇ ಕೃಷ್ಣ' ಚಿತ್ರದ ಜೀನತ್ ಅಮನ್ ಮತ್ತು ದೇವಾನಂದ್ ನಟನೆಯ ಈ ಜನಪ್ರಿಯ ಹಾಡು ಅತ್ಯಂತ ಪ್ರಸಿದ್ಧ ಹಾಡುಗಳಲ್ಲಿ ಒಂದಾಗಿದೆ. ಈ ಹಾಡುಗಳು ಹಲವಾರು ಭಾಷೆಗಳಲ್ಲಿ ರಿಮೇಕ್‌ಗಳಾಗಿವೆ. ಆದರೆ ಮೊದಲ ಹಾಡು ಅಭಿಮಾನಿಗಳ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ಉಳಿದುಕೊಂಡಿದೆ. ಇದನ್ನು ಆಶಾ ಭೋಸ್ಲೆ ಹಾಡಿದ್ದು, ಆನಂದ್ ಬಕ್ಷಿ ಬರೆದಿದ್ದಾರೆ ಮತ್ತು ರಾಹುಲ್ ದೇವ್ ಬರ್ಮನ್ ಸಂಗೀತ ಸಂಯೋಜಿಸಿದ್ದಾರೆ.

ಚುರಾ ಲಿಯಾ ಹೈ ತುಮ್ನೆ ಜೋ ದಿಲ್ ಕೋ

3 1973ರಲ್ಲಿ ತೆರೆಕಂಡ 'ಯಾದೋಂಕಿ ಬಾರಾತ್' ಚಿತ್ರದ 'ಚುರಾ ಲಿಯಾ ಹೈ ತುಮ್ನೆ ಜೋ ದಿಲ್ ಕೋ' ಜನಪ್ರಿಯ ಹಾಡನ್ನು ಆಶಾ ಭೋಸ್ಲೆ ಮತ್ತು ಮೊಹಮ್ಮದ್ ರಫಿ ಹಾಡಿದ್ದಾರೆ. ಈ ಹಾಡು ಅಭಿಮಾನಿಗಳ ನೆಚ್ಚಿನ ಹಾಡಾಗಿದೆ. ಆಶಾ ಮತ್ತು ರಫಿ ಅವರ ಮಾಂತ್ರಿಕ ಧ್ವನಿಗಳು ಮತ್ತು ಆರ್.ಡಿ.ಬರ್ಮನ್ ಸಂಗೀತ ಸಂಯೋಜನೆಯು ಈ ಹಾಡನ್ನು ಸ್ಮರಣೀಯ ಹಾಡನ್ನಾಗಿ ಮಾಡಿವೆ. ಜೀನತ್ ಅಮಾನ್ ಮತ್ತು ವಿಜಯ್ ಅರೋರಾ ಅವರ ಈ ಪ್ರಣಯ ಗೀತೆ ಪ್ರೇಕ್ಷಕರ ಹೃದಯದಲ್ಲಿ ಅಚ್ಚೊತ್ತಿದೆ.

ದಿಲ್ ಚೀಜ್ ಕ್ಯಾ ಹೈ

4 'ದಿಲ್ ಚೀಜ್ ಕ್ಯಾ ಹೈ' ಹಾಡು 1981ರಲ್ಲಿ ಬಿಡುಗಡೆಯಾದ 'ಉಮ್ರಾವ್ ಜಾನ್' ಸಿನಿಮಾದಲ್ಲಿದೆ. ಈ ಚಿತ್ರದಲ್ಲಿ ರೇಖಾ ನಟಿಸಿದ್ದು, ಆಶಾ ಅವರು ಈ ಹಾಡನ್ನು ಹಾಡಿದ್ದಾರೆ.

ಆಯಿ ಮೆಹರ್ಬಾನ್

5 'ಆಯಿ ಮೆಹರ್ಬಾನ್' 1958ರ 'ಹೌರಾ ಬ್ರಿಡ್ಜ್' ಸಿನಿಮಾದ ಜನಪ್ರಿಯ ಹಿಂದಿ ಹಾಡಾಗಿದೆ. ಮಧುಬಾಲಾ ಮತ್ತು ಅಶೋಕ್ ಕುಮಾರರ್ ನಟಿಸಿರುವ ಈ ಗೀತೆಯನ್ನು ಆಶಾ ಭೋಸ್ಲೆ ಹಾಡಿದ್ದು, ಓ.ಪಿ.ನಯ್ಯರರ್ ಸಂಗೀತ ನೀಡಿದ್ದಾರೆ.

ದೋ ಲಫ್ಸೋನ್ ಕಿ ಹೈ ದಿಲ್ ಕಿ ಕಹಾನಿ

6 'ದೋ ಲಫ್ಸೋನ್ ಕಿ ಹೈ ದಿಲ್ ಕಿ ಕಹಾನಿ' 1979ರ 'ದ ಗ್ರೇಟ್ ಗ್ಯಾಂಬ್ಲರ್' ಸಿನಿಮಾದ ಜನಪ್ರಿಯ ಹಿಂದಿ ಹಾಡಾಗಿದೆ. ಇದನ್ನು ಆಶಾ ಭೋಸ್ಲೆ ಮತ್ತು ಶರದ್ ಕುಮಾರ್ ಹಾಡಿದ್ದಾರೆ. ಆರ್.ಡಿ ಬರ್ಮನ್ ಸಂಗೀತ ಮತ್ತು ಆನಂದ್ ಬಕ್ಷಿ ಸಾಹಿತ್ಯ ನೀಡಿದ್ದಾರೆ. ಅಮಿತಾಬ್ ಬಚ್ಚನ್, ಜೀನತ್ ಅಮನ್ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ.

ಆಂಖೋನ್ ಕಿ ಮಸ್ತಿ

7 1981ರಲ್ಲಿ ಬಿಡುಗಡೆಯಾಗಿದ್ದ 'ಉಮ್ರಾವ್ ಜಾನ್' ಸಿನಿಮಾದಲ್ಲಿ ಬರುವ 'ಆಂಖೋನ್ ಕಿ ಮಸ್ತಿ' ಬಾಲಿವುಡ್‌ನ ಪ್ರಸಿದ್ಧ ಹಳೆಯ ಗೀತೆಗಳಲ್ಲಿ ಒಂದಾಗಿದೆ. ಈ ಸಿನಿಮಾದಲ್ಲಿ ರೇಖಾ ನಟಿಸಿದ್ದಾರೆ. ಆಶಾ ಭೋಸ್ಲೆ ಅವರು ಈ ಹಾಡನ್ನು ಹಾಡಿದ್ದಾರೆ.

ಓ ಮೇರೆ ಸೋನಾ ರೇ

8 'ಓ ಮೇರೆ ಸೋನಾ ರೇ' 1966ರ 'ತೀಸ್ರಿ ಮಂಜಿಲ್'ನ ಸಿನಿಮಾದ ಜನಪ್ರಿಯ ರೋಮ್ಯಾಂಟಿಕ್ ಗೀತೆಯಾಗಿದೆ. ಆಶಾ ಭೋಸ್ಲೆ ಮತ್ತು ಮೊಹಮ್ಮದ್ ರಫಿ ಹಾಡಿರುವ ಈ ಗೀತೆಗೆ ಆರ್. ಡಿ.ಬರ್ಮನ್ ಸಂಗೀತ ಸಂಯೋಜಿಸಿದ್ದು, ಮಜ್ರೂಹ್ ಸುಲ್ತಾನ್ಪುರಿ ಸಾಹಿತ್ಯ ಬರೆದಿದ್ದಾರೆ. ಶಮ್ಮಿ ಕಪೂರ್, ಆಶಾ ಪಾರೇಖ್ ನಟಿಸಿದ್ದಾರೆ.

ಜವಾನೇ ಜಾನೇಮನ್

9 'ಜವಾನೇ ಜಾನೇಮನ್' 1982ರ 'ನಮಕ್ ಹಲಾಲ್' ಸಿನಿ ಮಾದ ಜನಪ್ರಿಯ ಬಾಲಿವುಡ್ ಗೀತೆಯಾಗಿದ್ದು, ಇದನ್ನು ಆಶಾ ಭೋಸ್ಲೆ ಹಾಡಿದ್ದಾರೆ. ಬಪ್ಪಿ ಲಾಹಿರಿ ಸಂಗೀತ ಸಂಯೋಜನೆ ಮತ್ತು ಅಂಜಾನ್ ಸಾಹಿತ್ಯವಿರುವ ಈ ಹಾಡು, ಅಮಿತಾಬ್ ಬಚ್ಚನ್, ಪರ್ವೀನ್ ಬಾಬಿ ಅವರ ಮೇಲಿನ ನೃತ್ಯ ದೃಶ್ಯಕ್ಕೆ ಹೆಸರುವಾಸಿಯಾಗಿದೆ.

ಯೇ ಮೇರಾ ದಿಲ್ ಯಾರ್ ಕಾ ದೀವಾನಾ

10 'ಯೇ ಮೇರಾ ದಿಲ್ ಯಾರ್ ಕಾ ದೀವಾನಾ' 1978ರ 'ಡಾನ್' ಸಿನಿಮಾದ ಜನಪ್ರಿಯ ಹಿಂದಿ ಹಾಡಾಗಿದೆ. ಕಲ್ಯಾಣ್ ಜೀ-ಆನಂದಿಜೀ ಸಂಗೀತ ಸಂಯೋಜನೆಯ ಈ ಹಾಡನ್ನು ಆಶಾ ಭೋಸ್ಲೆ ಹಾಡಿದ್ದಾರೆ. ಸಾಹಿತ್ಯವನ್ನು ಇಂದೀವರ್ ಬರೆದಿದ್ದಾರೆ.

ಆಶಾ ಬಗ್ಗೆ ಗೊತ್ತಿರದ ಐದು ಸಂಗತಿಗಳು

- ಪ್ರಸಿದ್ಧ ಗಾಯಕಿ ಆಶಾ ಭೋಸ್ಲೆ ರಷ್ಯನ್, ಮಲಯ, ಇಂಗ್ಲಿಷ್, ಜೆಕ್ ಮತ್ತು ನೇಪಾಳಿ ಸೇರಿದಂತೆ 20ಕ್ಕೂ ಹೆಚ್ಚು ಭಾಷೆಗಳಲ್ಲಿ ಹಾಡುಗಳಿಗೆ ಧ್ವನಿ ನೀಡಿದ್ದಾರೆ.

- ಗ್ರ್ಯಾಮಿ ಪ್ರಶಸ್ತಿಗೆ ನಾಮ ನಿರ್ದೇಶನಗೊಂಡ ಮೊದಲ ಭಾರತೀಯ ಗಾಯಕಿ. 1997 ಮತ್ತು 2006ರಲ್ಲಿ ಎರಡು ಬಾರಿ ನಾಮನಿರ್ದೇಶನಗೊಂಡಿದ್ದರು.
- 11,000ಕ್ಕೂ ಹೆಚ್ಚು ಏಕವ್ಯಕ್ತಿ, ಯುಗಳ ಮತ್ತು ಕೋರಸ್ ಬೆಂಬಲಿತ ಹಾಡುಗಳನ್ನು ಹಾಡಿ ದಾಖಲೆ ಬರೆದಿದ್ದಾರೆ.
- ಆಶಾ ಭೋಸ್ಲೆ ಹೋಟೆಲ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದರು. 2002 ರಲ್ಲಿ ಕಲೆ, ಸಂಗೀತ ಮತ್ತು ಆಹಾರದ ಮಿಶ್ರಣವನ್ನು ಒಳ ಗೊಂಡ ಅಂತಾರಾಷ್ಟ್ರೀಯ ಪ್ರಶಸ್ತಿ ವಿಜೇತ ಆಶಾಸ್ ಎಂಬ ಫೈನ್-ಡೈನಿಂಗ್ ರೆಸ್ಟೋರೆಂಟ್ ಸರಪಳಿಯನ್ನು ಸ್ಥಾಪಿಸಿದ್ದರು.
- ಆಶಾ ಭೋಸ್ಲೆ ಎರಡು ಬಾರಿ ವಿವಾಹವಾಗಿದ್ದರು. 16ನೇ ವಯಸ್ಸಿನಲ್ಲೇ ತಮ್ಮ ಕುಟುಂಬದ ಇಚ್ಛೆಗೆ ವಿರುದ್ಧವಾಗಿ 31 ವರ್ಷದ ಗಣಪತ್ ರಾವ್ ಭೋಸ್ಲೆ ಅವರನ್ನು ವಿವಾಹವಾಗಿದ್ದರು. ಪತಿ ಮತ್ತು ಅವರ ಕುಟುಂಬದ ವಿರುದ್ಧ ಕೌಟುಂಬಿಕ ಹಿಂಸಾಚಾರದ ಆರೋಪ ಮಾಡಿದ್ದ ಆಶಾ, 1960ರಲ್ಲಿ ಸಂಬಂಧ ಮುರಿದುಕೊಂಡಿದ್ದರು. 1980ರಲ್ಲಿ ಪ್ರಸಿದ್ಧ ಸಂಗೀತ ಸಂಯೋಜಕ ಆರರ್.ಡಿ.ಬರ್ಮನ್ ಅವರ ಜತೆ ಎರಡನೇ ಮದುವೆಯಾಗಿದ್ದರು. ಸಂಗೀತ ಉದ್ಯಮದಲ್ಲಿ ಈ ಜೋಡಿಯನ್ನು ಲೆಜೆಂಡರಿ ಕಪಲ್ ಎಂದು ಪರಿಗಣಿಸಲಾಗಿತ್ತು, ಒಟ್ಟಿಗೆ ಹಲವು ಐಕಾನಿಕ್ ಮತ್ತು ಮಾಂತ್ರಿಕ ಹಾಡುಗಳಿಗೆ ಕೆಲಸ ಮಾಡಿದ್ದಾರೆ.

ಮಗ-ಮಗಳ ಸಾವನ್ನು ಕಂಡು ನೊಂದಿದ್ದ ಆಶಾ

ಬದುಕಿನಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದ ಆಶಾ ಭೋಸ್ಲೆ ಅವರ ಜೀವನದಲ್ಲಿ ನಡೆದ ಮತ್ತೊಂದು ನೋವಿನ ಸಂಗತಿ ಎಂದರೆ, ಅವರ ಇಬ್ಬರು ಮಕ್ಕಳ ಸಾವನ್ನು ಕೂಡ ಆಶಾ ಕಂಡಿದ್ದಾರೆ. ಅದರಲ್ಲೂ ಇದ್ದ ಒಬ್ಬಳೇ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದು ಆಶಾಗೆ ದೊಡ್ಡ ಸಂಕಟವನ್ನೇ ನೀಡಿತ್ತು. ಆಶಾ ಭೋಸ್ಲೆ ಅವವರಿಗೆ ಹೇಮಂತ್, ವರ್ಷಾ ಮತ್ತು ಆನಂದ್ ಎಂಬ ಮೂವರು ಮಕ್ಕಳಿದ್ದರು. ಆದರೆ ವರ್ಷಾ ತಮ್ಮ 56ನೇ ವಯಸ್ಸಿನಲ್ಲಿ ಗುಂಡಿಟ್ಟುಕೊಂಡು ಸಾವನ್ನಪ್ಪಿದ್ದರು. 2012ರಲ್ಲಿ ಈ ದುರ್ಘಟನೆ ನಡೆದಿತ್ತು. ಪತ್ರಕರ್ತೆಯಾಗಿದ್ದ ವರ್ಷಾ ರೆಡಿಫ್.ಕಾಮ್, 'ದಿ ಸಂಡೇ ಅಬ್ಸರ್ವರ್ ಮತ್ತು ಜೆಂಟಲ್‌ಮ್ಯಾನ್ ನಿಯತಕಾಲಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಕೆಲವು ಹಿಂದಿ ಮತ್ತು ಮರಾಠಿ ಚಿತ್ರಗಳಿಗೆ ಹಾಡಿದ್ದರು ಕೂಡ. ಅಲ್ಲದೆ, ತಮ್ಮ ತಾಯಿಯೊಂದಿಗೆ ಕನ್ಸರ್ಟ್‌ಗಳಲ್ಲಿಯೂ ಪ್ರದರ್ಶನ ನೀಡುತ್ತಿದ್ದರು.

ಕ್ರೀಡಾ ಬರಹಗಾರ ಹೇಮಂತ್ ಕೆಂಕ್ರೆ ಅವರನ್ನು ವರ್ಷಾ ವಿವಾಹವಾಗಿದ್ದರು, ಆದರೆ, ದಾಂಪತ್ಯದಲ್ಲಿ ಬಿರುಕು ಮೂಡಿ 1998ರಲ್ಲಿ ಪತಿಯಿಂದ ವರ್ಷಾ ವಿಚ್ಛೇದನ ಪಡೆದುಕೊಂಡಿದ್ದರು. ಆ ಬಳಿಕ ತಾಯಿ ಆಶಾ ಅವರೊಂದಿಗೆ ಮುಂಬೈನಲ್ಲಿ ವರ್ಷಾ ವಾಸಿಸುತ್ತಿದ್ದರು. ವರ್ಷಾಗೆ ಖಿನ್ನತೆಯ ಸಮಸ್ಯೆ ಇತ್ತು. ಅವರ ಆಪ್ತ ಸ್ನೇಹಿತರೊಬ್ಬರ ಸಾವು ಆ ಖಿನ್ನತೆಯು ಇನ್ನಷ್ಟು ಹೆಚ್ಚಾಗಲು ಕಾರಣವಾಗಿತ್ತು. ಅದಕ್ಕಾಗಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು. 2008ರಲ್ಲಿ ಅತಿಯಾಗಿ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರಿಂದ ಬದುಕುಳಿದರು. ನಂತರ 2010ರಲ್ಲೂ ಇಂಥದ್ದೇ ಇನ್ನೊಂದು ಪ್ರಯತ್ನ ಮಾಡಿದ್ದರು. ಆಗಲೂ ಅವರನ್ನು ಕಾಪಾಡಲಾಗಿತ್ತು. ಆದರೆ, ಮೂರನೇ ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದಾಗ ವರ್ಷಾ ಬದುಕುಳಿಯಲಿಲ್ಲ. 2012ರ ಅಕ್ಟೋಬರ್ 8 ಮುಂಬೈನ ತಮ್ಮ ಪ್ರಭು ಕುಂಜ್ ನಿವಾಸದಲ್ಲಿ ವರ್ಷಾ ಗನ್‌ನಿಂದ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಮಗಳು ಇಂಥದ್ದೊಂದು ಕಠಿಣ ನಿರ್ಧಾರ ತೆಗೆದುಕೊಂಡು, ಜೀವ ಬಿಟ್ಟಿದ್ದು ಆಶಾ ಭೋಸ್ಲೆಗೆ ದೊಡ್ಡ ನೋವು ನೋಡಿತ್ತು. ಇದ್ದೊಬ್ಬ ಮಗಳು ಈ ರೀತಿ ಆತಹತ್ಯೆ ಶರಣಾಗಿದ್ದು ಆಶಾಗೆ ತುಂಬಾ ವರ್ಷಗಳವರೆಗೂ ಭಾದಿಸಿತ್ತು.

ಮಗಳ ಸಾವಿನ ನಂತರ ಪುತ್ರನ ನಿಧನ

2012ರಲ್ಲಿ ಮಗಳು ವರ್ಷಾ ಅವರ ಸಾವಿನಿಂದ ಆಶಾ ಚೇತರಿಸಿಕೊಳ್ಳುವ ಮುನ್ನವೇ ಹಿರಿಯ ಮಗ ಹೇಮಂತ್ ಭೋಸ್ಲೆ ಕೂಡ ಸಾನವನ್ನಪ್ಪಿದ್ದರು. ಆಗ ಅವರಿಗೆ 66 ವರ್ಷ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಹೇಮಂತ್ ಅವರು ಸ್ಕಾಟ್ಲೆಂಡ್‌ನಲ್ಲಿ ನಿಧನರಾಗಿದ್ದರು. ಹೇಮಂತ್ ಭೋಸ್ಲೆ ಅವರು ಹಲವಾರು ಮರಾಠಿ ಚಿತ್ರಗಳಿಗೆ ಸಂಗೀತ ಸಂಯೋಜಿಸಿದ್ದು, ಅವರ ಸಂಯೋಜನೆಯ 'ಶಾರದ ಸುಂದರ್' ಮತ್ತು 'ಯೆಯೂ ಕಾಶಿ ಪ್ರಿಯಾ' ಹಾಡುಗಳು ಬಹಳ ಜನ ಪ್ರಿಯವಾಗಿದ್ದವು. ಪುತ್ರನ ನಿಧನದಿಂದಾಗಿ ಆಶಾ ಭೋಸ್ಲೆ ಬಹಳ ನೊಂದಿದ್ದರು.

ಪ್ರಸಿದ್ಧ ಗಾಯಕಿ ಆಶಾ ಭೋಸ್ಲೆ ಅವರ ನಿಧನವು ಸಂಗೀತ ಲೋಕದಲ್ಲಿ ಅಪಾರ ಶೂನ್ಯತೆ ಉಂಟುಮಾಡಿದೆ. ಐಕಾನಿಕ್ ಗಾಯಕಿಯಾಗಿ ಅವರು ಕಟ್ಟಿದ ಅದ್ಭುತ ವೃತ್ತಿಜೀವನವು ಭಾರತದಲ್ಲಿ ಸಂಗೀತದ ಒಂದು ಯುಗವನ್ನೇ ರೂಪಿಸಿದೆ. ಅವರೊಂದಿಗೆ ವೈಯಕ್ತಿಕವಾಗಿ ಸಂವಾದ ನಡೆಸಿದ ನೆನಪುಗಳು ನನಗೆ ಸದಾ ಪ್ರೀತಿಪಾತ್ರ. ಅವರ ಕುಟುಂಬದವರು ಹಾಗೂ ಅನೇಕ ಅಭಿಮಾನಿಗಳಿಗೆ ಸಂತಾಪ ತಿಳಿಸುತ್ತೇನೆ.

ದ್ರೌಪದಿ ಮುರ್ಮು, ರಾಷ್ಟ್ರಪತಿ

ಸಂಗೀತ ಪ್ರೀಯರನ್ನು 8 ದಶಕಗಳ ಕಾಲ ರಂಜಿಸಿದ್ದ ಮಹಾನ್ ಗಾಯಕಿ ಆಶಾ ಭೋಸ್ಲೆ ಅವರ ನಿಧನದ ಸುದ್ದಿ ಕೇಳಿ ಅತ್ಯಂತ ದುಃಖವಾಗಿದೆ. ಅವರ ಧ್ವನಿಯ ಮೂಲಕ, ಅವರ ಕಲೆ ನಮ್ಮ ನಡುವೆ ಶಾಶ್ವತವಾಗಿ ಉಳಿಯುತ್ತದೆ. ಇಂತಹ ದುಃಖ ದ ಸಮಯದಲ್ಲಿ, ಅವರ ಕುಟುಂಬದವರು, ಪ್ರೀತಿಪಾತ್ರರು ಮತ್ತು ಅಭಿಮಾನಿಗಳಿಗೆ ನನ್ನ ಸಂತಾಪಗಳು.

ರಾಹುಲ್ ಗಾಂಧಿ, ಪ್ರತಿಪಕ್ಷ ನಾಯಕ

ಆಶಾ ಭೋಸ್ಲೆ ಅವರ ನಿಧನದೊಂದಿಗೆ, ಹಿನ್ನೆಲೆ ಗಾಯನದ ಒಂದು ಯುಗವು ಕೊನೆಗೊಳ್ಳುತ್ತದೆ. ಪೌರಾಣಿಕ ಬಹುಮುಖತೆ ಮತ್ತು ಸೊಬಗಿನ ಪ್ರತಿರೂಪವಾದ ಅವರ ವಿಶಿಷ್ಟ ಶೈಲಿಯ ಗಾಯನವನ್ನು ಪ್ರಪಂಚದಾದ್ಯಂತ ಲಕ್ಷಾಂತರ ಜನರು ಮೆಚ್ಚಿಕೊಂಡರು. ಅವರ ಕುಟುಂಬ, ಸ್ನೇಹಿತರು ಮತ್ತು ಅಸಂಖ್ಯಾತ ಅಭಿಮಾನಿಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಭಾರತಕ್ಕೆ ಮತ್ತು ಪ್ರಪಂಚದಾದ್ಯಂತದ ಸಂಗೀತ ಪ್ರಿಯರಿಗೆ ಇದು ಅತ್ಯಂತ ದುಃಖದ ದಿನ. ನಮಗೆ ಆಶಾ ಅವರು ಕುಟುಂಬದವರಿದ್ದಂತೆ. ಇಂದು ನಾವು ಅನುಭವಿಸಿರುವ ನಷ್ಟಕ್ಕೆ ಪದಗಳು ತುಂಬಾ ಚಿಕ್ಕದಾಗಿವೆ. ಒಂದು ಕ್ಷಣ ಹೃದಯ ಮೌನವಾಗುತ್ತದೆ. ಮರುಕ್ಷಣ, ಅವರು ನಮಗೆಲ್ಲರಿಗೂ ಉಡುಗೊರೆಯಾಗಿ ನೀಡಿದ ಅಸಂಖ್ಯಾತ ಮಧುರ ಹಾಡುಗಳ ಮೂಲಕ ಅವರು ಜೀವಂತವಾಗಿದ್ದಾರೆ ಎನಿಸುತ್ತದೆ.

ಸಚಿನ್ ತೆಂಡೂಲ್ಕರ್, ಮಾಜಿ ಕ್ರಿಕೆಟಿಗ



ಪ್ರಸಿದ್ಧ ಗಾಯಕಿ ಆಶಾ ಭೋಸ್ಲೆ ಅವರ ನಿಧನದಿಂದ ತೀವ್ರ ದುಃಖವಾಗಿದೆ. ಅವರು ಭಾರತೀಯ ಸಂಗೀತದಲ್ಲಿ ಬಹುಮುಖತೆಯನ್ನು ಮರು ವ್ಯಾಖ್ಯಾನಿಸಿದ್ದಾರೆ. ತಲೆಮಾರುಗಳಾದ್ಯಂತ ಅಸಂಖ್ಯಾತ ಮರೆಯಲಾಗದ ಹಾಡುಗಳಿಗೆ ತಮ್ಮ ಧ್ವನಿಯನ್ನು ನೀಡಿದ್ದಾರೆ ಮತ್ತು ಎಂದಿಗೂ ಮಸುಕಾಗದ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಅವರ ಕುಟುಂಬಕ್ಕೆ ನನ್ನ ಸಂತಾಪಗಳು. ಓಂ ಶಾಂತಿ.

ಡಿ.ಕೆ.ಶಿವಕುಮಾರ್, ಡಿಸಿಎಂ

ವಿಶ್ವವಾಣಿ ಬೆಂಗಳೂರು 13-04-2026 ಸೋಮವಾರ
@vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಮರದ ಬಟ್ಟಲು ಮತ್ತು ಮರೆಯದ ಪಾಠ

• ಎಸ್.ಎನ್.ಭಟ್. ಸೈಪಂಗಲ್ಲು

ತಂದೆ, ತಾಯಿ, ಎಂಟು ವರ್ಷದ ಮಗ ಮತ್ತು ಅಜ್ಜ ಇವರುಗಳಿದ್ದ ಒಂದು ಪುಟ್ಟ ಕುಟುಂಬವಿತ್ತು. ವಯೋಸಹಜವಾಗಿ ಅಜ್ಜನ ಕೈಗಳು ನಡುಗುತ್ತಿದ್ದವು, ಕಣ್ಣುಗಳು ಮಂಜಾಗಿದ್ದವು. ಊಟ ಮಾಡುವಾಗ ಅಜ್ಜನ ಕೈಯಿಂದ ಅನ್ನವು ಪದೇ ಪದೆ ತಟ್ಟೆ ಕೆಳಗೆ ಬಿದ್ದು ಚೆಲ್ಲುತ್ತಿತ್ತು, ಗಾಜಿನ ಲೋಟಗಳು ಒಡೆದುಹೋಗುತ್ತಿದ್ದವು.

ಇದರಿಂದ ಬೇಸತ್ತ ಮಗ ಮತ್ತು ಸೊಸೆ, ಅಜ್ಜನಿಗೆ ಊಟ ಮಾಡಲು ಮನೆಯ ಮೂಲೆಯಲ್ಲಿ ಒಂದು ಸಣ್ಣ ಮರದ ಮೇಜನ್ನು ಹಾಕಿಕೊಟ್ಟರು. ಅಜ್ಜ ಅಲ್ಲಿ ಒಬ್ಬರೇ ಕುಳಿತು ಊಟ ಮಾಡಬೇಕಿತ್ತು. ಅಷ್ಟೇ ಅಲ್ಲದೆ, ಗಾಜಿನ ತಟ್ಟೆ ಒಡೆಯುತ್ತಾರೆಂಬ ಕಾರಣಕ್ಕೆ ಅವರಿಗೆ ಒಂದು ಹಳೆಯ ಮರದ ಬಟ್ಟಲಿನಲ್ಲಿ ಊಟ ನೀಡಲಾರಂಭಿಸಿದರು. ಅಜ್ಜ ಕಣ್ಣೀರು ಹಾಕುತ್ತಾ ಒಬ್ಬರೇ ಕುಳಿತು ಊಟ ಮಾಡುತ್ತಿದ್ದರು.

ಒಂದು ದಿನ ಸಾಯಂಕಾಲ, ಆ ಮನೆಯ ಸಣ್ಣ ಮಗ ನೆಲದ ಮೇಲೆ ಕುಳಿತು ಮರದ ತುಂಡುಗಳಲ್ಲಿ ಏನನ್ನೋ ಕೆತ್ತುತ್ತಿರುವುದನ್ನು ಗಮನಿಸಿದ ತಂದೆ, ''ಏನು ಮಾಡುತ್ತಿದ್ದೀಯಾ ಮಗನೇ?'' ಎಂದು ಪ್ರೀತಿಯಿಂದ ಕೇಳಿದ.

ಆ ಮಗು ಮುಗ್ಧವಾಗಿ ಉತ್ತರಿಸಿತು: ''ನಾನು ನಿಮಗಾಗಿ ಮತ್ತು ಅಮ್ಮನಿಗಾಗಿ ಎರಡು ಮರದ ಬಟ್ಟಲುಗಳನ್ನು ತಯಾರು ಮಾಡುತ್ತಿದ್ದೇನೆ. ವಯಸ್ಸಾದಾಗ ನಿಮಗೆ ಇದರಲ್ಲಿಯೇ ಊಟ ಕೊಡಲು ಸುಲಭವಾಗುತ್ತದಲ್ಲವೇ?''.

ಮಗನ ಈ ಮಾತು ತಂದೆ-ತಾಯಿಯ ಎದೆಗೆ ಬಿದ್ದ ಚಾಕುವಿನಂತಾಯಿತು. ತಾವು ಇಂದು ಪೋಷಕರನ್ನು ನಡೆಸಿಕೊಳ್ಳುತ್ತಿರುವ ರೀತಿಯಲ್ಲೇ, ನಾಳೆ ತಮ್ಮ ಮಕ್ಕಳೂ ತಮ್ಮನ್ನು ನಡೆಸಿಕೊಳ್ಳುತ್ತಾರೆ ಎಂಬುದು ಅಂದು ಅವರಿಗೆ ಅರ್ಥವಾಯಿತು. ಅಂದೇ ಅವರು ಅಜ್ಜನನ್ನು ಮತ್ತೆ ತಮ್ಮ ಜತೆಯಲ್ಲೇ ಗೌರವಾದರಗಳೊಂದಿಗೆ ಕೂರಿಸಿಕೊಂಡು ಊಟ ಮಾಡಿಸಲು ಆರಂಭಿಸಿದರು.

ಈ ಕಥೆಯು ಕೇವಲ ಒಂದು ಘಟನೆಯಲ್ಲ, ಬದಲಾಗಿ ನಮ್ಮ ಬದುಕಿನ ಪ್ರತಿಬಿಂಬ. ನಾವು ನಮ್ಮ ಪೋಷಕರ ಅಸಹಾಯಕತೆಯನ್ನು 'ಮರದ ಬಟ್ಟಲಿನಂತೆ' ಕಡೆಗಣಿಸಿದರೆ, ಅದೇ ಸಂಸ್ಕೃತಿಯು ನಮ್ಮ ಮಕ್ಕಳ ಮೂಲಕ ನಮಗೇ ಮರಳಿ ಬರುತ್ತದೆ ಎಂಬ ಕಟುಸತ್ಯವನ್ನು ಇದು ನೆನಪಿಸುತ್ತದೆ. ವಯಸ್ಸಾದಾಗ ಪೋಷಕರು ನಮ್ಮ ಪಾಲಿಗೆ ಅಕ್ಷರಶಃ ಮಕ್ಕಳಂತೆಯೇ ಆಗಿಬಿಡುತ್ತಾರೆ. ಇದು ಕೇವಲ ದೈಹಿಕ ಅಗತ್ಯಕ್ಕಲ್ಲ, ನಮ್ಮೊಳಗಿನ ಸಂಸ್ಕಾರದ ಪರೀಕ್ಷೆಗಾಗಿ. ಆ ಪುಟ್ಟ ಬಾಲಕ ಮರದ ಬಟ್ಟಲು ಕೆತ್ತಿದಂತೆ, ನಾವು ಇಂದು ತೋರುವ ಅಸಡ್ಡೆ ನಾಳೆಯ ನಮ್ಮ ಭವಿಷ್ಯದ ಅಡಿಪಾಯವಾಗಬಾರದು. ಆದ್ದರಿಂದ, ಪೋಷಕರನ್ನು ಗೌರವದಿಂದ ಕಾಣುವುದು ಕೇವಲ ನಮ್ಮ ಕರ್ತವ್ಯವಲ್ಲ, ಅದು ನಮ್ಮ ಮುಂದಿನ ಪೀಳಿಗೆಗೆ ನಾವು ನೀಡುವ ಅತ್ಯಂತ ಶ್ರೇಷ್ಠವಾದ ಹಾಗೂ ಜೀವಂತವಾದ ಜೀವನ ಪಾಠವಾಗಿದೆ.

ಬದುಕು ಒಂದು ಸುಂದರ ವೃತ್ತ. ನಾವು ಎಲ್ಲಿಂದ ಆರಂಭಿಸುತ್ತೇವೆಯೋ, ಒಂದು ಹಂತದಲ್ಲಿ ಮತ್ತೆ ಅಲ್ಲಿಗೇ ಬಂದು ನಿಲ್ಲುತ್ತೇವೆ. ನಮ್ಮನ್ನು ಈ ಭೂಮಿಗೆ ತಂದು, ನಮ್ಮ ಪ್ರತಿ ಅಳುವಿಗೂ ಸ್ಪಂದಿಸಿ, ನಮ್ಮ ಅಂಬೆಗಾಲಿಗೊಂದು ಆಸರೆಯಾದವರು ನಮ್ಮ ಪೋಷಕರು. ಆದರೆ ಕಾಲ ಉರುಳಿದಂತೆ, ಪ್ರಕೃತಿಯ ನಿಯಮದಂತೆ ನಮಗೆ ಜನ್ಮ ನೀಡಿದವರೇ ನಮಗೆ ಮಕ್ಕಳಾಗುವ ಕಾಲವೊಂದು ಬರುತ್ತದೆ. ಇದು ಕೇವಲ ವಯಸ್ಸಿನ ಬದಲಾವಣೆಯಲ್ಲ, ಇದು ಭಾವನೆಗಳ ಮತ್ತು ಅವಲಂಬನೆಯ ಅದ್ಭುತ ಪಲ್ಲಟ.

ಒಂದು ಕಾಲದಲ್ಲಿ ನಮಗೆ ದಾರಿದೀಪವಾಗಿದ್ದವರು ಇಂದು ತಾವೇ ದಾರಿ ಮರೆಯಬಹುದು. ನಾವು ಹತ್ತಾರು ಬಾರಿ ಕೇಳಿದ ಪ್ರಶ್ನೆಗೆ ಅವರು ಅಂದು ಬೇಸರವಿಲ್ಲದೆ ಉತ್ತರಿಸಿದ್ದರು. ಇಂದು ಅವರ ಸರದಿ- ಅವರು ಇಂದು ಹೇಳಿದ ವಿಷಯವನ್ನೇ ನಾಳೆ ಮರೆಯಬಹುದು, ಹೇಳಿದ್ದನ್ನೇ ಪದೇ ಪದೆ ಹೇಳಬಹುದು. ಅವರ ನಡೆಯ ವೇಗ ಕಡಿಮೆಯಾಗಬಹುದು, ಕೈಗಳು ನಡುಗಬಹುದು. ಈ ಹಂತದಲ್ಲಿ ಅವರನ್ನು 'ವಯಸ್ಸಾದವರು' ಎಂದು ನೋಡುವ ಬದಲು 'ಎರಡನೇ ಬಾಲ್ಯದ ಮಕ್ಕಳು' ಎಂದು ನೋಡಿದಾಗ ನಮ್ಮಲ್ಲಿ ತಾಳ್ಮೆ ತಾನಾಗಿಯೇ ಮೂಡುತ್ತದೆ.

ಅನೇಕ ಬಾರಿ ನಾವು ನಮ್ಮ ಕೆಲಸದ ಒತ್ತಡದಲ್ಲಿ ಪೋಷಕರ ಈ ಅಸಹಾಯಕತೆಯನ್ನು ಒಂದು ಹೊರೆ ಎಂದು ಭಾವಿಸಿಬಿಡುತ್ತೇವೆ. ಆದರೆ ನೆನಪಿಡಿ, ಇಂದು ನಾವು ಗಳಿಸಿರುವ ಈ ಸುಖ, ಸಂಪತ್ತು ಮತ್ತು ಸ್ಥಾನಮಾನಗಳ ಹಿಂದೆ ಅವರ ಹಗಲಿರುಳಿನ ಪರಿಶ್ರಮವಿದೆ. ಅವರ ಸೇವೆಯನ್ನು ಮಾಡುವುದು ನಮಗೊಂದು ಕಷ್ಟದ ಕೆಲಸವಾಗಬಾರದು; ಬದಲಾಗಿ, ಅವರು ನಮಗಾಗಿ ಸುರಿಸಿದ ಬೆವರು ಮತ್ತು ತೋರಿದ ಅಪಾರ ಪ್ರೀತಿಗೆ ನಾವು ಸಲ್ಲಿಸುತ್ತಿರುವ ಪ್ರೀತಿಯ ಕೃತಜ್ಞತೆ ಇದಾಗಬೇಕು. ಅವರ ಮುಸ್ಸಂಜೆಯ ಬದುಕಿನಲ್ಲಿ ನಾವು ಅವರ ಕೈಹಿಡಿದು ನಡೆಸುವ ಕ್ಷಣಗಳೇ ಬದುಕಿನ ಅತ್ಯಂತ ಶ್ರೇಷ್ಠ ಕ್ಷಣಗಳು.

ವೃದ್ಧಾಪ್ಯದಲ್ಲಿ ಪೋಷಕರು ನಿರೀಕ್ಷಿಸುವುದು ನಿಮ್ಮ ಹಣವನ್ನಲ್ಲ, ಬದಲಾಗಿ ನಿಮ್ಮ ಪ್ರೀತಿಯ ಎರಡು ಮಾತುಗಳನ್ನು. ಇಂದಿನ ಡಿಜಿಟಲ್ ಯುಗದಲ್ಲಿ ಪಕ್ಕದಲ್ಲೇ ಇದ್ದರೂ ನಾವು ಮೊಬೈಲ್‌ನಲ್ಲಿ ಮುಳುಗಿರುತ್ತೇವೆ. ಆದರೆ ವಾರಕ್ಕೊಮ್ಮೆ ನೀಡುವ ಹಣಕ್ಕಿಂತ, ದಿನಕ್ಕೆ ಐದು ನಿಮಿಷ ಅವರ ಪಕ್ಕ ಕುಳಿತು ಕಣ್ಣಲ್ಲಿ ಕಣ್ಣಿಟ್ಟು ಮಾತಾಡುವುದಕ್ಕೆ ಹೆಚ್ಚಿನ ಶಕ್ತಿಯಿದೆ. ಒಂದು ದಿನ ಆ ಫೋನ್ ರಿಂಗ್ ಆಗುವುದು ನಿಂತುಹೋಗುತ್ತದೆ, ಅವರು ಕುಳಿತು ಮಾತಾಡುತ್ತಿದ್ದ ಆ ಜಾಗ ಬರಿದಾಗುತ್ತದೆ. ಆ ಶೂನ್ಯ ಆವರಿಸುವ ಮುನ್ನವೇ ಅವರಿಗೆ ಸಾಧ್ಯವಾದಷ್ಟು ಪ್ರೀತಿಯನ್ನು ನೀಡಿ.

ಹಿರಿಯರು ತಮಗೆ ನೋವಾದಾಗ ಅಥವಾ ಏನಾದರೂ ಬೇಕಾದಾಗ ನೇರವಾಗಿ ಕೇಳಲು ಹಿಂಜರಿಯುತ್ತಾರೆ. ತಾವು ಮಕ್ಕಳಿಗೆ ಭಾರವಾಗುತ್ತಿದ್ದೇವೆ ಎಂಬ ಕೀಳರಿಮೆ ಅವರನ್ನು ಕಾಡುತ್ತಿರುತ್ತದೆ. ಅಂಥ ಸಮಯದಲ್ಲಿ ಅವರ ಮನಸ್ಸನ್ನು ಓದುವ ಜವಾಬ್ದಾರಿ ನಮ್ಮದಾಗಬೇಕು. ಅವರು ಪ್ರೀತಿಯಿಂದ ಮಾಡಿದ ಸಣ್ಣ ಅಡುಗೆಯನ್ನು ಮೆಚ್ಚುವುದು ಅಥವಾ ಅವರು ಹೇಳುವ ಹಳೆಯ ಕಥೆಗಳನ್ನು ಮೊದಲ ಬಾರಿ ಕೇಳುವಂತೆ ಕುತೂಹಲದಿಂದ ಆಲಿಸುವುದು ಅವರಿಗೆ ಜಗತ್ತಿನ ಅತಿ ದೊಡ್ಡ ಸಮಾಧಾನವನ್ನು ನೀಡುತ್ತದೆ. ಅವರ ಅಸ್ತಿತ್ವವೇ ನಮ್ಮ ಬದುಕಿನ ಶಕ್ತಿ ಎಂಬುದನ್ನು ಅವರಿಗೆ ಪದೇ ಪದೆ ನೆನಪಿಸುತ್ತಿರಬೇಕು.

ನಾವು ನಮ್ಮ ಪೋಷಕರನ್ನು ಹೇಗೆ ನಡೆಸಿಕೊಳ್ಳುತ್ತೇವೆಯೋ, ಅದೇ ಸಂಸ್ಕಾರವನ್ನು ನಮ್ಮ ಮಕ್ಕಳು ಕಲಿಯುತ್ತಾರೆ. ಮನೆಯಲ್ಲಿ ಹಿರಿಯರಿದ್ದರೆ ಅದು ಕೇವಲ ನಾಲ್ಕು ಗೋಡೆಗಳಲ್ಲ, ಅದೊಂದು ಮೌಲ್ಯಗಳ ಪಾಠಶಾಲೆ. ನಾವು ನಮ್ಮ ಹೆತ್ತವರನ್ನು ಅಸಡ್ಡೆಯಿಂದ ನೋಡಿದರೆ, ನಾಳೆ ನಮ್ಮ ಮಕ್ಕಳೂ ನಮ್ಮನ್ನು ಅದೇ ರೀತಿ ನಡೆಸಿಕೊಳ್ಳಬಹುದು ಎಂಬ ಸತ್ಯ ನಮಗೆ ತಿಳಿದಿರಲಿ. ಪೋಷಕರ ಆಶೀರ್ವಾದದ ಹಸ್ತ ನಮ್ಮ ತಲೆಯ ಮೇಲಿರುವವರೆಗೆ ನಮ್ಮ ಬದುಕಿಗೆ ಯಾವುದೇ ವಿಘ್ನಗಳು ಬರುವುದಿಲ್ಲ.

ಜೀವನದಲ್ಲಿ ಕಳೆದುಕೊಂಡ ಎಲ್ಲವನ್ನೂ ಮತ್ತೆ ಗಳಿಸಬಹುದು, ಆದರೆ ಕಳೆದುಕೊಂಡ ಪೋಷಕರನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ನಾಳೆ ಸಮಯ ಸಿಕ್ಕಾಗ ಮಾತಾಡೋಣ ಎಂಬ ಮುಂದೂಡಿಕೆ ಬೇಡ. ಇಂದೇ ಅವರ ಹತ್ತಿರ ಕುಳಿತು ಮಾತಾಡಿ, ಅವರ ಕೈಹಿಡಿದು ಸಮಾಧಾನ ನೀಡಿ. ಅವರು ಬದುಕಿದ್ದಾಗ ನೀಡುವ ಒಂದು ಸಣ್ಣ ಮೃದುವಾದ ಮಾತು, ಅವರು ಹೋದ ಮೇಲೆ ಸುರಿಸುವ ನೂರು ಹನಿ ಕಣ್ಣೀರಿಗಿಂತಲೂ ಶ್ರೇಷ್ಠವಾದುದು. ಅವರ ಮುಸ್ಸಂಜೆಯ ಬದುಕಿಗೆ ನಾವು ಬೆಳಕಾಗೋಣ.



ಲಾಗೋಮ್: ಹಿತ-ಮಿತ ಬದುಕಿನ ಸುಂದರಪಥ..!

• ಹೊಸ್ಮನೆ ಮುತ್ತು

ಇಂದಿನ ಧಾವಂತದ ಬದುಕಿನಲ್ಲಿ ಎಲ್ಲಾ ಇದ್ದರೂ, ಯಾವುದೂ ಸಾಲದು ಎಂಬ ಹಪಾಹಪಿ. ಒಂದು ಕಡೆ ಅತಿಯಾಗಿ ಗಳಿಸುವ ಹಂಬಲ ಹಾಗೂ ವೇಗದ ಅಬ್ಬರವಿದ್ದರೆ, ಮತ್ತೊಂದೆಡೆ ಅತೃಪ್ತಿಯಿಂದ ಎಲ್ಲವನ್ನೂ ತ್ಯಜಿಸುವ ತುಡಿತ. ಈ ಎರಡು ಅತಿರೇಕಗಳ ನಡುವೆ, ಅತಿಯಾದ ಆಕಾಂಕ್ಷೆಯೂ ಅಲ್ಲದ, ಸಂಪೂರ್ಣ ನಿರ್ಲಕ್ಷ್ಯವೂ ಸಲ್ಲದ, ಸಮತೋಲನದ ಬದುಕನ್ನು ಕಂಡುಕೊಳ್ಳುವ ಹದವರಿತ ಜೀವನಶೈಲಿಯೇ ಸ್ವೀಡನ್ ಮೂಲದ 'ಲಾಗೋಮ್' (Lagom).

'ಲಾಗೋಮ್' ಎನ್ನುವುದು ಕೇವಲ ಒಂದು ಪದವಲ್ಲ; ಅದು ಇಡೀ ಬದುಕಿನ ಸಾರವನ್ನೇ ಅಡಗಿಸಿಕೊಂಡಿರುವ ಸ್ವೀಡನ್‌ನ ವಿಶಿಷ್ಟ ಜೀವನಧರ್ಮ. ಅಲ್ಲಿನ ಜನರ ಅಪಾರ ನೆಮ್ಮದಿಯ ರಹಸ್ಯವೂ ಇದೇ ಆಗಿರುವುದರಿಂದಲೇ, ವಿಶ್ವದ ಸಂತೋಷದಾಯಕ ದೇಶಗಳ ಪಟ್ಟಿಯಲ್ಲಿ ಸ್ವೀಡನ್ ಸದಾ ಅಗ್ರಸ್ಥಾನದಲ್ಲಿರುತ್ತದೆ.

ಕೇವಲ ಕೆಲಸಕ್ಕಾಗಿ ಬದುಕದೆ, ಕುಟುಂಬ ಮತ್ತು ಹವ್ಯಾಸಗಳಿಗೂ ಅಷ್ಟೇ ಪ್ರಾಮುಖ್ಯ ನೀಡುವುದು, ಕಚೇರಿಯ ಕೆಲಸವನ್ನು ಅಲ್ಲೇ ಮುಗಿಸಿ ಮನೆಗೆ ಬರುವುದು ಅಪ್ಪಟ ಲಾಗೋಮ್ ಶೈಲಿ. ಸತತವಾಗಿ ಬಿಡುವಿಲ್ಲದೆ ದುಡಿಯುವುದರಿಂದ ಕೆಲಸದ ದಕ್ಷತೆ ಕಡಿಮೆಯಾಗುವುದಲ್ಲದೆ, ಮಾನಸಿಕ ಬಳಲಿಕೆಯೂ ಉಂಟಾಗುತ್ತದೆ. ಆದ್ದರಿಂದಲೇ ಸ್ವೀಡನ್ ಜನರು ಕೆಲಸದ ನಡುವೆ 'ಫಿಕಾ' ಎಂಬ ಕಾಫಿ ವಿರಾಮವನ್ನು ತೆಗೆದುಕೊಳ್ಳುತ್ತಾರೆ. ದಿನಕ್ಕೆರಡು ಬಾರಿ ಸಹೋದ್ಯೋಗಿಗಳೊಂದಿಗೆ ಕಳೆಯುವ ಈ ಸಮಯ ಸೋಮಾರಿತನವಲ್ಲ, ಬದಲಿಗೆ ಉತ್ಪಾದಕತೆಯನ್ನು ಹೆಚ್ಚಿಸುವ ಮತ್ತು ಮನಸ್ಸನ್ನು ಚೈತನ್ಯಗೊಳಿಸುವ ಸಾಧನವಾಗಿದೆ.

ಆರ್ಥಿಕ ಹಾಗೂ ಭೌತಿಕ ವಿಷಯಗಳಲ್ಲೂ ಲಾಗೋಮ್ ಶಿಸ್ತು ತರುತ್ತದೆ. ನಮಗೆ ಬೇಕಿರುವಷ್ಟು ವಸ್ತುಗಳನ್ನು ಮಾತ್ರವೇ ಖರೀದಿಸುವುದು, ಆಡಂಬರವಿಲ್ಲದ ಗುಣಮಟ್ಟದ ವಸ್ತುಗಳಿಗೆ ಆದ್ಯತೆ ನೀಡುವುದು ಇದರ ಉದ್ದೇಶ. ಇದು ದುಂದುವೆಚ್ಚದಿಂದ ಉಂಟಾಗುವ ಆರ್ಥಿಕ ಸಂಕಷ್ಟಗಳನ್ನು ತಡೆಯುತ್ತದೆ. 'ಅಗತ್ಯವಿರುವಷ್ಟನ್ನೇ ಬಳಸಿ, ಹೆಚ್ಚುವರಿ ಬೇಡ' ಎನ್ನುವ ಈ ಪರಿಕಲ್ಪನೆಯು ಸಂಪನ್ಮೂಲಗಳ ಸಂರಕ್ಷಣೆಯ ತಿರುಳಾಗಿದೆ. ಆಹಾರದ ವಿಷಯಕ್ಕೆ ಬಂದರೆ, ಇದು ಹೊಟ್ಟೆಬಿರಿಯುವಂತೆ ತಿನ್ನುವುದೂ ಅಲ್ಲ ಅಥವಾ ಹಸಿವಿನಿಂದ ಇರುವುದೂ ಅಲ್ಲ; ದೇಹಕ್ಕೆ ಎಷ್ಟು ಅಗತ್ಯವೋ ಅಷ್ಟು ಪೌಷ್ಟಿಕ ಆಹಾರವನ್ನು ಹಿತಮಿತವಾಗಿ ಸೇವಿಸುವುದಾಗಿದೆ. ಇಲ್ಲಿ ಆಹಾರದ ತ್ಯಾಜ್ಯವನ್ನು ಕಡಿಮೆ ಮಾಡುವುದಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆಯಲ್ಲದೆ, ಉಳಿದ ಆಹಾರದ ಸದುಪಯೋಗವನ್ನು "Life giving powers of leftovers' ಎಂದು ಗೌರವಿಸಲಾಗುತ್ತದೆ.

ಮನೆ ಹಾಗೂ ಕೆಲಸದ ಸ್ಥಳವು ಆಡಂಬರರಹಿತವಾಗಿ, ಸ್ವಚ್ಛವಾಗಿ ಮತ್ತು ಕಣ್ಣಿಗೆ ತಂಪು ನೀಡುವ ವಿನ್ಯಾಸದಿಂದ ಕೂಡಿರಬೇಕು ಎಂಬುದು ಲಾಗೋಮ್ ತತ್ವ. ಇದು ಅತಿಯಾದ ವಸ್ತುಗಳನ್ನಿಟ್ಟುಕೊಳ್ಳುವ 'ಮ್ಯಾಕ್ಸಿಮಲಿಸಂ'ಗಿಂತ ಶಾಂತ ಹಾಗೂ ಶೂನ್ಯತೆಯನ್ನು ಪ್ರತಿಪಾದಿಸುವ 'ಮಿನಿಮಲಿಸಂ'ಗಿಂತ ಬೆಚ್ಚಗಿನ ಅನುಭವ ನೀಡುತ್ತದೆ. ಆಡಂಬರವೂ ಇಲ್ಲ; ಖಾಲಿತನವೂ ಇಲ್ಲ. ಇನ್ನು ಸಂಬಂಧಗಳ ವಿಷಯದಲ್ಲಿಯೂ ಲಾಗೋಮ್ ಅತಿ ಮುಖ್ಯ. ಯಾರ ಮೇಲೂ ಅತಿಯಾಗಿ ಅವಲಂಬಿತವಾಗದೆ ಅಥವಾ ಅತಿಯಾದ ದೂರವನ್ನೂ ಕಾಯ್ದುಕೊಳ್ಳದೆ, ಎಲ್ಲರೊಂದಿಗೂ ಆರೋಗ್ಯಕರ ಗಡಿಗಳನ್ನು ಕಾಯ್ದುಕೊಳ್ಳುತ್ತಾ ವಾರಾಂತ್ಯಗಳನ್ನು ಕುಟುಂಬದೊಂದಿಗೆ ಆನಂದವಾಗಿ ಕಳೆಯುವುದನ್ನು ಇದು ಕಲಿಸುತ್ತದೆ.

ಲಾಗೋಮ್‌ನ ಹಾದಿಯನ್ನು ಹಿಡಿದಾಗ ನಮ್ಮ ಮನಸ್ಸಿನ ಮೇಲಿನ ಒತ್ತಡ ಕಡಿಮೆಯಾಗುತ್ತದೆ. 'ಇನ್ನೂ ಬೇಕು' ಎನ್ನುವ ಹಪಾಹಪಿಯ ಬದಲು 'ಇರುವುದು ಸಾಕಷ್ಟಿದೆ' ಎನ್ನುವ 'ತೃಪ್ತಭಾವ' ಮೂಡುತ್ತದೆ. ಇದು ನಮಗೆ ಆರ್ಥಿಕ ಶಿಸ್ತು ನೀಡುವುದಲ್ಲದೆ, ಮಾನಸಿಕ ನೆಮ್ಮದಿಯನ್ನೂ ಹೆಚ್ಚಿಸುತ್ತದೆ. ಸಾಮಾಜಿಕವಾಗಿ ಎಲ್ಲರನ್ನೂ ಸಮನಾಗಿ ಕಾಣುವ ಮತ್ತು ಗೌರವಿಸುವ ಮನೋಭಾವ ಬೆಳೆಯುತ್ತದೆ. ಈ ಸಮತೋಲನದ ಪರಿಕಲ್ಪನೆ ಭಾರತೀಯರಿಗೆ ಹೊಸದೇನಲ್ಲ. ಭಗವದ್ಗೀತೆಯ 'ಸ್ಥಿತಪ್ರಜ್ಞತೆ', ಬೌದ್ಧಧರ್ಮದ 'ಮಧ್ಯಮ ಮಾರ್ಗ', ಜೈನರ 'ಅಪರಿಗ್ರಹ' ಎಲ್ಲವೂ ಲಾಗೋಮ್ ತತ್ವಕ್ಕೆ ಸಂವಾದಿಯಾಗಿವೆ. ದಾರ್ಶನಿಕ ಡಿವಿಜಿ ಅವರು 'ಅತಿ ಬೇಡವೆಲ್ಲಿಯುಂ' ಎಂದು ಎಚ್ಚರಿಸಿದರೆ, ಸಂಸ್ಕೃತ ಸುಭಾಷಿತವು 'ಅತಿಸರ್ವತ್ರ ವರ್ಜಯೇತ್' ಎನ್ನುತ್ತದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ 'ಇನ್ನೂ ಹೆಚ್ಚು, ಇನ್ನೂ ವೇಗ' ಎಂಬ ಮಾಯೆಯಲ್ಲಿ ಸುಸ್ತಾಗಿರುವ ನಮಗೆ ಲಾಗೋಮ್ ಅತ್ಯಂತ ಪ್ರಸ್ತುತವಾಗಿದೆ. ಒಟ್ಟಾರೆಯಾಗಿ, ಲಾಗೋಮ್ ಎಂದರೆ 'ಪರಿಪೂರ್ಣತೆ'ಯನ್ನು ಹುಡುಕುವುದಲ್ಲ, ಬದಲಾಗಿ ಇರುವುದರಲ್ಲಿಯೇ ಪೂರ್ಣತೆಯನ್ನು ಅನುಭವಿಸುವುದು. ಇಲ್ಲಿ ಐಶ್ವರ್ಯದ ಅಮಲಿಲ್ಲ, ಕೊರತೆಯ ವ್ಯಥೆಯಿಲ್ಲ; ಕೇವಲ ಸರಿಯಾದ ಪ್ರಮಾಣದ ಸಮತೋಲನವಿದೆ. ಆತಂಕ ಮತ್ತು ಖಿನ್ನತೆಯಿಂದ ದೂರವಿರಲು ಈ ಸರಳ ಜೀವನಶೈಲಿ ಸಹಕಾರಿ...

ಹಾಸ್ಯ-ಲಾಸ್ಯ

ಆತ್ಮಹತ್ಯೆ-ಅಪಾರ್ಥ

ಬಾವಿಕಟ್ಟೆಯ ಕಲ್ಲಿನ ಸಂದಿನ ನೆರಳಿನಲ್ಲಿ ಹಾವು ತಣ್ಣಗೆ ಮಲಗಿತ್ತು. ಅಲ್ಲಿಗೆ ಕಪ್ಪೆಯೊಂದು ಕುಪ್ಪಳಿಸಿಕೊಂಡು ಬಂದಿದ್ದನ್ನು ನೋಡಿದ ಹಾವು, ಅದನ್ನು ಮಾತನಾಡಿಸೋಣ ಅಂದುಕೊಂಡು ತಾನಿದ್ದ ಜಾಗದಿಂದ ಹೊರಬಂತು. ಅದು ತನ್ನನ್ನು ತಿನ್ನಲು ಬರುತ್ತಿದೆ ಎಂದೇ ಅಪಾರ್ಥ ಮಾಡಿಕೊಂಡ ಕಪ್ಪೆ, ನಡುಗುವ ದನಿಯಲ್ಲೇ, 'ನೀನೊಬ್ಬ ಮೋಸಗಾರ' ಎಂದಿತು.

ಅದಕ್ಕೆ ಹಾವು, 'ಅಯ್ಯೋ ದೇವರೇ, ಯಾಕಿಂಥ ಸುಳ್ಳು ಹೇಳುವೆ? ನಿನಗೆ ನಾನೆಲ್ಲಿ ಮೋಸ ಮಾಡುತ್ತಿರುವೆ?' ಎಂದು ಕೇಳಿತು.

ಆಗ ಕಪ್ಪೆ, 'ಇಲ್ಲ, ಇಲ್ಲ. ಹೀಗೆ ಗಿಲೀಟು ಮಾಡಿಕೊಂಡು ಮಾತನಾಡುತ್ತಲೇ ನನ್ನ ಹತ್ತಿರ ಬಂದು ನೀನು ತಿಂದುಬಿಡುವೆ. ನೀನು ಮೋಸಗಾರನೇ ಸರಿ' ಎಂದು ಹೇಳುತ್ತಾ ಬಾವಿಗೆ ಹಾರಿತು.

ಇದನ್ನು ಕಂಡ ಹಾವು, 'ಛೇ! ಇದೆಂಥಾ ವಿಚಿತ್ರ. ಇಷ್ಟಕ್ಕೆಲ್ಲಾ ಯಾರಾದ್ರೂ ಹೀಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡ್ಕೋತಾರಾ?' ಎಂದು ಗೊಣಗುತ್ತಾ, ವಿನಾಕಾರಣ ಪಾಪಪ್ರಜ್ಞೆಯಲ್ಲಿ ನರಳತೊಡಗಿತು...!

ಚಿತ್ತವಿಹಾರ

ಕನಸಿನ ಪಯಣ

• ಬಿ.ವಿ. ಹಿರೇಮಠ, ಸಿಂದಗಿ

ಬೆಳಗಿನ ಸೂರ್ಯನ ಕಿರಣದಂತೆ
ಮೂಡಲಿ ಹೊಸದೊಂದು ಆಶೆ,
ಬಾಳ ಹಾದಿಯಲಿ ಗುರಿಯ ತಲುಪಲು
ಇರಲಿ ಸದಾ ಹಂಬಲದ ಭಾಷೆ...

ಸೋಲು ಗೆಲುವಿನ ಸುಳಿಯ ನಡುವೆ
ಧೃತಿಗೆಡದೆ ಸಾಗಲಿ ಹೆಜ್ಜೆ,
ಶ್ರಮದ ಹಾದಿಯಲಿ ಬೆವರಿನ ಹನಿಗಳು
ಗೆಲುವಿಗೆ ಹಾಕಲಿ ಗೆಜ್ಜೆ...

ಕತ್ತಲೆ ಆವರಿಸಿದ ರಾತ್ರಿಯಲ್ಲೂ
ನಕ್ಷತ್ರದಂತೆ ನೀ ಮಿನುಗು,
ಕಲ್ಲು ಮುಳ್ಳಿನ ಹಾದಿಯ ನಡುವೆ
ಹೂವಿನಂತೆಯೇ ನೀ ನಗು...

ಬದುಕಿನ ಪುಸ್ತಕದ ಪ್ರತಿ ಪುಟದಲ್ಲೂ
ಬರೆಯಲಿ ಸಾಹಸದ ಕಥೆ,
ನಿನ್ನ ಗುರಿ ತಲುಪುವ ಹಾದಿಗೆ
ಇರಲಿ ಆತ್ಮವಿಶ್ವಾಸದ ಜತೆ...

ಭಾವಗಳ ದೀಪ, ಮೌನದ ಹಾದಿ

• ಡಾ. ಮೈತ್ರಿ ಭಟ್, ವಿಟ್ಲ

ಅಕ್ಷರದ ಜತೆಗಿನ ಒಡನಾಟ ಎನ್ನುವುದು ಒಂದು ಭಾವನಾತ್ಮಕ ಸಂಬಂಧವಿದ್ದಂತೆ. ಅದರಲ್ಲೂ ಅಕ್ಷರಗಳನ್ನು ಪೋಣಿಸ ಹೊರಟಾಗ ಭಾವಕೋಶವನ್ನೇ ಕೇಂದ್ರವಾಗಿರಿಸಿಕೊಂಡು ಬರೆಯುವುದಿದೆಯಲ್ಲ ಅದು ಒಂದು ಸವಾಲಿನ ಕೆಲಸವೇ ಸರಿ. ಪ್ರತಿ ಅಕ್ಷರವ ಹೊಸೆಯುವ ಮುನ್ನವೂ ಒಂದಷ್ಟು ಭಾವನಾತ್ಮಕ ಜಾಗರೂಕತೆ ಅವಶ್ಯ.

ಹೇಳಹೊರಟಿರುವ ವಿಚಾರವನ್ನು ಇನ್ನೊಂದು ಮನಸ್ಸಿಗೆ ಆಪ್ತ ಎನಿಸುವಂತೆ, ಕುತೂಹಲ ಹುಟ್ಟಿಸುವಂತೆ ಹೇಳಬೇಕಾದರೆ ಅಷ್ಟೇ ನಯ, ನಾಜೂಕು, ಹಾಗೆಯೇ ಭಾವಸ್ಪಂದನೆ ಬೇಕು.

ಬದುಕು ಹೂವಿನ ಹಾಸಿಗೆಯಲ್ಲ, ಹಾಗೆಂದು ಗುಲಾಬಿಯು ಮುಳ್ಳಿನ ನಡುವೆ ನಳನಳಿಸಿದರೂ ಅದನ್ನು ಮುಡಿಗೇರಿಸಿ ಸಂತಸಪಡದಿರಲು ಸಾಧ್ಯವೇ? ಅದರ ಸೆಳೆತವೇ ಅಂಥದ್ದು. ಅಂತೆಯೇ ಕೆಲವು ಪುಸ್ತಕಗಳು ಕೂಡಾ ಅವುಗಳ ಶೀರ್ಷಿಕೆಯ ಮೂಲಕವೇ ಮನಸೆಳೆದು, ಕೈಗೆತ್ತಿಕೊಂಡಾಗ ಅವುಗಳ ಮುನ್ನುಡಿ, ಬೆನ್ನುಡಿಗಳು ಮತ್ತಷ್ಟು ಆಕರ್ಷಕ ಎನಿಸಿ, ಕುತೂಹಲ ಹುಟ್ಟಿಸಿ, ಓದಿಗೆ ತೊಡಗಿಸುತ್ತವೆ. ಇಂದಿನ ಮೊಬೈಲ್ ಯುಗದಲ್ಲಿ ಮೊಬೈಲುಗಳಷ್ಟೇ ವೇಗವಾಗಿ ಭಾವನೆ, ಮನಸ್ಸು, ಯೋಚನೆಗಳು ಬದಲಾಗುತ್ತಿರುವಾಗ ಯುವ ಮನಸ್ಸುಗಳನ್ನು ಮುಟ್ಟಬೇಕಾದ, ತಟ್ಟಬೇಕಾದ ಅನಿವಾರ್ಯತೆ ಬರಹದ ಸ್ವರೂಪವನ್ನೇ ಬದಲಾಯಿಸಿದೆ.

ಈ ಬದುಕು ಮಾತಾಗುವ ಮೌನ, ಮಾತಾಗದ ಮೌನ, ಮೌನದ ಮಾತು, ಮಾತಿನ ಮೌನದ ನಡುವಿನ ಓಲಾಟದಂತೆ... ಹೇಳಬೇಕೆನಿಸಿದುದೆಲ್ಲವ ಹೇಳಲಾಗದೆ, ಹೇಳಬೇಕಿರುವುದನ್ನು ಹೇಳಲಾಗದೆ ಸಾಗುವುದಲ್ಲವೇ? ಮಾತನ್ನು ನಮ್ಮ ಬದುಕಿನ ಕಕ್ಷೆಯ ಮಿತಿಯೊಳಗೆ ಓದುವ ನಾವು ಮೌನವನ್ನು ಓದಲು ಕಲಿತಿಲ್ಲ. ಸಂಬಂಧವು ಬಾಂಧವ್ಯ ಆಗಬೇಕಾದ ಅನಿವಾರ್ಯತೆ ಮತ್ತು ಅವಶ್ಯಕತೆ ಅರಿತಂದು ಬಾಳು ಸಾರ್ಥಕ. ಆದರೆ ಯಾವ ಓದು ಕೂಡಾ ಅತ್ತ ಪ್ರೇರೇಪಿಸದೇ ಹೋದಲ್ಲಿ... ಹೇಳಿಯೂ ಅರಿತುಕೊಳ್ಳದೇ ಹೋದಲ್ಲಿ ಹೇಗೆ? ಎನ್ನುವುದು ಕಾಡುವ ಪ್ರಶ್ನೆ. ಬಾಂಧವ್ಯ ಎಂದಾಗ 'ನಾನು' ಬದಲಾದರೆ ಸಾಲದು, 'ನಾವು' ಬದಲಾಗಬೇಕು. ಸಂಬಂಧ ಹಾಗೂ ಬಾಂಧವ್ಯದ ನಡುವಿರುವ ಅಂತರವೇ ಇದು

ಒಂದು ಸಂಬಂಧ ಬೆಳೆದು ಗಟ್ಟಿಯಾಗಲು ವರುಷಗಳು ಬೇಕಾದರೂ ಅದನ್ನು ಮುರಿಯಲು ಕೆಲವೊಮ್ಮೆ ಕ್ಷಣ ಸಾಕಾಗುತ್ತದೆ. ಆದರೆ ಸಂಬಂಧವನ್ನು ಜೀವಂತವಾಗಿಡಬಲ್ಲ ಮಾತೇ ಮೌನಕ್ಕೆ ಸರಿಯಲು ಕಾರಣವಾದರೂ ಏನು? ಅದೆಷ್ಟೋ ಹರಟುತಿದ್ದ ಮನಗಳು ಒಮ್ಮೆಗೇ ಮೌನಕ್ಕೆ ಶರಣಾದರೆ ಮಾತುಗಳು ಸಡಿಲಾಗಿ ಸಂಬಂಧಗಳು ಶಿಥಿಲವಾಗಲು ಮುಂದಾದಾಗ ಕೊಂಡಿ ಕಳಚಿಕೊಂಡರೆ ಅಲ್ಲಿಗೇ ಬಾಂಧವ್ಯ ಕೊನೆಯಾಗುವುದೇ? ಸಂಬಂಧವೇ ಬೇರೆ, ಬಾಂಧವ್ಯದ ಬೆಸುಗೆಯೇ ಬೇರೆ. ಅವೆರಡೂ ಒಂದೇ ಅಲ್ಲ. ಬಾಂಧವ್ಯದ ಬೆಸುಗೆ ಹೊಸೆಯದ ಅದೆಷ್ಟೋ ಸಂಬಂಧಗಳು ನಮ್ಮ ಸುತ್ತಮುತ್ತಲಿವೆ. ಪ್ರತಿಯೊಬ್ಬರ ಆಯ್ಕೆಯೂ ಭಿನ್ನ. ಪ್ರತಿ ಮನಸ್ಸಿನ ಯೋಚನಾ ಲಹರಿಯೂ ಭಿನ್ನ. ಭಾವ ಲಹರಿಯನ್ನಂತೂ ಅರಿಯುವುದು ಕಷ್ಟ. ಮನಸಿನ ಮಾತುಗಳನ್ನು ಹೇಳಿಕೊಳ್ಳದೇ ಇರಲು ಕಾರಣಗಳೇನು? ಅದರಲ್ಲೂ ಅನನ್ಯ ಹಾಗೂ ಅನುಪಮವಾದ ಬಾಂಧವ್ಯದಲ್ಲಿ ಕೂದಲೆಳೆಯ ಅಂತರವೂ ಬೃಹತ್ ಗೋಡೆಯ ಸೃಷ್ಟಿಗೂ ಕಾರಣವಾಗಬಹುದು. ಅಂತರಂಗದ ಕೋಣೆಯ ಕೀಲಿ ತೆರೆಯದೆ 'ನಿನ್ನ ನಾ ನನ್ನ ನೀ ಅರಿತು, ನೀನು ನಾನಾಗಿ ನಾನು ನೀನಾಗಿ ಆನು ತಾನಾಗಿ ತಾನು ತಾವಾಗಿ' ಅಂತರಂಗದ ಭಾವ ಬೆರೆತಾಗ ಮಾತ್ರ ಸಂಬಂಧವು ಬಾಂಧವ್ಯವಾದೀತು. ಕನಸ ಹೂ ಅರಳೀತು, ಮನಸ ಹೂ ಹೊಸೆದೀತು.

ಇಂಥ ಭಾವ ಬಾಂಧವ್ಯದ ಹೊಸಿಲಲಿ ನಿಂತು, ಅದನ್ನು ದಾಟಿ ಮುನ್ನಡೆಯಬೇಕಾದ ಬಾಳ ಪುಟಗಳಲಿ ಬಾಂಧವ್ಯದ ಕೊಂಡಿ ಸಡಿಲಾಗದಂತೆ, ಭಾವುಕತೆ ಕನಸಾಗದಂತೆ ಬಾಳನ್ನು ಮುನ್ನಡೆಸಬೇಕಾದ ದಾರಿದೀವಿಗೆ ಎಂಬಂತೆ ಮನಸ್ಸನ್ನು ಚಿಂತನೆಗೆ ಒಡ್ಡುವ, ಕತ್ತಲಲಿ ತೊಳಲಾಡುವ ಅಂತರಂಗವನ್ನು ಬೆಳಕಿನ ದಿಶೆಯತ್ತ ತೆರೆದಿಡುವ ಓದು ನಮ್ಮದಾಗಲಿ...

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಚುನಾವಣೆಯ ದಿನ ತನ್ನ ಅಮೂಲ್ಯವಾದ ಕರ್ತವ್ಯವನ್ನು ನಿಭಾಯಿಸುವವನು (4)
4. ಚಿಕ್ಕ ಮಕ್ಕಳು ಮಂಡಿಯೂರಿ ನಡೆಯುವಿಕೆ (4)
7. ಕನಿಕರಪಡು ಎಂದರ್ಥ (3)
8. ಕಲಹಕ್ಕೆ ಎಡೆಮಾಡಿಕೊಟ್ಟತೇ ಈ ಚರ್ಚೆ? (3)
10. ಮುಖದ ಮೇಲಿರಬೇಕಾದ ನಗು (2)
11. ನಿದ್ದೆಯಲ್ಲಿ ತನಗೆ ತಾನೇ ಮಾತನಾಡಿಕೊಳ್ಳು (5)
13. ಅಮ್ಮನಿಗೆ ಹೀಗೆಯೂ ಹೇಳಬಹುದು (2)
14. ವಿಮಾನದಲ್ಲಿ ಹೋಗುವಾಗ ಮಾಡಿಕೊಂಡ ಅರಿಕೆ (3)
16. ಬಳಿ ಬಂದಾಗ ಹೇಳಿದ ಉಪಯೋಗ (3)
18. ಹಸುವಿನೊಂದಿಗೆ ಬಂದಿರುವ ಶಿವ (4)
19. ಮೃದುವಾದ ಕೆನ್ನೆ (4)

ಮೇಲಿಂದ ಕೆಳಕ್ಕೆ

2. ಹನುಮಂತನ ಇನ್ನೊಂದು ಹೆಸರು ತಲೆಕೆಳಗಾಗಿದೆ (4)
3. ವಜ್ರ, ಮಾಣಿಕ್ಯ ಮೊದಲಾದ ಬೆಲೆಬಾಳುವ ಮಣಿ (2)
5. ಬೆಳಗು ನೋಡಿ ಇದೇನು ಅಚ್ಚರಿ (3)
6. ಸವೆದುಹೋದುದು ಇಲ್ಲಿ ತಲೆಕೆಳಗಾಗಿದೆ (4)
7. ಚಿತ್ತಕ್ಕೆ ಅರಿವಾಗುವಿಕೆ (5)
9. ಕರಾವಳಿ ಜಿಲ್ಲೆಯೊಂದರ ಹ್ರಸ್ವರೂಪ ತಲೆಕೆಳಗಾದ ಬಾಗಿಲು (2)
12. ಮನಸು ಅರಳಿಸಿದ ಹೂವು (2)
13. ಸಾಮಾನ್ಯವಾಗಿ ಸಿಗುವುದಲ್ಲ, ವಿರಳತೆ (4)
15. ದೇವಾಲಯದ ಸಭಾಮಂಟಪ (4)
16. ಕಪ್ಪು ಹಲಗೆಯ ಮೇಲೆ ಬರೆಯಲು ಬಳಸುವ ಮೃದುವಾದ ಕಲ್ಲಿನ ಸಾಧನ (3)
17. ತಲೆಕೆಳಗಾದ ಕಬ್ಬಿಣದ ಉಪಕರಣ (2)

ಸರಿಯುತ್ತರಗಳು

ರಾಮಚರಿತ ಮಾನಸ: ಹನುಮಂತ ಮತ್ತು ಮೈನಾಕ ಪರ್ವತ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸಾಗರೋಲ್ಲಂಘನ ಮಾಡಲು ಯೋಚಿಸುತ್ತಾ ಕುಳಿತಿದ್ದ ಹನುಮಂತನು ಜಾಂಬವಂತನ ನುಡಿಗಳಿಂದ ಜಾಗೃತಗೊಂಡು ಮಹಾಪರ್ವತದಂಥ ರೂಪ ತಾಳಿ 'ಜೈ ಶ್ರೀರಾಮ್' ಎಂದು ಸಿಂಹನಾದ ಮಾಡುತ್ತಾ ಆಕಾಶಕ್ಕೆ ಚಿಮ್ಮಿದನು. ಅವನ ವೇಗಕ್ಕೆ ಸಮುದ್ರದ ನೀರು ಎರಡು ಭಾಗವಾಗುತ್ತಿತ್ತು, ಮೋಡಗಳು ಚೆಲ್ಲಾಪಿಲ್ಲಿಯಾಗುತ್ತಿದ್ದವು. ನೂರು ಯೋಜನಗಳ ಆ ಅಗಾಧ ಸಮುದ್ರವನ್ನು ದಾಟಿ ಸೀತೆಯಿರುವ ಲಂಕೆಯನ್ನು ಸೇರುವುದೊಂದೇ ಅವನ ಮನಸ್ಸಿನಲ್ಲಿದ್ದ ಏಕೈಕ ಸಂಕಲ್ಪ.

ಹನುಮಂತನು ಆಕಾಶಮಾರ್ಗದಲ್ಲಿ ಹಾರಿ ಹೋಗುತ್ತಿರುವುದನ್ನು ಕೆಳಗಿನಿಂದ ಸಮುದ್ರರಾಜನು ಕಂಡನು. ಶ್ರೀರಾಮನ ಪೂರ್ವಜರಾದ ಸಗರ ಚಕ್ರವರ್ತಿಗಳಿಂದಲೇ ತನಗೆ ಅಸ್ತಿತ್ವ ಸಿಕ್ಕಿದೆ ಎಂಬ ಕೃತಜ್ಞತೆ ಸಮುದ್ರರಾಜನಿಗಿತ್ತು. ರಾಮಕಾರ್ಯಕ್ಕಾಗಿ ಹೊರಟಿರುವ ಈ ಮಹಾವೀರ ಹನುಮಂತನಿಗೆ ಏನಾದರೂ ಸಹಾಯ ಮಾಡಬೇಕು, ಇಷ್ಟು ದೂರದ ಪಯಣದಲ್ಲಿ ಅವನಿಗೆ ದಣಿವಾರಿಸಿಕೊಳ್ಳಲು ಒಂದು ಆಸರೆ ನೀಡಬೇಕು ಎಂದು ಸಮುದ್ರರಾಜನು ಬಯಸಿದನು. ಅವನು ಸಮುದ್ರದ ಆಳದಲ್ಲಿ ಅಡಗಿದ್ದ ಮೈನಾಕ ಪರ್ವತವನ್ನು ಕರೆದು ಆಜ್ಞಾಪಿಸಿದನು: ''ಎಲೈ ಮೈನಾಕನೇ, ನೀನು ಮೇಲೆದ್ದು ಬಾ. ಪವನಪುತ್ರನು ಸುದೀರ್ಘ ಪಯಣದಲ್ಲಿದ್ದಾನೆ. ಅವನಿಗೆ ವಿಶ್ರಮಿಸಲು ನಿನ್ನ ಶಿಖರಗಳನ್ನು ಹಾಸಿಗೆಯಂತೆ ಹಾಸಿಕೊಡು''.

ಸಮುದ್ರರಾಜನ ಆಜ್ಞೆಯಂತೆ, ಇದ್ದಕ್ಕಿದ್ದಂತೆ ಸಮುದ್ರದ ಮಧ್ಯದಲ್ಲಿ ಬೃಹತ್ ಚಿನ್ನದ ಪರ್ವತವೊಂದು ತಲೆಯೆತ್ತಿ ನಿಂತಿತು. ಅದರ ಸುಂದರವಾದ ಶಿಖರಗಳು, ತಂಪಾದ ನೆರಳು

ನೀಡುವ ವೃಕ್ಷಗಳು ಮತ್ತು ಸವಿಯಾದ ಹಣ್ಣು-ಹಂಪಲುಗಳು ಯಾರನ್ನಾದರೂ ಒಂದು ಕ್ಷಣ ನಿಲ್ಲುವಂತೆ ಮಾಡುವಂತಿದ್ದವು. ಮೈನಾಕನು ಹನುಮಂತನ ಮುಂದೆ ಪ್ರತ್ಯಕ್ಷನಾಗಿ ಅತ್ಯಂತ ವಿನಯದಿಂದ ಪ್ರಾರ್ಥಿಸಿದನು: ''ಓ ಮಹಾವೀರನೇ, ನೀನು ವಾಯುದೇವನ ಪುತ್ರ. ವಾಯುದೇವನು ಹಿಂದೆ ಇಂದ್ರನು ಪರ್ವತಗಳ ರೆಕ್ಕೆಗಳನ್ನು ಕತ್ತರಿಸುವಾಗ ನನ್ನನ್ನು ರಕ್ಷಿಸಿದ ಉಪಕಾರಿ. ಆ ಸಂಬಂಧದಿಂದ ನೀನು ನನಗೆ ಅಣ್ಣನ ಸಮಾನ. ದಯವಿಟ್ಟು ನನ್ನ ಮೇಲೆ ಕುಳಿತು ಸ್ವಲ್ಪ ವಿಶ್ರಾಂತಿ ಪಡೆ. ಈ ರುಚಿಯಾದ ಹಣ್ಣುಗಳನ್ನು ಭಕ್ಷಿಸಿ ನಿನ್ನ ದಣಿವಾರಿಸಿಕೊಂಡು ನಂತರ ನಿನ್ನ ಪಯಣ ಮುಂದುವರಿಸು''.

ಆಕಾಶದಲ್ಲಿ ಮಿಂಚಿನಂತೆ ಸಾಗುತ್ತಿದ್ದ ಹನುಮಂತನಿಗೆ ಮೈನಾಕನ ಆಹ್ವಾನ ಕೇಳಿಸಿತು. ಕಣ್ಣು ಹಾಯಿಸಿದರೆ ಅಲ್ಲಿ ಅದ್ಭುತವಾದ ವಿಶ್ರಾಂತಿ ತಾಣವಿದೆ, ಹಸಿವು ತಣಿಸಲು ಹಣ್ಣುಗಳಿವೆ. ಆದರೆ ಹನುಮಂತನ ಹೃದಯದಲ್ಲಿ ಮೈನಾಕನ ಸುಂದರ ಶಿಖರಗಳಿಗಿಂತ ಹೆಚ್ಚಾಗಿ, ಅಶೋಕವನದಲ್ಲಿ ಕಣ್ಣೀರು ಹಾಕುತ್ತಿರುವ ಮಾತೆ ಸೀತೆಯ ಮುಖ ಮತ್ತು ರಾಮನ ಕಳವಳ ತುಂಬಿತ್ತು. ಹನುಮಂತನು ಒಂದು ಕ್ಷಣವೂ ಅಲ್ಲಿ ನಿಲ್ಲಲಿಲ್ಲ. ಈ ಸಂದರ್ಭದಲ್ಲಿನ ರಾಮಚರಿತಮಾನಸದ (ಸುಂದರಕಾಂಡ) ಪ್ರಸಿದ್ಧ ದೋಹಾ ಹೀಗಿದೆ:

ಹನುಮಾನ ತೆಹಿ ಪರಸಾ ಕರ ಪುನಿ ಕೀನ್ಹ ಪ್ರಣಾಮ ।
ರಾಮ ಕಾಜು ಕೀನ್ಹೇಂ ಬಿನು ಮೋಹಿ ಕಹಾಂ ಬಿಶ್ರಾಮ ॥

ಅಂದರೆ, ಹನುಮಂತನು ಮೈನಾಕ ಪರ್ವತವನ್ನು ಪ್ರೀತಿಯಿಂದ ಸ್ಪರ್ಶಿಸಿದನು ಮತ್ತು ಪರ್ವತಕ್ಕೆ ಭಕ್ತಿಯಿಂದ ಪ್ರಣಾಮ ಮಾಡಿದನು. ''ನಿನ್ನ ಪ್ರೀತಿಗೆ ನಾನು ಚಿರಋಣಿ. ಆದರೆ ಪ್ರಭು ಶ್ರೀರಾಮನ ಕಾರ್ಯವನ್ನು ಪೂರ್ಣಗೊಳಿಸುವ ಮೊದಲು ನನಗೆ ವಿಶ್ರಾಂತಿ ಪಡೆಯುವ ಅಧಿಕಾರ ಎಲ್ಲಿದೆ? ವಿಶ್ರಾಂತಿ ಎನ್ನುವುದು ಗುರಿ ತಲುಪಿದ ನಂತರ ಸಿಗಬೇಕಾದ ಫಲವೇ ಹೊರತು, ಹಾದಿಯಲ್ಲಿ ಪಡೆಯುವ ಸುಖವಲ್ಲ''. ಹನುಮಂತನು ಮೈನಾಕನ ಆತಿಥ್ಯವನ್ನು ತಿರಸ್ಕರಿಸಲಿಲ್ಲ, ಬದಲಿಗೆ ಅತ್ಯಂತ ಸಂಸ್ಕಾರಯುತವಾಗಿ ನಡೆದುಕೊಂಡನು. ಒಂದು ಕ್ಷಣವೂ ವಿಳಂಬ ಮಾಡದೆ, ತನ್ನ ವೇಗವನ್ನು ಹೆಚ್ಚಿಸಿಕೊಂಡು ಲಂಕೆಯತ್ತ ಮುನ್ನುಗ್ಗಿದನು. ಹನುಮಂತನ ಈ ನಿಷ್ಠೆಯನ್ನು ಕಂಡು ದೇವತೆಗಳು ಆಕಾಶದಿಂದ ಹೂಮಳೆ ಸುರಿಸಿದರು. ಮೈನಾಕ ಪರ್ವತವೂ ಆ ಮಹಾವೀರನ ಕರ್ತವ್ಯಪ್ರಜ್ಞೆಗೆ ಮಾರುಹೋಗಿ ಅವನ ಪಯಣವನ್ನು ಹರಸುತ್ತಾ ನಿಂತಿತು.

ಬದುಕಿನ ಹಾದಿಯಲ್ಲಿ ಮೈನಾಕನಂಥ ಅನೇಕ ಆಕರ್ಷಣೆಗಳು, ಸುಖಗಳು ಮತ್ತು ವಿಶ್ರಾಂತಿಯ ಆಮಿಷಗಳು ನಮಗೆ ಎದುರಾಗುತ್ತವೆ. ಅವು ಕೆಟ್ಟದ್ದಲ್ಲದಿದ್ದರೂ, ನಮ್ಮ ಗುರಿಯನ್ನು ವಿಳಂಬಗೊಳಿಸುತ್ತವೆ. ಗುರಿ ಮುಟ್ಟುವವರೆಗೂ ಮನಸ್ಸನ್ನು ವಿಚಲಿತಗೊಳಿಸಿಕೊಳ್ಳದೆ ಮತ್ತು ಪ್ರೀತಿಯಿಂದ ಕರೆದವರಿಗೆ ಗೌರವ ನೀಡುತ್ತಲೇ ಕರ್ತವ್ಯಕ್ಕೆ ಮೊದಲ ಆದ್ಯತೆ ನೀಡಬೇಕು. ಆಗ ಮಾತ್ರ ನಾವು ಅಂದುಕೊಂಡ ಗುರಿಯನ್ನು ತಲುಪಲು ಸಾಧ್ಯ. ಕರ್ತವ್ಯದ ಸಮಯದಲ್ಲಿ ಅನಗತ್ಯ ಆತಿಥ್ಯವನ್ನು ಸ್ವೀಕರಿಸಿ ಮುಲಾಜಿಗೆ ಬೀಳಬಾರದು. ಅದನ್ನು ವಿನಯದಿಂದ ನಿರಾಕರಿಸುವ ಸಮಯಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕನ್ನಡಿಗ ಆಯುಷ್ ಶೆಟ್ಟಿಗೆ ಬೆಳ್ಳಿ ಪದಕ

ಬೀಜಿಂಗ್: ಇಲ್ಲಿ ಭಾನುವಾರ ನಡೆದ ಏಷ್ಯನ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಭಾರತದ ಭರವಸೆಯ ಆಟಗಾರ, ಕನ್ನಡಿಗ ಆಯುಷ್ ಶೆಟ್ಟಿ ಚಿನ್ನದ ಪದಕದಿಂದ ವಂಚಿತರಾಗಿ ಬೆಳ್ಳಿ ಪದಕವನ್ನಷ್ಟೇ ಗೆಲ್ಲುವಲ್ಲಿ ಯಶಸ್ವಿಯಾದರು. ಚೀನಾದ ಆಟಗಾರ ಶಿಯು ಕ್ವಿ ಅವರು ಆಯುಷ್ ಶೆಟ್ಟಿ ಅವರನ್ನು 8-21, 10-21 ನೇರ ಸೆಟ್‌ಗಳಿಂದ ಸೋಲಿಸಿ ಬಂಗಾರದ ಪದಕವನ್ನು ಗೆದ್ದುಕೊಂಡರು. 1965ರ ಬಳಿಕ ಭಾರತೀಯ ಆಟಗಾರನೋರ್ವ ಏಷ್ಯನ್ ಬ್ಯಾಡ್ಮಿಂಟನ್ ಫೈನಲ್‌ಗೇರಿದ್ದುದು ಇದೇ ಮೊದಲ ಬಾರಿಯಾಗಿತ್ತು. ಹಾಗಾಗಿ ಈ ಬಾರಿ ಆಯುಷ್ ಶೆಟ್ಟಿ ಫೈನಲ್ ಪಂದ್ಯದಲ್ಲಿ ಚಿನ್ನದ ಪದಕ ಗೆದ್ದು ಹೊಸ ಇತಿಹಾಸವೊಂದನ್ನು ಸೃಷ್ಟಿಸುತ್ತಾರೆ ಎಂದು ಭಾರತದ ಕ್ರೀಡಾಪ್ರೇಮಿಗಳು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದರು. ಒಟ್ಟು 42 ನಿಮಿಷಗಳ ಅವಧಿಯ ಫೈನಲ್ ಪಂದ್ಯದ ಆರಂಭದ ಸರ್ವ್‌ನಿಂದಲೂ ಚೀನಾ ಆಟಗಾರನೆದುರು ಪ್ರತಿರೋಧ ತೋರಲು 21ರ ಹರೆಯದ ಆಯುಷ್ ಶೆಟ್ಟಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ಪಂದ್ಯದಲ್ಲಿಡೀ ಹಿಡಿತ ಕಳೆದುಕೊಂಡು ಪೈಪೋಟಿ ನೀಡಲು ಸಾಧ್ಯವಾಗದೆ, ಮೊದಲ ಸೆಟ್‌ನಲ್ಲಿ ಬಹುದೊಡ್ಡ ಅಂತರದಿಂದ ಸೋತರು. 2ನೇ ಸೆಟ್‌ನಲ್ಲಿ ಮತ್ತೆ ಪುಟಿದೇಳಲು ಆಯುಷ್ ಶೆಟ್ಟಿಗೆ ಚೀನಾದ ಶಿಯು ಕ್ವಿ ಅವಕಾಶವನ್ನೇ ಕೊಡಲಿಲ್ಲ.

ಬೋಲ್ಟ್ ದಾಖಲೆ ಮುರಿದ ಗೌಟ್



ಸಿಡ್ನಿ: 18 ವರ್ಷದ ಆಸ್ಟ್ರೇಲಿಯಾ ಓಟಗಾರ ಗೌಟ್ ಗೌಟ್ 200 ಮೀಟರ್ ಓಟವನ್ನು 19.67 ಸೆಕೆಂಡ್‌ಗಳಲ್ಲಿ ಓಡುವ ಮೂಲಕ ಜಮೈಕಾದ ದಿಗ್ಗಜ ಅಥ್ಲೀಟ್ ಉಸೇನ್ ಬೋಲ್ಟ್ ಅವರ ದಾಖಲೆಯನ್ನು ಮುರಿದಿದ್ದಾರೆ. ಬೌಲ್ಟ್ 19.93 ಸೆಕೆಂಡುಗಳಲ್ಲಿ 200 ಮೀ. ಓಡಿ ದಾಖಲೆ ನಿರ್ಮಿಸಿದ್ದರು. ಭಾನುವಾರ ನಡೆದ ಆಸ್ಟ್ರೇಲಿಯನ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಪ್ರಬಲ ಸ್ಪರ್ಧೆಯಲ್ಲಿ ಐಡನ್ ಮರ್ಫಿ 19.88 ಸೆಕೆಂಡ್‌ಗಳಲ್ಲಿ ದ್ವಿತೀಯ ಸ್ಥಾನ ಪಡೆದರೆ, ಕ್ಯಾಲಬ್ ಲಾ 20.21 ಸೆಕೆಂಡ್‌ಗಳಲ್ಲಿ 3ನೇ ಸ್ಥಾನ ಪಡೆದರು. ಗೌಟ್ ಕಳೆದ ಎರಡು ಋತುಗಳಲ್ಲಿ ಆಸ್ಟ್ರೇಲಿಯಾದ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಅತ್ಯಂತ ನಿಕಟ ಪ್ರದರ್ಶನ ನೀಡಿದ ಯುವ ಕ್ರೀಡಾಪಟುಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಜೂನಿಯರ್ ಶ್ರೇಯಾಂಕಗಳ ಮೂಲಕ ಮೇಲೇರಿದ ಅವರು, ಬಲವಾದ ಪ್ರದರ್ಶನಗಳು ಮತ್ತು ರಾಷ್ಟ್ರೀಯ ವಯೋಮಾನದ ದಾಖಲೆಗಳ ಸರಣಿಯೊಂದಿಗೆ ಆರಂಭದಲ್ಲಿಯೇ ತಮ್ಮ ಸಾಮರ್ಥ್ಯವನ್ನು ಅವರು ಸಾಬೀತುಪಡಿಸಿಕೊಂಡಿದ್ದರು.

ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದ ಕೊಹ್ಲಿ, ಸಾಲ್ಟ್, ಪಾಟೀದಾರ್ | ಆರ್‌ಸಿಬಿ ಬೃಹತ್ ಮೊತ್ತ

ಮುಂಬೈಗೆ 241 ರನ್ ಗೆಲುವಿನ ಗುರಿ

ಮುಂಬೈ: ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಟೂರ್ನಿಯಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ತಂಡ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 240 ರನ್‌ಗಳಿಸಿದ್ದು, ಅತಿಥೇಯ ಮುಂಬೈಗೆ 241 ರನ್‌ಗಳ ಗುರಿ ನೀಡಿದೆ.

ಆರ್‌ಸಿಬಿ ಪರ ಆರಂಭಿಕರಾದ ಫಿಲ್ ಸಾಲ್ಟ್ (78), ವಿರಾಟ್ ಕೊಹ್ಲಿ (50), ನಾಯಕ ರಜತ್ ಪಾಟೀದಾರ್ (53) ಅರ್ಧ ಶತಕ ಗಳಿಸಿದರೆ, ಟಿಮ್ ಡೇವಿಡ್ ಅಜೇಯ 34 ರನ್ ಗಳಿಸಿ ಮುಂಬೈಗೆ ಬೃಹತ್ ಗುರಿ ನೀಡಲು ನೆರವಾದರು.

ಆರ್‌ಸಿಬಿ ಪರ ಇನ್ನಿಂಗ್ಸ್ ಆರಂಭಿಸಿದ ವಿರಾಟ್ ಕೊಹ್ಲಿ- ಫಿಲ್ ಸಾಲ್ಟ್ ಮೊದಲ ವಿಕೆಟ್‌ಗೆ 120 ರನ್‌ಗಳ ಭರ್ಜರಿ ಜತೆಯಾಟ ಪ್ರದರ್ಶಿಸಿದರು. ಟೂರ್ನಿಯಲ್ಲಿ ಫಾರ್ಮ್ ಸಮಸ್ಯೆ ಎದುರಿಸಿದ್ದ ಫಿಲ್ ಸಾಲ್ಟ್ ಭಾನುವಾರ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದರು. 36 ಎಸೆತಗಳಲ್ಲಿ ತಲಾ 6 ಬೌಂಡರಿ, ಸಿಕ್ಸರ್‌ಗಳ ಸಹಿತ 78 ರನ್ ಗಳಿಸಿ ಶಾರ್ದೂಲ್ ಠಾಕೂರ್ ಬೌಲಿಂಗ್‌ನಲ್ಲಿ ಹಾರ್ದಿಕ್ ಪಾಂಡ್ಯಗೆ ಕ್ಯಾಚ್ ನೀಡಿದರು.

ಸಾಲ್ಟ್ ನಿರ್ಗಮಿಸಿದ ನಂತರ ಬಂದ ನಾಯಕ ರಜತ್ ಪಾಟೀದಾರ್ ಮೊದಲ ಎಸೆತದಲ್ಲೇ ಬೌಂಡರಿ ಸಿಡಿಸಿ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಕೊಹ್ಲಿ ಜತೆಗೂಡಿ ಅಬ್ಬರಿಸಿದ ಪಾಟೀದಾರ್ 2ನೇ ವಿಕೆಟ್‌ಗೆ 65 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ವಿರಾಟ್ ಕೊಹ್ಲಿ 38 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 50 ರನ್ ಗಳಿಸಿ 15ನೇ ಓವರ್‌ನಲ್ಲಿ ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಸೂರ್ಯಕುಮಾರ್ ಯಾದವ್‌ಗೆ ಕ್ಯಾಚ್ ನೀಡಿ ಔಟ್ ಆದರು. ಕೊಹ್ಲಿ ಬೆನ್ನಲ್ಲೇ ಪಾಟೀದಾರ್ ಕೂಡ ನಂತರದ ಓವರ್‌ನಲ್ಲಿ ಮಿಚೆಲ್ ಸ್ಯಾಂಟ್ನರ್ ಬೌಲಿಂಗ್‌ನಲ್ಲಿ ತಿಲಕ್ ವರ್ಮಾಗೆ ಕ್ಯಾಚ್ ನೀಡಿದರು. ಆರ್‌ಸಿಬಿ ನಾಯಕ ಕೇವಲ 20 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸರ್‌ಗಳ ಸಹಿತ 53 ರನ್ ಗಳಿಸಿ ತಂಡದ ಮೊತ್ತವನ್ನು 200ರ ಸನಿಹ ತಂದು ಪೆವಿಲಿಯನ್ ಸೇರಿಕೊಂಡರು. ನಂತರ ಕ್ರೀಸ್‌ಗೆ ಆಗಮಿಸಿದ ಟಿಮ್ ಡೇವಿಡ್ ಕೊನೆಯ 4 ಓವರ್‌ಗಳಲ್ಲಿ ಅಬ್ಬರಿಸಿ 46 ರನ್ ಸೇರಿಸಿದರು. ಡೇವಿಡ್ 16 ಎಸೆತಗಳಲ್ಲಿ 2 ಬೌಂಡರಿ, 3 ಸಿಕ್ಸರ್‌ಗಳ ಸಹಿತ ಅಜೇಯ 34 ರನ್ ಗಳಿಸಿದರು. ಜಿತೇಶ್ 9 ಎಸೆತಗಳಲ್ಲಿ 10 ರನ್ ಗಳಿಸಿ ನಿರಾಶೆ ಮೂಡಿಸಿದರು. ಶೆಫರ್ಡ್ ಅಜೇಯ 2 ರನ್ ಗಳಿಸಿದರು.


ಫಿಲ್ ಸಾಲ್ಟ್


ರಜತ್ ಪಾಟೀದಾರ್

ವಿರಾಟ್ ಕೊಹ್ಲಿ

ವಿರಾಟ್ ಕೊಹ್ಲಿ ಹೊಸ ದಾಖಲೆ

ಭಾನುವಾರ ಮುಂಬೈ ವಿರುದ್ಧ ಇನಿಂಗ್ಸ್ ಆರಂಭಿಸಿದ ಆರ್‌ಸಿಬಿಯ ವಿರಾಟ್ ಕೊಹ್ಲಿ, 38 ಎಸೆತಗಳಲ್ಲಿ 50 ರನ್‌ಗಳನ್ನು ಸಿಡಿಸಿ, ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಎದುರು ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಎಂಬ ಮಹತ್ವದ ದಾಖಲೆಗೆ ಪಾತ್ರರಾಗಿದ್ದಾರೆ. ಅವರು ಕೆಎಲ್ ರಾಹುಲ್ ಅವರ ದಾಖಲೆಯನ್ನು ಮುರಿದಿದ್ದಾರೆ. ರಾಹುಲ್ ಮುಂಬೈ ಇಂಡಿಯನ್ಸ್ ಎದುರು 21 ಇನ್ನಿಂಗ್ಸ್‌ಗಳಿಂದ 977 ರನ್‌ಗಳನ್ನು ಗಳಿಸಿದ್ದಾರೆ.

ಪ್ರಸಿದ್ಧ್ ಮಾರಕ ಬೌಲಿಂಗ್, ಬಟ್ಲರ್, ಗಿಲ್ ಭರ್ಜರಿ ಆಟ

ತವರಲ್ಲಿ ಲಖನೌಗೆ ಮುಖಭಂಗ

ಗಿಲ್-ಬಟ್ಲರ್ ಉತ್ತಮ ಜತೆಯಾಟ.

ಲಖನೌ: ಕನ್ನಡಿಗ ಪ್ರದ್ಧ್ ಕೃಷ್ಣ ಅವರ ಮಾರಕ ಬೌಲಿಂಗ್, ಜಾಸ್ ಬಟ್ಲರ್ ಮತ್ತು ನಾಯಕ ಶುಭ್‌ಮನ್ ಗಿಲ್ ಅವರ ಆಕರ್ಷಕ ಅರ್ಧಶತಕಗಳ ನೆರವಿನಿಂದ ಗುಜರಾತ್ ಟೈಟಾನ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ತಂಡವನ್ನು 7 ವಿಕೆಟ್‌ಗಳಿಂದ ಭರ್ಜರಿಯಾಗಿ ಸೋಲಿಸಿದೆ. ಈ ಆವೃತ್ತಿಯ ಐಪಿಎಲ್‌ನಲ್ಲಿ ಗುಜರಾತ್ ತಂಡ ಆಡಿದ 4 ಪಂದ್ಯಗಳಲ್ಲಿ 2ರಲ್ಲಿ ಜಯಿಸಿ 4 ಅಂಕಗಳನ್ನು ಕಲೆ ಹಾಕಿ ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ. ಇದೇವೇಳೆ ಲಖನೌ ಸೂಪರ್ ಜೈಂಟ್ಸ್ ಅಷ್ಟೇ ಪಂದ್ಯಗಳಲ್ಲಿ 2 ಗೆಲುವು, 2 ಸೋಲುಗಳೊಂದಿಗೆ 4 ಅಂಕಗಳನ್ನು ಗಳಿಸಿರುವ ಲಖನೌ 6ನೇ ಸ್ಥಾನಕ್ಕಿಳಿದಿದೆ.

ಏಕನಾ ಕ್ರೀಡಾಂಗಣದಲ್ಲಿ ಭಾನುವಾರದಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಸೂಪರ್ ಜೈಂಟ್ಸ್ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿತು. ಇದನ್ನು ಬೆಂಬತ್ತಿದ ಗುಜರಾತ್ ಟೈಟಾನ್ಸ್ ತಂಡ ಇನ್ನೂ 8 ಎಸೆತಗಳು ಬಾಕಿ ಉಳಿದಿರುವಂತೆ 3 ವಿಕೆಟ್ ಕಳೆದುಕೊಂಡು ಜಯಭೇರಿ ಬಾರಿಸಿತು.

ಕನ್ನಡಿಗ ಪ್ರಸಿದ್ಧ್ ಕೃಷ್ಣ, ಮೊಹಮ್ಮದ್ ಸಿರಾಜ್ ಮತ್ತು ಅಶೋಕ್ ಶರ್ಮಾ ಅವರ ಮಾರಕ ಬೌಲಿಂಗ್ ದಾಳಿ ಎದುರು ಲಖನೌ ತಂಡ ರನ್ ಗಳಿಸಲು ಒದ್ದಾಡಿತು. ಐಡನ್ ಮಾರ್ಕ್ರಂ ಅವರು 21 ಎಸೆತಗಳಿಂದ 30 ರನ್ ಗಳಿಸಿದ್ದು ಬಿಟ್ಟರೆ, ಬೇರಾವ ಬ್ಯಾಟರ್‌ಗೂ ಸಹ 20 ರನ್ ಗಳಿಸಲು ಸಹ ಸಾಧ್ಯವಾಗಲಿಲ್ಲ. ಮಧ್ಯಮ ಕ್ರಮಾಂಕದಲ್ಲಂತೂ ಯಾವ ಬ್ಯಾಟರ್‌ಗಳಿಂದಲೂ ಉತ್ತಮ ಪ್ರದರ್ಶನ ಬರಲಿಲ್ಲ. ನಿಕೋಲಸ್ ಪೂರನ್ ನತ್ತು ನುಕುಲ್ ಚೌದರಿ ತಲಾ 18 ರನ್ ಗಳಿಸಿದರು. ಜಾರ್ಜ್ ಲಿಂಡೇ 16 ರನ್ ಗಳಿಸಿದರೆ, ಶಮಿ 12 ರನ್ ಗಳಿಸಿದರು. ಗುಜರಾತ್ ಪರ ಪ್ರಸಿದ್ಧ್ ಕೃಷ್ಣ ಅವರು 4 ವಿಕೆಟ್ ಗಳಿಸಿದರು. ಅವರು ಆಡಿದ 4 ಪಂದ್ಯಗಳಿಂದ 10 ವಿಕೆಟ್ ಗಳಿಸಿದ್ದು ಪರ್ಪಲ್ ಕ್ಯಾಪ್ ತಮ್ಮದಾಗಿಸಿಕೊಂಡಿದ್ದಾರೆ. ಗುರಿ ಬೆಂಬತ್ತಿದ ಟೈಟಾನ್ಸ್ ಪರ ಸಾಯಿ ಸುದರ್ಶನ್ 15 ರನ್ (14 ಬಾಲ್), ಗಿಲ್ 56 ರನ್ (40 ಬಾಲ್), ಜೋಸ್ ಬಟ್ಲರ್ 60 ರನ್ (37 ಬಾಲ್) ಗಳಿಸಿದರೆ, ವಾಷಿಂಗ್ಟನ್ ಸುಂದರ್ 21 (13 ಬಾಲ್), ತೆವಾಟಿಯಾ 10 ರನ್ (8 ಬಾಲ್) ಗಳಿಸಿ ಅಜೇಯರಾಗುಳಿದರು.

ಚೆನ್ನೈ ತಂಡದ ನಾಯಕ ಗಾಯಕ್ವಾಡ್‌ಗೆ ದಂಡ

ಚೆನ್ನೈ: ಶನಿವಾರ ನಡೆದಿದ್ದ 18ನೇ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್ ತಂಡ ಜಯ ಸಾಧಿಸಿದ್ದರೂ, ಪಂದ್ಯದ ವೇಳೆ ನಿಧಾನಗತಿಯ ಓವರ್ ರೇಟ್ ಕಾಯ್ದುಕೊಂಡಿದ್ದಕ್ಕಾಗಿ ಸಿಎಸ್‌ಕೆ ನಾಯಕ ರುತುರಾಜ್ ಗಾಯಕ್ವಾಡ್ ಅವರಿಗೆ 12 ಲಕ್ಷ ರು. ದಂಡ ವಿಧಿಸಲಾಗಿದೆ. ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ, ನಿಗದಿತ ಸಮಯದೊಳಗೆ ಓವರ್‌ಗಳನ್ನು ಪೂರ್ಣಗೊಳಿಸಲು ಚೆನ್ನೈ ತಂಡ ವಿಫಲವಾಯಿತು. ಐಪಿಎಲ್‌ನ ನೀತಿ ಸಂಹಿತೆಯ ಅಡಿಯಲ್ಲಿ ಇದು ಕನಿಷ್ಠ ಓವರ್ ರೇಟ್ ಅಪರಾಧವೆಂದು ಪರಿಗಣಿಸಲಾಗಿದೆ. ಐಪಿಎಲ್ ನಿಯಮದ ಪ್ರಕಾರ, ಪ್ರತಿ ತಂಡಗಳು 20 ಓವರ್‌ಗಳನ್ನು 1 ಗಂಟೆ 30 ನಿಮಿಷಗಳಲ್ಲಿ ಪೂರ್ಣಗೊಳಿಸಬೇಕು. ಒಂದು ವೇಳೆ ಇದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಂಡರೆ ಬೌಂಡರಿ ಲೈನ್‌ನಿಂದ ಒಬ್ಬ ಫೀಲ್ಡರ್‌ನನ್ನು ಕಡಿತ ಮಾಡಲಾಗುತ್ತದೆ, ಅಲ್ಲದೆ ನಾಯಕನಿಗೆ 12 ಲಕ್ಷ ರು. ದಂಡ ವಿಧಿಸಲಾಗುತ್ತದೆ.

5ನೇ ಗೆಲುವಿನತ್ತ ರಿಯಾನ್ ಪರಾಗ್ ಪಡೆಯ ಚಿತ್ತ | ತವರಲ್ಲಿ ಇಶಾನ್ ತಂಡಕ್ಕೆ ಗೆಲ್ಲುವ ಒತ್ತಡ

ಇಂದು ಹೈದರಾಬಾದ್-ರಾಜಸ್ಥಾನ್ ಪಂದ್ಯ

ಹೈದರಾಬಾದ್: ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಸೋಮವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಸನ್ ರೈಸರ್ಸ್ ಹೈದರಾಬಾದ್ ತಂಡವು ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ.

ಈಗಾಗಲೇ 4 ಪಂದ್ಯಗಳನ್ನು ಆಡಿರುವ ಹೈದರಾಬಾದ್ ತಂಡವು ಕೇವಲ 1 ಪಂದ್ಯದಲ್ಲಿ ಗೆದ್ದು, ಮೂರರಲ್ಲಿ ಸೋತು ಅಂಕಪಟ್ಟಿಯಲ್ಲಿ 2 ಅಂಕಗಳನ್ನಷ್ಟೇ ಗಳಿಸಿ 6ನೇ ಸ್ಥಾನದಲ್ಲಿದೆ. ಆದರೆ ಆಡಿದ 4 ಪಂದ್ಯವನ್ನೂ ಗೆದ್ದಿರುವ ರಾಜಸ್ಥಾನ ತಂಡವು 8 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ.

ಇಶಾನ್ ಕಿಶನ್ ನಾಯಕತ್ವದ ಹೈದರಾಬಾದ್ ತನ್ನ ಮೊದಲ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಸೋತಿತ್ತು. ಆದರೆ 2ನೇ ಪಂದ್ಯದಲ್ಲಿ ಅದು ಮತ್ತೆ ಪುಟಿದೆದ್ದು, ಕೋಲ್ಕತ್ತಾ ವಿರುದ್ಧ ಜಯ ಗಳಿಸಿತ್ತು. 3ನೇ ಪಂದ್ಯದಲ್ಲಿ ಲಖನೌ ವಿರುದ್ಧ ಅದು ಸೋತರೆ, 4ನೇ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋತಿತ್ತು.

ಈ ಬಾರಿಯ ಬಲಾಢ್ಯ ತಂಡ ಎನಿಸಿರುವ ರಾಜಸ್ಥಾನ್ ರಾಯಲ್ಸ್ ತನ್ನ ಪ್ರಥಮ ಪಂದ್ಯದಲ್ಲಿ ಚೆನ್ನೈ ವಿರುದ್ಧ ಗೆದ್ದು ಬೀಗಿದರೆ, 2ನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಜಯ ಸಾಧಿಸಿತ್ತು. 3ನೇ ಪಂದ್ಯದಲ್ಲಿ ರಾಜಸ್ಥಾನ ತಂಡವು ಮುಂಬೈ ವಿರುದ್ಧ ಮತ್ತು 4ನೇ ಪಂದ್ಯದಲ್ಲಿ ಶನಿವಾರದಂದು ಆರ್‌ಸಿಬಿ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಗೆಲುವವನ್ನು ಕಂಡಿತು. ಇಶಾನ್ ಕಿಶನ್ ನಾಯಕತ್ವದ ಎಸ್‌ಆರ್‌ಹೆಚ್ ಹಲವಾರು ಆಟಗಾರರು ಅಲಭ್ಯರಾದ ಕಾರಣ ಆರಂಭದಿಂದಲೇ ಹಿನ್ನಡೆ ಯನ್ನು ಕಂಡಿತು. ತಂಡದಲ್ಲಿರುವ ಟ್ರಾವಿಸ್ ಹೆಡ್, ಜಯದೇವ್ ಉನದ್ಕಟ್, ಅಭಿಷೇಕ್ ಶರ್ಮಾ, ನಿತೀಶ್ ರೆಡ್ಡಿ ಹೊರತುಪಡಿಸಿದರೆ ಯಾರಿಂದಲೂ ಉತ್ತಮ ಪ್ರದರ್ಶನ ಕಂಡುಬಂದಿಲ್ಲ.

ರಿಯಾನ್ ಪರಾಗ್ ನಾಯಕತ್ವದ ರಾಜಸ್ಥಾನ್ ತಂಡದಲ್ಲಿ ಈಗಾಗಲೇ ಜೋಫ್ರಾ ಆರ್ಚರ್, ಶಿಮ್ರಾನ್ ಹೆಟ್ಟಿಯರ್, ರವಿ ಬಿಷ್ಣೋಯಿ ಈ ಸಲದ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ವೈಭವ್ ಸೂರ್ಯವಂಶಿಯಂತೂ ತನಗೆ ದೊರೆತ ಅವಕಾಶಗಳನ್ನು ಉತ್ತಮವಾಗಿ ಬಳಸಿ ರನ್ ಮಳೆಯನ್ನೇ ಸುರಿಸಿ ಈ ಸಲದ ಐಪಿಎಲ್‌ನಲ್ಲಿ ಎಲ್ಲಾ ಕ್ರಿಕೆಟ್‌ಪ್ರೇಮಿಗಳ ಅಭಿಮಾನಕ್ಕೆ ಭಾಜನರಾಗಿದ್ದಾರೆ.

ತವರಿನಲ್ಲಿ ಪಂದ್ಯ ನಡೆಯುತ್ತಿರುವ ಕಾರಣ ಹೈದರಾಬಾದ್ ತಂಡದ ಮೇಲೆ ಒತ್ತಡ ಬಹಳಷ್ಟಿದೆ. ಆದರೆ ರಾಜಸ್ಥಾನ ತಂಡವು ಈಗಾಗಲೇ ಎಲ್ಲಾ ಪಂದ್ಯಗಳನ್ನು ಗೆದ್ದಿರುವ ಕಾರಣ ಈ ಪಂದ್ಯವನ್ನೂ ಗೆಲ್ಲುವ ಪೂರ್ತಿ ಆತ್ಮವಿಶ್ವಾಸವನ್ನೊಂದಿದೆ.

ವಿಟಾಕೀಸ್

ಬೆಂಗಳೂರು ಇನ್‌ನಲ್ಲಿ ಮರ್ಡರ್ ಮಿಸ್ಟರಿ

ಬೆಂಗಳೂರಿನಲ್ಲಿ ನಡೆದ ಒಂದಷ್ಟು ನೈಜ ಘಟನೆಗಳನ್ನು ಆಧರಿಸಿ ಬೆಂಗಳೂರು ಇನ್ ಚಿತ್ರ ನಿರ್ಮಾಣವಾಗಿದೆ. ರೋಚಕ ಮರ್ಡರ್ ಮಿಸ್ಟರಿ, ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿಯ ಬೆಂಗಳೂರು ಇನ್ ಚಿತ್ರ ಟ್ರೇಲರ್‌ನಲ್ಲಿಯೇ ಕುತೂಹಲ ಮೂಡಿಸಿದೆ. ನಟ ಚೇತನ್ ಅಹಿಂಸಾ ಚಿತ್ರದ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ನಿರ್ಮಾಪಕ ವೆಂಕಟೇಶ್ ಮೂರ್ತಿ ಕರೋನಾ ಸಮಯದಲ್ಲಿ ಸಿನಿಮಾ ಮಾಡಬೇಕೆಂದು ಹೇಳುತ್ತಿದ್ದರು. ಅವರಲ್ಲಿ ಸಿನಿಮಾ ಬಗ್ಗೆ ಇರುವ ಒಲವು, ಕಾಳಜಿ ನನಗೆ ಇಷ್ಟ ವಾಯಿತು. ಅವರು ಅಂದುಕೊಂಡಂತೆ ಈಗ ಬೆಂಗಳೂರು ಇನ್ ಸಿನಿಮಾ ನಿರ್ಮಾಣವಾಗಿದೆ. ಚಿತ್ರದ ಶೀರ್ಷಿಕೆಯೇ ಕುತೂಹಲ ಮೂಡಿಸುತ್ತದೆ. ಒಳ್ಳೆಯ ಕಂಟೆಂಟ್ ಇರುವ ಚಿತ್ರಗಳು ಗೆಲ್ಲುತ್ತವೆ, ಅಂತೆಯೇ ಈ ಚಿತ್ರದಲ್ಲಿಯೂ ಅದ್ಭುತ ಕಥೆ ಇದೆ. ಹಾಗಾಗಿ ಪ್ರೇಕ್ಷಕರು ಸಿನಿಮಾವನ್ನು ಕೈಹಿಡಿದು ಗೆಲ್ಲಿಸುತ್ತಾರೆ ಎಂಬ ನಂಬಿಕೆ ನನಗಿದೆ ಎಂದು ಚೇತನ್ ಅಹಿಂಸಾ ಭರವಸೆ ವ್ಯಕ್ತಪಡಿಸಿದರು. ಫುಡ್ ಡೆಲಿವರಿ ಏಜೆಂಟ್ ಸುತ್ತ ಸಾಗುವ ಕಥೆ ಇದಾಗಿದ್ದು, ಆಧುನಿಕ ನಗರದ ಅಂಧಕಾರವನ್ನು ಬಯಲಿಗೆಳೆಯುವ ಪ್ರಯತ್ನ ಈ ಚಿತ್ರದಲ್ಲಿದೆ. ಕಾರ್ತಿಕ್.ಕೆ.ಮೂರ್ತಿ ನಿರ್ದೇಶನದ ಚಿತ್ರ ಇದಾಗಿದ್ದು, ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿದ್ದಾರೆ. ಬಿಗ್‌ಬಾಸ್ ಖ್ಯಾತಿಯ ರಿಷಾ ಗೌಡ ಮತ್ತು ಅನುಷಾ ರೈ ನಾಯಕಿಯರಾಗಿ ಬಣ್ಣ ಹಚ್ಚಿದ್ದಾರೆ. ಹಿರಿಯ ನಟ ಶಶಿಕುಮಾರ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿಜ ಜೀವನದಲ್ಲಿ ನಡೆದ ಒಂದು ಘಟನೆ ಈ ಚಿತ್ರದ ಕಥೆ ಬರೆಯಲು ಸ್ಫೂರ್ತಿ ಯಾಯಿತು. ಈ ಸಿನಿಮಾದಲ್ಲಿ ಸಮಾಜಕ್ಕೆ ಒಳ್ಳೆಯ ಸಂದೇಶವಿದೆ. ಅದನ್ನು ಕಮರ್ಷಿಯಲ್ ಅಂಶಗಳನ್ನು ಬೆರೆಸಿ ಮನರಂಜನೆಯ ಮೂಲಕ ತೆರೆಗೆ ತರಲಾಗಿದೆ ಎಂದು ನಿರ್ದೇಶಕ ಕಾರ್ತಿಕ್ ಹೇಳಿದರು.

ಚಿತ್ರದಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಮನಸೆಳೆಯುವ ಪ್ರೇಮಕಥೆಯೂ ಇದೆ. ಬೆಂಗಳೂರು ಇನ್ ಶೀರ್ಷಿಕೆ ಕೇಳಿದರೆ ಇದು ಸಿಲಿಕಾನ್ ಸಿಟಿಯಲ್ಲಿ ನಡೆಯುವ ಸ್ಟೋರಿ ಅನ್ನಿಸುತ್ತದೆ, ಆದರೆ ಇದು ರಾಜ್ಯದಲ್ಲಿ ಎಲ್ಲಾ ಕಡೆಯೂ ನಡೆಯುತ್ತಿರುವ ಕಥೆಯಾಗಿದೆ. ಚಿತ್ರದಲ್ಲಿ ಒಂದೊಳ್ಳೆಯ ಸಂದೇಶವಿದ್ದು ಅದು ಎಲ್ಲರಿಗೂ ಹೊಂದುತ್ತದೆ ಎಂದು ಅನುಷಾ ರೈ ಹೇಳಿದರು. ಸಾಯಿಬಾಬಾ ಸಿನಿ ಎಂಟರ್‌ಪ್ರೈಸ್‌ನಲ್ಲಿ ವೆಂಕಟೇಶ್ ಮೂರ್ತಿ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ನವೀನ್ ಪಂಚಾಕ್ಷರಿ ಛಾಯಾಗ್ರಹಣ, ಎ.ಆಸಿಫ್ ಖಾದರ್, ಅರವಿಂದ್ ಮುರಳಿ ಸಂಗೀತ ನಿರ್ದೇಶನ, ಕುಮಾರ್ ಸಂಕಲನ ಈ ಚಿತ್ರಕ್ಕಿದೆ.

> **ಈ ಚಿತ್ರದಲ್ಲಿ ನಾನು ಪಿಜ್ಜಾ ಡೆಲಿವರಿ ಬಾಯ್ ಆಗಿ ಕಾಣಿಸಿಕೊಂಡಿದ್ದೇನೆ. ನಾಯಕನಿಗೆ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆನ್ನುವ ಮನೋಭಾವವಿರುತ್ತದೆ. ಅದರ ಹಿಂದೆಯೇ ಆತ ಸಾಗುತ್ತಾನೆ, ಅವನ ಜೀವನದಲ್ಲಿ ಯಾವೆಲ್ಲಾ ಏರಿಳಿತಗಳು ಬರುತ್ತವೆ. ಅದನ್ನು ನಾಯಕ ಹೇಗೆ ಎದಿರಿಸುತ್ತಾನೆ ಎಂಬುದೇ ಸಿನಿಮಾದ ಸಸ್ಪೆನ್ಸ್. ಇಲ್ಲಿ ಲವ್ ಸ್ಟೋರಿಯ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್, ಆ್ಯಕ್ಷನ್ ಹೀಗೆ ಎಲ್ಲಾ ಅಂಶಗಳು ಬೆರೆತಿವೆ.**
> **-ಧರ್ಮ ಕೀರ್ತಿರಾಜ್** ನಟ

ಜೆರಾಕ್ಸ್ ತಂಡ ಸೇರಿದ ಪಾಯಲ್

ಡಾಲಿ ಧನಂಜಯ ನಟನೆಯ ಜತೆಗೆ ಸಿನಿಮಾ ನಿರ್ಮಾಣದತ್ತಲೂ ಒಲವು ತಾಳಿದ್ದಾರೆ. ಸದ್ಯ ಡಾಲಿ ಸಿನಿಮಾಗಳ ಜತೆಗೆ ವೆಬ್ ಸೀರೀಸ್ ನಿರ್ಮಾಣದತ್ತಲೂ ಒಲವು ತಾಳಿದ್ದಾರೆ. ಡಾಲಿ ಧನಂಜಯ್ ತಮ್ಮ ಡಾಲಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಜೆರಾಕ್ಸ್ ವೆಬ್ ಸರಣಿಯನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಹಿಂದೆ ಬ್ಲಿಂಕ್ ಚಿತ್ರವನ್ನು ನಿರ್ದೇಶಿಸಿ ಗಮನಸೆಳೆದ ನಿರ್ದೇಶಕ ಶ್ರೀನಿಧಿ ಈ ವೆಬ್ ಸರಣಿಯನ್ನು ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಜೆರಾಕ್ಸ್ ವೆಬ್ ಸರಣಿಯಲ್ಲಿ ನಾಗಭೂಷಣ್ ಪ್ರಮುಖ ಪಾತ್ರದಲ್ಲಿ ನಟಿಸಲಿದ್ದು, ಪಾಯಲ್ ಚೆಂಗಪ್ಪ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಈ ಹಿಂದೆ ಬಿಡುಗಡೆಯಾದ ಅಮೃತಾಂಜನ್ ಸಿನಿಮಾದ ಮೂಲಕ ಪ್ರಸಿದ್ಧಿ ಪಡೆದ ಪಾಯಲ್, ಈಗ ಜೆರಾಕ್ಸ್ ತಂಡ ಸೇರಿದ್ದು, ವೆಬ್ ಸರಣಿಯ ಬಗ್ಗೆ ಮತ್ತಷ್ಟು ಕುತೂಹಲ ಮೂಡುವಂತೆ ಮಾಡಿದೆ. ಜೆರಾಕ್ಸ್ ಈಗಾಗಲೇ ತನ್ನ ಶೀರ್ಷಿಕೆಯಲ್ಲಿಯೇ ಕುತೂಹಲ ಮೂಡಿಸಿದ್ದು, ಜೆರಾಕ್ಸ್ ಅಂಗಡಿಯ ಮಾಲೀಕ ಪ್ರಕಾಶ್ ಜೀವನದಲ್ಲಿ ನಡೆಯುವ ಅನಿರೀಕ್ಷಿತ ತಿರುವುಗಳನ್ನು ಈ ಸರಣಿಯಲ್ಲಿ ಕಟ್ಟಿಕೊಡಲಾಗುತ್ತಿದೆ. ಮಂಡ್ಯ, ಮೈಸೂರು ಸುತ್ತಮುತ್ತ ಜೆರಾಕ್ಸ್ ಸರಣಿ ಸಾಗಲಿದೆ. ಜೀ5ನಲ್ಲಿ ಜೆರಾಕ್ಸ್ ಪ್ರಸಾರವಾಗಲಿದ್ದು, ಈಗಾಗಲೇ ಹಲವು ವೆಬ್ ಸರಣಿಯನ್ನು ಪ್ರಸಾರ ಮಾಡುತ್ತಿರುವ ಜೀ5 ಈಗ ಜೆರಾಕ್ಸ್ ಮೂಲಕ ಪ್ರೇಕ್ಷಕರಿಗೆ ಮತ್ತಷ್ಟು ಮನರಂಜನೆ ನೀಡಲಿದೆ.

ಬೆಳ್ಳಿತೆರೆಗೆ ಇಮ್ಮಡಿ ಪುಲಿಕೇಶಿ

ಆರನೇ ಶತಮಾನದಲ್ಲಿ ಭಾರತದಲ್ಲಿ ಆಡಳಿತ ನಡೆಸಿದ ಚಕ್ರವರ್ತಿ ಇಮ್ಮಡಿ ಪುಲಕೇಶಿ ಜೀವನ ಮತ್ತು ಪರಂಪರೆಯನ್ನು ಆಧರಿಸಿದ ಮಹಾಕಾವ್ಯ ಬೆಳ್ಳಿತೆರೆಗೆ ಬರಲಿದೆ. ಈ ಐತಿಹಾಸಿಕ ಪ್ರಧಾನ ಚಿತ್ರ ಎರೆಯ ಶೀರ್ಷಿಕೆಯಲ್ಲಿ ತೆರೆಗೆ ಬರಲಿದೆ. ಆ ದಿನಗಳು, ಬಲರಾಮನ ದಿನಗಳು ಚಿತ್ರವನ್ನು ನಿರ್ದೇಶನ ಮಾಡಿ ಪ್ರಸಿದ್ಧಿ ಪಡೆದಿರುವ ಕೆ.ಎಂ.ಚೈತನ್ಯ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ರೆಟ್ರೋ ಶೈಲಿಯ ಸಿನಿಮಾಗಳನ್ನು ನಿರ್ದೇಶಿಸಿ ಯಶಸ್ವಿಯಾಗಿರುವ ಚೈತನ್ಯ, ಈಗ ಐತಿಹಾಸಿಕ ಕಥೆಯನ್ನು ನಿರ್ದೇಶನ ಮಾಡುತ್ತಿದ್ದಾರೆ. ಇದು ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಸುನೀತ್ ಜಾವಡೇ ಕರ್ ಮತ್ತು ನಿವೇದಿತಾ ಕೊಠಾರೆ ಒಟ್ಟಾಗಿ ನಿರ್ಮಾಣ ಮಾಡುತ್ತಿದ್ದಾರೆ. ಎರೆಯ ಚಿತ್ರದಲ್ಲಿ ಚಕ್ರವರ್ತಿ ಇಮ್ಮಡಿ ಪುಲ ಕೇಶಿಯ ಸಾಹಸ, ಚಾತುರ್ಯ ಮತ್ತು ಅದ್ವಿತೀಯ ಆಡಳಿತ ಸೂತ್ರಗಳ ಮೂಲಕ ವಿಶಾಲ ಸಾಮ್ರಾಜ್ಯವನ್ನು ಆಳಿದ ಅವರ ಆಳ್ವಿಕೆಯನ್ನು ಚಿತ್ರಿಸುತ್ತದೆ. ಇಮ್ಮಡಿ ಪುಲಕೇಶಿಯ ಆಡಳಿತದ ಕಾಲವನ್ನು ಇತಿಹಾಸದಲ್ಲಿ ಒಂದು ಸುವರ್ಣಯುಗ ಎಂದು ಕರೆಯುತ್ತಾರೆ. ಡಾ.ಭೂಷಣ್ ಶಾನಭಾಗ್ ಅವರ ಆಳವಾದ ಸಂಶೋಧನೆಯ ಕೃತಿಯನ್ನು ಆಧರಿಸಿ ಎರೆಯ ಚಿತ್ರಕಥೆಯನ್ನು ಹೆಣೆಯಲಾಗಿದೆ. ಕೆ.ಎಂ. ಚೈತನ್ಯ, ಎರೆಯದೊಂದಿಗೆ ಇತಿಹಾಸದ ಪುಟಗಳಲ್ಲಿ ಕಂಡ ಭಾರತದ ಭವ್ಯತೆಯನ್ನು ಬಿಂಬಿಸಲು ತಯಾರಿ ಮಾಡಿಕೊಳ್ಳುತ್ತಿದಾರೆ. ಕೆ.ಕೆ.ಮೆನನ್, ಜಿಮ್ಮಿ ಶೇರ್ಗಿಲ್, ಜಾಕಿ ಶ್ರಾಫ್, ಪಂಕಜ್ ತ್ರಿಪಾಠಿ ಮುಂತಾದ ದಿಗ್ಗಜ ನಟರು ಚಿತ್ರದಲ್ಲಿ ಪಾತ್ರ ನಿರ್ವಹಿಸಲಿದ್ದಾರೆ. ಎರೆಯ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಹಲವು ಭಾಷೆಗಳನ್ನು ತೆರೆಗೆ ಬರಲಿದೆ. ಈ ಚಿತ್ರದಲ್ಲಿ ಹಾಲಿವುಡ್ ತಂತ್ರಜ್ಞರು ಕಾರ್ಯನಿರ್ವಹಿಸಲಿದ್ದು, ಬಲು ಅದ್ದೂರಿಯಾಗಿ ಮೂಡಿಬರಲಿದೆ. ಎರೆಯ ಸಿನಿಮಾ ಇತಿಹಾಸದ ಪುಟಗಳಲ್ಲಿ ಕಳೆದುಹೋದ ಭಾರತದ ಶ್ರೇಷ್ಠ ಚಕ್ರವರ್ತಿಯೊಬ್ಬರ ಪರಂಪರೆಯನ್ನು ಆಚರಿಸುವ ಮುಖ್ಯ ಚಿತ್ರವಾಗಿದೆ.

ಮದರ್ ಪ್ರಾಮಿಸ್ ಮೊದಲ ಹಾಡು

ಡಾಲಿ ಧನಂಜಯ ಅವರ ಡಾಲಿ ಪಿಕ್ಚರ್ಸ್ ನಿರ್ಮಾಣದ ಮದರ್ ಪ್ರಾಮಿಸ್ ಸಿನಿಮಾದ ಮೊದಲ ಹಾಡು ರಿಲೀಸ್ ಆಗಿದೆ. ಇದು ಆರ್‌ಸಿಬಿ ಕುರಿತ ಹಾಡಾಗಿದ್ದು, ಆರ್‌ಸಿಬಿ ಅಭಿಮಾನಿಗಳ ಹೃದಯ ಗೆದ್ದಿದೆ. ತಮ್ಮದೇ ಸ್ನೇಹಿತರ ಬಳಗ ಸೇರಿಸಿಕೊಂಡು ಸಿನಿಮಾ ಮಾಡಿದ್ದು, ಡಾಲಿ ಗೆಳೆಯ ಪೂರ್ಣ ಮೈಸೂರು ಈ ಸಿನಿಮಾವನ್ನು ನಿರ್ದೇಶನ ಮಾಡಿರುವುದು ವಿಶೇಷ. ಕೆಲ ದಿನಗಳ ಹಿಂದಷ್ಟೆ ಸಿನಿಮಾದ ಪೋಸ್ಟರ್ ರಿಲೀಸ್ ಆಗಿತ್ತು. ಇದು ಕುತೂಹಲ ಮೂಡಿಸಿತ್ತು. ಮದರ್ ಪ್ರಾಮಿಸ್, ಎನ್ನುವ ಎಮೋಷನಲ್ ಟೈಟಲ್ ಇರುವ ಈ ಸಿನಿಮಾದಿಂದ ಬಂದಿರುವ ಮೊದಲ ಹಾಡು ಗುರುಕಿರಣ್ ದನಿಯಲ್ಲಿ ಮೂಡಿಬಂದಿದೆ. ಬಹು ದಿನಗಳ ಬಳಿಕ ಗಾಯಕ ಗುರುಕಿರಣ್ ದನಿ ನೀಡಿರುವ ಹಾಡು ಇರು ಎಂಬುದು ವಿಶೇಷ. ಪೂರ್ಣ ಮೈಸೂರು ಮತ್ತು ಗೆಳೆಯರ ಜತೆ ಡಾಲಿ ಕೂಡ ಹೆಜ್ಜೆ ಹಾಕಿದ್ದಾರೆ. ವೈಟ್ ಕಲರ್ ಸೂಟ್ ಧರಿಸಿ ಸ್ಟೈಲಿಶ್ ಎಂಟ್ರಿ ಕೊಡುವ ಡಾಲಿ ಗಮನಸೆಳೆಯುತ್ತಾರೆ. ಶಶಾಂಕ್ ಈ ಹಾಡಿಗೆ ಸಾಹಿತ್ಯ ರಚಿಸಿದ್ದು, ನವನೀತ್ ಶ್ಯಾಮ್ ಅವರ ಸಂಗೀತ ಸಂಯೋಜಿಸಿದ್ದಾರೆ.

ಮದರ್ ಪ್ರಾಮಿಸ್ ಕಾಮಿಡಿ ಹಾಗೂ ಥ್ರಿಲ್ಲಿಂಗ್ ಸಿನಿಮಾವಾಗಿದ್ದು, ಈ ಚಿತ್ರದಲ್ಲಿ ಡಾಲಿ ಧನಂಜಯ ಸೇರಿದಂತೆ ನಟ ನಾಗಭೂಷಣ್ , ಹಿರಿಯ ನಟಿ ವಿನಯಾ ಪ್ರಸಾದ್, ಗೀತಾ, ಗುರುದತ್ ಹಲವರು ನಟಿಸಿದ್ದಾರೆ. ಈ ಸಿನಿಮಾ ಮೂಲಕ ಡಾಲಿ ಧನಂಜಯ ಅವರ ಸ್ನೇಹಿತ ಹರ್ಷ ಮುರುಂಡಿ ಶಿವಲಿಂಗಪ್ಪ ನಿರ್ಮಾಪಕರಾಗಿ ಸಿನಿಮಾರಂಗಕ್ಕೆ ಕಾಲಿಡುತ್ತಿದ್ದಾರೆ.